ಕರ್ನಾಟಕ ಸರ್ಕಾರ

# ಕರ್ನಾಟಕ
# ವಾಸ್ತುಶಿಲ್ಪ ಉದ್ಯಾನ

ಡಾ. ಎ.ವಿ. ನರಸಿಂಹಮೂರ್ತಿ
ಡಾ. ಆರ್. ಗೋಪಾಲ್

**ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ**
ದಸರಾ ವಸ್ತುಪ್ರದರ್ಶನ ಆವರಣ, ಮೈಸೂರು - 570 010
2010

***KARNATAKA - A GARDEN OF ARCHITECTURE :*** Dr. A.V. Narasimha Murthy and Dr. R. Gopal;
Published by the Driectorate of Archaeology and Museums in Karnataka, Dasara Exhibition Complex
Mysore - 570 010; pages 226

**ಕರ್ನಾಟಕ - ವಾಸ್ತುಶಿಲ್ಪ ಉದ್ಯಾನ** : ಡಾ. ಎ.ವಿ. ನರಸಿಂಹಮೂರ್ತಿ ಮತ್ತು ಡಾ. ಆರ್. ಗೋಪಾಲ್ ;
ಪ್ರಕಾಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ
ದಸರಾ ವಸ್ತುಪ್ರದರ್ಶನ ಆವರಣ, ಮೈಸೂರು - 570 010; ಪುಟಗಳು; 226

ಮೊದಲನೆಯ ಮುದ್ರಣ : 500 ಪ್ರತಿಗಳು, 2007
ಎರಡನೆಯ ಮುದ್ರಣ : 3000 ಪ್ರತಿಗಳು, 2010

© ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಬೆಲೆ : ₹

ಅಕ್ಷರ ಜೋಡಣೆ : ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಂಸ್, ಮೈಸೂರು
ಛಾಯಾಚಿತ್ರಗಳು ಮತ್ತು ವಿನ್ಯಾಸ : ಸುಹಾಸ್ ಗ್ರಾಫಿಕ್ಸ್, ಬೆಂಗಳೂರು, ದೂ : 98453 55509
ಮುದ್ರಣ : ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು - 570 004, ದೂ : 0821 - 2442655

# ಮುನ್ನುಡಿ (ಪ್ರಥಮ ಮುದ್ರಣ)

ಇದು ಸುವರ್ಣ ಕರ್ನಾಟಕದ ವರ್ಷ, ಐವತ್ತು ವರ್ಷಗಳ ಹಿಂದೆ ಆಕರ್ಷಕವಾದ ಹಾಗೂ ಐತಿಹಾಸಿಕ ಮಹತ್ವವುಳ್ಳ ಕರ್ನಾಟಕ ಎಂಬ ಅಭಿದಾನದಿಂದ ಈ ರಾಜ್ಯವನ್ನು ಕರೆಯಲಾಯಿತು. ಆರಂಭ ಕಾಲದಿಂದ ಹಿಡಿದು ಸುಮಾರು ಸಾವಿರದ ಐನೂರು ವರ್ಷಗಳವರೆಗೆ ಈ ಸುಂದರ ಹೆಸರೇ ಬಳಕೆಯಲ್ಲಿತ್ತು. ಕಾವೇರಿಯಿಂದ ಗೋದಾವರಿಯವರೆಗಿನ ನಾಡೇ ಕರ್ನಾಟಕ ಎಂದು ಕವಿರಾಜಮಾರ್ಗದ ಕರ್ತೃವು ಹಿಂದೆಯೇ ಘೋಷಿಸಿದ್ದನು. ಮರಿದುಂಬಿಯಾಗಿಯಾದರೂ ಈ ನಾಡಿನಲ್ಲಿ ಪುನರ್ಜನ್ಮ ಪಡೆಯಬೇಕೆಂಬುದು ಆದಿಕವಿ ಪಂಪನ ಆಸೆಯಾಗಿತ್ತು. ಸಂತ ಬಸವೇಶ್ವರರಿಗೆ ಇದು ಕರ್ಮಭೂಮಿಯಾಗಿತ್ತು. ಸಂತ ವಿದ್ಯಾರಣ್ಯರು ಸುವರ್ಣಯುಗವೆನಿಸಿರುವ ವಿಜಯನಗರಕ್ಕೆ ಅಸ್ತಿಭಾರ ಹಾಕಿದರು. ಇದಾದನಂತರ ದಂಡಯಾತ್ರೆಗಳು ಹಾಗೂ ಯುದ್ಧಗಳಿಂದ, ವಿಶಾಲವಾದ ಕರ್ನಾಟಕವು ಅನೇಕ ಹೋಳುಗಳಾಯಿತು ಮತ್ತು ಅದರಿಂದಾಗಿ ಕರ್ನಾಟಕ ಎಂಬ ಭಾವನೆ ಸ್ವಲ್ಪ ಮಂಕಾಯಿತು. ಸ್ವಾತಂತ್ರ್ಯ ದೊರಕಿದ ಮೇಲೆ, ಕನ್ನಡಿಗರ ಆಸೆ ಆಕಾಂಕ್ಷೆಗಳಿಗನುಗುಣವಾಗಿ ಹರಿದು ಹಂಚಿಹೋಗಿದ್ದ ಹಲವು ಭಾಗಗಳು ಒಂದುಗೂಡಿದವು. ಮಹತ್ವದ ಕರ್ನಾಟಕ ಒಂದಾಯಿತು.  ಇದು ನಡೆದದ್ದು 1956ರಲ್ಲಿ. ಐವತ್ತು ತುಂಬಿದ ಈ ವರ್ಷದಲ್ಲಿ ಕನ್ನಡಿಗರೆಲ್ಲರೂ ಸಾಂಸ್ಕೃತಿಕ ಭಾವನೆಯಿಂದ, ಇದನ್ನು ಹಬ್ಬದಂತೆ ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಕರ್ನಾಟಕ ಸರ್ಕಾರ ಈ ಹಬ್ಬವನ್ನು ವರ್ಷಪೂರ್ತಿ ವಿವಿಧ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದೆ.

ಕರ್ನಾಟಕವು ಭವ್ಯ ಸ್ಮಾರಕಗಳ ನಾಡು. ಇಲ್ಲಿ ಆಳಿದ ರಾಜ ಮನೆತನಗಳು ಮತ್ತು ರಾಜರು ವಾಸ್ತುಶಿಲ್ಪಗಳ ಖ್ಯಾತ ಪೋಷಕರಾಗಿದ್ದರು. ಇವರೆಲ್ಲರ ಪರಿಶ್ರಮದ ಫಲವಾಗಿ ಸುಂದರ ದೇವಾಲಯಗಳು, ಶಿಲ್ಪಗಳು, ಕೋಟೆಗಳು, ಲೌಕಿಕ ಕಟ್ಟಡಗಳು, ಅರಮನೆಗಳು, ಮಸೀದಿಗಳು, ಗೋರಿಗಳು, ಚರ್ಚುಗಳು ಮತ್ತು  ಪಾರಂಪರಿಕ ಸೌಧಗಳಿಂದ ಈ ನಾಡು ತುಂಬಿದೆ. ಹೀಗಾಗಿ ಕರ್ನಾಟಕ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲದ ಭವ್ಯ ಹಾಗೂ ಸುಂದರ ಸ್ಮಾರಕಗಳ ಉದ್ಯಾನವಾಗಿದೆ.

ಈ ರೀತಿಯ ವಾಸ್ತುಖನಿಗಳನ್ನು ಸಂರಕ್ಷಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಒಪ್ಪಿಸುವ ಕಾರ್ಯವನ್ನು ಮಾಡುವುದಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ. ನಮ್ಮ ಕೆಲವು ಸ್ಮಾರಕಗಳು ಯುನೆಸ್ಕೊದಂತಹ ಅಂತರ ರಾಷ್ಟ್ರೀಯ ಸಂಸ್ಥೆಗಳ ಗಮನವನ್ನು ಸೆಳೆದಿರುವುದು ನಮಗೆ ಹೆಮ್ಮೆಯ ವಿಷಯ. ಕರ್ನಾಟಕದ ಕೆಲವು ಸ್ಮಾರಕಗಳನ್ನು ಯುನೆಸ್ಕೊ ವಿಶ್ವಪಾರಂಪರಿಕ ಕಟ್ಟಡಗಳೆಂದು ಮಾನ್ಯಮಾಡಿದೆ. ಇವುಗಳ ಸಂಖ್ಯೆ ಮುಂದಿನ ವರ್ಷಗಳಲ್ಲಿ ಹೆಚ್ಚಾಗಲಿ ಎಂದು ನಾನು ಆಶಿಸುತ್ತೇನೆ.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಕರ್ನಾಟಕದ ವಾಸ್ತುಶಿಲ್ಪ ಪರಂಪರೆಗೆ ಈ ಸುಂದರ ಪುಸ್ತಕದ ಮೂಲಕ ಗೌರವ ತೋರುತ್ತಿರುವುದು ಸ್ತುತ್ಯಾರ್ಹ ಪ್ರಯತ್ನ. ಸುಂದರವಾಗಿ ಮೂಡಿ ಬಂದಿರುವ ಈ ಪುಸ್ತಕ ಯುವ ಪೀಳಿಗೆಯು ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಹೆಚ್ಚಿನ ಆಸಕ್ತಿ ತಳೆಯುವಂತೆ ಸ್ಫೂರ್ತಿ ನೀಡುತ್ತದೆ ಎಂದು ನಂಬಿದ್ದೇನೆ. ಇದರ ರಚಯಿತರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಮತ್ತು ಡಾ. ಆರ್. ಗೋಪಾಲ್ ಅವರು ಸುವರ್ಣ ಕರ್ನಾಟಕ ಆಚರಣೆಗೆ ಇದನ್ನು ತಮ್ಮ ಕೊಡುಗೆಯಾಗಿ ನೀಡಿರುವುದಕ್ಕಾಗಿ, ಇವರಿಬ್ಬರನ್ನೂ ನಾನು ಮನಸಾರೆ ಅಭಿನಂದಿಸುತ್ತೇನೆ. ಕರ್ನಾಟಕಕ್ಕೆ ಸಂದರ್ಶನಾರ್ಥಿಗಳಾಗಿ ಬರುವ ಸೂಕ್ಷ್ಮಮತಿಯ ಭಾರತೀಯ ಹಾಗೂ ವಿದೇಶೀಯ ಯಾತ್ರಿಕರು ಈ ವರ್ಣರಂಜಿತ ಪುಸ್ತಕವನ್ನು ಆದರದಿಂದ ಬರಮಾಡಿಕೊಂಡು ಇದರಿಂದ ಸ್ಫೂರ್ತಿ ಪಡೆದು ಕರ್ನಾಟಕದ ಭವ್ಯ ಪರಂಪರೆಯ ಸ್ಮಾರಕಗಳನ್ನು ಸಂದರ್ಶಿಸಿ, ಕರ್ನಾಟಕದ ಕಂಪು ಎಲ್ಲಡೆಯಲ್ಲಿಯೂ ಹರಡುವಂತೆ ಮಾಡಲಿ ಎಂದು ನಾನು ಆಶಿಸುತ್ತೇನೆ.

(ವಿ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
ಕರ್ನಾಟಕ ಸರ್ಕಾರ

ಬೆಂಗಳೂರು

# ಅರಿಕೆ (ಪ್ರಥಮ ಮುದ್ರಣ)

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ 2004ರ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಲ್ಲಿ ಆಯುಕ್ತರಾಗಿದ್ದ ಶ್ರೀ ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ. ಅವರ ಮಾರ್ಗದರ್ಶನದಲ್ಲಿ ಕರ್ನಾಟಕದ ಪ್ರಾಚೀನ ಸ್ಮಾರಕಗಳ ಹಾಗೂ ಪಾರಂಪರಿಕ ಕಟ್ಟಡಗಳ ಛಾಯಾಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿದ್ದಿತು. ಸಾವಿರಾರು ಜನರು ಈ ಪ್ರದರ್ಶನವನ್ನು ನೋಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಇದನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ಇನ್ನೂ ಹೆಚ್ಚಿನ ಸಂಖ್ಯೆಯ ಜನಗಳನ್ನು ತಲುಪುತ್ತದೆ ಎಂದು ಕೆಲವರು ಸಲಹೆ ನೀಡಿದರು. ಅಂದು ಪ್ರಿನ್ಸಿಪಲ್ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್, ಭಾ.ಆ.ಸೇ. ಅವರು ಈ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆ ಪ್ರೋತ್ಸಾಹ ನೀಡಿದರು. ಕನ್ನಡ ಮತ್ತು ಸಂಸ್ಕೃತಿ, ವಾರ್ತಾಪ್ರಚಾರ ಮತ್ತು ಪ್ರವಾಸೋದ್ಯಮ ಇಲಾಖೆಗಳ ಕಾರ್ಯದರ್ಶಿಯಾಗಿರುವ ಶ್ರೀ ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ. ಅವರು ಈ ಪುಸ್ತಕವನ್ನು ಸುವರ್ಣ ಕರ್ನಾಟಕ ಆಚರಣೆಯ ಅಂಗವಾಗಿ ಪ್ರಕಟಿಸಲು ನೆರವು ನೀಡಿದ್ದಾರೆ ಮತ್ತು ವಿಚಾರಪೂರಿತ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರದ ಸಂಸ್ಕೃತಿ ಪ್ರಿಯರಾದ ಈ ಅಧಿಕಾರಿಗಳು ಈ ಪುಸ್ತಕ ಹೊರತರಲು ನಮಗೆ ನೀಡಿದ ಪ್ರೋತ್ಸಾಹಕ್ಕಾಗಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಸುವರ್ಣ ಕರ್ನಾಟಕದ ವರ್ಷ; ಇದರ ಆಚರಣೆಗಳು ಎಲ್ಲೆಡೆಯಲ್ಲಿಯೂ ಸಂತೋಷ ಮತ್ತು ಸಾಂಸ್ಕೃತಿಕ ಉತ್ಸಾಹಗಳಿಂದ ನಡೆಯುತ್ತಿವೆ. ಈ ರೀತಿ ಇಡೀ ಕರ್ನಾಟಕವು ಈ ಮಹತ್ ಕಾರ್ಯದಲ್ಲಿ ಸಂತೋಷದಿಂದ ಭಾಗವಹಿಸುತ್ತಿದೆ. ಪ್ರಾಚೀನ ಕರ್ನಾಟಕ ವಾಸ್ತುಶಿಲ್ಪದ ಪೋಷಕರು ಹಾಗೂ ನಮ್ಮನ್ನು ಇಂತಹ ಶ್ರೇಷ್ಠ ವಾಸ್ತುಶಿಲ್ಪ ಪರಂಪರೆಯ ಉತ್ತರಾಧಿಕಾರಿಗಳನ್ನಾಗಿ ಮಾಡಿದ ಕಲಾವಿದರು ಮತ್ತು ಶಿಲ್ಪಿಗಳಿಗೆ ಗೌರವದ ಕಾಣಿಕೆಯನ್ನು ಅರ್ಪಿಸುವ ಅವಕಾಶ ದೊರೆತಿರುವುದು ನಮ್ಮ ಸುಯೋಗ. ಸ್ಮಾರಕಗಳನ್ನು ಆರಿಸುವುದು ಕಷ್ಟಕರ ಕೆಲಸವಾದರೂ, ಕರ್ನಾಟಕದ ಎಲ್ಲ ಪ್ರದೇಶಗಳಿಗೂ ಹಾಗೂ ವಿವಿಧ ಶೈಲಿಗಳಿಗೂ ಪ್ರಾತಿನಿಧ್ಯ ನೀಡಲಾಗಿದೆ. ಈ ಪುಸ್ತಕವು ಓದುಗರಲ್ಲಿ ನಮ್ಮ ವಾಸ್ತುಶಿಲ್ಪ ಪರಂಪರೆಯ ಬಗೆಗೆ ತಿಳುವಳಿಕೆ ನೀಡಿ, ಈ ಸುಂದರ ಕರ್ನಾಟಕದೊಡನೆ ತಾದಾತ್ಮ್ಯವನ್ನುಂಟುಮಾಡುತ್ತದೆ ಎಂದು ಆಶಿಸುತ್ತೇವೆ.

ಸುಹಾಸ್ ಗ್ರಾಫಿಕ್ಸ್‌ನ ಮುರಳೀಧರ ಅವರು ಸುಂದರ ಚಿತ್ರಗಳನ್ನು ತೆಗೆದಿದ್ದಾರೆ; ಮೈಸೂರಿನ ಶ್ರೀ ಸದ್ಗುರು ಪ್ರಿಂಟರ್ಸ್ ಸಂಸ್ಥೆಯ ಶ್ರೀ ವಾಸುದೇವಮೂರ್ತಿಯವರು ಮುದ್ರಣ ಕಾರ್ಯವನ್ನು ಮಾಡಿದ್ದಾರೆ. ಮೈಸೂರಿನ ಕಾಂಟೆಕ್ ಕಂಪ್ಯೂಟರ್ ಸಿಸ್ಟಂಸ್ ಸಂಸ್ಥೆಯ ಶ್ರೀಮತಿ ಹೇಮಲತ ಡಿಟಿಪಿ ಜೋಡಣೆ ಮಾಡಿದ್ದಾರೆ. ಈ ನಿರ್ದೇಶನಾಲಯದಲ್ಲಿ ಸಹಾಯಕ ನಿರ್ದೇಶಕರಾಗಿರುವ ಶ್ರೀ ಟಿ.ಎಸ್. ಗಂಗಾಧರ್ ಅನೇಕ ವಿಧಗಳಲ್ಲಿ ಸಹಾಯ ಮಾಡಿದ್ದಾರೆ. ಶ್ರೀಮತಿ ಸುಮನ ವಿಶ್ವನಾಥ್ ಕರಡು ತಿದ್ದಲು ನೆರವು ನೀಡಿದ್ದಾರೆ. ಈ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಸಾಮಾನ್ಯ ಓದುಗರು ಮತ್ತು ವಿದ್ಯಾರ್ಥಿಗಳು ಈ ಪುಸ್ತಕವನ್ನು ಆಸಕ್ತಿಯಿಂದ ಓದಿ, ನಮ್ಮ ಭವ್ಯಸ್ಮಾರಕಗಳನ್ನು ಸಂದರ್ಶಿಸಲು ಸ್ಫೂರ್ತಿ ಪಡೆಯುತ್ತಾರೆಂದು ಆಶಿಸುತ್ತೇವೆ.

ಮೈಸೂರು
7-7-2007

ಎ.ವಿ. ನರಸಿಂಹಮೂರ್ತಿ
ಆರ್. ಗೋಪಾಲ್

# ಮುನ್ನುಡಿ (ದ್ವಿತೀಯ ಮುದ್ರಣ)

'ಕರ್ನಾಟಕ ಎಂದರೇನು' ಎಂದು ಯಾರಾದರೂ ನನ್ನನ್ನು ಪ್ರಶ್ನಿಸಿದರೆ, ಯಾವ ಸಂಶಯವೂ ಇಲ್ಲದೆ ನಾನು ನೀಡುವ ಉತ್ತರವೇನೆಂದರೆ, ಪ್ರಾಕೃತಿಕ ಸೌಂದರ್ಯ, ಅವಿಚ್ಛಿನ್ನವಾದ ಇತಿಹಾಸ ಪರಂಪರೆ, ವಿವಿಧ ಧಾರ್ಮಿಕ ಸಂಸ್ಥೆಗಳು, ಕವಿಗಳು ಮತ್ತು ಕಲಾಕಾರರ ನಾಡು, ಎಲ್ಲದಕ್ಕೂ ಮೇಲಾಗಿ ವೈಭವಯುತವಾದ ವಾಸ್ತುಶಿಲ್ಪ ಮತ್ತು ಆಧುನಿಕತೆ - ಇವೆಲ್ಲವುಗಳ ಸಾಮರಸ್ಯ ಸಂಗಮವೇ ಕರ್ನಾಟಕ. ಅದು ಇಂದು ನಿನ್ನೆಯದಲ್ಲ ; ಅದರ ಪ್ರಾಚೀನತೆ ರಾಮಾಯಣ, ಮಹಾಭಾರತ ಕಾಲಗಳಿಗೆ ಹೋಗುತ್ತದೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗಂಗ, ಹೊಯ್ಸಳ, ವಿಜಯನಗರ ಚಕ್ರವರ್ತಿಗಳು, ಬಹಮನಿ, ಆದಿಲ್‌ಷಾಹಿ, ಬರೀದ್ ಷಾಹಿ ಸುಲ್ತಾನರು, ಟಿಪ್ಪು ಸುಲ್ತಾನ್, ಮೈಸೂರನ್ನು ಅರಮನೆಗಳ ನಗರವನ್ನಾಗಿ ಮಾಡಿದ ಧರ್ಮಶೀಲ ಮೈಸೂರಿನ ಒಡೆಯರ್ ಅರಸರು ಇಲ್ಲಿ ಆಳ್ವಿಕೆ ಮಾಡುವ ಸುಯೋಗವನ್ನು ಹೊಂದಿದ್ದರು. ಹೀಗೆ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಮೆರವಣಿಗೆಯನ್ನು ಇಲ್ಲಿ ಕಾಣುತ್ತೇವೆ.

ಈ ಪುಸ್ತಕವನ್ನು ರಚಿಸಿರುವ ಇಬ್ಬರು ವಿದ್ವಾಂಸರು, ಕರ್ನಾಟಕವನ್ನು ವಾಸ್ತುಶಿಲ್ಪ ಉದ್ಯಾನವೆಂದು ಸರಿಯಾಗಿ ಹೆಸರಿಸಿದ್ದಾರೆ. ಇದಕ್ಕೆ ಇಲ್ಲಿರುವ ವಾಸ್ತುಶಿಲ್ಪ ಕೃತಿಗಳ ವೈವಿಧ್ಯತೆ ಹಾಗೂ ಅವಿಚ್ಛಿನ್ನತೆಯೇ ಕಾರಣ. ಇಲ್ಲಿರುವ ವಾಸ್ತುಶಿಲ್ಪ ಕೃತಿಗಳಲ್ಲಿ ಎಲ್ಲ ಪ್ರಧಾನ ಧಾರ್ಮಿಕ ಪಂಥಗಳೂ ಪ್ರಾಧಾನ್ಯತೆ ಪಡೆದಿವೆ. ಬೌದ್ಧ, ಜೈನ, ಶೈವ, ವೈಷ್ಣವ, ಇಸ್ಲಾಂ, ಕ್ರೈಸ್ತ, ಸಿಖ್ ಮುಂತಾದ ಧರ್ಮಗಳಿಗೆ ಇದು ಪೋಷಣೆ ನೀಡಿದೆ. ಲೌಕಿಕ ವಾಸ್ತುಗಳಾದ ಅರಮನೆಗಳು, ಗಜಶಾಲೆ, ರಾಣಿಯರ ಸ್ನಾನಗೃಹ, ಬೀದರ್ ಕೋಟೆ, ಲಲಿತ ಮಹಲ್, ವಿಧಾನಸೌಧ ಮುಂತಾದವು ಸಮಾಜೋ-ಸಾಂಸ್ಕೃತಿಕ ಜೀವನದ ದ್ಯೋತಕಗಳಾಗಿವೆ. ವಾಸ್ತುಶಿಲ್ಪ ಶೈಲಿಗಳಂತೂ ವೈವಿಧ್ಯಮಯವಾಗಿದ್ದು ಅಪೂರ್ವವಾಗಿವೆ. ಕಲಾಕೇಂದ್ರಗಳಾದ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಹಂಪಿ, ಬಿಜಾಪುರ ಮತ್ತು ಮೈಸೂರುಗಳು ನಮ್ಮ ವಾಸ್ತುಶಿಲ್ಪಗಳಿಗೆ ಅಂತರರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿವೆ.

ಸುಂದರವಾದ ಛಾಯಾಚಿತ್ರಗಳು, ಅದಕ್ಕೆ ತಕ್ಕ ಚಿಕ್ಕದಾದ ಹಾಗೂ ಚೊಕ್ಕವಾದ ಟಿಪ್ಪಣಿಗಳನ್ನು ಹೊಂದಿಸಿರುವ ಲೇಖಕರಾದ ಡಾ. ಎ.ವಿ. ನರಸಿಂಹಮೂರ್ತಿ ಮತ್ತು ಡಾ. ಆರ್. ಗೋಪಾಲ್, ಕರ್ನಾಟಕದ ವಾಸ್ತುಶಿಲ್ಪ ಪರಂಪರೆಗೆ ನ್ಯಾಯ ಒದಗಿಸಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ, ಎರಡೂ ಭಾಷೆಗಳಲ್ಲಿ ರಚಿತವಾದ ಈ ಪುಸ್ತಕದ ಪ್ರತಿಗಳು ಕೇವಲ ಮೂರು ವರ್ಷಗಳಲ್ಲಿ ಮುಗಿದು ಹೋಗಿದ್ದು ಎರಡನೆಯ ಮರುಮುದ್ರಣಕ್ಕೆ ಬಂದಿರುವುದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಈ ಎರಡನೆಯ ಮುದ್ರಣವು ಹೆಚ್ಚಿನ ಸಂಖ್ಯೆಯ ಓದುಗರನ್ನು ತಲುಪಿ, ಕರ್ನಾಟಕವನ್ನು ಸಂದರ್ಶಿಸುವವರ ಸಂಖ್ಯೆಯು ಹೆಚ್ಚಿ, ಕರ್ನಾಟಕಕ್ಕೆ ವಿಶೇಷ ಗೌರವವನ್ನು ತರುತ್ತದೆ ಎಂದು ಆಶಿಸುತ್ತೇನೆ. ಮತ್ತೊಮ್ಮೆ ಇಬ್ಬರು ಲೇಖಕರನ್ನು ಹಾಗೂ ಇದನ್ನು ಪ್ರಕಟಿಸಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವನ್ನು ಅಭಿನಂದಿಸುತ್ತೇನೆ.

(ಗೋವಿಂದ ಎಂ. ಕಾರಜೋಳ)
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು
ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು

# ಅರಿಕೆ (ದ್ವಿತೀಯ ಮುದ್ರಣ)

ಸುವರ್ಣ ಕರ್ನಾಟಕದ ಸುಸಂದರ್ಭದ ಸವಿ ನೆನಪಿನಲ್ಲಿ 2007ರಲ್ಲಿ ಈ ಪುಸ್ತಕವನ್ನು ನಾವು ರಚಿಸಿದಾಗ, ಮೂರು ವರ್ಷಗಳಿಗೂ ಕಡಿಮೆ ಅವಧಿಯಲ್ಲಿ ಈ ಪುಸ್ತಕ ಎರಡನೆಯ ಮುದ್ರಣಕ್ಕೆ ಬರುತ್ತದೆ ಎಂಬ ಆಲೋಚನೆಯು ನಮಗೆ ಹೊಳೆದಿರಲಿಲ್ಲ. ಈ ಪುಸ್ತಕವನ್ನು ಲೋಕಾರ್ಪಣೆ ಮಾಡಿದ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಆದಷ್ಟು ಬೇಗ ಈ ಅಂದವಾದ ಪುಸ್ತಕ ಮರುಮುದ್ರಣಕ್ಕೆ ಬರುತ್ತದೆ ಎಂದು ಹೇಳಿದ್ದರು. ಅವರ ಹಾರೈಕೆ ಕಾರ್ಯರೂಪಕ್ಕೆ ಬಂದಿರುವುದಕ್ಕಾಗಿ ನಾವು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಕರ್ನಾಟಕ ವಾಸ್ತು ಶಿಲ್ಪವನ್ನು ಕುರಿತಾದ ಈ ಪುಸ್ತಕವನ್ನು ಪ್ರವಾಸಿಗಳು ಹಾಗೂ ಸಾಮಾನ್ಯ ಓದುಗರು ಮೆಚ್ಚಿಕೊಂಡಿದ್ದಾರೆ ಎಂಬುದು ಈಗ ಮನದಟ್ಟಾಗಿದೆ. ಕೆಲವು ವಿದ್ವಾಂಸರೂ ಮತ್ತು ಇತರ ಗಣ್ಯರೂ ಆದ ಡಾ. ಕೆ.ವಿ. ರಾಮನ್ (ಚೆನ್ನೈ), ಡಾ. ಐ.ಕೆ. ಶರ್ಮ (ಹೈದರಾಬಾದ್), ಡಾ. ಮತ್ತೂರು ಕೃಷ್ಣಮೂರ್ತಿ, ಎನ್. ರಾಮಾನುಜ, ಕೆ.ಬಿ. ಗಣಪತಿ ಮುಂತಾದವರು ಈ ಅಂದವಾದ ಪುಸ್ತಕವನ್ನು ಬರೆಯುವಲ್ಲಿ ನಾವು ವಹಿಸಿದ ಶ್ರಮವನ್ನು ಮೆಚ್ಚಿಕೊಂಡಿದ್ದಾರೆ. ಇನ್ನೂ ಕೆಲವರು ಅವರಿಗೆ ಇಷ್ಟವಾದ ಸ್ಮಾರಕಗಳನ್ನು ಈ ಪುಸ್ತಕದಲ್ಲಿ ಸೇರಿಸುವಂತೆ ಸೂಚನೆ ನೀಡಿದ್ದಾರೆ. ಈ ರೀತಿ ಈ ಪುಸ್ತಕದ ಬಗ್ಗೆ ವ್ಯಾಪಕ ಮೆಚ್ಚಿಗೆ ವ್ಯಕ್ತಪಟ್ಟಿದೆ. ಇದಕ್ಕಾಗಿ ನಾವು ಓದುಗರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಚಿತ್ರದುರ್ಗದ ಪ್ರಖ್ಯಾತ ಕೋಟೆಯನ್ನು ಇಲ್ಲಿ ಸೇರಿಸಿರುವುದನ್ನು ಬಿಟ್ಟರೆ ಇನ್ಯಾವ ಹೆಚ್ಚಿನ ಬದಲಾವಣೆಗಳನ್ನೂ ಮಾಡಲಾಗಿಲ್ಲ.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಬಿ.ಆರ್. ಜಯರಾಮರಾಜೇ ಅರಸ್, ಭಾಆಸೇ ಅವರು ಈ ಪುಸ್ತಕದ ಎರಡನೆಯ ಮುದ್ರಣಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದಕ್ಕಾಗಿ ಅವರಿಗೆ ನಾವು ಕೃತಜ್ಞತೆ ಅರ್ಪಿಸುತ್ತೇವೆ. ಇದರ ಪುನರ್ಮುದ್ರಣಕ್ಕೆ ಸೂಚನೆ ನೀಡಿದ ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆಗಳ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ.ಪಿ. ಬಳಿಗಾರ್, ಭಾಆಸೇ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಸುಹಾಸ್ ಗ್ರಾಫಿಕ್ಸ್‌ನ ಶ್ರೀ ಮುರಳೀಧರ್ ಮತ್ತು ಮೈಸೂರಿನ ಶ್ರೀ ಸದ್ಗುರು ಮುದ್ರಣಾಲಯದ ಶ್ರೀ ವಾಸು ಅವರು ಈ ಪುಸ್ತಕವು ಅಂದವಾಗಿ ಬರಲು ಕಾರಣರಾಗಿದ್ದಾರೆ. ಇದೇ ನಿರ್ದೇಶನಾಲಯದಲ್ಲಿ ಸಹಾಯಕ ನಿರ್ದೇಶಕರಾಗಿರುವ ಶ್ರೀ ಟಿ.ಎಸ್. ಗಂಗಾಧರ್ ಅವರು ಅನೇಕ ವಿಧಗಳಲ್ಲಿ ಸಹಾಯ ಮಾಡಿದ್ದಾರೆ.

ನಮ್ಮ ಸಂಸ್ಕೃತಿಯಲ್ಲಿ ಆಸಕ್ತಿಯನ್ನು ಹೊಂದಿರುವ ಹಾಗೂ ವಿಶೇಷವಾಗಿ ಕರ್ನಾಟಕ ವಾಸ್ತುಶಿಲ್ಪದಲ್ಲಿ ಆಸಕ್ತಿ ಹೊಂದಿರುವ ಓದುಗರು ಸುಂದರವಾದ ಈ ಎರಡನೆಯ ಮುದ್ರಣವನ್ನು ಆಸಕ್ತಿಯಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಡಾ. ಎ.ವಿ. ನರಸಿಂಹಮೂರ್ತಿ

ಡಾ. ಆರ್. ಗೋಪಾಲ್



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡ್ಯೂರಪ್ಪ ಅವರಿಂದ 'ಕರ್ನಾಟಕ - ವಾಸ್ತುಶಿಲ್ಪ ಉದ್ಯಾನ' ಪುಸ್ತಕ ಬಿಡುಗಡೆ ಸಮಾರಂಭ




ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಕರ್ನಾಟಕ – ವಾಸ್ತುಶಿಲ್ಪ ಉದ್ಯಾನ' ಪುಸ್ತಕಕ್ಕೆ ಅತ್ಯುತ್ತಮ ಪ್ರಕಾಶನ ಪ್ರಶಸ್ತಿ ಪ್ರದಾನ ಸಮಾರಂಭ

# ಪರಿವಿಡಿ


| | | |
|---|---|---|
| ಮುನ್ನುಡಿ (ಪ್ರಥಮ ಮುದ್ರಣ) | .......... | 3 |
| ಅರಿಕೆ (ಪ್ರಥಮ ಮುದ್ರಣ) | .......... | 5 |
| ಮುನ್ನುಡಿ (ದ್ವಿತೀಯ ಮುದ್ರಣ) | .......... | 7 |
| ಅರಿಕೆ (ದ್ವಿತೀಯ ಮುದ್ರಣ) | .......... | 9 |
| ಪೀಠಿಕೆ | .......... | 17 |
| ಬೃಹತ್ ಶಿಲಾಸಮಾಧಿಗಳು, ಹಿರೆಬೆನಕಲ್ | .......... | 24 |
| ಬೌದ್ಧ ಸ್ತೂಪ, ಕಂಗನಹಳ್ಳಿ | .......... | 11 |
| ಕದಂಬ ದೇವಾಲಯ, ಗುಡ್ನಾಪುರ | .......... | 13 |
| ಇಟ್ಟಿಗೆಯ ಜೈನ ಬಸದಿ, ತಲಕಾಡು | .......... | 15 |
| ಒಂದನೆಯ ಗುಹಾಲಯ, ಬಾದಾಮಿ | .......... | 17 |
| ಮೂರನೆಯ ಗುಹಾಲಯ, ಬಾದಾಮಿ | .......... | 19 |
| ರಾವಳಫಡಿ, ಐಹೊಳೆ | .......... | 21 |
| ಗೌಡರಗುಡಿ, ಐಹೊಳೆ | .......... | 23 |
| ಮೇಗುತಿ ದೇವಾಲಯ, ಐಹೊಳೆ | .......... | 25 |
| ಲಾಡ್‌ಖಾನ್ ದೇವಾಲಯ, ಐಹೊಳೆ | .......... | 27 |
| ದುರ್ಗ ದೇವಾಲಯ, ಐಹೊಳೆ | .......... | 29 |
| ಮಾಲೆಗಿತ್ತಿ ಶಿವಾಲಯ, ಬಾದಾಮಿ | .......... | 31 |
| ದೇವಾಲಯಗಳ ಸಮುಚ್ಚಯ, ಪಟ್ಟದಕಲ್ಲು | .......... | 33 |
| ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು | .......... | 35 |
| ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು | .......... | 37 |
| ಪಾಪನಾಥ ದೇವಾಲಯ, ಪಟ್ಟದಕಲ್ಲು | .......... | 39 |
| ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು | .......... | 41 |
| ಗಳಗನಾಥ ದೇವಾಲಯ, ಪಟ್ಟದಕಲ್ಲು | .......... | 43 |
| ಜೈನ ದೇವಾಲಯ, ಪಟ್ಟದಕಲ್ಲು | .......... | 45 |
| ಮಧುಕೇಶ್ವರ ದೇವಾಲಯ, ಬನವಾಸಿ | .......... | 47 |
| ಪಾರ್ವತಿ ಮತ್ತು ಕಾರ್ತಿಕೇಯ ದೇವಾಲಯಗಳು, ಸಂಡೂರು | .......... | 49 |
| ಶ್ರೀರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ | .......... | 51 |
| ಅನಂತೇಶ್ವರ ದೇವಾಲಯ, ಉಡುಪಿ | .......... | 53 |
| ಗವಿ ಗಂಗಾಧರೇಶ್ವರ ದೇವಾಲಯ, ಬೆಂಗಳೂರು | .......... | 55 |
| ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು | .......... | 57 |
| ಭೋಗನಂದೀಶ್ವರ ದೇವಾಲಯ, ನಂದಿ | .......... | 59 |
| ಪಂಚಕೂಟ ಬಸದಿ, ಕಂಬದಹಳ್ಳಿ | .......... | 61 |
| ಚಾಮುಂಡರಾಯ ಬಸದಿ, ಶ್ರವಣಬೆಳಗೊಳ | .......... | 63 |
| ಅಗಸ್ತ್ಯೇಶ್ವರ ದೇವಾಲಯ, ಟಿ.ನರಸಿಪುರ | .......... | 65 |
| ಗೊಮ್ಮಟೇಶ್ವರ, ಶ್ರವಣಬೆಳಗೊಳ | .......... | 67 |
| ರಾಮಲಿಂಗೇಶ್ವರ ದೇವಾಲಯ ಸಮುಚ್ಚಯ, ಆವನಿ | .......... | 69 |
| ಬ್ರಹ್ಮ ಜಿನಾಲಯ, ಲಕ್ಕುಂಡಿ | .......... | 71 |
| ಕೋಲಾರಮ್ಮ ದೇವಾಲಯ, ಕೋಲಾರ | .......... | 73 |
| ಲಕ್ಷ್ಮೀನರಸಿಂಹ ದೇವಾಲಯ, ಅಗರ | .......... | 75 |
| ಪುಷ್ಕರಿಣಿ, ಮೇಲುಕೋಟೆ | .......... | 77 |
| ಈಶ್ವರ ದೇವಾಲಯ, ಜಲಸಂಗ್ವಿ | .......... | 79 |
| ಕೈಟಭೇಶ್ವರ ದೇವಾಲಯ, ಕುಬಟೂರು | .......... | 81 |
| ಮಹಾದೇವ ದೇವಾಲಯ, ಇಟ್ಟಗಿ | .......... | 83 |
| ದೊಡ್ಡಬಸಪ್ಪ ದೇವಾಲಯ, ಡಂಬ | .......... | 85 |
| ನನ್ನೇಶ್ವರ ದೇವಾಲಯ, ಲಕ್ಕುಂಡಿ | .......... | 87 |
| ಕೋಟೆ, ಬಸವಕಲ್ಯಾಣ | .......... | 89 |
| ಲಕ್ಷ್ಮೀದೇವಿ ದೇವಾಲಯ, ದೊಡ್ಡಗದ್ದವಳ್ಳಿ | .......... | 91 |
| ಚೆನ್ನಕೇಶವ ದೇವಾಲಯ, ಬೇಲೂರು | .......... | 93 |
| ಕೀರ್ತಿನಾರಾಯಣ ದೇವಾಲಯ, ತಲಕಾಡು | .......... | 95 |
| ಜೈನ ದೇವಾಲಯ ಸಮೂಹ, ಹಳೇಬೀಡು | .......... | 97 |

ಭೂವರಾಹ ದೇವಾಲಯ, ಹಲಸಿ .......... 99
ಪಂಚಲಿಂಗೇಶ್ವರ ದೇವಾಲಯ, ಹೂಲಿ .......... 101
ಕಮಲ ಬಸದಿ, ಬೆಳಗಾಂ .......... 103
ವೀರನಾರಾಯಣ ದೇವಾಲಯ, ಬೆಳವಾಡಿ .......... 105
ಕೇದಾರೇಶ್ವರ ದೇವಾಲಯ, ಹಳೇಬೀಡು .......... 107
ಹೊಯ್ಸಳೇಶ್ವರ ದೇವಾಲಯ, ಹಳೇಬೀಡು .......... 109
ಈಶ್ವರ ದೇವಾಲಯ, ಅರಸೀಕೆರೆ .......... 111
ಮಲ್ಲಿಕಾರ್ಜುನ ದೇವಾಲಯ, ಬಸರಾಳು .......... 113
ಕೇಶವ ದೇವಾಲಯ, ಸೋಮನಾಥಪುರ .......... 115
ಲಕ್ಷ್ಮೀನರಸಿಂಹ ದೇವಾಲಯ, ಜಾವಗಲ್ .......... 117
ಲಕ್ಷ್ಮೀನಾರಾಯಣ ದೇವಾಲಯ, ಹೊಸಹೊಳಲು .......... 119
ಲಕ್ಷ್ಮೀನರಸಿಂಹ ದೇವಾಲಯ, ಹೊಳೆನರಸಿಪುರ .......... 121
ಸೋಮೇಶ್ವರ ದೇವಾಲಯ, ಕೋಲಾರ .......... 123
ಭೀಮೇಶ್ವರ ದೇವಾಲಯ, ಕೈವಾರ .......... 125
ವಿದ್ಯಾಶಂಕರ ದೇವಾಲಯ, ಶೃಂಗೇರಿ .......... 127
ವೈದ್ಯೇಶ್ವರ ದೇವಾಲಯ, ತಲಕಾಡು .......... 129
ಹೇಮಕೂಟ ಬೆಟ್ಟದ ದೇವಾಲಯಗಳು, ಹಂಪಿ .......... 131
ಗೌರೀಶ್ವರ ದೇವಾಲಯ, ಯಳಂದೂರು .......... 133
ಮೆಟ್ಟಿಲುಗಳ ಕೊಳ, ಹಂಪಿ .......... 135
ವಿರೂಪಾಕ್ಷ (ಪಂಪಾಪತಿ) ದೇವಾಲಯ, ಹಂಪಿ .......... 137
ಕೃಷ್ಣ ದೇವಾಲಯ, ಹಂಪಿ .......... 139
ವಿಠಲ ದೇವಾಲಯ, ಹಂಪಿ .......... 141
ಹಜಾರರಾಮ ದೇವಾಲಯ, ಹಂಪಿ .......... 143
ಅನಂತಶಯನ ದೇವಾಲಯ, ಅನಂತಶಯನಗುಡಿ .......... 145
ಅಚ್ಯುತರಾಯ ದೇವಾಲಯ, ಹಂಪಿ .......... 147
ಗಜಶಾಲೆ, ಹಂಪಿ .......... 149
ಕಮಲ ಮಹಲ್, ಹಂಪಿ .......... 151
ರಾಣಿಯರ ಸ್ನಾನಗೃಹ, ಹಂಪಿ .......... 153
ಕೋಟೆ, ಚಿತ್ರದುರ್ಗ .......... 155
ಅಘೋರೇಶ್ವರ ದೇವಾಲಯ, ಇಕ್ಕೇರಿ .......... 155
ರಾಮೇಶ್ವರ ದೇವಾಲಯ, ಕೆಳದಿ .......... 157
ಶಿವಪ್ಪನಾಯಕನ ಅರಮನೆ, ಶಿವಮೊಗ್ಗ .......... 159
ಜುಮ್ಮ ಮಸೀದಿ, ಗುಲ್ಬರ್ಗ .......... 161
ಫಿರೋಜ್ ಷಾ ಬಹಮನಿಯ ಗೋರಿ, ಗುಲ್ಬರ್ಗ .......... 163
ಕೋಟೆ, ಬೀದರ್ .......... 165
ಮಹ್ಮೂದ್ ಗವಾನನ ಮದರಸ, ಬೀದರ್ .......... 167
ಜುಮ್ಮ ಮಸೀದಿ, ಬಿಜಾಪುರ .......... 169
ಗಗನ್ ಮಹಲ್, ಬಿಜಾಪುರ .......... 171
ಸಾತ್ ಮಂಜಿಲ್, ಬಿಜಾಪುರ .......... 173
ಇಮ್ಮಡಿ ಕಾಸಿಂ ಬರೀದನ ಗೋರಿ, ಬೀದರ್ .......... 175
ಇಬ್ರಾಹಿಂ ರೋಜಾ, ಬಿಜಾಪುರ .......... 177
ಗೋಳ ಗುಮ್ಮಟ, ಬಿಜಾಪುರ .......... 179
ಚತುರ್ಮುಖ ಬಸದಿ, ಗೇರುಸೊಪ್ಪೆ .......... 181
ಚಾಮುಂಡೇಶ್ವರಿ ದೇವಾಲಯ, ಚಾಮುಂಡಿ ಬೆಟ್ಟ, ಮೈಸೂರು .......... 183
ಟಿಪ್ಪುಸುಲ್ತಾನನ ಅರಮನೆ, ಬೆಂಗಳೂರು .......... 185
ದರಿಯಾದೌಲತ್, ಶ್ರೀರಂಗಪಟ್ಟಣ .......... 187
ವರಾಹಸ್ವಾಮಿ ದೇವಾಲಯ, ಮೈಸೂರು .......... 189
ರಾಜರ ಸಮಾಧಿಗಳು, ಮಡಿಕೇರಿ .......... 191
ಸಂತ ಫಿಲೋಮಿನ ಚರ್ಚ್, ಮೈಸೂರು .......... 193
ಜಗನ್ಮೋಹನ ಅರಮನೆ, ಮೈಸೂರು .......... 195
ಅರಮನೆ, ಬೆಂಗಳೂರು .......... 197
ಪ್ರಾಚ್ಯ ಸಂಶೋಧನಾಲಯ, ಮೈಸೂರು .......... 199
ಅರಮನೆ, ಮೈಸೂರು .......... 201
ನಾನಕ್ ಝರಾ ಗುರುದ್ವಾರ, ಬೀದರ್ .......... 203
ಲಲಿತ ಮಹಲ್, ಮೈಸೂರು .......... 205
ವಿಧಾನಸೌಧ, ಬೆಂಗಳೂರು .......... 207

# ಪೀಠಿಕೆ

ಫಲವತ್ತಾದ ಕಪ್ಪುಮಣ್ಣಿನ ನೆಲ, ಎತ್ತರವಾದ ಮೇಲುಮ್ಮೆ, ಕಿವಿಗಳಲ್ಲಿ ಗುಂಯ್‌ಗುಡುವ ಇಲ್ಲಿನ ಸಂಗೀತ, ಪ್ರಕೃತಿ ಮತ್ತು ದೈವ ಲೀನವಾಗುವ ತಾಣ - ಇದೇ ಕರ್ನಾಟಕ. ರಾಮಾಯಣ ಮತ್ತು ಮಹಾಭಾರತಗಳಂತಹ ಮಹಾಕಾವ್ಯಗಳಲ್ಲಿ ಉಲ್ಲೇಖಿಸಲು ಅರ್ಹವಾದಂತಹ ನಾಡು ಈ ಕನ್ನಡ ನೆಲ. ಪ್ರಾಚೀನ ಕಾಲದಿಂದ ಆರಂಭವಾಗಿ ಆಧುನಿಕ ಕಾಲದವರೆಗೆ ಈ ಪ್ರದೇಶವನ್ನು ಸಂಸ್ಕೃತಿ ಪ್ರಿಯರಾದ ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಹಾಗೂ ಕೆಳದಿಯ ಅರಸರು, ದಖನ್ನಿನ ಸುಲ್ತಾನರು, ಹೈದರ್ ಅಲಿ, ಟಿಪ್ಪು ಸುಲ್ತಾನ್, ಮೈಸೂರು ಒಡೆಯರುಗಳು ಪೋಷಿಸಿಕೊಂಡು ಬಂದರು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಮಹತ್ತರವಾದ ಪಾತ್ರವನ್ನು ವಹಿಸಿದ್ದಿತು. ಇಂದು ಸ್ವತಂತ್ರ ಭಾರತದ ಒಂದು ರಾಜ್ಯವಾಗಿ ಈ ಹೊಸ ಸಹಸ್ರಮಾನದಲ್ಲಿ ಬೆಳವಣಿಗೆಯ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದೆ.

ಪ್ರಕೃತಿಯು ಈ ಭೂಭಾಗಕ್ಕೆ ಧಾರಾಳವಾಗಿ ಕೊಡುಗೆಗಳನ್ನು ಕಾವೇರಿ, ಕೃಷ್ಣ, ಮಲಪ್ರಭಾ, ಘಟಪ್ರಭಾ, ನೇತ್ರಾವತಿ, ಕಪಿಲಾ ಮುಂತಾದ ಜೀವನದಿಗಳ ಮೂಲಕ ನೀಡಿದೆ. ಕರಾವಳಿಯನ್ನು ಹೊಂದಿರುವ ಪೂರ್ವ, ಪಶ್ಚಿಮ ಘಟ್ಟಗಳು, ಮಲೆನಾಡಿನ ನಿತ್ಯಹರಿದ್ವರ್ಣದ ಕಾಡುಗಳು, ಇತರ ಕಡೆಗಳ ಮೈದಾನ, ಇವೆಲ್ಲವುಗಳಿಂದ ಇದು ವೈವಿಧ್ಯಪೂರ್ಣವಾಗಿದೆ. ಜನಜನಿತವಾಗಿ ಕರ್ನಾಟಕವು ಚಿನ್ನದ ನಾಡು; ಇತರ ಲೋಹಗಳೂ ಇಲ್ಲಿ ಲಭ್ಯ, ಸುವಾಸನೆಯ ಚಂದನ, ಬೃಹತ್‌ಗಾತ್ರದ ಆನೆಗಳ ದಂತ, ಏಲಕ್ಕಿ, ಲವಂಗ ಮುಂತಾದ ಸಂಬಾರ ಪದಾರ್ಥಗಳು, ಬಣ್ಣ ಬಣ್ಣದ ಪ್ರಶಸ್ತ ಶಿಲೆಗಳು ಇವೆಲ್ಲವೂ ಎರಡು ಸಾವಿರ ವರ್ಷಗಳ ಹಿಂದೆಯೇ ರೋಮನ್ನರನ್ನು ಆಕರ್ಷಿಸಿದ್ದವು. ಈ ಉತ್ತಮ ಪದಾರ್ಥಗಳಿಗೆ ರೋಂ ದೇಶದಲ್ಲಿ ಮಾತ್ರವಲ್ಲದೆ ಯುರೋಪಿನಾದ್ಯಂತ ಹೆಚ್ಚಿನ ಬೇಡಿಕೆ ಇದ್ದಿತು. ಆದುದರಿಂದ ರೋಮನ್ನರು ಕರ್ನಾಟಕಕ್ಕೆ ಬಂದು ತಮ್ಮ ಅಂದವಾದ, ಹೆಚ್ಚು ಮೌಲ್ಯದ ಚಿನ್ನದ ನಾಣ್ಯಗಳನ್ನು ಕೊಟ್ಟು ಈ ವಸ್ತುಗಳನ್ನು ಖರೀದಿಸಿ ಹಿಂದಿರುಗುತ್ತಿದ್ದರು. ಈ ರೀತಿಯ ಅಂತರ ರಾಷ್ಟ್ರೀಯ ವ್ಯಾಪಾರ ಇತಿಹಾಸದಲ್ಲಿ ಸುವರ್ಣಯುಗವೆಂದು ಖ್ಯಾತವಾಗಿರುವ ವಿಜಯನಗರ ಕಾಲದಲ್ಲಿ ಮುಂದುವರಿಯಿತು.

ಕರ್ನಾಟಕಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶೀಯ ಯಾತ್ರಿಕರು ಬಂದಿದ್ದರು. ಅವರೆಲ್ಲರೂ ಈ ನಾಡಿನ ರಾಜರ ಸೈನ್ಯಶಕ್ತಿ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ನೋಡಿ ಆಶ್ಚರ್ಯ ಚಕಿತರಾಗಿ ಧಾರಾಳವಾಗಿ ಮೆಚ್ಚಿಗೆಯ ಮಾತುಗಳನ್ನು ಬರೆದಿದ್ದಾರೆ. ಗ್ರೀಸಿನ ಟಾಲೆಮಿ, ಚೀನದ ಫಾಹಿಯಾನ್, ಹ್ಯುಯೆನ್‌ತ್ಸಾಂಗ್, ಇತ್ಸಿಂಗ್, ಅರೇಬಿಯದ ಸುಲೈಮಾನ್ ಮತ್ತು ಇಬ್ನ್ ಬತೂತ, ವೆನಿಸಿನ ನಿಕೊಲೊ ಕೊಂತಿ, ಪರ್ಷಿಯದ ಅಬ್ದುಲ್ ರಜಾಕ್, ಪೋರ್ಚುಗೀಸ್ ಯಾತ್ರಿಕರಾದ ಬಾರ್ಬೊಸ, ಡೊಮಿಂಗೊ ಪೇಸ್, ನೂನಿಜ್, ದಲ್ಲವೆಲ್ಲೆ, ರಷ್ಯದ ನಿಕೆಟಿನ್, ಮುಸ್ಲಿಂ ಚರಿತ್ರಕಾರರಾದ ಅಮೀರ್ ಖುಸ್ರು, ಬರನಿ, ಇಸಾಮಿ ಮತ್ತು ಫೆರಿಷ್ಟ ಹಾಗೂ ಬುಕಾನನ್ ಇವರುಗಳು ಮೆಚ್ಚಿ ಬರೆದವರಲ್ಲಿ ಕೆಲವರು ಮಾತ್ರ.

ಇತಿಹಾಸವು ಮಹಾನ್ ವ್ಯಕ್ತಿಗಳ ಕಾರ್ಯಗಳ ದಾಖಲೆ ಎಂದು ಹೇಳುವುದಾದರೆ, ಕರ್ನಾಟಕಕ್ಕೆ ಇಲ್ಲಿನ ಸಿಂಹಪಾಲು ದೊರಕುತ್ತದೆ. ಇಲ್ಲಿನ ಮಹಾನ್ ವ್ಯಕ್ತಿಗಳ ಪಟ್ಟಿಯು ಉದ್ದವಾಗಿದೆ. ಇವರಲ್ಲಿ ಪ್ರಮುಖರು ಆತ್ಮಗೌರವದ ಸಂಕೇತವೆನಿಸಿದ ಕದಂಬ, ಮಯೂರ ಶರ್ಮ, ಉತ್ತರ ಭಾರತದ ಹರ್ಷನ ಸಂತೋಷಕ್ಕೆ ಭಂಗವನ್ನುಂಟುಮಾಡಿದ ಚಾಳುಕ್ಯ ಇಮ್ಮಡಿ ಪುಲಕೇಶಿ, ಚೋಳರು ಕರ್ನಾಟಕದಲ್ಲಿ ತಳ ಊರದಂತೆ ಅವರನ್ನು ಹೊರಕ್ಕೆ ಕಳುಹಿಸಿದ ಹೊಯ್ಸಳ ವಿಷ್ಣುವರ್ಧನ, ಜನಾನುರಾಗಿಯಾಗಿದ್ದ ಕೃಷ್ಣದೇವರಾಯ, ಪ್ರಖ್ಯಾತ ರಾಣಿಯರಾಗಿದ್ದ ಚೆನ್ನಮ್ಮ ಮತ್ತು ಅಬ್ಬಕ್ಕ, ಟಿಪ್ಪು ಸುಲ್ತಾನ್, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ತತ್ವಜ್ಞಾನಿ ಹಾಗೂ ರಾಜನೀತಿಜ್ಞ ಜಯಚಾಮರಾಜ ಒಡೆಯರ್ ಮುಂತಾದವರನ್ನು ನಾವು ಮರೆಯುವಂತಿಲ್ಲ. ಧಾರ್ಮಿಕ ಕ್ಷೇತ್ರದಲ್ಲಿ ಆದಿ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವಣ್ಣ, ಅಕ್ಕಮಹಾದೇವಿ, ವ್ಯಾಸರಾಯ, ಪುರಂದರದಾಸ, ಕನಕದಾಸ ಮತ್ತಿತರರು ಈ ನಾಡಿಗೆ ಸಫಲತೆಯನ್ನು ತಂದುಕೊಟ್ಟರು. ಆಚಾರ್ಯ ಶಂಕರರು ದೂರದ ಕೇರಳದಿಂದ ಇಲ್ಲಿಗೆ ಬಂದು ಕರ್ನಾಟಕದಲ್ಲಿರುವ ಶೃಂಗೇರಿಯನ್ನು ಅದ್ವೈತ ಧರ್ಮಪ್ರಚಾರಕ್ಕಾಗಿ ಆರಿಸಿಕೊಂಡರು. ರಾಮಾನುಜಾಚಾರ್ಯರು ಚೋಳನಾಡನ್ನು ತ್ಯಜಿಸಬೇಕಾಗಿ ಬಂದಾಗ, ಅವರ

ಆಯ್ಕೆ ಕರ್ನಾಟಕದ ಮೇಲುಕೋಟೆ. ಅವರಿಗೆ ಆಶ್ರಯವನ್ನು ನೀಡಿದವನು ಹೊಯ್ಸಳ ವಿಷ್ಣುವರ್ಧನ. ಹಲ್ಮಿಡಿ ಶಾಸನದ ರಚಯಿತನಿಂದ ಆರಂಭವಾಗಿ ರನ್ನ, ಪೊನ್ನ, ಪಂಪ, ಹರಿಹರ ಮುಂತಾದ ನೂರಾರು ಪುರುಷರು ಮತ್ತು ಮಹಿಳೆಯರು ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಪೋಷಿಸಿಕೊಂಡು ಬಂದಿದ್ದಾರೆ. ಈ ಸಾಹಿತ್ಯವಾಹಿನಿಯನ್ನು ನಮ್ಮ ಕಾಲದವರೇ ಆದ ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮಕಾರಂತ, ಗೋಕಾಕ್ ಮುಂತಾದವರು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡ ನಾಡು ಏಳುಬಾರಿ ಪಡೆದಿದೆ. ಈ ಕೀರ್ತಿ ಬೇರೆ ಭಾಷಾ ಪ್ರದೇಶಕ್ಕೆ ಇಲ್ಲ. ವಿವಿಧ ಭಾಷೆ ಮತ್ತು ಲಿಪಿಗಳಲ್ಲಿ ಬರೆಯಲಾದ ಸಾವಿರಾರು ಶಾಸನಗಳು ಇಲ್ಲಿ ದೊರಕಿವೆ. ಅದೇ ರೀತಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ಸಾವಿರಾರು ಪ್ರಾಚೀನ ನಾಣ್ಯಗಳು ಈ ನಾಡಿನಲ್ಲಿ ದೊರಕಿವೆ. ಇಂದು ಶಾಸನ ಪ್ರಪಂಚದಾದ್ಯಂತ ಬಳಕೆಯಲ್ಲಿರುವ 'ಎಪಿಗ್ರಾಫಿಯ' ಎನ್ನುವ ಪದ ಕರ್ನಾಟಕದ ಕೊಡುಗೆ ಎನ್ನುವುದು ನಮಗೆ ಹೆಮ್ಮೆಯ ವಿಷಯ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೆನಿಸಿರುವ ಮೈಸೂರಿನಲ್ಲಿ, ವಿಶ್ವದಾದ್ಯಂತ ಪ್ರಖ್ಯಾತವಾಗಿರುವ ಆಡಳಿತ ಶಾಸ್ತ್ರದ ಪ್ರಮುಖ ಗ್ರಂಥ ಕೌಟಿಲ್ಯನ ಅರ್ಥಶಾಸ್ತ್ರ ಮೊದಲ ಬಾರಿಗೆ ದೊರಕಿದ್ದು ನಮ್ಮಲ್ಲಿಯೇ ಎನ್ನುವುದು ಇನ್ನೊಂದು ಅಭಿಮಾನದ ಸಂಗತಿ. ಜಾಗತಿಕ ಮಟ್ಟದ ಇನ್ನೊಂದು ಸಾಧನೆ ಎಂದರೆ ಪ್ರಪಂಚದಲ್ಲೇ ಅತ್ಯಂತ ಎತ್ತರದ ಶಿಲ್ಪ ಎಂಬ ಗೌರವಕ್ಕೆ ಪಾತ್ರವಾಗಿರುವ ಶ್ರವಣಬೆಳಗೊಳದ ಬೃಹತ್ ಗೊಮ್ಮಟೇಶ್ವರನ ವಿಗ್ರಹ.

ಪ್ರಾಚೀನ ಕಾಲದಿಂದಲೂ, ಕರ್ನಾಟಕ ಮತ ಸಹಿಷ್ಣುತೆಗೆ ಮಾತ್ರವಲ್ಲದೆ ಮತೀಯ ಸಹಬಾಳ್ವೆಗೆ ಹೆಸರುವಾಸಿಯಾಗಿದ್ದ ಪ್ರದೇಶ. ವಿವಿಧ ಮತಗಳ ಧಾರ್ಮಿಕ ಸ್ಥಳಗಳು ಅಕ್ಕ ಪಕ್ಕದಲ್ಲಿರುವುದು ಸಹಬಾಳ್ವೆಗೆ ಉತ್ತಮ ಸಾಕ್ಷಿಗಳಾಗಿವೆ. ಹಿಂದೆ ಮಾತ್ರವಲ್ಲದೆ ಈಗಲೂ, ಕರ್ನಾಟಕ ಹಿಂದು, ಬೌದ್ಧ, ಜೈನ, ಶೈವ, ವೈಷ್ಣವ, ಶ್ರೀವೈಷ್ಣವ, ವೀರಶೈವ, ಇಸ್ಲಾಂ, ಕ್ರೈಸ್ತ, ಜಾರತೂಷ್ಟ್ರ, ಸಿಖ್ ಮತ್ತು ಇನ್ನಿತರ ಧರ್ಮಾನುಯಾಯಿಗಳ ತವರುಮನೆಯಾಗಿದೆ. ಸಂಗೀತ, ನೃತ್ಯ ಮತ್ತು ಇತರ ಕಲೆಗಳು ರಾಜಮಹಾರಾಜರಿಂದ ಹಾಗೂ ಜನಸಾಮಾನ್ಯರಿಂದ ಪೋಷಣೆ ಪಡೆದಿವೆ. ಜನಗಳಿಗೆ ಸವಾಲುಗಳು ಎದುರಾದಾಗ, ಅವುಗಳನ್ನು ಸಮರ್ಪಕವಾದ ರೀತಿಯಲ್ಲಿ ಎದುರಿಸಿ ಸಾಕಷ್ಟು ಸಫಲತೆಯನ್ನು ಗಳಿಸಿದ್ದಾರೆ. ಈ ರೀತಿ ನಮ್ಮ ದೇಶದ ಮುಖ್ಯ ಗುಣವಾದ ಅನೇಕತೆಯಲ್ಲಿ ಏಕತೆಯನ್ನು ಕನ್ನಡಿಗರು ಕಂಡುಕೊಂಡಿದ್ದಾರೆ.

ಈ ಎಲ್ಲ ಗುಣಲಕ್ಷಣಗಳೂ ಕನ್ನಡ ನಾಡಿನ ವಾಸ್ತುಶಿಲ್ಪಗಳಿಂದ ಹಿಡಿದು ಇತ್ತೀಚಿನ ಪಾರಂಪರಿಕ ಕಟ್ಟಡಗಳವರೆಗಿನ ಕೃತಿಗಳಲ್ಲಿ ಕಾಣಬಹುದಾಗಿದೆ. ಬೆಂಗಳೂರಿನ ವಿಧಾನಸೌಧದಂತಹ ಕಟ್ಟಡವು ಸಾವಿರಾರು ವರ್ಷಗಳ ಪರಂಪರೆಯ ಮುಂದುವರಿಕೆ. ಅದು ಆಧುನಿಕ ಕಾಲದಲ್ಲಿ ಕಟ್ಟಲಾದ ಪ್ರಾಚೀನ ಕಟ್ಟಡದಂತೆ ಭಾಸವಾಗುತ್ತದೆ. ಇತರ ಕಡೆಗಳಲ್ಲಿರುವಂತೆ ವಾಸ್ತುಶಿಲ್ಪ ಪರಂಪರೆಯು ಇಲ್ಲಿ ಪಳೆಯುಳಿಕೆಯಲ್ಲ; ಆಧುನಿಕ ಜೀವನಕ್ಕೆ ಹೊಂದಿಕೊಂಡ ಚೇತನಾಶಕ್ತಿ ಆಂದೋಲನ. ಹಿಂದಿನ ಕಾಲದ ದಾಸೋಜ ಅಥವಾ ಮಲ್ಲಿತಮ್ಮ ಕೆತ್ತಿದಂತೆ ನಮ್ಮ ಇಂದಿನ ಶಿಲ್ಪಿಗಳು ಹೊಯ್ಸಳ ಅಥವಾ ಚಾಳುಕ್ಯ ಶಿಲ್ಪಗಳನ್ನು ಕಡೆಯಬಲ್ಲರು. ಇದೇ ನಮ್ಮ ಕಲಾ ಸಂಪ್ರದಾಯದ ವೈಶಿಷ್ಟ್ಯ.

ಕರ್ನಾಟಕದ ವಾಸ್ತು ಇತಿಹಾಸವನ್ನು ಬೃಹತ್ ಶಿಲಾ ಸಮಾಧಿಯುಗ ಸಂಸ್ಕೃತಿಯ ಕಾಲದಿಂದ ಆರಂಭಿಸಬಹುದು. ಏಕೆಂದರೆ ಅದರ ಹಿಂದಿನ ಕಾಲದ ವಿಷಯದ ಬಗೆಗೆ ಸಾಕಷ್ಟು ತಿಳಿದಿಲ್ಲ. ಈ ಯುಗದ ಜನಗಳು ದೊಡ್ಡ ಕಲ್ಲುಗಳಿಂದ ಗೋರಿಗಳನ್ನು ರಚಿಸುತ್ತಿದ್ದುದರಿಂದ, ಆ ಕಾಲವನ್ನು ಬೃಹತ್ ಶಿಲಾಸಮಾಧಿಯುಗ ಎಂದು ಕರೆಯುವುದು ವಾಡಿಕೆ. ನಮ್ಮ ನಾಗರಿಕತೆಯಲ್ಲಿ ಕಬ್ಬಿಣದ ಉಪಯೋಗವನ್ನು ಮೊದಲು ಮಾಡಿದವರು ಈ ಜನಗಳು. ಇದಾದ ನಂತರ ಇತಿಹಾಸ ಆರಂಭ ಕಾಲದ ಯುಗವನ್ನು ಪ್ರವೇಶಿಸುತ್ತೇವೆ. ಇದರಲ್ಲಿ ಮೌರ್ಯ ಮತ್ತು ಶಾತವಾಹನರ ಕಾಲಗಳನ್ನು ಸೇರಿಸಬಹುದು. ಶಾತವಾಹನರ ಕಾಲದಲ್ಲಿ ಇಟ್ಟಿಗೆಯ ಜೊತೆಗೆ ಅಮೃತಶಿಲೆಯನ್ನೂ ಬಳಸಲಾಗುತ್ತಿತ್ತು. ಸನ್ನತಿ ಮತ್ತು ಕಂಗನಹಳ್ಳಿಯಲ್ಲಿ ನಡೆಯುತ್ತಿರುವ ಉತ್ಖನನಗಳಿಂದ ಶಾತವಾಹನರ ಕಾಲದ ವಾಸ್ತುಶಿಲ್ಪದ ಬಗೆಗೆ ಹೆಚ್ಚಿನ ಸಂಗತಿಗಳು ತಿಳಿಯುತ್ತಿವೆ. ಈ ಎರಡೂ ಉತ್ಖನನಗಳು ಇನ್ನೂ ನಡೆಯುತ್ತಿರುವುದರಿಂದ, ಇವುಗಳು ಪೂರ್ಣಗೊಂಡು ಈ ಕಾಲದ ಶಿಲ್ಪಕಲೆಯ ಮೇಲೆ ಹೊಸ ಬೆಳಕು ಬೀರುವುದನ್ನು ನಿರೀಕ್ಷಿಸಲಾಗುತ್ತಿದೆ. ಗುಲ್ಬರ್ಗ ಜಿಲ್ಲೆಯ ಕಂಗನಹಳ್ಳಿಯಲ್ಲಿ ಅಶೋಕನ ಶಿಲ್ಪ ಹಾಗೂ ಅದರ ಮೇಲ್ಭಾಗದಲ್ಲಿ ಅವನನ್ನು ಹೆಸರಿಸುವ ಶಾಸನವುಳ್ಳ ಶಿಲ್ಪಫಲಕ ದೊರಕಿದೆ. ಬಹುಶಃ ಇದೇ ಮೊಟ್ಟಮೊದಲನೆಯ ಅಶೋಕನ ಶಿಲ್ಪವಿರಬಹುದು.

ಆನಂತರ ಕರ್ನಾಟಕವು ಬನವಾಸಿಯಿಂದ ಆಳಿದ ಕದಂಬರ ಕಾಲಕ್ಕೆ ಕಾಲಿಡುತ್ತದೆ. ಪಲ್ಲವರಿಂದ ಅವಮಾನಿತನಾದ ಮಯೂರಶರ್ಮನು ಕೋಪಗೊಂಡು ಪಲ್ಲವರನ್ನು ಧಿಕ್ಕರಿಸಿ ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿದನು. ಕರ್ನಾಟಕದಲ್ಲಿ ಇದೇ ಮೊದಲನೆಯ ರಾಜ್ಯವಾಗಿ ಕದಂಬ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಹೀಗೆ ಮಯೂರಶರ್ಮನು ಕನ್ನಡಿಗರ ಆತ್ಮಗೌರವದ ಪ್ರತೀಕವೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಕದಂಬರು ಇಟ್ಟಿಗೆ ಮತ್ತು ಕಲ್ಲಿನಿಂದ ವಾಸ್ತುಶಿಲ್ಪ ರಚನೆಯನ್ನು ಮುಂದುವರಿಸಿದರು. ಬನವಾಸಿಗೆ ಸಮೀಪದಲ್ಲಿರುವ ಗುಡ್ನಾಪುರದಲ್ಲಿ ನಡೆದ ಉತ್ಖನನಗಳಿಂದ ಬನವಾಸಿ ಕದಂಬರ ಕಾಲದ ಎರಡು ಇಟ್ಟಿಗೆ ಕಟ್ಟಡಗಳು ಬೆಳಕಿಗೆ ಬಂದಿವೆ. ಕದಂಬರು ವಾಸ್ತುಶಿಲ್ಪ ಪ್ರಪಂಚಕ್ಕೆ ಕದಂಬ ನಾಗರ ಎಂದು ಕರೆಯಲಾದ ಶೈಲಿಯ ಶಿಖರವನ್ನು ತಮ್ಮ ಕೊಡುಗೆಯಾಗಿ ನೀಡಿದರು. ಈ ಶೈಲಿಯ ಶಿಖರಗಳು ಕದಂಬರ ಆಳ್ವಿಕೆಯ ಸ್ಥಳದಿಂದ ದೂರವಿರುವ ಪ್ರದೇಶಗಳಲ್ಲಿಯೂ ಬಳಕೆಯಲ್ಲಿದ್ದುದು ಕಾಣಬರುತ್ತದೆ.

ಕೋಲಾರದಿಂದ ತಮ್ಮ ಆಳ್ವಿಕೆಯನ್ನು ಆರಂಭಿಸಿದ ಪಶ್ಚಿಮೀ ಗಂಗರು ಕಾವೇರೀ ತೀರದಲ್ಲಿರುವ ತಲಕಾಡಿಗೆ ತಮ್ಮ ರಾಜಧಾನಿಯನ್ನು ಬದಲಾಯಿಸಿದರು. ಇಂದು ತಲಕಾಡು ಮರಳುರಾಶಿಗೆ ಪ್ರಖ್ಯಾತವಾಗಿದ್ದು ನೂರಾರು ಜನಗಳು ಅದನ್ನು ಸಂದರ್ಶಿಸಲು ಅಲ್ಲಿಗೆ ಹೋಗುತ್ತಾರೆ. ಗಂಗರು ಖ್ಯಾತ ವಾಸ್ತುಶಿಲ್ಪ ನಿರ್ಮಾತರಾಗಿದ್ದು ಕಲ್ಲಿನಲ್ಲಿ ಹತ್ತಾರು ದೇವಾಲಯಗಳನ್ನು ನಿರ್ಮಿಸಿದರು. ಮತ್ತು ಇಟ್ಟಿಗೆಯ ಕಟ್ಟಡ ನಿರ್ಮಾಣವನ್ನು ಮುಂದುವರಿಸಿದರು. ಅವರು ಜೈನ ಮತ್ತು ಶೈವ ಧರ್ಮಗಳಿಗೆ ಪ್ರೋತ್ಸಾಹ ನೀಡಿದರು. ತಲಕಾಡಿನಲ್ಲೇ ನಡೆದ ಉತ್ಖನನದಿಂದ ಅವರು ಕಟ್ಟಿದ ಇಟ್ಟಿಗೆಯ ಜೈನ ದೇವಾಲಯವು ಬೆಳಕಿಗೆ ಬಂದಿದೆ. ಇದು ಪಾರ್ಶ್ವನಾಥ ಬಸದಿ. ತಲಕಾಡು ಮತ್ತು ಟಿ.ನರಸಿಪುರಗಳ ಸುತ್ತಮುತ್ತ ಇರುವ ದೇವಾಲಯಗಳಲ್ಲಿ ಮೂಲ ಭಾಗವು ಗಂಗರ ಕಾಲಕ್ಕೆ ಸೇರಿರುತ್ತದೆ. ಟಿ. ನರಸಿಪುರದ ಆಗಸ್ತೇಶ್ವರ ದೇವಾಲಯವು ಇದಕ್ಕೆ ಒಳ್ಳೆಯ ಉದಾಹರಣೆ. ಶ್ರವಣಬೆಳಗೊಳದಲ್ಲಿ ಪ್ರಖ್ಯಾತವಾಗಿರುವ ಚಾವುಂಡರಾಯ ಬಸದಿಯಂತಹ ಮುಖ್ಯ ದೇವಾಲಯಗಳು ಗಂಗರ ಕಾಲದ ನಿರ್ಮಾಣಗಳು.

ಪ್ರಾಚೀನ ಚಾಳುಕ್ಯರ ಕಾಲದಲ್ಲಿ ಕರ್ನಾಟಕವು ವಾಸ್ತುಶಿಲ್ಪ ಇತಿಹಾಸದಲ್ಲಿ ವೈಭವಯುತ ಹಂತವನ್ನು ಕಂಡಿತು. ಬಾದಾಮಿ (ವಾತಾಪಿ) ಇವರ ರಾಜಧಾನಿಯಾದುದರಿಂದ, ಇವರನ್ನು ಬಾದಾಮಿಯ ಚಾಳುಕ್ಯರು ಎಂದು ಕರೆಯುವುದು ರೂಢಿಯಾಗಿದೆ. ಇವರ ಕಾಲದ ದೇವಾಲಯಗಳೆಲ್ಲವೂ ಬಿಜಾಪುರ ಜಿಲ್ಲೆಯ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ಕೇಂದ್ರೀಕೃತವಾಗಿವೆ. ಈ ಸ್ಥಳಗಳಲ್ಲಿ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ. ಈ ಸ್ಥಳಗನ್ನು ದೇವಾಲಯದ ವಾಸ್ತುಶಿಲ್ಪಗಳ ಪ್ರಯೋಗಶಾಲೆ ಎಂದು ಪರಿಗಣಿಸಲಾಗಿದೆ. ಐಹೊಳೆಯಲ್ಲಿ ದಕ್ಷಿಣ, ಉತ್ತರ ಮತ್ತು ದಖನ್ನಿನ ವಾಸ್ತು ಶಿಲ್ಪಿಗಳು ಸೇರಿ ತಮಗೆ ಪರಿಚಿತವಾಗಿದ್ದ ಶೈಲಿಯ ದೇವಾಲಯಗಳನ್ನು ನಿರ್ಮಿಸಲು ಆರಂಭಿಸಿದರು. ಇದರಿಂದ ಕೆಲವು ದೇವಾಲಯಗಳು ದ್ರಾವಿಡ ಶೈಲಿಗೆ ಸೇರಿದ, ಮತ್ತೆ ಕೆಲವು ನಾಗರ ಹಾಗೂ ವೇಸರ ಶೈಲಿಗೆ ಸೇರಿದ ನಿರ್ಮಾಣಗಳಾಗಿದ್ದವು. ಮತ್ತೆ ಲಾಳಾಕಾರದ ದೇವಾಲಯವನ್ನು ಕಟ್ಟಲಾಯಿತು. ಹೀಗೆ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ವಿವಿಧ ಶೈಲಿಗಳ ಮತ್ತು ವಿವಿಧ ಆಳತೆಗಳ ದೇವಾಲಯಗಳು ನಿರ್ಮಾಣಗೊಂಡವು. ಬಾದಾಮಿಯು ವಿಶೇಷವಾಗಿ ಕಲ್ಲಿನಲ್ಲಿ ಕೊರೆಯಲಾದ ಗುಹಾಲಯಗಳಿಗೆ ಪ್ರಸಿದ್ಧಿ ಪಡೆಯಿತು. ಬಾದಾಮಿಯಲ್ಲಿ ಕಲ್ಲಿನಲ್ಲಿ ಕೊರೆಯಲಾಗಿರುವ ಶೈವ, ವೈಷ್ಣವ ಹಾಗೂ ಜೈನ ದೇವಾಲಯಗಳು ಒಂದರ ಪಕ್ಕದಲ್ಲಿ ಮತ್ತೊಂದು ಇರುವುದು ಆ ಕಾಲದ ಮತೀಯ ಸಾಮರಸ್ಯಕ್ಕೆ ಉತ್ತಮ ಉದಾಹರಣೆ. ಪ್ರಮುಖ ದೇಗುಲಗಳಾದ ಮೇಗುತಿ, ದುರ್ಗ, ಗೌಡರಗುಡಿ, ಲಾಡ್‌ಖಾನ್, ಬಾದಾಮಿಯ ಒಂದು ಮತ್ತು ಮೂರನೆಯ ಗುಹಾಲಯಗಳು, ಮಾಲೆಗಿತ್ತಿ ಶಿವಾಲಯ, ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಈ ಪರಂಪರೆಯ ಪ್ರಸಿದ್ಧ ವಾಸ್ತುಶಿಲ್ಪ ರಚನೆಯ ಉದಾಹರಣೆಗಳು.

ವಿಶೇಷ ಬಲಿಷ್ಠರಾಗಿದ್ದ ರಾಷ್ಟ್ರಕೂಟ ವಂಶದ ದೊರೆಗಳು ಉತ್ತರ ಭಾರತದ ಮೇಲೂ ದಂಡಯಾತ್ರೆಗಳನ್ನು ನಡೆಸಿದ್ದರು. ಸಮಕಾಲೀನ ಉತ್ತರಭಾರತದ ರಾಜವಂಶಗಳು ಅವರ ಬಿಲ್ಲುಗಾರರೂ ಸೇರಿದಂತೆ, ರಾಷ್ಟ್ರಕೂಟರ ಸೈನ್ಯಕ್ಕೆ ಹೆದರುತ್ತಿದ್ದರು. ರಾಷ್ಟ್ರಕೂಟ ವಾಸ್ತುಶಿಲ್ಪ ರಚನೆಗಳು ಇಂದಿನ ಕರ್ನಾಟಕದ ಎಲ್ಲೆಯ ಹೊರಗಿರುವ ಎಲ್ಲೋರ ಮತ್ತು ಎಲಿಫಾಂಟಗಳಲ್ಲಿವೆ. ಕೆಲವು ಸಣ್ಣ ದೇವಾಲಯಗಳು ಮಾತ್ರ ಸಿರಿವಾಳ ಮತ್ತು ಸಂಡೂರುಗಳಲ್ಲಿವೆ. ನೊಳಂಬರು ಸಾಮಂತರಾಜರಾಗಿದ್ದರೂ, ಕರ್ನಾಟಕ ವಾಸ್ತುಶಿಲ್ಪ ಇತಿಹಾಸದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಇವರ ದೇವಾಲಯಗಳು ವಿಶೇಷವಾಗಿ ಆವನಿ ಮತ್ತು ಹೇಮಾವತಿಗಳಲ್ಲಿ ಕಾಣಬರುತ್ತವೆ. ಆವನಿಯಲ್ಲಿರುವ ರಾಮಲಿಂಗೇಶ್ವರ ದೇವಾಲಯ ನೊಳಂಬರ ಉತ್ತಮ ರಚನೆಗಳಲ್ಲಿ ಒಂದಾಗಿದ್ದು ಅದನ್ನು ಇಲ್ಲಿ ಗಮನಿಸಲಾಗಿದೆ. ಚೋಳರು ಕರ್ನಾಟಕದ ಕೆಲವು ಭಾಗಗಳನ್ನು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಆಳಿದರು. ಅವರ ಆಳ್ವಿಕೆಯ ಪ್ರದೇಶದಲ್ಲಿ ಕೆಲವು ದೇವಾಲಯಗಳನ್ನು ನಿರ್ಮಿಸಿದರು. ಕೋಲಾರದ ಕೋಲಾರಮ್ಮ ದೇವಾಲಯ ಮತ್ತು ಆಗರದ

ಲಕ್ಷ್ಮೀನರಸಿಂಹ ದೇವಾಲಯಗಳು ಕರ್ನಾಟಕದಲ್ಲಿ ಚೋಳರು ನಿರ್ಮಿಸಿದ ದೇವಾಲಯಗಳಿಗೆ ಉತ್ತಮ ಉದಾಹರಣೆಗಳು. ಆಗರದ ದೇವಾಲಯವಂತೂ ವಿಶೇಷವಾಗಿ ಉಲ್ಲೇಖನೀಯ. ಏಕೆಂದರೆ ಇದು ವೃತ್ತಾಕಾರದ ದೇವಾಲಯ. ಈ ರೀತಿಯ ದೇವಾಲಯಗಳು ದಕ್ಷಿಣ ಭಾರತ ವಾಸ್ತು ಇತಿಹಾಸದಲ್ಲೇ ತುಂಬ ವಿರಳ.

ಕ್ರಿ.ಶ. ಹತ್ತನೆಯ ಶತಮಾನದ ಕೊನೆಯಿಂದ ಹನ್ನೆರಡನೆಯ ಶತಮಾನದ ಕೊನೆಯವರೆಗೆ ಕರ್ನಾಟಕದ ಬಹುಭಾಗಗಳು, ಅದರಲ್ಲಿಯೂ ಉತ್ತರ ಕರ್ನಾಟಕದ ಭಾಗಗಳು, ಕಲ್ಯಾಣ ಅಥವಾ ಕಲ್ಯಾಣಿಯ ಚಾಳುಕ್ಯರ ಆಳ್ವಿಕೆಗೆ ಸೇರಿತು. ಕಲ್ಯಾಣ ಈ ದೊರೆಗಳ ರಾಜಧಾನಿಯಾಗಿತ್ತು. ಆರನೆಯ ವಿಕ್ರಮಾದಿತ್ಯನು (ಕ್ರಿ.ಶ. 1076-1126) ಈ ರಾಜವಂಶದಲ್ಲಿ ಅತ್ಯಂತ ಶ್ರೇಷ್ಠ ದೊರೆಯಾಗಿದ್ದನು. ಸ್ವಲ್ಪ ಕಾಲದ ನಂತರ ಕಳಚುರಿಗಳು ರಾಜ್ಯವನ್ನು ಅಪಹರಿಸಿದರು. ಕಲ್ಯಾಣದ ಚಾಳುಕ್ಯರು ಪ್ರಾಚೀನ ಚಾಳುಕ್ಯ ಮತ್ತು ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯನ್ನು ಸ್ವಲ್ಪ ಬದಲಾವಣೆಗಳೊಂದಿಗೆ ಅಳವಡಿಸಿಕೊಂಡರು. ಈ ದೊರೆಗಳ ಆಡಳಿತ ಕಾಲದಲ್ಲಿ ಚಾಳುಕ್ಯ ವಾಸ್ತುಶೈಲಿ ತನ್ನ ಔನ್ನತ್ಯವನ್ನು ಕಂಡಿತು. ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಕಲ್ಯಾಣ ಚಾಳುಕ್ಯ ವಾಸ್ತುಶಿಲ್ಪ ಶೈಲಿಯು ಹರಡಿತ್ತು. ನನ್ನೇಶ್ವರ, ಬ್ರಹ್ಮಜಿನಾಲಯ (ಲಕ್ಕುಂಡಿ), ದೊಡ್ಡಬಸಪ್ಪ (ಡಂಬಳ), ಮಹದೇವ (ಇಟ್ಟಗಿ), ಕೈಟಭೇಶ್ವರ (ಕುಬಟೂರು) ದೇವಾಲಯಗಳು ಈ ವಾಸ್ತು ಶೈಲಿಯ ಕೆಲವು ಉತ್ತಮ ಕೃತಿಗಳು. ಇಟ್ಟಗಿಯ ಮಹದೇವ ದೇವಾಲಯವನ್ನು 'ದೇವಾಲಯ ಚಕ್ರವರ್ತಿ' ಎಂದು ಸಮಕಾಲೀನ ಶಾಸನವು ವರ್ಣಿಸಿದೆ. ಈ ದೇವಾಲಯದ ಸೌಂದರ್ಯವನ್ನು ನೋಡಿದರೆ ಈ ಬಿರುದು ಸಮಂಜಸವೆನಿಸುತ್ತದೆ. ಜಲಸಂಗ್ವಿಯ ಈಶ್ವರ ದೇವಾಲಯ, ಅದರಲ್ಲಿರುವ ಆರನೆಯ ವಿಕ್ರಮಾದಿತ್ಯನ ಪ್ರಶಸ್ತಿಯನ್ನು ಬರೆಯುತ್ತಿರುವ ಸುಂದರ ಯುವತಿಯ ಶಿಲ್ಪದಿಂದಾಗಿ, ವೈಶಿಷ್ಟ್ಯಪೂರ್ಣವೆನಿಸಿದೆ. ಡಂಬಳದ ದೊಡ್ಡ ಬಸಪ್ಪ ದೇವಾಲಯವು ಪ್ರಮುಖವಾದುದು. ಏಕೆಂದರೆ ಅದು ಹೊಯ್ಸಳ ಶಿಲ್ಪಶೈಲಿಯ ಲಕ್ಷಣಗಳನ್ನು ಹೊಂದಿದೆ. ಚಾಳುಕ್ಯರ ಸಾಮಂತರಾದ ರಟ್ಟರಿಂದ ನಿರ್ಮಾಣಗೊಂಡ ಕೆಲವು ದೇವಾಲಯಗಳು ಬೆಳಗಾಂನಲ್ಲಿವೆ.

ಕ್ರಿ.ಶ. ಹನ್ನೆರಡನೆಯ ಶತಮಾನದ ಆರಂಭದಿಂದ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಹೊಸ ಚೈತನ್ಯ ಮೂಡಿತು. ಸಾಮಂತರಾಗಿ ರಾಜಕೀಯ ಜೀವನವನ್ನು ಆರಂಭಿಸಿದ ಹೊಯ್ಸಳರು, ದೊರೆ ವಿಷ್ಣುವರ್ಧನನ ಕಾಲದಲ್ಲಿ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು. ವಿಷ್ಣುವರ್ಧನನು ಚೋಳರನ್ನು ಸೋಲಿಸಿ, 'ತಲಕಾಡುಗೊಂಡ' ಮತ್ತು ನೊಳಂಬವಾಡಿಯ ಮೇಲೆ ಆಧಿಪತ್ಯ ಸಂಪಾದಿಸಿ 'ನೊಳಂಬವಾಡಿಗೊಂಡ' ಎಂಬ ಬಿರುದುಗಳನ್ನು ಧರಿಸಿ, ಇದರ ಜ್ಞಾಪಕಾರ್ಥವಾಗಿ, ಈ ಬಿರುದುಗಳಿರುವ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದನು. ಹೊಯ್ಸಳರು ಕೇರಳದ ಕಣ್ಣಾನೂರು ಮತ್ತು ತಮಿಳು ನಾಡಿನವರೆಗೆ ರಾಜ್ಯವನ್ನು ವಿಸ್ತರಿಸಿದರು. ಶ್ರೀವೈಷ್ಣವ ಧರ್ಮದ ಗುರುಗಳಾದ ಶ್ರೀ ರಾಮಾನುಜಾಚಾರ್ಯರ ಪವಿತ್ರ ಸಾನ್ನಿಧ್ಯದಿಂದಾಗಿ, ಕನ್ನಡನಾಡಿನ ಮತ್ತು ತಮಿಳುನಾಡಿನ ಧಾರ್ಮಿಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವು ಸೃಷ್ಟಿಯಾಯಿತು. ವಿಷ್ಣುವರ್ಧನನ ರಾಣಿಯಾದ ಶಾಂತಲದೇವಿಯು ಜೈನಳಾಗಿದ್ದರೂ ತನ್ನ ಪತಿಯೊಡನೆ ಸಹಕರಿಸಿ, ಶೈವ, ವೈಷ್ಣವ ಮತ್ತು ಜೈನ ದೇವಾಲಯಗಳ ನಿರ್ಮಾಣಕ್ಕೆ ಕಾರಣಳಾದಳು.

ಹೊಯ್ಸಳ ವಾಸ್ತುಶಿಲ್ಪ ಶೈಲಿಯು ಅದಕ್ಕಿಂತ ಹಿಂದೆ ಇದ್ದ ಶೈಲಿಗಳಿಗಿಂತ ಭಿನ್ನವಾಗಿದೆ. ಹೊಯ್ಸಳರು ಮೃದುವಾದ ಹಾಗೂ ಹಿಟ್ಟಿನಂತಿರುವ ಬಳಪದಕಲ್ಲನ್ನು ದೇವಾಲಯ ರಚನೆಗೆ ಬಳಸಿದರು. ಅಕ್ಕಸಾಲಿಯ ಕುಶಲ ಕೆಲಸದಂತೆ ಸೂಕ್ಷ್ಮವಾದ ಹಾಗೂ ನಾಜೂಕಾದ ಕೆತ್ತನೆಗಳನ್ನು ಬಿಡಿಸುವುದು ಇದರಿಂದ ಸಾಧ್ಯವಾಯಿತು. ಅಲಂಕಾರ ಮತ್ತು ಸೂಕ್ಷ್ಮ ಕೆತ್ತನೆ ಹೊಯ್ಸಳ ದೇವಾಲಯಗಳ ಜೀವಾಳವಾಯಿತು. ಈ ಮೆದುಗಲ್ಲಿನಿಂದ ಎತ್ತರದ ದೇವಾಲಯಗಳನ್ನು ಕಟ್ಟಲು ಸಾಧ್ಯವಿಲ್ಲವಾದುದರಿಂದ ಹೊಯ್ಸಳರು ಸಣ್ಣಪ್ರಮಾಣದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಈ ದೇವಾಲಯಗಳು ಎತ್ತರವಾಗಿ ಕಾಣುವಂತೆ ಮಾಡಲು ನಕ್ಷತ್ರಾಕಾರದ ಜಗತಿಯನ್ನು ದೇವಾಲಯಗಳಿಗೆ ಸೇರಿಸಿದರು. ಈ ಜಗತಿಯು ಹೊರ ಪ್ರದಕ್ಷಿಣಪಥವಾಗಿ ಮತ್ತು ಸೂಕ್ಷ್ಮ ಕೆತ್ತನೆಯ ಪಟ್ಟಿಕೆಗಳ ಮೇಲಿನ ಶಿಲ್ಪಗಳ ವೀಕ್ಷಣೆಗೆ ಅನುಕೂಲವಾಯಿತು. ಶಿಲ್ಪಗಳನ್ನು ಮತ್ತು ಅಲಂಕಾರಗಳನ್ನು, ನಕ್ಷತ್ರಾಕಾರದ ಶಿಖರಗಳು ಸುಂದರವಾಗಿವೆ. ಹೊಯ್ಸಳರು ಒಂದು, ಎರಡು, ಮೂರು, ನಾಲ್ಕು ಮತ್ತು ಐದು ಗರ್ಭಗೃಹಗುಳ್ಳ (ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ) ದೇವಾಲಯಗಳನ್ನು ನಿರ್ಮಿಸಿದರು. ಚರಕಿಯಂತ್ರದಿಂದ ತಯಾರಿಸಿದ ತುಂಬ ನಯವಾದ ಮತ್ತು ಹೊಳಪುಳ್ಳ ಹೊಯ್ಸಳ ಕಂಬಗಳು ತುಂಬ ಸುಂದರವಾಗಿವೆ. ಹೊಯ್ಸಳ ದೇವಾಲಯಗಳ ಚಾವಣಿಯಲ್ಲಿರುವ ಭುವನೇಶ್ವರಿಗಳು ನಾಜೂಕಾದ ಸೂಕ್ಷ್ಮ ಕೆತ್ತನೆಗಳಿಂದ ಉತ್ತಮ ಶಿಲ್ಪಗಳೆನಿಸಿವೆ. ದೇವಾಲಯದ ಗೋಡೆಗಳು, ಸೂಕ್ಷ್ಮ ಕೆತ್ತನೆಯ ವಿತಾನಗಳ ಕೆಳಗಿರುವ ದೇವದೇವಿಯರ ವಿಗ್ರಹಗಳು, ಅರೆಗಂಬಗಳು, ಸೂಕ್ಷ್ಮ ಪ್ರಮಾಣದ ಶಿಖರಗಳು ಮುಂತಾದ ಅಲಂಕಾರಗಳಿಂದ ಆವೃತವಾಗಿರುತ್ತವೆ. ವಿವಿಧ

ಭಂಗಿಗಳಲ್ಲಿರುವ ಸುಂದರ ಯುವತಿಯರ, ಮದನಿಕೆ ಅಥವಾ ಶಿಲಾಬಾಲಿಕೆಯರ ಶಿಲ್ಪಗಳನ್ನು ಕಂಬಗಳ ಮೇಲ್ಭಾಗದಲ್ಲಿ ವಿನ್ಯಾಸಗೊಳಿಸಿರುವುದು ಕೆಲವು ಹೊಯ್ಸಳ ದೇವಾಲಯಗಳ ಮುಖ್ಯ ಆಕರ್ಷಣೆ. ಬಹುತೇಕ ಹೊಯ್ಸಳ ದೇವಾಲಯಗಳಲ್ಲಿ, ಅವುಗಳಲ್ಲಿ ಕೆತ್ತನೆಯ ಕೆಲಸ ಮಾಡಿದ ಶಿಲ್ಪಿಗಳ ಹೆಸರುಗಳು ಕಾಣಬರುತ್ತವೆ. ಇವುಗಳನ್ನು ದೇವಾಲಯಗಳ ವಿಗ್ರಹದ ಪೀಠದ ಮೇಲೆ ಕೆತ್ತಲಾಗಿರುತ್ತದೆ. ದಾಸೋಜ, ಚಾವಣ, ಮಲ್ಲಿತಮ್ಮ, ಚೌಡಯ ಮುಂತಾದ ಐದು ನೂರು ಶಿಲ್ಪಿಗಳ ಹೆಸರುಗಳು ತಿಳಿದುಬಂದಿವೆ. ಬೇಲೂರು, ಹಳೇಬೀಡು ಮತ್ತು ಸೋಮನಾಥಪುರಗಳ ಹೊಯ್ಸಳ ದೇವಾಲಯಗಳು ವಿಶೇಷವಾಗಿ ಪ್ರಖ್ಯಾತವಾಗಿದ್ದರೂ, ಶಿವ, ವಿಷ್ಣು, ಜಿನ, ದೇವಿ ಮತ್ತು ಇತರ ದೇವತೆಗಳಿಗಾಗಿ ಐದು ನೂರಕ್ಕೂ ಹೆಚ್ಚು ಸಂಖ್ಯೆಯ ವಿವಿಧ ಪ್ರಮಾಣದ ದೇವಾಲಯಗಳನ್ನು ಹೊಯ್ಸಳರು ನಿರ್ಮಿಸಿದರು. ಲಕ್ಷ್ಮೀದೇವಿ (ದೊಡ್ಡಗದ್ದವಳ್ಳಿ), ವೀರನಾರಾಯಣ (ಬೆಳವಾಡಿ), ಶಿವ (ಅರಸೀಕೆರೆ), ಮಲ್ಲಿಕಾರ್ಜುನ (ಬಸರಾಳು), ಲಕ್ಷ್ಮೀನರಸಿಂಹ (ಜಾವಗಲ್), ಜೈನ ದೇವಾಲಯಗಳ ಸಮೂಹ (ಹಳೇಬೀಡು), ಲಕ್ಷ್ಮೀನಾರಾಯಣ (ಹೊಸಹೊಳಲು) ಮುಂತಾದವು ಸುಂದರ ಹೊಯ್ಸಳ ದೇವಾಲಯಗಳು.

ಹೊಯ್ಸಳರು ಮತ್ತು ಇತರ ದಕ್ಷಿಣ ಭಾರತದ ರಾಜವಂಶಗಳನ್ನು ಮುಸ್ಲಿಮರು ಸೋಲಿಸಿದ ನಂತರ, ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ, ಹರಿಹರ ಮತ್ತು ಬುಕ್ಕರು, ಪ್ರಾಚೀನ ವೈಭವವನ್ನು ಪುನಃ ಸ್ಥಾಪಿಸುವ ಸಲುವಾಗಿ, ದಕ್ಷಿಣ ಭಾರತದ ಇತಿಹಾಸದಲ್ಲಿ ಸುವರ್ಣಯುಗ ಎಂದು ಖ್ಯಾತವಾಗಿರುವ, ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮೊಟ್ಟಮೊದಲನೆಯ ಬಾರಿಗೆ ವಿಜಯನಗರದ ರಾಜಕೀಯ ಮತ್ತು ಸಾಂಸ್ಕೃತಿಕ ನೆಲೆಗಳ ಆಶ್ರಯದಲ್ಲಿ ದಕ್ಷಿಣ ಭಾರತವು ಒಂದುಗೂಡಿತು. ಕೃಷ್ಣದೇವರಾಯನಂತಹ ಶ್ರೇಷ್ಠ ದೊರೆಗಳು ಇಲ್ಲಿ ಆಳಿದರು. ಬೃಹತ್ತು ಮತ್ತು ಮಹತ್ತು ವಿಜಯನಗರ ಸಾಮ್ರಾಜ್ಯದ ಜೀವಾಳ. ಇದು ಅವರ ವಾಸ್ತುಶಿಲ್ಪ ಕೃತಿಗಳಲ್ಲಿ ಪ್ರತಿಬಿಂಬಿತವಾಗಿದೆ. ಇವರು ವಿಶಾಲವಾದ ದೇವಾಲಯ ಸಂಕೀರ್ಣಗಳನ್ನು ನಿರ್ಮಿಸಿ, ಅವುಗಳಲ್ಲಿ ಕಲ್ಯಾಣಮಂಡಪ, ನರ್ತನಮಂಡಪ, ಫಲಪೂಜಾ ಮಂಡಪ, ಎತ್ತರವಾದ ಪ್ರಾಕಾರದ ಗೋಡೆಗಳು, ಮಹಾದ್ವಾರಗಳು, ಅವುಗಳ ಮೇಲೆ ರಾಯಗೋಪುರವೆಂದು ಕರೆಯಲಾಗುವ ಎತ್ತರವಾದ ಗಾರೆಯ ಗೋಪುರಗಳನ್ನು ನಿರ್ಮಿಸಿದರು. ಈ ರೀತಿ ಈ ಕಾಲದಲ್ಲಿ ದೇವಾಲಯ ನಗರಗಳ ನಿರ್ಮಾಣ ಆರಂಭವಾಯಿತು. ಹಂಪಿಯಂತಹ ನಗರವು ಭವ್ಯತೆ ಮತ್ತು ಸೌಂದರ್ಯದಿಂದ ಕೂಡಿದ್ದು ಹಿಂದು ಪರಂಪರೆಯ ಪ್ರತೀಕವಾಯಿತು. ಲೌಕಿಕ ಕಟ್ಟಡಗಳಾದ ಅರಮನೆಗಳು, ರಾಜರ ಸ್ನಾನಗೃಹಗಳು, ಗಜ ಹಾಗೂ ಅಶ್ವಶಾಲೆಗಳು, ಮುತ್ತಿನ ಮಾರುಕಟ್ಟೆಗಳು ಮುಂತಾದವು ವಿಜಯನಗರ ವಾಸ್ತುಶಿಲ್ಪದ ಶ್ರೀಮಂತಿಕೆಯ ಕುರುಹುಗಳಾಗಿವೆ. ಅರೇಬಿಯದ ಹಾಗೂ ಯೂರೋಪಿನ ಯಾತ್ರಿಕರು ವಿಜಯನಗರದಲ್ಲಿ ತಾವು ನೋಡಿದ ವಾಸ್ತುಶಿಲ್ಪ ಕೃತಿಗಳನ್ನು ವಿಶ್ವದ ಇತರ ಯಾವ ಭಾಗದಲ್ಲಿಯೂ ಕಂಡಿಲ್ಲವೆಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಹೇಮಕೂಟ ಬೆಟ್ಟ, ವಿರೂಪಾಕ್ಷ, ಅಚ್ಯುತರಾಯ, ವಿಠಲ, ಕೃಷ್ಣ, ಹಜಾರರಾಮ ದೇವಾಲಯಗಳು, ಬೃಹತ್ತಾದ ಅಶ್ವಶಾಲೆ, ಲಾಲಿತ್ಯಕ್ಕೆ ಹೆಸರಾದ ಕಮಲಮಹಲ್, ರಾಣಿಯರ ಸ್ನಾನಗೃಹ, ಮೆಟ್ಟಿಲುಗಳ ಪುಷ್ಕರಣಿ ಮುಂತಾದ ವಾಸ್ತುಶಿಲ್ಪ ರಚನೆಗಳಿಂದ ಹಂಪಿಯು ವಿಜಯನಗರ ಸಂಸ್ಕೃತಿಯ ಮುಖ್ಯ ಕೇಂದ್ರವಾಯಿತು. ಮೆಟ್ಟಿಲುಗಳ ಕೊಳವು ಅಪರೂಪದ ಸುಂದರ ನಿರ್ಮಾಣ. ಈ ರೀತಿ ವಿಜಯನಗರ ವಾಸ್ತುಶಿಲ್ಪ ಕಲೆಯು ಕರ್ನಾಟಕ ಸಂಸ್ಕೃತಿಯ ಮೇಲೆ ವಿಶೇಷ ಪ್ರಭಾವ ಬೀರಿತು.

ವಿಜಯನಗರದ ಪತನಾನಂತರ ಕೆಳದಿ ನಾಯಕರು, ಮೈಸೂರು ಒಡೆಯರು ಮೊದಲಾದವರು ಸ್ವತಂತ್ರರಾಗಿ ಆಳಲು ಪ್ರಾರಂಭಿಸಿದರು. ಇವರು ವಾಸ್ತುಶಿಲ್ಪ ಕಲೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದರು. ಇವರ ವಾಸ್ತು ಕೃತಿಗಳು ಇಕ್ಕೇರಿ, ಕೆಳದಿ ಮತ್ತು ಮೈಸೂರುಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ.

ಮೈಸೂರು ಒಡೆಯರ ಆಳ್ವಿಕೆಯು ದಕ್ಷಿಣ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯವಾಗಿದೆ. ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡೆಯರು, ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಜಯಚಾಮರಾಜ ಒಡೆಯರಂತಹ ಸಂಸ್ಕೃತಿ ಪ್ರಿಯರಾದ ಮಹಾರಾಜರು ಈ ವಂಶದಲ್ಲಿ ಉದಯಿಸಿದ್ದುದು ಅದೃಷ್ಟ. ಇವರು ವಿಜಯನಗರ ಸಂಸ್ಕೃತಿಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದುದೇ ಅಲ್ಲದೆ, ಸಾಹಿತ್ಯ, ಸಂಗೀತ ಮತ್ತು ವಾಸ್ತುಶಿಲ್ಪಗಳಿಗೆ ಕೊಡುಗೆಗಳನ್ನು ನೀಡಿದರು. ಇವರ ಆಳ್ವಿಕೆಯಲ್ಲಿ ಮೈಸೂರು ಅರಮನೆಗಳ ನಗರವಾಯಿತು. ಈ ಖ್ಯಾತಿಯು ಇಂದಿಗೂ ಮುಂದುವರಿಯುತ್ತಿದೆ.

ಮಧ್ಯಯುಗೀನ ಕಾಲದಲ್ಲಿ, ಬಹಮನಿ, ಆದಿಲ್‌ಷಾಹಿ, ಬರೀದ್‌ಷಾಹಿ ಸುಲ್ತಾನರು ಬಿಜಾಪುರ, ಬೀದರ್, ಗುಲ್ಬರ್ಗ ಮತ್ತು ರಾಯಚೂರುಗಳ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು. ಬಹಮನಿ ಸುಲ್ತಾನರು ಮೊದಲು ಗುಲ್ಬರ್ಗದಿಂದ, ಆನಂತರ ಬೀದರ್‌ನಿಂದ, ವಿಜಯನಗರ ಕಾಲದಲ್ಲಿ ಆಳಿದರು. ಮುಹಮ್ಮದ್ ತುಘಲಖನ ಕಾಲದಲ್ಲಿ ದೌಲತಾಬಾದಿನ (ದೇವಗಿರಿ) ಅವನ ಒಬ್ಬ ಅಧಿಕಾರಿಯು ಮುಹಮ್ಮದನ ವಿರುದ್ಧ ದಂಗೆ ಎದ್ದು, ಗುಲ್ಬರ್ಗವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಒಂದು ರಾಜವಂಶವನ್ನು ಸ್ಥಾಪಿಸಿದನು. ಈ ರೀತಿ ಅಲ್ಲಾವುದ್ದೀನ್ ಹಸನ್ ಬಹಮನಿ ರಾಜವಂಶವನ್ನು ಸ್ಥಾಪಿಸಿದನು. ಕ್ರಿ.ಶ. 1347 ರಿಂದ 1547ರವರೆಗೆ ಅನೇಕ ಸುಲ್ತಾನರು ರಾಜ್ಯವಾಳಿದರು. ಈ ರಾಜವಂಶದಲ್ಲಿ ಫಿರೋಜ್ ಷಾ ಅತ್ಯಂತ ಪ್ರಖ್ಯಾತದೊರೆ. ಈ ವಂಶದ ಸಾಂಸ್ಕೃತಿಕ ಇತಿಹಾಸದಲ್ಲಿ ಮಹ್ಮೂದ್ ಗವಾನನ ಹೆಸರು ಪ್ರಖ್ಯಾತವಾಗಿದೆ. ತನ್ನ ಬುದ್ಧಿಶಕ್ತಿಯಿಂದ ಮಂತ್ರಿಯಾಗಿ, ಮಿಲಿಟರಿ ನೇತಾರನಾಗಿ, ವಿದ್ವಾಂಸನಾಗಿ ಮತ್ತು ವಿದ್ಯಾಭ್ಯಾಸಕ್ಕೆ ಪೋಷಣೆ ಒದಗಿಸಿ ಗವಾನನು ಗಮನಾರ್ಹ ವ್ಯಕ್ತಿಯಾಗಿದ್ದಾನೆ. ಬೀದರಿನಲ್ಲಿ ಇವನು ನಿರ್ಮಿಸಿದ ಕಾಲೇಜಿನಿಂದಾಗಿ ಇವನು ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಅಮರನಾಗಿದ್ದಾನೆ. ಬಹಮನಿ ಸುಲ್ತಾನರು ಖ್ಯಾತ ವಾಸ್ತುನಿರ್ಮಾಪಕರಾಗಿದ್ದರೆಂಬುದು ಅವರು ಕಟ್ಟಿಸಿದ ಕಟ್ಟಡಗಳಿಂದ ಖಚಿತಗೊಳ್ಳುತ್ತದೆ.

ಬಹಮನಿ ಸುಲ್ತಾನರ ಪತನಾನಂತರ, ಕ್ರಿ.ಶ. 1489ರಲ್ಲಿ ಆದಿಲ್ ಷಾಹಿಗಳು, ಯೂಸುಫ್ ಆಲಿಖಾನನ ನೇತೃತ್ವದಲ್ಲಿ ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಆರಂಭಿಸಿದರು. ಈ ಸುಲ್ತಾನರು ಕ್ರಿ.ಶ. 1686ರ ವರೆಗೆ ರಾಜ್ಯವಾಳಿದರು. ಕರ್ನಾಟಕದ ಇತಿಹಾಸದಲ್ಲಿ ಆದಿಲ್‌ಷಾಹಿಗಳು ಖ್ಯಾತ ವಾಸ್ತು ನಿರ್ಮಾತರೆನಿಸಿಕೊಂಡಿದ್ದಾರೆ. ಪ್ರಸಿದ್ಧವಾದ ಗೋಳಗುಮ್ಮಟ ಮತ್ತು ಇಬ್ರಾಹಿಂ ರೋಜಾ ಇವರ ಆಶ್ರಯದಲ್ಲಿ ನಿರ್ಮಾಣಗೊಂಡವು. ಈ ರಾಜವಂಶದ ಸುಲ್ತಾನ್ ಇಬ್ರಾಹಿಂ ಆದಿಲ್ ಷಾ ಸಂಗೀತಕ್ಕೆ ಆಶ್ರಯದಾತನಾಗಿದ್ದುದು ಮಾತ್ರವಲ್ಲದೆ, ಸ್ವತಃ ಒಳ್ಳೆಯ ಸಂಗೀತಗಾರನೂ ಆಗಿದ್ದನು. ಇವನು ಉರ್ದುಭಾಷೆಯಲ್ಲಿ ಬರೆದಿರುವ ಗ್ರಂಥ ಕಿತಾಬ್-ಇ-ನವರಸ್ ಹಿಂದು ಸಂಗೀತವನ್ನು ಕುರಿತಾದದ್ದು. ಅದು ಸರಸ್ವತಿಯ ಪ್ರಾರ್ಥನೆಯಿಂದ ಆರಂಭಗೊಳ್ಳುತ್ತದೆ. ಆದಿಲ್‌ಷಾಹಿ ಆಳ್ವಿಕೆಯಲ್ಲಿ ಕರ್ನಾಟಕದಲ್ಲಿ ಇಸ್ಲಾಮಿಕ್ ವಾಸ್ತುಶಿಲ್ಪವು ತನ್ನ ಔನ್ನತ್ಯವನ್ನು ಮುಟ್ಟಿತು. ಬಹಮನಿ ಸುಲ್ತಾನರು ಅಶಕ್ತರಾದಾಗ, ಕಾಸಿಂ ಬರೀದನು ತಾನೇ ಕಾರ್ಯತಃ ಸುಲ್ತಾನನಾಗಿ, ಬರೀದ್‌ಷಾಹಿ ಮನೆತನದ ಆಳ್ವಿಕೆಯನ್ನು ಆರಂಭಿಸಿದನು. ಕ್ರಿ.ಶ. 1427ರಲ್ಲಿ ಬಹಮನಿ ಸುಲ್ತಾನ್ ವಲಿಉಲ್ಲ ರಾಜ್ಯದಿಂದ ಓಡಿಹೋದಾಗ ಅಮೀರ್ ಬರೀದನು ಸ್ವತಂತ್ರನಾದನು. ಬರೀದ್‌ಷಾಹಿಗಳು ತಮ್ಮ ರಾಜಧಾನಿ ಬೀದರಿನಿಂದ ರಾಜ್ಯವಾಳಿದರು. ಹೀಗೆ ಬಹಮನಿ, ಆದಿಲ್‌ಷಾಹಿ ಮತ್ತು ಬರೀದ್ ಷಾಹಿ ರಾಜವಂಶಗಳ ಆಳ್ವಿಕೆಯ ಕಾಲದಲ್ಲಿ, ಕರ್ನಾಟಕವು ಇಸ್ಲಾಮಿಕ್ ವಾಸ್ತುಶೈಲಿಯ ಕೇಂದ್ರವಾಗಿತ್ತು.

ಈ ಮೂರು ರಾಜವಂಶಗಳು ಇಸ್ಲಾಮಿಕ್ ವಾಸ್ತುಶಿಲ್ಪಶೈಲಿಯನ್ನು ಕರ್ನಾಟಕದಲ್ಲಿ ಆರಂಭಿಸಿದವು. ಇವರು ವಿವಿಧ ರೀತಿಯ ಕಮಾನುಗಳು, ಗುಮ್ಮಟಗಳು, ಮಿನಾರುಗಳು, ಗೋರಿಗಳು, ಕಮಾನಿನ ದ್ವಾರಗಳು ಮುಂತಾದವುಗಳನ್ನು ಒಳಗೊಂಡ ವಿಶಾಲವಾದ ಮಸೀದಿಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿ ಅವುಗಳಿಗೆ ನಯವಾದ ಹೊಳಪನ್ನು ಕೊಡುತ್ತಿದ್ದರು. ಗುಲ್ಬರ್ಗದ ಜುಮ್ಮ ಮಸೀದಿ, ಬಿಜಾಪುರದ ಗೋಳಗುಮ್ಮಟ ಮತ್ತು ಇಬ್ರಾಹಿಂ ರೋಜಾ ಮುಂತಾದವು ಈ ಶೈಲಿಯ ಉತ್ತಮ ಕೃತಿಗಳು. ಕಟ್ಟಡಗಳ ಮುಂಭಾಗದಲ್ಲಿ ಸುಂದರವಾದ ಉದ್ಯಾನಗಳನ್ನು ಅಳವಡಿಸುವುದು ಈ ಕಾಲದ ಇನ್ನೊಂದು ಕೊಡುಗೆ. ಮಹಮೂದ್ ಗವಾನನು ನಿರ್ಮಿಸಿದ ಮದರಸ ಅತ್ಯಂತ ಉತ್ತಮ ಕೃತಿಯಾಗಿದ್ದು ವಿಶ್ವವಿದ್ಯಾನಿಲಯದ ಘನತೆಗೆ ತಕ್ಕ ಕಟ್ಟಡವಾಗಿದೆ. ಟಿಪ್ಪು ಸುಲ್ತಾನನ ಶ್ರೀರಂಗಪಟ್ಟಣದ ದರಿಯಾ ದೌಲತ್ ಮತ್ತು ಬೆಂಗಳೂರಿನ ಮರದ ಅರಮನೆಗಳು ಸುಂದರವಾದ ಇಂಡೋಸಾರ್ಸೆನಿಕ್ ವಾಸ್ತು ಕೃತಿಗಳು. ಕ್ರೈಸ್ತರು ಚರ್ಚುಗಳ ಮೂಲಕ ವಾಸ್ತು ಪರಂಪರೆಗೆ ತಮ್ಮ ಕೊಡುಗೆಯನ್ನು ನೀಡಿದರು. ಮೈಸೂರಿನಲ್ಲಿರುವ ಸಂತ ಫಿಲೋಮಿನ ಚರ್ಚು ಇದಕ್ಕೆ ಉತ್ತಮ ಉದಾಹರಣೆ. ಇದೊಂದು ಸುಂದರ ಕಟ್ಟಡವಾಗಿದ್ದು ಲಂಬಮಾನದ ಗೋತಿಕ್ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಸಿಕ್ಖರು ಬೀದರಿನಲ್ಲಿ ಪವಿತ್ರ ಗುರುನಾನಕ್‌ಝರ ಗುರುದ್ವಾರವನ್ನು ತಮ್ಮ ಕೊಡುಗೆಯಾಗಿ ನೀಡಿದ್ದಾರೆ. ಇದು ಹೆಚ್ಚಿನ ಸೌಂದರ್ಯ ಸೂಸುವ ಹಾಗೂ ಧಾರ್ಮಿಕ ಪ್ರಾಮುಖ್ಯವುಳ್ಳ ಕಟ್ಟಡ.

ಬ್ರಿಟಿಷರು ಭಾರತದಲ್ಲಿ ಆಡಳಿತ ನಡೆಸುವುದಕ್ಕೆ ಆರಂಭಿಸಿದ ಮೇಲೆ, ಕಲೋನಿಯಲ್ ಎಂದು ಕರೆಯಲಾಗುವ ಶೈಲಿಯ ಉಗಮವಾಯಿತು. ಬ್ರಿಟಿಷ್ ಮತ್ತು ಗೋತಿಕ್ ವಾಸ್ತುಲಕ್ಷಣಗಳನ್ನು ಹೊಂದಿರುವ ಈ ಶೈಲಿಯು ಬೆಂಗಳೂರು ಮತ್ತು ಮೈಸೂರುಗಳಲ್ಲಿ ಹೆಚ್ಚು ಬಳಕೆಗೆ ಬಂದಿತು. ಈ ಎರಡು ನಗರಗಳಲ್ಲಿ ಅನೇಕ ಹಳೆಯ ಕಟ್ಟಡಗಳು ಈ ಶೈಲಿಯಲ್ಲಿ ಕಟ್ಟಲ್ಪಟ್ಟಿವೆ. ಮೈಸೂರಿನ ಮಹಾರಾಜರು

ಖ್ಯಾತವಾಸ್ತು ನಿರ್ಮಾಪಕರಾಗಿದ್ದು ಮೈಸೂರು ಮತ್ತು ಬೆಂಗಳೂರು ನಗರಗಳ ಸೌಂದರ್ಯವರ್ಧನೆಗೆ ವಿಶೇಷ ಗಮನ ಕೊಟ್ಟರು. ಮೈಸೂರಿನಲ್ಲಿರುವ ಮಹಾರಾಜರ ಅರಮನೆಯು ಭಾರತದಲ್ಲೇ ಅತ್ಯಂತ ವೈಭವದ ಅರಮನೆಯಾಗಿ ಪ್ರಾಚೀನ ರಾಜತ್ವ ಹಾಗೂ ವಾಸ್ತುಶಿಲ್ಪ ವೈಭವಗಳಿಗೆ ಸಾಕ್ಷಿಯಾಗಿ ನಿಂತಿದೆ. ಮಹಾರಾಜರ ಅರಮನೆ, ಜಗನ್ಮೋಹನ ಅರಮನೆ, ಲಲಿತಮಹಲ್ ಅರಮನೆಗಳಿಂದಾಗಿ, ಮೈಸೂರು ಅರಮನೆಗಳ ನಗರವಾಗಿದೆ. ಬೆಂಗಳೂರು ಅರಮನೆಯೂ ಇದೇ ಗುಂಪಿಗೆ ಸೇರಿದ್ದು, ಮೈಸೂರು ಅರಮನೆಯಲ್ಲಿ ಕಾಣಬರದ ಲಕ್ಷಣಗಳನ್ನು ಹೊಂದಿ, ವೈಶಿಷ್ಟ್ಯಪೂರ್ಣವೆನಿಸಿದೆ. ಮೈಸೂರು ನಗರದ ಚಾಮುಂಡಿ ಬೆಟ್ಟದಲ್ಲಿ, ಮಹಿಷಾಸುರನನ್ನು ಸಂಹಾರ ಮಾಡಿದ ದುರ್ಗಾದೇವಿಯ ದೇವಾಲಯವಿದೆ. ಹೀಗೆ ಮಹಿಷಾಸುರಪುರ ಅಥವಾ ಮಹಿಷೂರು ಕಾಲಕ್ರಮದಲ್ಲಿ ಮೈಸೂರು ಆಗಿ ಈ ನಗರಕ್ಕೆ ಒಂದು ವ್ಯಕ್ತಿತ್ವವನ್ನು ಕೊಟ್ಟಿದೆ.

ಅಂತಿಮವಾಗಿ ಕರ್ನಾಟಕ ವಾಸ್ತುಶಿಲ್ಪ ಪರಂಪರೆಯ ಪರಾಕಾಷ್ಠೆಯನ್ನು ಬೆಂಗಳೂರಿನ ವಿಧಾನಸೌಧದಲ್ಲಿ ಕಾಣುತ್ತೇವೆ. ಇದು ಚಾಳುಕ್ಯ, ಹೊಯ್ಸಳ, ವಿಜಯನಗರ ಮತ್ತು ಇಂಡೋಸಾರ್ಸೆನಿಕ್ ವಾಸ್ತುಲಕ್ಷಣಗಳ ಸಮ್ಮಿಳಿತವೇ ಆಗಿದೆ. ನಮ್ಮ ಕಲೆಯ ಮೇಲೆ ವಿವಿಧ ರೀತಿಯ ಹೊಸ ಹೊಸ ಪ್ರಯೋಗಗಳು, ಹೊಸ ಅಂಶಗಳು ದಾಳಿ ನಡೆಸಿದರೂ, ನಮ್ಮ ಕಲೆಯು ಜೀವಂತವಾಗಿ ಉಳಿಯುವಂತೆ ನೋಡಿಕೊಂಡ ವಾಸ್ತುಶಿಲ್ಪಿಗಳ ಕಾರ್ಯಶೀಲತೆಗೆ ವಿಧಾನಸೌಧ ಒಂದು ಕಾಣಿಕೆ ಎನ್ನಬಹುದು. ಇತರ ಸ್ಥಳಗಳಲ್ಲಿ ಮತ್ತು ಸಂಸ್ಕೃತಿಗಲ್ಲಿ ಹೆಚ್ಚಾಗಿ ಕಾಣಬರದ ಈ ಪರಂಪರೆಯ ಅವಿಚ್ಛಿನ್ನತೆಯೇ ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಇತಿಹಾಸಪೂರ್ವ ಕಾಲದಿಂದ ಇಂದಿನವರೆಗಿನ ಈ ಕರ್ನಾಟಕದ ಶಿಲ್ಪಕಲೆಯ ಉದ್ಯಾನದಲ್ಲಿ ಪಯಣಿಸುವುದು, ಸಂಸ್ಕೃತಿಯಲ್ಲಿ ಆಸಕ್ತಿ ಹೊಂದಿರುವವರಿಗೆ ಒಂದು ಮಧುರ ಹಾಗೂ ಉತ್ತಮ ಅನುಭವವನ್ನು ನೀಡುತ್ತದೆ. ಹೀಗೆ ದೈವೀಶಿಲ್ಪಿಯು ಈ ನಾಡನ್ನು ಒಂದು ಪ್ರಾಕೃತಿಕ ಉದ್ಯಾನವಾಗುವಂತೆ ಮಾಡಿದ್ದರೆ, ಮಾನವ ಶಿಲ್ಪಿಗಳು ಇದನ್ನು ಶಿಲ್ಪಕಾವ್ಯಗಳ ಮೂಲಕ ಸಿಂಗರಿಸಿದ್ದಾರೆ. ಇಲ್ಲಿ ಪ್ರತಿಯೊಂದು ಶಿಲೆಯೂ ಸ್ಥೈರ್ಯವನ್ನು ತುಂಬುವುದಕ್ಕಾಗಿ ಹಾಗೂ ಭವಿಷ್ಯದ ಮಾರ್ಗದರ್ಶನಕ್ಕಾಗಿ ವಿಶಾಲವಾದ ಪ್ರಾಚೀನಕಾಲದ ಕಥೆಯನ್ನು ಹೇಳುತ್ತವೆ. ಇಂದಿನ ಜೀವನದಲ್ಲಿ ಇವುಗಳೆಲ್ಲವುಗಳಿಗೆ ಕಾರಣಕರ್ತರಾದ ಹಾಗೂ ಇಂತಹ ಶ್ರೀಮಂತ ಪರಂಪರೆಯ ವಾಸ್ತುಶಿಲ್ಪ ಉದ್ಯಾನಕ್ಕೆ ನಮ್ಮನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಿದ ನೂರಾರು ಅಜ್ಞಾತ ಶಿಲ್ಪಿಗಳು, ವಾಸ್ತು ವಿಜ್ಞಾನಿಗಳು, ಇಂಜಿನಿಯರುಗಳು, ಇವರನ್ನು ಪೋಷಿಸಿದ ರಾಜರು, ರಾಣಿಯರು, ಮಂತ್ರಿಗಳು, ಸಂತರು ಹಾಗೂ ಸಾಮಾನ್ಯ ಜನಗಳ ಸತ್ಕಾರ್ಯಕ್ಕೆ ಮೆಚ್ಚಿಗೆ ಸೂಚಿಸುತ್ತ ಅವರಿಗೆ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ. ಈ ವಾಸ್ತುಶಿಲ್ಪ ಉದ್ಯಾನವನ್ನು ರಕ್ಷಿಸಿಕೊಂಡು ಬಂದು, ಅದನ್ನು ಮುಂದಿನ ಪೀಳಿಗೆಗೆ ನೀಡಬೇಕಾದುದು ನಮ್ಮ ರಾಷ್ಟ್ರೀಯ ಕರ್ತವ್ಯವೂ ಹೌದು.





ಬೃಹತ್ ಶಿಲಾಸಮಾಧಿಗಳು, ಹಿರೇಬೆನಕಲ್

# ಬೃಹತ್ ಶಿಲಾಸಮಾಧಿಗಳು, ಹಿರೆಬೆನಕಲ್

ದೊಡ್ಡ ದೊಡ್ಡ ಕಲ್ಲುಗಳನ್ನು ಉಪಯೋಗಿಸಿ, ವಿಶಾಲವಾದ ಗೋರಿಗಳನ್ನು ನಿರ್ಮಿಸಿದ್ದ ಪ್ರಾಚೀನ ಕಾಲದ ಜನಗಳ ಸಂಸ್ಕೃತಿಯನ್ನು ಗುರುತಿಸಲು ಬೃಹತ್ ಶಿಲಾಸಮಾಧಿ ಸಂಸ್ಕೃತಿ ಎನ್ನುವ ಪದಗುಚ್ಛವನ್ನು ಬಳಸುತ್ತೇವೆ. ಇಂಗ್ಲಿಷಿನಲ್ಲಿ ಇದನ್ನು 'ಮೆಗಾಲಿತಿಕ್' ಎಂದು (ಮೆಗ=ದೊಡ್ಡ; ಲಿತ್=ಕಲ್ಲು) ಕರೆಯುತ್ತೇವೆ. ಕರ್ನಾಟಕವು ಸೇರಿದಂತೆ ದಕ್ಷಿಣ ಭಾರತದಲ್ಲಿ ಈ ರೀತಿಯ ಸಾವಿರಾರು ಗೋರಿಗಳು ದೊರಕಿವೆ. ಸರಳವಾಗಿ ಹೇಳುವುದಾದರೆ ಇವರು ನವಶಿಲಾಯುಗದ ಜನಗಳ ಉತ್ತರಾಧಿಕಾರಿಗಳು. ಮೆಗಾಲಿತಿಕ್ ಸಂಸ್ಕೃತಿಯ ನಂತರ ಕಂಡುಬರುವುದೇ ಇತಿಹಾಸ ಆರಂಭ ಕಾಲದ ಸಂಸ್ಕೃತಿ. ಬೃಹತ್ ಶಿಲಾಸಮಾಧಿ ಸಂಸ್ಕೃತಿಯು ಸುಮಾರು ಕ್ರಿ.ಪೂ. ಹತ್ತನೆಯ ಶತಮಾನದಿಂದ ಕ್ರಿ.ಶ. ಮೂರನೆಯ ಶತಮಾನ ಕಾಲದವರೆಗೆ ಇದ್ದಿತು. ಇದರ ಮಧ್ಯೆ ನಾಲ್ಕಾರು ಹಂತಗಳು ಕಂಡುಬರುತ್ತವೆ. ಅವರ ಗೋರಿಗಳಲ್ಲಿ ವಿಶೇಷ ವೈವಿಧ್ಯತೆ ಕಾಣಬರುತ್ತದೆ. ದಕ್ಷಿಣ ಭಾರತಕ್ಕೆ ಕಬ್ಬಿಣವನ್ನು ಪರಿಚಯಿಸಿಕೊಟ್ಟವರು ಈ ಜನಗಳು. ಈ ಜನಗಳ ವಸತಿ ನೆಲೆಗಳು ಅಪರೂಪವಾದರೂ, ಅವರ ಗೋರಿಗಳು ಮಾತ್ರ ನೂರಾರು ಸಂಖ್ಯೆಯಲ್ಲಿ ಗುಂಪುಗಳಲ್ಲಿ ದೊರಕಿವೆ. ಈ ಜನಗಳು ಕಲ್ಲುಗಳನ್ನು ಹೊರತೆಗೆದು ಅವುಗಳನ್ನು ಸರಿಯಾಗಿ ಕತ್ತರಿಸಿ ಚಪ್ಪಡಿಗಳನ್ನಾಗಿ ಮಾಡಿ, ಅವುಗಳಿಂದ ಕಲ್ಲಿನ ವಿವಿಧ ರೀತಿಯ ಗೋರಿಗಳನ್ನು ಕಟ್ಟುತ್ತಿದ್ದರು. ಈ ಗೋರಿಗಳಲ್ಲಿ ಕಬ್ಬಿಣದ ವಸ್ತುಗಳೂ ಸೇರಿದಂತೆ ಸಂಬಂಧಪಟ್ಟ ವಸ್ತುಗಳೂ ಮತ್ತು ಮೂಳೆಗಳೂ ದೊರಕಿವೆ. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯ ಬೃಹತ್ ಶಿಲಾಸಮಾಧಿಗಳನ್ನು ಉತ್ಖನನ ಮಾಡಿದ ನಂತರ, ಇತರ ಅನೇಕ ಶಿಲಾಸಮಾಧಿಗಳನ್ನು ಅಧ್ಯಯನ ಮಾಡಲಾಗಿದ್ದು, ಈ ಸಂಸ್ಕೃತಿಯ ಬಗೆಗೆ ಹೆಚ್ಚಿನ ಮಾಹಿತಿಗಳು ತಿಳಿದು ಬಂದಿವೆ.



ಐಹೊಳೆ

ಹಿರೆಬೆನಕಲ್, ಐಹೊಳೆ ಮತ್ತು ಕುಮತಿಗಳಲ್ಲಿರುವ ಬೃಹತ್ ಶಿಲಾ ಸಮಾಧಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ಕುಮತಿಯದು ವೈಶಿಷ್ಟ್ಯಪೂರ್ಣವಾದುದು, ಏಕೆಂದರೆ ಇಲ್ಲಿ ಬೃಹತ್ ಪ್ರಮಾಣದ ಮಾನುಷ ರೂಪದ ಶಿಲ್ಪ ದೊರಕಿದೆ. ಇದು ಸಾಮಾನ್ಯವಾಗಿ ಬೇರೆ ನೆಲೆಗಳಲ್ಲಿ ದೊರಕಿಲ್ಲ. ಸ್ಥಳೀಯವಾಗಿ ಬೃಹತ್ ಶಿಲಾ ಸಮಾಧಿಗಳನ್ನು ಮೋರಿಯರ ಮನೆ, ಮೋರಿಯರ ಅಂಗಡಿ ಮತ್ತು ಮೋರಿಯರ ಗುಡ್ಡ ಎಂದು ಕರೆಯುತ್ತಾರೆ. ಈ ಸಮಾಧಿಗಳ ಹೊರಗಿನ ಆಕಾರವನ್ನು ಆಧರಿಸಿ ಪೋರ್ಟ್‌ಹೋಲ್ ಇರುವ ಡಾಲ್ಮೆನಾಯಿಡ್ ಸಿಸ್ಟ್, ರಾಕ್‌ಶೆಲ್ಟರ್ ಚೇಂಬರ್, ಪಾಲಿಗನಲ್ ಸಿಸ್ಟ್, ಪೋರ್ಟ್ ಹೋಲ್‌ಗಳಿಂದ ಮುಚ್ಚಿದ ಡಾಲ್ಮೆನ್ ಇತ್ಯಾದಿಯಾಗಿ ವಿಂಗಡಿಸಲಾಗಿದೆ.

ಭೂಮಿಯ ಕೆಳಗಿರುವ ಕಲ್ಲಿನ ಶವಪೆಟ್ಟಿಗೆಗಳಲ್ಲಿ ವಿವಿಧ ರೀತಿಯ ಮಡಿಕೆ, ಕುಡಿಕೆ, ಆಹಾರ, ನೀರು, ಕಬ್ಬಿಣದ ಆಯುಧಗಳು, ಆಭರಣಗಳು ಮತ್ತು ಮೂಳೆಯ ಅವಶೇಷಗಳು ಕಾಣಬರುತ್ತವೆ. ಇದರಿಂದ ಈ ಸಂಸ್ಕೃತಿಯ ಜನಗಳಿಗೆ ಮರಣೋತ್ತರ ಜೀವನದಲ್ಲಿ ನಂಬಿಕೆಯಿದ್ದಿತೆಂದು ತಿಳಿದುಬರುತ್ತದೆ. ಸಮಾಧಿಗಳಲ್ಲಿ ದೊರಕಿರುವ ವಸ್ತುಗಳಿಂದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಜನಜೀವನವನ್ನು ತಿಳಿಯಲಾಗಿದೆ. ಇವರು ವ್ಯವಸಾಯವನ್ನು ಮಾಡಿಕೊಂಡು, ಕಬ್ಬಿಣದ ಚಾಕು, ಕೊಡಲಿ, ಉಳಿ ಮುಂತಾದ ಆಯುಧಗಳನ್ನು ತಯಾರಿಸುತ್ತಿದ್ದರು. ಇವರಲ್ಲಿ ಸಾಮಾಜಿಕ ಅಂತಸ್ತು ಇದ್ದಿತೆಂದು ಭಾವಿಸಬಹುದಾದರೂ, ಅವುಗಳ ವಿವರಗಳು ತಿಳಿದು ಬಂದಿಲ್ಲ. ಅವರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಈ ರೀತಿ ಬೃಹತ್ ಶಿಲಾ ಸಂಸ್ಕೃತಿಯ ಜನರು ಇತಿಹಾಸ ಆರಂಭ ಕಾಲದ ಸಂಸ್ಕೃತಿಗೆ ಭದ್ರ ಬುನಾದಿಯನ್ನು ಹಾಕಿದರು.



ಕುಮತಿ

# ಬೌದ್ಧ ಸ್ತೂಪ, ಕಂಗನಹಳ್ಳಿ

ಕಂಗನಹಳ್ಳಿ ಗುಲ್ಬರ್ಗ ಜಿಲ್ಲೆಯಲ್ಲಿ ಭೀಮಾ ನದಿಯ ಎಡದಂಡೆಯ ಮೇಲಿದೆ. ಇಲ್ಲಿನ ಪುರಾತನ ನೆಲೆ ಚಂದ್ರಲಾಂಬಾ ದೇವಾಲಯಕ್ಕೆ ಪ್ರಸಿದ್ಧವಾಗಿರುವ ಹಾಗೂ ಅಶೋಕನ ಶಾಸನಗಳು ದೊರಕಿರುವ ಮತ್ತೊಂದು ಪ್ರಾಚೀನ ನೆಲೆ ಸನ್ನತಿಗೆ ಮೂರು ಕಿಲೋಮೀಟರ್ ದೂರದಲ್ಲಿದೆ. ಕ್ರಿಸ್ತಶಕದ ಆರಂಭದ ಶತಮಾನಗಳಲ್ಲಿ ಕರ್ನಾಟಕದಲ್ಲಿ ಬೌದ್ಧ ಧರ್ಮ ಹಾಗೂ ಬೌದ್ಧ ವಾಸ್ತುಶಿಲ್ಪಗಳು ಇದ್ದುವೆಂಬುದಕ್ಕೆ ಸಾಕಷ್ಟು ಸೂಚನೆಗಳಿದ್ದರೂ, ಅವುಗಳು ದೊರಕಿರಲಿಲ್ಲ. ಇದರಿಂದಾಗಿ ಪುರಾತತ್ವಜ್ಞರು ಭೂಮಿಯ ಮೇಲೆ ದೊರಕಿದ ಅವಶೇಷಗನ್ನು ಆಧರಿಸಿ, ಸನ್ನತಿ ಮತ್ತು ಕಂಗನಹಳ್ಳಿಯ ನೆಲೆಗಳಲ್ಲಿ ಉತ್ಖನನಗಳನ್ನು ಆರಂಭಿಸಿದರು. ಈ ಉತ್ಖನನಗಳು ಕರ್ನಾಟಕದಲ್ಲಿದ್ದ ಮೌರ್ಯ ಮತ್ತು ಶಾತವಾಹನರ ಆಳ್ವಿಕೆಯ ಕಾಲದ ಬೌದ್ಧ ಕಲೆಯ ಬಗೆಗೆಗಳು ಸಾಕಷ್ಟು ಹೊಸ ಬೆಳಕನ್ನು ಚೆಲ್ಲಿವೆ. ಉತ್ಖನನಗಳು ಇನ್ನೂ ನಡೆಯುತ್ತಿವೆ. ಅವು ಪೂರ್ಣಗೊಂಡರೆ, ಪ್ರಾಚೀನ ಕರ್ನಾಟಕದಲ್ಲಿ ಬೌದ್ಧ ಧರ್ಮ ಮತ್ತು ಬೌದ್ಧ ಕಲೆಯ ಬಗೆಗಿನ ಹೊಸ ಉಜ್ವಲ ಅಧ್ಯಾಯವು ಸ್ಫುಟವಾಗುತ್ತದೆ.

ಈ ಉತ್ಖನನದ ಅತಿ ಮುಖ್ಯ ಅವಶೇಷವೆಂದರೆ 75 ಅಡಿಗಳಷ್ಟು ವ್ಯಾಸವುಳ್ಳ ಮಹಾಸ್ತೂಪ. ಈ ವ್ಯಾಸಕ್ಕೆ ತಕ್ಕಂತೆ ಅದರ ಎತ್ತರವೂ ಇದ್ದಿರಬೇಕು. ಮೇಧಿಗೆ ಸಂಬಂಧಿಸಿದ ನೂರಾರು ಸುಂದರ ಶಿಲ್ಪಗಳು, ಅಲಂಕಾರಗಳು ಮತ್ತು ಕಮಲಪುಷ್ಪದ ವಿನ್ಯಾಸಗಳನ್ನು ಹೊಂದಿರುವ ಶಿಲ್ಪ ಫಲಕಗಳೂ ಇಲ್ಲಿ ದೊರಕಿವೆ. ಇಲ್ಲಿ ದೊರಕಿರುವ ಕುಳಿತಿರುವ ಹಾಗೂ ನಿಂತಿರುವ ಅಮರಾವತಿ ಶಿಲ್ಪಶೈಲಿಗೆ ಸೇರಿದ ಬುದ್ಧನ ವಿಗ್ರಹಗಳು ಕರ್ನಾಟಕದ ಪ್ರಾಚೀನ ಕಲೆಗೆ ಹೊಸ ಆಯಾಮವನ್ನು ಒದಗಿಸಿವೆ. ಅತ್ಯಂತ ಪ್ರಮುಖವಾದ ಮತ್ತು ಅಪರೂಪದ ಶಿಲ್ಪವೆಂದರೆ ಮೌರ್ಯ ಚಕ್ರವರ್ತಿ ಅಶೋಕನ ಶಿಲ್ಪಫಲಕ. ಗಾಂಭೀರ್ಯದಿಂದ ನಿಂತಿರುವ ಅಶೋಕನ ಪಕ್ಕದಲ್ಲಿ ಅವನ ರಾಣಿ ಮತ್ತು ಇಬ್ಬರು ಚಾಮರಧಾರಿ ಸ್ತ್ರೀಯರು ನಿಂತಿದ್ದಾರೆ. ಈ ಶಿಲ್ಪ ಫಲಕದಲ್ಲಿ ತೋರಿಸಿರುವ ವ್ಯಕ್ತಿ ಅಶೋಕ ಚಕ್ರವರ್ತಿ ಎಂದು ತೋರಿಸಲು, ಶಾತವಾಹನ ಕಾಲದ ಬ್ರಾಹ್ಮೀ ಲಿಪಿಯಲ್ಲಿ 'ರಾಯೋ ಅಸೋಕೋ' ಎನ್ನುವ ಬರಹವಿದೆ. ಬಹುಶಃ ಇದೇ ಇಡೀ ದೇಶದಲ್ಲಿ ದೊರಕಿರುವ ಬರಹವಿರುವ ಅಶೋಕನ ಶಿಲ್ಪ.

ಉತ್ಖನನದಲ್ಲಿ ನೂರಾರು ಅಮೃತ ಶಿಲೆಯಿಂದ ತಯಾರಿಸಲಾದ ಕಟಾಂಜನ ಹಾಗೂ ಪ್ರದಕ್ಷಿಣ ಪಥದ ಭಾಗಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪ ಫಲಕಗಳು ಮತ್ತು ಪೂರ್ಣ ಶಿಲ್ಪಗಳು ಮತ್ತು ಜಾತಕ ಕಥೆಗಳ ಫಲಕಗಳು ದೊರಕಿವೆ. ಹೀಗೆ ಇದು ಪ್ರಾಚೀನ ಕಾಲದ ಬೌದ್ಧ ಶಿಲ್ಪಗಳ ಗಣಿಯಂತಿದೆ. ಇಲ್ಲಿ ಕ್ರಿ.ಪೂ. ಒಂದನೆಯ ಶತಮಾನದಿಂದ ಕ್ರಿ.ಶ. ಎರಡನೆಯ ಶತಮಾನದ ಕಾಲಮಾನಕ್ಕೆ ಸೇರುವ ನೂರಕ್ಕೂ ಹೆಚ್ಚಿನ ಸಂಖ್ಯೆಯ ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯ ಶಾಸನಗಳು ದೊರಕಿವೆ. ಈ ಶಾಸನಗಳು ಶ್ರೀ ಶಾತಕರ್ಣಿ, ಯಜ್ಞಶ್ರೀ ಶಾತಕರ್ಣಿ, ಪುಳುಮಾವಿ ಮುಂತಾದ ಶಾತವಾಹನ ದೊರೆಗಳನ್ನು ಉಲ್ಲೇಖಿಸುತ್ತವೆ. ಕಂಗನಹಳ್ಳಿ ಉತ್ಖನನದಲ್ಲಿ ಹೆಚ್ಚಿನ ಸಂಖ್ಯೆಯ ಶಾತವಾಹನರ ನಾಣ್ಯಗಳೂ ದೊರಕಿವೆ. ಈ ಎಲ್ಲ ದೃಷ್ಟಿಗಳಿಂದ ಕಂಗನಹಳ್ಳಿ ಉತ್ಖನನ ಕರ್ನಾಟಕದ ಪ್ರಾಚೀನ ಇತಿಹಾಸಕ್ಕೆ ಮಹತ್ವದ ಸಂಗತಿಗಳನ್ನು ಒದಗಿಸುತ್ತದೆ. ಕರ್ನಾಟಕದ ಪ್ರಾಚೀನ ಇತಿಹಾಸಕ್ಕೆ ಬೌದ್ಧ ಕಲೆಯನ್ನು ಕುರಿತಾದ ಒಂದು ಹೊಸ ಅಧ್ಯಾಯವನ್ನು ಸೇರಿಸುವ ಅವಕಾಶ ಈ ಉತ್ಖನನದಿಂದ ಉಂಟಾಗುತ್ತದೆ ಎನ್ನುವ ದೃಷ್ಟಿಯಿಂದ ಕರ್ನಾಟಕದ ಪ್ರಾಚೀನ ಇತಿಹಾಸದಲ್ಲಿ ಆಸಕ್ತಿ ಹೊಂದಿರುವವರೆಲ್ಲರೂ, ಈ ಉತ್ಖನನಗಳು ಪೂರ್ಣಗೊಳ್ಳುವುದನ್ನು ಆಸಕ್ತಿಯಿಂದ ಎದುರು ನೋಡುತ್ತಿದ್ದಾರೆ.

## ಕದಂಬ ದೇವಾಲಯ, ಗುಡ್ನಾಪುರ

ಪ್ರಾಚೀನ ಕದಂಬರ ರಾಜಧಾನಿಯಾಗಿದ್ದ ಪ್ರಖ್ಯಾತ ಬನವಾಸಿಗೆ ಐದು ಕಿಲೋಮೀಟರ್ ದೂರದಲ್ಲಿರುವ ಗುಡ್ನಾಪುರ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಈ ಗ್ರಾಮದಲ್ಲಿ ದೊರಕಿದ ಕದಂಬ ರವಿವರ್ಮನ ಶಾಸನದಿಂದ ಈ ಸ್ಥಳಕ್ಕೆ ಹೆಚ್ಚಿನ ಐತಿಹಾಸಿಕ ಮಹತ್ವವು ಬಂದಿತು. ಕ್ರಿ.ಶ. ಆರನೆಯ ಶತಮಾನಕ್ಕೆ ಸೇರುವ ಈ ಶಾಸನ ಪೇಟಿಕಾಶಿರ ರೂಪದ ಬ್ರಾಹ್ಮೀ ಲಿಪಿಯಲ್ಲಿ ಕೆತ್ತಲ್ಪಟ್ಟಿದೆ. ಈ ಶಾಸನವು, ಗುಡ್ನಾಪುರದಲ್ಲಿ ಇದ್ದಿರಬಹುದಾದ ಅರಮನೆಗೆ ಸಂಬಂಧಿಸಿದ ಕಟ್ಟಡಗಳ ಬಗೆಗೆ ಮಾಹಿತಿ ನೀಡುತ್ತದೆ. ಕದಂಬ ದೊರೆ ರವಿವರ್ಮನು ಗುಡ್ನಾಪುರದಲ್ಲಿ ಒಂದು ಮನ್ಮಥ ದೇವಾಲಯವನ್ನು ಸ್ಥಾಪಿಸಿ, ಅಲ್ಲಿ  ಒಂದು ಸ್ತಂಭವನ್ನು ನಿಲ್ಲಿಸಿ ಆದರ ಮೇಲೆ ಶಾಸನವನ್ನು ಬರೆಸಿದನೆಂದು, ಈ ಶಾಸನ ಕಿಳಿಸುತ್ತದೆ. ಈ ದೇವಾಲಯದ ಎಲ್ಲೆಗಳನ್ನು ವಿವರಿಸುವಾಗ, ಇದರ ಬಲಭಾಗದಲ್ಲಿ ರಾಜನ ಅರಮನೆಯೂ, ಎಡಭಾಗದಲ್ಲಿ ಎರಡು ನೃತ್ಯಶಾಲೆಗಳಿದ್ದವೆಂದೂ, ಮುಂಭಾಗದಲ್ಲಿ ಅಂತಃಪುರವಿದ್ದಿತೆಂದೂ ತಿಳಿಸುತ್ತದೆ. ಇದರಿಂದ ಸೂಚನೆಯನ್ನು ಪಡೆದು, ಭಾರತೀಯ ಪುರಾತತ್ವ ಸರ್ವೇಕ್ಷಣದ ವಿದ್ವಾಂಸರು ಈ ನೆಲೆಯಲ್ಲಿ ಉತ್ಖನನಗಳನ್ನು ನಡೆಸಿದರು. ಇದರಿಂದಾಗಿ ಎರಡು ಇಟ್ಟಿಗೆಯ ಕಟ್ಟಡಗಳು ಹಾಗೂ ಇತರ ಅವಶೇಷಗಳು ಬೆಳಕಿಗೆ ಬಂದವು.

ಇವುಗಳಲ್ಲಿ ಒಂದು ಇಟ್ಟಿಗೆಯ ಕಟ್ಟಡವನ್ನು ದೇವಾಲಯವೆಂದು ಗುರುತಿಸಲಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಉದ್ದನೆಯ ಮಂಡಪಗಳಿದ್ದು, ಇವೆರಡೂ ಪ್ರಾಕಾರದ ಗೋಡೆಯೊಳಗೆ ಇವೆ. ಇದು ಪ್ರದಕ್ಷಿಣಪಥವನ್ನು ಒದಗಿಸುತ್ತದೆ. ಮಂಡಪದಲ್ಲಿ ಮರದ ಕಂಬಗಳಿದ್ದವು. ಹಾಗೂ ಅದಕ್ಕೆ ಎರಡು ಪ್ರವೇಶದ್ವಾರಗಳಿದ್ದವು. ಉತ್ಖನನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಾಳಾಕಾರದ ಮಣ್ಣಿನ ಬಿಲ್ಲೆಗಳು ದೊರಕಿವೆ. ಬಹುಶಃ ಇವುಗಳನ್ನು ನೆಲಕ್ಕೆ ಹಾಸುವುದಕ್ಕಾಗಿ ಹಾಗೂ ಚಾವಣಿಗಾಗಿಯೂ ಬಳಸುತ್ತಿದ್ದರೆಂದು ತೋರುತ್ತದೆ. ಕೆಲವು ಬಿಲ್ಲೆಗಳಲ್ಲಿ ಸಣ್ಣ ರಂಧ್ರಗಳಿವೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಕಬ್ಬಿಣದ ಮೊಳೆಗಳೂ ದೊರಕಿದವು. ರಂಧ್ರಗಳಿರುವ ಈ ಬಿಲ್ಲೆಗಳಿಗೆ ಮೊಳೆಗಳನ್ನು ಜೋಡಿಸಿ, ಮರದ ಅಡ್ಡತೊಲೆಗೆ ಸೇರಿಸಿ ಚಾವಣಿಯನ್ನು ವಿನ್ಯಾಸಗೊಳಿಸಿದ್ದರೆಂದು ಭಾವಿಸಬಹುದು.

ಇಲ್ಲಿ ಬಳಸಲಾಗಿರುವ ಇಟ್ಟಿಗೆಗಳು ಉತ್ತಮ ಗುಣಮಟ್ಟದ್ದಾಗಿದ್ದು ಅವುಗಳ ಅಳತೆ 38X17X17 ಸೆಂಟಿಮೀಟರ್‌ಗಳು. ಇದರ ಮುಂಭಾಗದಲ್ಲಿ ಜಂಬಿಟ್ಟಿಗೆಯಿಂದ ನಿರ್ಮಾಣಗೊಂಡ ಇನ್ನೊಂದು ಕಟ್ಟಡವಿದೆ. ಬಹುಶಃ ಇದು ಆನಂತರದ ಕಾಲದ್ದಿರಬೇಕು. ಈ ದೇವಾಲಯದ ಗರ್ಭಗುಡಿಯಲ್ಲಿ ಸ್ಥಾಪಿಸಲಾಗಿದ್ದ ದೇವತೆ ಯಾವುದು ಎಂಬುದು ಖಚಿತವಿಲ್ಲ. ಗುಡ್ನಾಪುರ ಶಾಸನದಲ್ಲಿ ಮನ್ಮಥ ದೇವಾಲಯವನ್ನು ಸ್ಥಾಪಿಸಿದ ಉಲ್ಲೇಖವಿದೆ. ಕೆಲವು ವಿದ್ವಾಂಸರ ಪ್ರಕಾರ ಮನ್ಮಥನೆಂದರೆ ಬಾಹುಬಲಿ. ಆದುದರಿಂದ ಈ ಉತ್ಖನನದಲ್ಲಿ ಕಂಡುಬಂದಿರುವ ದೇವಾಲಯವು ಬಾಹುಬಲಿಯದ್ದಾಗಿರಬೇಕು. ಆಮೆಯ ಆಕಾರದ ತಾಮ್ರದಲ್ಲಿ ಮಾಡಿದ ಮುಚ್ಚಳವಿರುವ ಒಂದು ಕರಂಡವು ಇಲ್ಲಿ ದೊರಕಿದೆ. ಈ ರೀತಿ ಬನವಾಸಿ ಕದಂಬರಿಗೆ ಸಂಬಂಧಿಸಿದ ವಾಸ್ತುಶಿಲ್ಪ ಮಾಹಿತಿಗಳು ಮತ್ತು ಇತರ ಆಸಕ್ತಿಕರ ಸಂಗತಿಗಳು ಗುಡ್ನಾಪುರದ ಉತ್ಖನನದಿಂದ ತಿಳಿದು ಬರುತ್ತವೆ.

ಇಟ್ಟಿಗೆಯ ಜೈನ ಬಸದಿ, ತಲಕಾಡು

ಕಾವೇರಿಯ ತೀರದಲ್ಲಿರುವ ತಲಕಾಡು ಪಶ್ಚಿಮೀ ಗಂಗರ ರಾಜಧಾನಿಯಾಗಿದ್ದು ಮೈಸೂರು ಒಡೆಯರ್‌ರವರ ಕಾಲದವರೆಗೆ ಸಂಸ್ಕೃತಿಯ ಕೇಂದ್ರವಾಗಿ ಮುಂದುವರಿಯಿತು. ಅದು ಈಗ ಆಶ್ಚರ್ಯವನ್ನುಂಟುಮಾಡುವ ಮರಳು ದಿಣ್ಣೆಗೂ ಮತ್ತು ಪಂಚಲಿಂಗದರ್ಶನ ಉತ್ಸವಕ್ಕೂ ಖ್ಯಾತಿ ಪಡೆದಿದೆ. ಇಲ್ಲಿ ಪುರಾತತ್ವ ಉತ್ಖನನಗಳು ನಡೆದವು. ಇಟ್ಟಿಗೆಗಳಿಂದ ನಿರ್ಮಿಸಲಾದ ಅನೇಕ ಪ್ರಾಚೀನ ಕಟ್ಟಡಗಳು ಈ ಉತ್ಖನನಗಳ ಮೂಲಕ ಬೆಳಕಿಗೆ ಬಂದವು. ಅವುಗಳಲ್ಲಿ ಒಂದು ಜೈನ ದೇವಾಲಯವಾಗಿದೆ.

ಪ್ರಾಚೀನ ಪಶ್ಚಿಮೀ ಗಂಗರು ಶೈವ ಮತ್ತು ಜೈನ ಧರ್ಮಗಳಿಗೆ ಆಶ್ರಯದಾತರಾಗಿದ್ದರು ಎಂಬುದು ಅವರ ಶಾಸನಗಳಿಂದ ಮತ್ತು ದೇಗುಲಗಳಿಂದ ತಿಳಿದು ಬಂದಿದೆ. ಇವರು ತಳವನಪುರ ಅಥವಾ ತಲಕಾಡಿನಲ್ಲಿ ವಿಜಯ ಜಿನಾಲಯವನ್ನು ನಿರ್ಮಿಸಿದ್ದರೆಂದು ತಿಳಿದು ಬಂದಿದೆ. ಬಹುಶಃ ಉತ್ಖನನದ ಇಟ್ಟಿಗೆಯ ಈ ಕಟ್ಟಡವೇ, ಶಾಸನದಲ್ಲಿ ಉಕ್ತವಾದ ಈ ಜಿನಾಲಯವಿರಬೇಕೆಂದು ಭಾವಿಸಬಹುದಾಗಿದೆ. ಆದರೆ ಈ ಜಿನಾಲಯದ ಮೇಲಿನ ಭಾಗಗಳು ದೊರಕದೆ, ಕೇವಲ ತಳಪಾಯ ದೊರಕಿದೆ. ಇಡೀ ದೇವಾಲಯವನ್ನು ಚೆನ್ನಾಗಿ ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ.

ದೇವಾಲಯದಲ್ಲಿ ಒಂದರ ಪಕ್ಕದಲ್ಲಿ ಮತ್ತೊಂದು ಇರುವಂತೆ ಮೂರು ಗರ್ಭಗೃಹಗಳು, ಒಂದು ಅಂತರಾಳ ಮತ್ತು ಒಂದು ಮುಖಮಂಡಪವಿದೆ. ಇದಕ್ಕೆ ಪ್ರದಕ್ಷಿಣ ಪಥವೂ ಇದೆ. ಈ ಎಲ್ಲ ಭಾಗಗಳೂ ಇಟ್ಟಿಗೆಯಿಂದ ಕಟ್ಟಲಾದ ಪ್ರಾಕಾರ ಗೋಡೆಯಿಂದ ಆವೃತವಾಗಿವೆ. ಮಧ್ಯದಲ್ಲಿರುವ ಪ್ರಧಾನ ಗರ್ಭಗುಡಿಯು ಚೌಕವಾಗಿದ್ದು (3.25 ಮೀಟರ್) ಇದರ ಇಕ್ಕೆಲಗಳಲ್ಲಿ ಆಯತಾಕಾರದ (3.25X1.80 ಮೀಟರ್) ಗರ್ಭಗುಡಿಗಳಿವೆ. ಇವುಗಳ ಮುಂಭಾಗದಲ್ಲಿ ದೀರ್ಘ ಚತುರಸ್ರಾಕಾರದ (2.8X11.0 ಮೀಟರ್) ಅಂಗಳವಿದೆ. ಮೂರುಗರ್ಭಗೃಹಗಳಿಗೂ ಮುಂಭಾಗದಲ್ಲಿ ಪ್ರವೇಶದ್ವಾರಗಳಿದ್ದು, ಮುಂದಿನ ಅಂಗಳಕ್ಕೆ ಪ್ರವೇಶವನ್ನು ದೊರಕಿಸಿಕೊಡುತ್ತವೆ.

ಮುಂದೆ ಪ್ರತ್ಯೇಕವಾಗಿರುವ ಮುಖಮಂಡಪವು ಚೌಕವಾಗಿದ್ದು, ದಪ್ಪನಾದ ತಳಪಾಯದ ಗೋಡೆಗಳನ್ನು ಹೊಂದಿದೆ. ಇಡೀ ಮುಖಮಂಡಪವು ಒಂದು ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಇದರಲ್ಲಿ ವಿವಿಧ ಮಾದರಿಯ ದಿಂಡುಗಳಿವೆ. ಬಹುಶಃ ಅಲ್ಲಲ್ಲಿ ಮರದ ಕಂಬಗಳಿದ್ದಿರಬೇಕು. ಈ ಮರದ ಕಂಬಗಳು, ಮರದಿಂದ ಮಾಡಿದ ಚಾವಣಿಗೆ ಆಸರೆಯಾಗಿದ್ದವು. ಈ ರೀತಿ ಇಟ್ಟಿಗೆಯ ಕಟ್ಟಡವು ಭದ್ರವಾಗಿಯೂ ಅಂದವಾಗಿಯೂ ಇದ್ದಿತು.

ಗರ್ಭಗುಡಿಗೆ ಸಮೀಪದಲ್ಲಿ ಪಾರ್ಶ್ವನಾಥ ತೀರ್ಥಂಕರನ ಕಲ್ಲಿನ ವಿಗ್ರಹವೊಂದು ದೊರಕಿತು. ಇದೊಂದು ವಿಶೇಷ ಉಬ್ಬಿನ ಶಿಲ್ಪ. ಪಾರ್ಶ್ವನಾಥನು ಐದು ಹೆಡೆಗಳ ಸರ್ಪದಡಿಯಲ್ಲಿ ನಿಂತಿದ್ದಾನೆ. ಮೇಲೆ ಛತ್ರಿಯಿದೆ. ಎಡಭಾಗದಲ್ಲಿ ಪದ್ಮಾವತಿ ಯಕ್ಷಿಯು ಸರ್ಪದ ಮೇಲೆ ಛತ್ರಿಯನ್ನು ಹಿಡಿದಿದ್ದಾಳೆ. ಈ ರೀತಿಯ ಶಿಲ್ಪ ತುಂಬ ಅಪರೂಪವಾದದ್ದು. ಈ ವಿಗ್ರಹವು ಈ ದೇವಾಲಯದ ಪ್ರಧಾನ ಗರ್ಭಗುಡಿಯನ್ನು ಅಲಂಕರಿಸಿದ್ದಿತು. ಈ ರೀತಿ ಈ ಇಟ್ಟಿಗೆಯ ದೇವಾಲಯ ತಲಕಾಡಿನಲ್ಲಿ ಗಂಗರು ಜೈನ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹದ ಕುರುಹಾಗಿ ನಿಂತಿದೆ.

## ಒಂದನೆಯ ಗುಹಾಲಯ, ಬಾದಾಮಿ

ಬಾದಾಮಿಯಲ್ಲಿ ಕಲ್ಲಿನಿಂದ ಕೊರೆದ ನಾಲ್ಕು ಗುಹಾ ದೇವಾಲಯಗಳಿವೆ. ಸುಲಭವಾಗಿ ಗುರುತಿಸುವುದಕ್ಕೋಸ್ಕರ ಇವುಗಳಿಗೆ ಒಂದರಿಂದ ನಾಲ್ಕರವರೆಗಿನ ಸಂಖ್ಯೆಗಳನ್ನು ಕೊಡಲಾಗಿದೆ. ಈ ನಾಲ್ಕೂ ಗುಹೆಗಳು ಅಕ್ಕಪಕ್ಕದಲ್ಲಿವೆ. ಮೊದಲನೆಯ ಗುಹೆ ಶಿವನಿಗಾಗಿ ಕಟ್ಟಲ್ಪಟ್ಟದ್ದು; ಎರಡನೆಯ ಮತ್ತು ಮೂರನೆಯ ಗುಹೆಗಳು ವೈಷ್ಣವ ಧರ್ಮಕ್ಕೆ ಸಂಬಂಧಿಸಿದವು; ಕೊನೆಯದು ಜೈನ ಗುಹೆ. ಅಲ್ಲೇ ಇನ್ನೊಂದು ಪ್ರಾಕೃತಿಕ ಗುಹೆಯಿದ್ದು, ಇದು ಬೌದ್ಧ ಧರ್ಮಕ್ಕೆ ಸೇರಿದ್ದೆಂದು ಭಾವಿಸಲಾಗಿದೆ. ಶೈವ, ವೈಷ್ಣವ ಮತ್ತು ಜೈನ ಪೂಜಾ ಮಂದಿರಗಳು ಅಕ್ಕಪಕ್ಕದಲ್ಲಿ ನಿರ್ಮಿತವಾಗಿರುವುದು ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿ ಪ್ರಚಲಿತವಾಗಿದ್ದ ಧಾರ್ಮಿಕ ಸಹಿಷ್ಣುತೆಯನ್ನು ರುಜುವಾತು ಪಡಿಸುತ್ತವೆ. ಇದು ಮೆಚ್ಚುಗೆಗೆ ಅರ್ಹವಾದ ಸಂಗತಿ.

ಈ ಶೈವ ಗುಹಾಲಯವು ಹೊರಗಡೆಯಿಂದ ಸಣ್ಣದಾಗಿ ಭಾಸವಾಗುತ್ತದೆ. ಅದರ ಒಳಕ್ಕೆ ಹೋಗಲು ಮುಂಭಾಗದಲ್ಲಿ ಮೆಟ್ಟಿಲುಗಳ ಸರಣಿಯಿದೆ. ದ್ವಾರದ ಎರಡು ಕಡೆಗಳಲ್ಲಿ ವಿವಿಧ ಭಂಗಿಗಳಲ್ಲಿರುವ ಗಣಗಳಿಂದ ಅಲಂಕೃತವಾದ ದಿಂಡು ಕಾಣಬರುತ್ತದೆ. ದಿಂಡಿನ ಮೇಲೆ ನಾಲ್ಕು ಚೌಕ ಕಂಬಗಳಿದ್ದು, ಕೊನೆಯಲ್ಲಿ ಎರಡು ಅರೆಗಂಬಗಳಿವೆ. ಕಂಬಗಳ ಮೇಲೆ ತಗ್ಗು ಉಬ್ಬಿನ ಶಿಲ್ಪಗಳಿವೆ. ಈ ಗುಹಾಲಯದಲ್ಲಿ ಮುಖಮಂಡಪ, ಮಂಡಪ ಮತ್ತು ಗರ್ಭಗುಡಿಗಳಿವೆ. ಚೌಕಾಕಾರದ ಮುಖಮಂಡಪದಲ್ಲಿ, ನಟರಾಜ, ಹರಿಹರ, ಅರ್ಧನಾರೀಶ್ವರ ಮುಂತಾದ ಸುಂದರ ಶಿಲ್ಪಗಳಿವೆ. ನೃತ್ಯ ಮಾಡುತ್ತಿರುವ ನಟರಾಜನಿಗೆ ಹದಿನೆಂಟು ಕೈಗಳಿದ್ದು, ಪ್ರತಿಯೊಂದರಲ್ಲೂ ಒಂದಲ್ಲ ಒಂದು ಆಯುಧವನ್ನು ಹಿಡಿದಿದ್ದಾನೆ. ಇವನು ದ್ವಿಭಂಗಿಯಲ್ಲಿ ನೃತ್ಯ ಮಾಡುತ್ತಿದ್ದಾನೆ. ಅವನ ಪಕ್ಕದಲ್ಲಿರುವ ಗಣಪತಿಯೂ ನೃತ್ಯನಿರತನಾಗಿದ್ದಾನೆ; ಅವನ ಪಕ್ಕದಲ್ಲಿ ಒಬ್ಬ ಕಲಾಕಾರನು ಮೃದಂಗವನ್ನು ನುಡಿಸುತ್ತಿದ್ದಾನೆ. ಇಡೀ ಶಿಲ್ಪವು ಭಾವೋದ್ರೇಕದಿಂದ ಕಂಪಿಸುತ್ತಿರುವಂತೆ ಕಾಣಬರುತ್ತದೆ. ಮತ್ತೊಂದು ಸುಂದರ ಶಿಲ್ಪ ಹರಿಹರನದ್ದು. ಈ ಶಿಲ್ಪದ ಬಲಭಾಗವು ಶಿವರೂಪವಾಗಿದ್ದು ಪರಶು, ನಾಗ, ನಂದಿ ಮತ್ತು ತ್ರಿಶೂಲಗಳಿಂದ ಸುಲಭವಾಗಿ ಗುರುತಿಸಬಹುದು. ಎಡಭಾಗವು ವಿಷ್ಣು ರೂಪವಾಗಿದ್ದು, ಶಂಖ, ಚಕ್ರ, ಗದಾ, ಪದ್ಮಗಳಿಂದ ಅಲಂಕೃತನಾಗಿದ್ದು ಕೆಳಗಡೆ ಗರುಡನ ಶಿಲ್ಪವಿದೆ. ಪಾರ್ವತಿ ಮತ್ತು ಲಕ್ಷ್ಮಿಯರು ಇಕ್ಕೆಲಗಳಲ್ಲಿ ನಿಂತಿದ್ದಾರೆ. ಈ ರೀತಿ ಶಿವ ವಿಷ್ಣು ರೂಪಗಳನ್ನು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿರುವ ಶಿಲ್ಪ ಇದಾಗಿದೆ.

ಎಂಟು ಅಡಿ ಎತ್ತರದ ಅರ್ಧನಾರೀಶ್ವರನ ವಿಗ್ರಹ ಇನ್ನೊಂದು ಸುಂದರ ಶಿಲ್ಪ. ಮೇಲ್ಭಾಗದಲ್ಲಿ ದೇವದೇವತೆಗಳನ್ನೂ, ಕೆಳಭಾಗದಲ್ಲಿ ಗಣಗಳನ್ನೂ ಕೆತ್ತಲಾಗಿದೆ. ಬಲಭಾಗವು ಪುರುಷಾಕೃತಿಯನ್ನೂ, ಎಡಭಾಗವು ಸ್ತ್ರೀ ರೂಪವನ್ನೂ ತೋರಿಸುತ್ತವೆ. ತುಂಬ ಮನಮೋಹಕವಾಗಿ ಈ ಸಂಯೋಜನೆಯನ್ನು ಈ ಶಿಲ್ಪದಲ್ಲಿ ಅಳವಡಿಸಲಾಗಿದೆ. ವೃತ್ತಾಕಾರದ ವಿನ್ಯಾಸದಲ್ಲಿ ಹಾರುತ್ತಿರುವ ಗಂಧರ್ವ ದಂಪತಿಗಳ ಶಿಲ್ಪದಲ್ಲಿ ದೈವಿಕ ನಗು ಬಲು ಚೆನ್ನಾಗಿ ಮೂಡಿ ಬಂದಿದೆ. ಕಂಬಗಳಲ್ಲಿ ನರಸಿಂಹ, ಗರುಡ, ಪ್ರಹ್ಲಾದ, ಶಿವ ಲಿಂಗ, ಯೋಗಿ, ಮಿಥುನ ಇತ್ಯಾದಿ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಪೀಠದ ಮೇಲೆ ಶಿವ ಲಿಂಗವಿದೆ. ಈ ಗುಹಾಲಯದ ಕಾಲವನ್ನು ನಿರ್ಧರಿಸಲು ಶಾಸನಗಳಿಲ್ಲ. ಆದರೆ ಶಿಲ್ಪ ಶೈಲಿಯ ಹಾಗೂ ಮೂರನೆಯ ಗುಹಾಲಯದಲ್ಲಿರುವ ಮಂಗಳೇಶನ ಶಾಸನದ ಆಧಾರದ ಮೇಲೆ, ಈ ಗುಹಾಲಯದ ರಚನೆಯ ಕಾಲ ಕ್ರಿ.ಶ. ಆರನೆಯ ಶತಮಾನವೆಂದು ತೀರ್ಮಾನಿಸಬಹುದು.

## ಮೂರನೆಯ ಗುಹಾಲಯ, ಬಾದಾಮಿ

ಮೂರನೆಯ ಗುಹೆ ಎಂದು ಕರೆಯಲಾಗಿರುವ ಹಾಗೂ ಕಲ್ಲಿನಲ್ಲಿ ಕೊರೆಯಲಾದ ಈ ಗುಹಾಲಯವು ಬಾದಾಮಿಯಲ್ಲಿ ಅತ್ಯಂತ ದೊಡ್ಡದೂ ಸುಂದರವೂ ಆದ ಆಲಯ. ಇಲ್ಲಿ ದೊರೆತಿರುವ ಶಾಸನದ ಪ್ರಕಾರ, ಈ ಗುಹಾಲಯವನ್ನು ಚಾಳುಕ್ಯ ದೊರೆ ಮಂಗಳೇಶನು ಕ್ರಿ.ಶ. 578ರಲ್ಲಿ ನಿರ್ಮಿಸಿದನು. ಶಾಸನದ ಪ್ರಕಾರ ಇದೊಂದು ಮಹಾವಿಷ್ಣು ಗೃಹ.

ಬೃಹತ್ತಾದ ಹಾಗೂ ಎತ್ತರವಾದ ಕಲ್ಲಿನ ಬಂಡೆಯು ಮೇಲಿನಿಂದ ಕೆಳಕ್ಕೆ ಇಳಿಯುವಂತೆ ಇದ್ದು, ಮುಂಭಾಗದಲ್ಲಿ ಮುಂಚೂರು ಅಥವಾ ಚಜ್ಜದಂತೆ ಕಾಣಬರುವುದರಿಂದ ಈ ಗುಹಾಲಯವು ಭವ್ಯವಾಗಿ ಕಾಣುತ್ತದೆ. ಮಿಕ್ಕ ಗುಹಾಲಯಗಳಿಗೆ ಈ ಹೆಚ್ಚಳವಿಲ್ಲ. ದೇವಾಲಯವು ಒಂದು ಅಧಿಷ್ಠಾನದ ಮೇಲ ನಿರ್ಮಾಣವಾಗಿದ್ದು, ಮುಂಭಾಗದ ಮಧ್ಯದಲ್ಲಿ ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಅಧಿಷ್ಠಾನದ ದಿಂಡುಗಳ ಮೇಲೆ ಗಣಗಳ ತಗ್ಗುಶಿಲ್ಪಗಳಿವೆ. ಮುಂಭಾಗದ ಮೊಗಸಾಲೆಯಲ್ಲಿ ವಿವಿಧ ರೀತಿಯ ವಿನ್ಯಾಸಗಳನ್ನುಳ್ಳ ಚೌಕಾಕಾರದ ಕಂಬಗಳಿವೆ. ಚಾವಣಿಯ ಸ್ತರದಲ್ಲಿ ಈ ಕಂಬಗಳ ಮೇಲೆ ಶಿಲ್ಪಗಳಿರುವ ಚಾಚು ಪೀಠಗಳಿವೆ. ಇವುಗಳಲ್ಲಿ ಗಮನಾರ್ಹವಾದವು ತ್ರಿವಿಕ್ರಮ, ಭೂವರಾಹ, ಹರಿಹರ, ನರಸಿಂಹ ಮುಂತಾದವು. ವಿಷ್ಣುವು ತ್ರಿವಿಕ್ರಮನ ರೂಪದಲ್ಲಿ ತನ್ನ ಕಾಲನ್ನು ಚಾಚಿದ್ದಾನೆ; ಕೆಳಭಾಗದಲ್ಲಿ ಬಲಿಯು ನಿಂತಿದ್ದಾನೆ; ದೇವ ದೇವತೆಗಳು ಇದನ್ನು ಗಮನಿಸುತ್ತ ನಿಂತಿದ್ದಾರೆ. ಇದೊಂದು ಉತ್ತಮ ಶಿಲ್ಪ ಫಲಕ. ನಾಲ್ಕು ಕೈಗಳುಳ್ಳ ನಿಂತಿರುವ ನರಸಿಂಹನ ಶಿಲ್ಪ ಮತ್ತೊಂದು ಗಮನಾರ್ಹ ಶಿಲ್ಪ. ಇಷ್ಟೇ ಆಸಕ್ತಿಕರವಾದ ಮತ್ತೊಂದು ಶಿಲ್ಪವೆಂದರೆ ಸರ್ಪದ ಮೇಲೆ ಕುಳಿತಿರುವ ವಿಷ್ಣುವಿನದು. ನಾಲ್ಕು ಕೈಗಳುಳ್ಳ, ವಿಷ್ಣುವಿನ ಶಿರದ ಮೇಲೆ ಐದು ಹೆಡೆಗಳ ಸರ್ಪವಿದೆ. ಸರ್ಪದ ಸಮೀಪದಲ್ಲಿ ಗರುಡನಿದ್ದಾನೆ. ಸರ್ಪದ ಮೇಲೆ ಮಲಗಿರುವ ವಿಷ್ಣುವಿನ ಶಿಲ್ಪಗಳು ಸಾಮಾನ್ಯ; ಆದರೆ ಸರ್ಪದ ಮೇಲೆ ಕುಳಿತಿರುವ ವಿಷ್ಣುವಿನ ಶಿಲ್ಪಗಳು ಅಪರೂಪ. ಈ ಶಿಲ್ಪ ಫಲಕವು 12 ಅಡಿ ಉದ್ದ ಮತ್ತು 8 ಅಡಿ ಅಗಲವಾಗಿದೆ.

ಈ ಗುಹಾಲಯದಲ್ಲಿ ಕಾಣಬರುವ ಇತರ ತಗ್ಗು ಉಬ್ಬಿನ ಶಿಲ್ಪಗಳೆಂದರೆ ಬ್ರಹ್ಮ, ಶಿವ, ವಿಷ್ಣು, ಅಮೃತಮಂಥನ, ದಿಕ್ಪಾಲಕರ ಜೊತೆಯಿರುವ ವಿಷ್ಣು, ಆನೆ ಮತ್ತು ಕುದುರೆ ಸವಾರರು, ಕಾರ್ತಿಕೇಯ ಸಮೇತ ಶಿವಪಾರ್ವತಿ, ಅರ್ಧನಾರೀಶ್ವರ ಇತ್ಯಾದಿ ಶಿಲ್ಪಗಳು. ಒಳಗಡೆಯಿರುವ ಕಂಬಗಳು ಅನೇಕ ಮುಖ ಉಳ್ಳವಾಗಿದ್ದು ಅವುಗಳ ಮೇಲೆ ಕೊಳಲಿನಾಕಾರದ ವಿನ್ಯಾಸಗಳಿವೆ. ಈ ಕಂಬಗಳ ಮೇಲೆ ದೇವ ದೇವಿಯರ ಹಾಗೂ ಮಿಥುನ ಶಿಲ್ಪಗಳಿವೆ. ಒಬ್ಬ ಯುವತಿಯು ತನ್ನ ಪ್ರೇಮಿಗಾಗಿ ಕಾಯುತ್ತಿರುವುದು, ಮತ್ತೊಬ್ಬ ಸುಂದರ ಯುವತಿಯು ತನ್ನನ್ನು ತಾನೇ ಸಿಂಗರಿಸಿಕೊಳ್ಳುತ್ತಿರುವುದು ಮುಂತಾದವು ಮಿಥುನ ಶಿಲ್ಪಗಳಲ್ಲಿ ಸೇರಿವೆ. ಕೆಲವು ಕಡೆಗಳಲ್ಲಿ ಪ್ರಾಚೀನ ಕಾಲದ ವರ್ಣಚಿತ್ರಗಳು ಕಾಣಬರುತ್ತವೆಯಾದರೂ, ಅವುಗಳನ್ನು ಸರಿಯಾಗಿ ಗುರುತಿಸಲು ಸಾಧ್ಯವಾಗಿಲ್ಲ. ಈ ಎಲ್ಲ ದೃಷ್ಟಿಗಳಿಂದ ಇದೊಂದು ಸುಂದರ ವಿಷ್ಣುವಿನ ಗುಹಾ ದೇವಾಲಯವಾಗಿದ್ದು, ಪ್ರಾಚೀನ ಚಾಳುಕ್ಯರ ಕಾಲದ ವಾಸ್ತುಶಿಲ್ಪ ಶೈಲಿಗೆ ಉತ್ತಮ ಉದಾಹರಣೆಯಾಗಿದ್ದು ಇದು ಅವರ ರಾಜಧಾನಿಯಾದ ಬಾದಾಮಿಯಲ್ಲಿ ಕಂಡು ಬಂದಿರುವುದು ಮಹತ್ವದ ಸಂಗತಿ.

## ರಾವಳಫಡಿ, ಐಹೊಳೆ

ಐಹೊಳೆಯಲ್ಲಿ ಕೊರೆಯಲಾದ ಮೂರು ಗುಹಾಲಯಗಳು ಹಾಗೂ ಕಟ್ಟಲ್ಪಟ್ಟ ಅನೇಕ ದೇಗುಲಗಳೂ ಇವೆ. ರಾವಳಫಡಿಯು ಈ ಮೂರು ಗುಹಾಲಯಗಳಲ್ಲೊಂದು. ರಾವಳಫಡಿ ಎಂಬ ಈ ಹೆಸರಿನ ಅರ್ಥ ಅಥವಾ ಮಹತ್ವ ತಿಳಿದು ಬಂದಿಲ್ಲ. ಮರಾಠಿಯಲ್ಲಿ ರಾವ ಎಂದರೆ ಕಲ್ಲು ಎಂದರ್ಥ. ಆದುದರಿಂದ ಕಲ್ಲಿನಲ್ಲಿ ಕೊರೆಯಲಾದ ಗುಹೆಯನ್ನು ಇದು ಸೂಚಿಸುತ್ತದೆ ಎಂದು ಭಾವಿಸಬಹುದು. ಕೆಲವು ಇತಿಹಾಸಕಾರರು ಇದನ್ನು ರಾವಣಫಡಿ ಎಂದೂ ಕರೆಯುತ್ತಾರೆ. ಆದರೆ ರಾವಣನಿಗೂ ಈ ಗುಹಾಲಯಕ್ಕೂ ಯಾವ ಸಂಬಂಧವೂ ಇಲ್ಲ. ರಾವಣನ ಯಾವ ಶಿಲ್ಪವೂ ಇಲ್ಲಿ ದೊರಕಿಲ್ಲ ಎಂಬುದೂ ಗಮನಾರ್ಹ.

ಈ ಇಡೀ ದೇವಾಲಯವನ್ನು ಮರಳುಗಲ್ಲಿನ ದೊಡ್ಡ ಬಂಡೆಯಲ್ಲಿ ಕೊರೆಯಲಾಗಿದೆ. ಇದು 30 ಅಡಿ ಉದ್ದ, 20 ಅಡಿ ಆಳ ಮತ್ತು 10 ಅಡಿ ಎತ್ತರದ್ದಾಗಿದೆ. ಇಡೀ ದೇವಾಲಯವನ್ನು ಒಂದು ಜಗತಿಯ ಮೇಲೆ ಕೆತ್ತಲಾಗಿದೆ. ಮೇಲಕ್ಕೆ ಹೋಗಲು ಮಧ್ಯದಲ್ಲಿ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳನ್ನು ಹತ್ತಿದ ನಂತರ ಮಂಡಪವನ್ನು ಪ್ರವೇಶಿಸಬಹುದು. ಇದಕ್ಕೆ ಮುಂಭಾಗದಲ್ಲಿ ಎರಡು ಕಂಬಗಳಿವೆ. ಅನಂತರ ಚೌಕಾಕಾರದ ಅಂತರಾಳವಿದೆ. ಅಂತರಾಳದ ಹಿಂಭಾಗದಲ್ಲಿ ಗರ್ಭಗುಡಿಯಿದೆ. ಇದರ ಹಿಂಭಾಗ ದೊಡ್ಡದಾಗಿದ್ದು, ಮುಂಭಾಗ ಸ್ವಲ್ಪ ಕಿರಿದಾಗಿದೆ. ಗರ್ಭಗುಡಿಯ ಮಧ್ಯದಲ್ಲಿ ಕಲ್ಲಿನಿಂದ ಕೊರೆದ ಪೀಠವಿದೆ. ಅದರ ಮೇಲೆ ಶಿವಲಿಂಗವಿದೆ.

ರಾವಳಫಡಿ ಗುಹಾಲಯಕ್ಕೆ ಪ್ರಾಮುಖ್ಯವಿರುವುದು ಇಲ್ಲಿನ ಸುಂದರ ಶಿಲ್ಪಗಳಿಂದ. ಮುಂಭಾಗದ ಇಕ್ಕೆಲಗಳಲ್ಲಿ ಮಾನುಷ ರೂಪದ ಶಂಖನಿಧಿ ಮತ್ತು ಪದ್ಮನಿಧಿಗಳ ಶಿಲ್ಪಗಳಿವೆ. ಇವರು ಕುಳ್ಳಗೆ, ದಪ್ಪ ಹೊಟ್ಟೆಯವರಾಗಿದ್ದು ಕೈಯಲ್ಲಿ ಶಂಖ ಮತ್ತು ಪದ್ಮಗಳನ್ನು ಹಿಡಿದಿದ್ದಾರೆ. ಅಂತರಾಳದ ಎಡಬದಿಯಲ್ಲಿ, ಮಂಡಪದ ಹಿಂಭಾಗದಲ್ಲಿ, ಕೈಯಲ್ಲಿ ತ್ರಿಶೂಲವನ್ನು ಹಿಡಿದಿರುವ ಶೈವ ದ್ವಾರಪಾಲನಿದ್ದಾನೆ. ನಾಗನಿಂದ ಆವೃತವಾದ ಪರಶುವೂ ಅಲ್ಲಿದೆ. ಪೀಠದ ಮೇಲೆ ಗಣಗಳನ್ನು ಕೆತ್ತಿದ್ದಾರೆ. ಬಲಭಾಗದಲ್ಲಿ ಭರ್ಜಿಯನ್ನು ಹಿಡಿದಿರುವ ಇನ್ನೊಬ್ಬ ಶೈವದ್ವಾರಪಾಲನಿದ್ದಾನೆ. ಎಡಭಾಗದಲ್ಲಿ ಹರಿಹರನ ಶಿಲ್ಪವಿದೆ. ಈ ವಿಗ್ರಹದ ಬಲಭಾಗವು ಶಿವನನ್ನೂ, ಎಡಭಾಗವು ವಿಷ್ಣುವನ್ನೂ ಸೂಚಿಸುತ್ತವೆ. ಈ ವಿಗ್ರಹಗಳ ಹಿಂಭಾಗದಲ್ಲಿ ನಾಲ್ವರು ಕುಬ್ಜರು ವಾದ್ಯಗಳನ್ನು ನುಡಿಸುತ್ತಿದ್ದಾರೆ. ಎಡಭಾಗದಲ್ಲಿ ಸುಂದರವಾದ ಶಂಖವನ್ನು ಹಿಡಿದಿರುವ ವಿಷ್ಣುವಿನ ವಿಗ್ರಹವಿದೆ. ಹರಿಹರನ ವಿಗ್ರಹಕ್ಕೆ ಎದುರಿಗೆ ವಿವಿಧ ಆಭರಣಗಳನ್ನು ಧರಿಸಿರುವ ನಾಲ್ಕು ಕೈಗಳನ್ನು ಹೊಂದಿರುವ ಗಂಗಾಧರನ ಶಿಲ್ಪವಿದೆ. ಮೇಲ್ಭಾಗದಲ್ಲಿ ನದೀ ದೇವತೆಗಳಾದ ಗಂಗಾ ಮತ್ತು ಯಮುನೆಯರ ಶಿಲ್ಪಗಳಿವೆ. ಮಂಡಪದ ಗೋಡೆಯ ಮೇಲೆ ಅರ್ಧನಾರೀಶ್ವರನ ಶಿಲ್ಪವಿದೆ. ಎಡಭಾಗದಲ್ಲಿ ಎರಡೂ ಕಡೆಗಳಲ್ಲಿ ಸಪ್ತಮಾತೃಕೆಯರಿರುವ, ನೃತ್ಯ ಮಾಡುತ್ತಿರುವ ಶಿವ ಶಿಲ್ಪವಿದೆ. ಎಡಭಾಗದಲ್ಲಿ ನಟರಾಜನ ಉಬ್ಬುಶಿಲ್ಪವಿದೆ. ಅಂತರಾಳದಲ್ಲಿ ಮಾನುಷ ರೂಪದ ವರಾಹ ಶಿಲ್ಪವಿದೆ. ಇದರ ಎದುರು ಗೋಡೆಯಲ್ಲಿ ಮಹಿಷಮರ್ದಿನಿಯ ಶಿಲ್ಪವಿದೆ. ಈ ಗುಹಾಲಯವನ್ನು ಕ್ರಿ.ಶ. ಏಳನೆಯ ಶತಮಾನದ ಕೊನೆಯ ಪಾದದಲ್ಲಿ ನಿರ್ಮಿಸಲಾಯಿತು ಎಂದು ಭಾವಿಸಲಾಗಿದೆ. ಒಟ್ಟಿನಲ್ಲಿ ಈ ಗುಹಾಲಯವು ಪ್ರಾಚೀನ ಚಾಳುಕ್ಯರ ಶೈಲಿಯ ಸುಂದರ ವಿಗ್ರಹಗಳ ತಾಣವೆನಿಸಿದೆ.

## ಗೌಡರಗುಡಿ, ಐಹೊಳೆ

ಲಾಡ್‌ಖಾನ್ ದೇವಾಲಯಕ್ಕೆ ಸಮೀಪದಲ್ಲೇ ಇರುವ ಗೌಡರಗುಡಿ ಆಕರ್ಷಕ ದೇವಾಲಯಗಳಲ್ಲಿ ಒಂದು. ಇದಕ್ಕೆ ಗೌಡರ ಗುಡಿ (ಗೌಡ=ಹಳ್ಳಿಯ ಮುಖಂಡ) ಎಂಬ ಹೆಸರು ಏಕೆ ಬಂತು ಗೊತ್ತಾಗಿಲ್ಲ. ಕೆಲವು ವರ್ಷಗಳ ಹಿಂದೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಇಲ್ಲಿ ಉತ್ಖನನವನ್ನು ನಡೆಸಿತು. ಇದರಿಂದ ಈ ದೇವಾಲಯ ಲಾಡ್‌ಖಾನ್ ದೇವಾಲಯಕ್ಕಿಂತ ಪ್ರಾಚೀನವಾದುದೆಂದು ತಿಳಿದು ಬಂದಿದೆ. ಲಾಡ್‌ಖಾನ್ ದೇವಾಲಯದ ನಿರ್ಮಾಣದ ಕಾಲವು ಖಚಿತವಾಗಿ ತಿಳಿಯದೇ ಇರುವುದರಿಂದ, ಗೌಡರ ಗುಡಿಯ ಖಚಿತ ಕಾಲವನ್ನು ನಿರ್ಧರಿಸುವುದು ಸಾಧ್ಯವಿಲ್ಲವಾಗಿದೆ. ಆದರೆ ಶೈಲಿಯ ಆಧಾರದಿಂದ ದೇವಾಲಯದ ನಿರ್ಮಾಣ ಕ್ರಿ.ಶ. ಏಳನೆಯ ಶತಮಾನದ ಮೊದಲಭಾಗದಲ್ಲಿ ಆಗಿರಬೇಕೆಂದು ಭಾವಿಸಬಹುದು.

ಗೌಡರ ಗುಡಿ ವಿಶಿಷ್ಟ ಶೈಲಿಯ ದೇವಾಲಯ. ದಪ್ಪನಾದ ದಿಂಡುಗಳನ್ನು ಹೊಂದಿರುವ ನಾಲ್ಕೂವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ಈ ದೇವಾಲಯ ನಿರ್ಮಿತವಾಗಿದೆ. ದೇವಾಲಯದಲ್ಲಿ ಒಂದು ಗರ್ಭಗೃಹ, ಪ್ರದಕ್ಷಿಣ ಪಥ ಮತ್ತು ಮಂಡಪಗಳಿವೆ. ಬೋದಿಗೆಗಳನ್ನುಳ್ಳ ಹದಿನಾರು ಚೌಕಾಕಾರದ ಕಂಬಗಳು ಇಡೀ ಚಾವಣಿಯನ್ನು ಹೊತ್ತಿರುವಂತೆ ನಿರ್ಮಿತವಾಗಿದೆ. ಚಾವಣಿಯಲ್ಲಿ ಒಂದರ ಮೇಲೆ ಮತ್ತೊಂದರಂತೆ ಎರಡು ಸ್ತರಗಳಿವೆ. ಇದು ಇಳಿಜಾರಾಗಿ ನಿಲ್ಲಿಸಿರುವ ಚಪ್ಪಡಿ ಕಲ್ಲುಗಳಿಂದ ನಿರ್ಮಿಸಲ್ಪಟ್ಟಿದೆ. ಮುಂಚೂರಿನಂತಿರುವ ದಿಂಡಿನಲ್ಲಿ ಅಲಂಕಾರ ವಿನ್ಯಾಸಗಳಿವೆ. ಚಾವಣಿಯ ಪಶ್ಚಿಮ ಭಾಗದಲ್ಲಿ ಶಿಖರದ ರೀತಿಯಲ್ಲಿರುವ ಭಾಗವು ಎರಡು ಅಂತಸ್ತುಗಳಲ್ಲಿದೆ. ಇದರ ದಿಂಡುಗಳ ತುದಿಯು ಅಲಂಕೃತವಾಗಿವೆ.

ಮಂಡಪದ ಮಧ್ಯಭಾಗದಲ್ಲಿ ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಇಲ್ಲಿರುವ ಚೌಕಾಕಾರದ ಕಂಬಗಳಲ್ಲಿ ಪೂರ್ಣಕುಂಭಗಳ ಅಲಂಕಾರವಿದೆ. ಅದರ ಹಿಂಭಾಗದಲ್ಲಿ ಕಕ್ಷಾಸನಗಳಿವೆ. ಕಂಬಗಳು ಸ್ವಲ್ಪ ದಪ್ಪವೆನಿಸುತ್ತವೆ. ಒಳಗಿನ ಜಂತಿಗಳ ಮೇಲೆ ಪುಷ್ಪಾಲಂಕಾರ, ಪ್ರಾಣಿಗಳು, ಮಾನವರು ಮುಂತಾದವರ ತಗ್ಗು ಉಬ್ಬಿನ ಶಿಲ್ಪ ವಿನ್ಯಾಸಗಳಿವೆ. ಆದರಲ್ಲಿ ಚೈತ್ಯ ಗವಾಕ್ಷಗಳೂ ಕಂಡು ಬರುತ್ತವೆ.

ಗರ್ಭಗೃಹವು ಸಣ್ಣದಾಗಿದೆ. ಇದರ ದ್ವಾರಬಂಧದ ಮೇಲೆ ಸುಂದರ ನಾಜೂಕು ಕೆತ್ತನೆಗಳಿವೆ. ಹೊರಗೋಡೆಯಲ್ಲಿ ಮೂರು ಕೋಷ್ಠಗಳಿವೆ. ಬಹುಶಃ ಇವುಗಳಲ್ಲಿ ಶಿಲ್ಪಗಳಿದ್ದವು. ಈಗ ಇವು ಖಾಲಿಯಾಗಿವೆ. ದ್ವಾರಬಂಧದ ಇಕ್ಕೆಲಗಳಲ್ಲಿ ಪುಷ್ಪಾಲಂಕಾರದ ವಿನ್ಯಾಸಗಳಿವೆ. ದ್ವಾರಬಂಧದ ಲಲಾಟದಲ್ಲಿ ಮಾನುಷರೂಪದ ಗರುಡನ ಶಿಲ್ಪವಿದೆ. ಆವನ ಎರಡು ಪಕ್ಕಗಳಲ್ಲಿ ಅರೆಗಂಬಗಳಿವೆ. ಗರುಡನ ಮೇಲೆ ಲಕ್ಷ್ಮಿಯ ಶಿಲ್ಪ ಇರುವುದು ವಿಶಿಷ್ಟವಾದದ್ದು. ಅಲಂಕೃತಳಾಗಿರುವ ಹಾಗೂ ಕುಳಿತಿರುವ ಲಕ್ಷ್ಮಿ ತನ್ನ ಎರಡು ಕೈಗಳಲ್ಲಿ ತಾವರೆ ಹೂವನ್ನು ಹಿಡಿದಿದ್ದಾಳೆ. ಇಕ್ಕೆಲಗಳಲ್ಲಿ ಅಭಿಷೇಕ ಮಾಡುತ್ತಿರುವ ಆನೆಗಳಿವೆ. ಕೊಳದಲ್ಲಿ ಇನ್ನೆರಡು ಆನೆಗಳಿವೆ. ಈ ರೀತಿಯ ಲಕ್ಷ್ಮಿಯ ವಿನ್ಯಾಸ ಬಾದಾಮಿಯಲ್ಲೂ ಕಂಡುಬರುತ್ತದೆ. ಈ ಲಲಾಟದ ಲಕ್ಷ್ಮಿಯ ಶಿಲ್ಪದಿಂದಾಗಿ, ಈ ದೇವಾಲಯ ಭಗವತಿ ಅಥವಾ ಲಕ್ಷ್ಮೀದೇವಾಲಯವಿರಬಹುದೆಂದು ಊಹಿಸಲಾಗಿದೆ. ಹಾಗಾದರೆ, ಇದು ಕರ್ನಾಟಕದಲ್ಲಿ ಪ್ರಾಚೀನತಮ ಲಕ್ಷ್ಮೀ ದೇವಾಲಯವೆನಿಸುತ್ತದೆ. ಈ ಎಲ್ಲ ದೃಷ್ಟಿಗಳಿಂದ ಇದು ಐಹೊಳೆಯ ದೇವಾಲಯಗಳಲ್ಲಿ ಪ್ರಮುಖವಾಗಿದೆ.

ಮೇಗುತಿ ದೇವಾಲಯ, ಐಹೊಳೆ

ಪ್ರಾಚೀನ ಅಯ್ಯಾವೊಳೆ ಅಥವಾ ಈಗಿನ ಐಹೊಳೆ ಬಿಜಾಪುರ ಜಿಲ್ಲೆಯಲ್ಲಿದೆ. ಇದು ಪ್ರಾಚೀನ ಚಾಳುಕ್ಯರ ಕಾಲದ ವಾಸ್ತುಶಿಲ್ಪ ಕೇಂದ್ರವಾಗಿತ್ತು. ವಾಸ್ತವವಾಗಿ ಐಹೊಳೆ ಪ್ರಾಚೀನ ಚಾಳುಕ್ಯ ದೇವಾಲಯಗಳ ತೊಟ್ಟಿಲು ಎಂದು ಖ್ಯಾತವಾಗಿದೆ. ಒಂದು ನೂರಕ್ಕೂ ಹೆಚ್ಚು ಪ್ರಾಚೀನ ಚಾಳುಕ್ಯ ದೇವಾಲಯಗಳು ಐಹೊಳೆಯಲ್ಲಿ ಕ್ರಿ.ಶ. ಆರು ಮತ್ತು ಏಳನೆಯ ಶತಮಾನಗಳಲ್ಲಿ ನಿರ್ಮಾಣಗೊಂಡವು. ಈ ರೀತಿಯ ದೇವಾಲಯಗಳಲ್ಲಿ ಮೇಗುತಿ ದೇವಾಲಯವೂ ಒಂದು. ಈ ದೇಗುಲವನ್ನು ಬೆಟ್ಟದ ಮೇಲೆ ನಿರ್ಮಿಸಿರುವುದರಿಂದ, ದೂರದಿಂದಲೂ ಎದ್ದು ಕಾಣುತ್ತದೆ. ರವಿಕೀರ್ತಿ ರಚಿಸಿರುವ ಪ್ರಖ್ಯಾತ ಶಾಸನ ಇಲ್ಲಿರುವುದರಿಂದ ಭಾರತೀಯ ಇತಿಹಾಸ ಮತ್ತು ಸಾಹಿತ್ಯ ಚರಿತ್ರೆಯಲ್ಲಿಯೂ ಈ ದೇವಾಲಯಕ್ಕೆ ವಿಶೇಷ ಪ್ರಾಮುಖ್ಯವಿದೆ. ಈ ಶಾಸನವು ಕವಿ ಕಾಳಿದಾಸ ಮತ್ತು ಭಾರವಿಯನ್ನು ಹೆಸರಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. 634-35. ಆದುದರಿಂದ ಈ ಇಬ್ಬರು ಕವಿಗಳ ತೇದಿಯನ್ನು ತಿಳಿಯುವುದಕ್ಕೆ ಈ ಶಾಸನ ವಿಶೇಷವಾಗಿ ಸಹಾಯಕವಾಗಿದೆ. ಆದುದರಿಂದ ಈ ದೇವಾಲಯವನ್ನು ಕ್ರಿ.ಶ. 634-35ರಲ್ಲಿ ನಿರ್ಮಾಣ ಮಾಡಲಾಯಿತೆಂಬುದು ಖಚಿತಗೊಳ್ಳುತ್ತದೆ. ಜೊತೆಗೆ ದೊರೆ ಇಮ್ಮಡಿ ಪುಲಕೇಶಿಯ ವಿಜಯಗಳನ್ನು ಕುರಿತು ಈ ಶಾಸನ ಮಾಹಿತಿ ನೀಡುತ್ತದೆ.

ಇದು ಜೈನ ದೇವಾಲಯ. ಇದು ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಇದು ಉತ್ತರಾಭಿಮುಖವಾಗಿದೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣಪಥ ಮತ್ತು ಮಂಡಪಗಳಿವೆ. ದೇವಾಲಯದ ಹೊರಗಡೆಯ ಕೆಳಭಾಗದಲ್ಲಿ ಅಲಂಕೃತ ದಿಂಡುಗಳಿವೆ. ತೆರೆದ ಮಂಡಪದ ಗೋಡೆಯ ಮೇಲೆ ಚೌಕಾಕಾರದ ಸ್ತಂಭಗಳಿವೆ. ದಿಂಡುಗಳ ಮೇಲೆ ಚೈತ್ಯ ರೀತಿಯ ಗೂಡುಗಳು, ಮಿಥುನ ಶಿಲ್ಪಗಳು, ವಾದ್ಯಗಳನ್ನು ನುಡಿಸುತ್ತಿರುವ ಸಂಗೀತಗಾರರು ಮತ್ತು ಕುಸ್ತಿಪಟುಗಳ ಶಿಲ್ಪಗಳಿವೆ.

ಚೌಕಾಕಾರದ ಗರ್ಭಗುಡಿಯಲ್ಲಿ ಮರದ ಕೆಳಗೆ ಕುಳಿತಿರುವ ತೀರ್ಥಂಕರನ ಶಿಲ್ಪವಿದೆ. ಇದು ಮಹಾವೀರನ ಶಿಲ್ಪವೆಂದು ಕೆಲವರು ಭಾವಿಸುತ್ತಾರೆ. ಅವನ ಎರಡು ಕಡೆಗಳಲ್ಲಿಯೂ ಚಾಮರಧಾರರಿದ್ದಾರೆ. ಈ ಗರ್ಭಗುಡಿಯ ಮೇಲೆ ಇನ್ನೊಂದು ಗರ್ಭಗುಡಿಯಿದೆ. ಸಾಮಾನ್ಯವಾಗಿ ಜೈನ ದೇವಾಲಯಗಳಲ್ಲಿ ಒಂದರ ಮೇಲೆ ಮತ್ತೊಂದರಂತೆ ಎರಡು ಗರ್ಭಗೃಹಗಳು ಇರುವುದು ವಾಡಿಕೆ. ಪಶ್ಚಿಮ ಭಾಗದ ಗೋಡೆಯ ಮೇಲೆ ಒಂದು ಸ್ತ್ರೀ ವಿಗ್ರಹವಿದೆ. ಇದು ಅಂಬಿಕಾ, ಅಥವಾ ಸಿದ್ಧಾಯಿಕಾ ಅಥವಾ ಸುಜಾತ ಎಂದು ಭಾವಿಸಲಾಗಿದೆ. ಈ ಶಿಲ್ಪದ ಎರಡೂ ಕಡೆಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಅದರ ಕೆಳಭಾಗದಲ್ಲಿ ಕಪಿ ಮತ್ತು ಹಂಸಗಳಿವೆ. ಮೇಲು ಅಂತಸ್ತಿನ ಗರ್ಭಗೃಹದ ಮೇಲೆ ಶಿಖರವಿಲ್ಲ. ಅದರ ಗೋಡೆಗಳೂ ಸರಳವಾಗಿದ್ದು ಈಗ ಖಾಲಿಯಾಗಿರುವ ಗೂಡುಗಳಿವೆ.

ಅಲಂಕಾರ ಮತ್ತು ವಿನ್ಯಾಸ ವಿಶೇಷಗಳಿಂದ ಈ ದೇವಾಲಯವು ಹೆಚ್ಚು ಪ್ರಮುಖವಾಗಿಲ್ಲದಿದ್ದರೂ, ಪ್ರಾಚೀನ ಚಾಳುಕ್ಯ ವಾಸ್ತುಶಿಲ್ಪದ ವಿಕಾಸದ ದೃಷ್ಟಿಯಿಂದ ಇದು ಮಹತ್ವ ಪಡೆದಿದೆ; ಏಕೆಂದರೆ ಇದೊಂದು ಕಾಲಮಾನವಿರುವ ದೇವಾಲಯವಾಗಿದೆ. ಇದರ ಕಾಲ ಕ್ರಿ.ಶ. 634-35. ಇದು ಬಾದಾಮಿ ಚಾಳುಕ್ಯರ ತೇದಿಯಿರುವ ಪ್ರಾಚೀನತಮ ದೇವಾಲಯ. ಚಾಳುಕ್ಯ ಶಿಲ್ಪಿಗಳು ಉತ್ತಮ ದೇವಾಲಯವನ್ನು ನಿರ್ಮಾಣ ಮಾಡುವ ಹಂತದಲ್ಲಿ, ಈ ದೇವಾಲಯದ ಪ್ರಯೋಗ ನಡೆಸಿದರು ಎಂಬುದು ಗಮನಾರ್ಹ ವಿಷಯ. ರವಿಕೀರ್ತಿಯ ಶಾಸನದಿಂದಾಗಿ ಈ ದೇವಾಲಯ ಇತರ ದೇವಾಲಯಗಳಿಗಿಂತ ಹೆಚ್ಚು ಪ್ರಖ್ಯಾತವಾಗಿದೆ.

ಲಾಡ್‌ಖಾನ್ ದೇವಾಲಯ, ಐಹೊಳೆ

ತಾಂತ್ರಿಕತೆ ಹಾಗೂ ಚಾಳುಕ್ಯ ವಾಸ್ತುಶಿಲ್ಪ ಶೈಲಿಯ ವಿಕಾಸವನ್ನು ತೋರಿಸುವ ದೃಷ್ಟಿಯಿಂದ, ಲಾಡ್‌ಖಾನ್ ದೇವಾಲಯ ಐಹೊಳೆಯ ದೇಗುಲಗಳಲ್ಲಿ ಪ್ರಮುಖವೆನಿಸಿದೆ. ಈ ದೇವಾಲಯದಲ್ಲಿ ಲಾಡ್‌ಖಾನ್ ಎಂಬುವವನು ವಾಸವಾಗಿದ್ದುದರಿಂದ ಈ ದೇವಾಲಯವನ್ನು ಜನಗಳು ಲಾಡ್‌ಖಾನ್ ದೇವಾಲಯವೆಂದು ಕರೆಯಲು ಆರಂಭಿಸಿದರು. ಹೀಗಾಗಿ ಈ ಹೆಸರು ಈಗಲೂ ಉಳಿದು ಬಂದಿದೆ. ವಿದ್ವಾಂಸರಾದ ಪರ್ಸಿ ಬ್ರೌನ್ ಮುಂತಾದವರು ಈ ದೇವಾಲಯವು ಕ್ರಿ.ಶ. 450ರಲ್ಲಿ ನಿರ್ಮಾಣಗೊಂಡಿತೆಂದೂ, ಇದು ಐಹೊಳೆಯಲ್ಲಿ ಪ್ರಾಚೀನತಮ ದೇಗುಲವೆಂದು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಈ ದೇವಾಲಯ ಅಷ್ಟು ಪ್ರಾಚೀನವಲ್ಲವೆಂದೂ, ಇದರ ನಿರ್ಮಾಣ ಕಾಲ ಕ್ರಿ.ಶ. ಏಳನೆಯ ಶತಮಾನವೆಂದೂ ತಿಳಿದುಬಂದಿದೆ.

ಈ ದೇವಾಲಯವು ವಿಶಿಷ್ಟವಾದ ವಿನ್ಯಾಸವನ್ನು ಹೊಂದಿದ್ದು, ಮೊದಲ ನೋಟಕ್ಕೆ ಇದೊಂದು ದೇವಾಲಯವೆಂದೇ ಭಾಸವಾಗುವುದಿಲ್ಲ. ವಾಸ್ತವವಾಗಿ ಕಂಬಗಳ ಸಾಲುಗಳಿರುವ ಮಂಡಪದಂತೆ ಇದು ಕಾಣಬರುತ್ತದೆ. ಸಭಾಮಂಡಪದ ಹಿಂದಿನ ಗೋಡೆಗೆ ಸೇರಿಕೊಂಡಿರುವಂತೆ ಇದರ ಚೌಕ ಗರ್ಭಗೃಹವಿದೆ. ಅದರ ಮುಂದೆ ಚೌಕಾಕಾರದ ಮುಖಮಂಡಪವಿದೆ. ಆದುದರಿಂದ ಪ್ರದಕ್ಷಿಣ ಪಥಕ್ಕೆ ಅವಕಾಶವಿಲ್ಲ. ಸಭಾಮಂಡಪವನ್ನು ಕಂಬಗಳ ಸಾಲುಗಳಿಂದ ಎರಡು ಸಮಾನಾಂತರ ಭಾಗಗಳಾಗಿ ವಿಭಾಗಿಸಲಾಗಿದೆ.

ಗರ್ಭಗೃಹದಲ್ಲಿ ಶಿವಲಿಂಗವಿರುವುದರಿಂದ ಇದು ಮೂಲತಃ ಶಿವನ ದೇವಾಲಯವಾಗಿದ್ದಿರಬಹುದು. ಆಯತಾಕಾರದ ಮುಂದೆ ಇರುವ ಮಂಡಪವು ಸಣ್ಣದಾಗಿದ್ದು, ಪ್ರವೇಶ ದ್ವಾರವನ್ನು ಹೊಂದಿದೆ. ಇಲ್ಲಿ ಉತ್ತಮವಾಗಿರುವ ಸೂರ್ಯನ ಶಿಲ್ಪವಿರುವುದರಿಂದ ಕೆಲವು ವಿದ್ವಾಂಸರು ಇದು ಸೂರ್ಯದೇವಾಲಯವಿರಬೇಕೆಂದು ಭಾವಿಸುತ್ತಾರೆ. ಆದರೆ ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಮಾನುಷರೂಪದ ಗರುಡನ ಶಿಲ್ಪವಿದೆ.

ದೇವಾಲಯವು ದಿಂಡುಗಳ ಅಧಿಷ್ಠಾನದ ಮೇಲೆ ರಚಿತವಾಗಿದೆ. ಮೇಲಿನ ದಿಂಡು ತುಂಬ ದಪ್ಪವಾಗಿದ್ದು, ದೇವಾಲಯದ ಗೋಡೆಯು ಅದರ ಮೇಲೆ ನಿರ್ಮಾಣಗೊಂಡಿದೆ. ಇದೇ ರೀತಿ ದಿಂಡನ್ನು ಚಾವಣಿಯ ಹಂತದಲ್ಲೂ ನೋಡಬಹುದು. ಆದರೆ ತುಂಬ ಆಸಕ್ತಿಕರವಾದುದು ಚಾವಣಿ. ಹಿಂದಿನ ಭಾಗವು ಚೌಕಾಕಾರದಲ್ಲಿ ಎರಡೂ ಹಂತಗಳಲ್ಲಿದೆ. ಇದು ನಾಲ್ಕು ಕಡೆಗಳಲ್ಲಿ ಇಳಿಜಾರಾಗಿದೆ. ಹಿಂದಿನ ಕಟ್ಟಡಗಳಲ್ಲಿದ್ದ ಮರದ ಜಂತಿಯಂತೆ ಇದರ ಮೇಲೆ ಕಲ್ಲಿನ ತೊಲೆಗಳನ್ನು ಅಳವಡಿಸಲಾಗಿದೆ. ಆಯತಾಕಾರದಲ್ಲಿರುವ ಮುಂದಿರುವ ಮಂಡಪದ ಚಾವಣಿಯೂ ಇದೇ ರೀತಿಯಲ್ಲಿದೆ. ಸಭಾಮಂಡಪದ ಚಾವಣಿಯ ಮೇಲೆ ಇನ್ನೊಂದು ಗರ್ಭಗೃಹವಿದೆ. ಇದು ಪೂರ್ವಾಭಿಮುಖವಾಗಿದ್ದು ಅರೆಗಂಬಗಳು ಮತ್ತು ಕಂಬಗಳಿಂದ ಕೂಡಿದೆ. ಆದರೆ ಮೇಲೆ ಶಿಖರಗಳಿಲ್ಲ. ಈ ಲಕ್ಷಣಗಳಿಂದ ಈ ದೇವಾಲಯ ವೈಶಿಷ್ಟ್ಯಪೂರ್ಣವಾಗಿದೆ.

ದೇವಾಲಯದ ಕಂಬಗಳ ಹಾಗೂ ಕೋಷ್ಠಗಳಲ್ಲಿ ಅನೇಕ ಶಿಲ್ಪಗಳಿವೆ. ಇಲ್ಲಿರುವ ಮಿಥುನ ಶಿಲ್ಪಗಳು ಹಾಗೂ ಜಾಲಂಧ್ರಗಳು ಸುಂದರವಾಗಿವೆ. ಮಂಡಪದ ಚಾವಣಿಯಲ್ಲಿ ಕಮಲಪುಷ್ಪವನ್ನು ಹಿಡಿದುಕೊಂಡಿರುವ ನಾಗ ಶಿಲ್ಪವಿದೆ. ಮೇಲಿರುವ ಗರ್ಭಗೃಹದ ಗೂಡುಗಳಲ್ಲಿ ವಿಷ್ಣು, ಸೂರ್ಯ ಮತ್ತು ಈಶ್ವರನ ಶಿಲ್ಪಗಳಿವೆ. ಈ ಲಕ್ಷಣಗಳನ್ನು ಗಮನಿಸಿದಾಗ ಲಾಡ್‌ಖಾನ್ ದೇವಾಲಯ ಪ್ರಾಚೀನ ಚಾಳುಕ್ಯ ವಾಸ್ತುಶಿಲ್ಪದ ಪ್ರಮುಖ ಘಟ್ಟವೊಂದನ್ನು ಸೂಚಿಸುತ್ತದೆ ಎಂಬುದು ಖಚಿತಗೊಳ್ಳುತ್ತದೆ.

## ದುರ್ಗ ದೇವಾಲಯ, ಐಹೊಳೆ

ಐಹೊಳೆಯಲ್ಲಿರುವ ದೇವಾಲಯಗಳಲ್ಲಿ ದುರ್ಗ ದೇವಾಲಯ ದೊಡ್ಡದು ಮತ್ತು ಹೆಚ್ಚು ಸುಂದರವಾದದ್ದು. ದುರ್ಗ ದೇವಾಲಯ ಎಂಬ ಹೆಸರು ಅದಕ್ಕಿದ್ದರೂ, ದೇವಿ ದುರ್ಗಿಗೂ ಈ ದೇವಾಲಯಕ್ಕೂ ಯಾವ ಸಂಬಂಧವೂ ಇಲ್ಲ. ಇಲ್ಲಿ ದುರ್ಗ ಅಂದರೆ ಕೋಟೆ ಎಂಬ ಅರ್ಥವಿರಬೇಕು. ಉತ್ತರ ದಿಕ್ಕಿನಿಂದ ಐಹೊಳೆಯನ್ನು ಪ್ರವೇಶಿಸಿದರೆ, ಈ ದೇವಾಲಯ ಕೋಟೆಗೆ (ದುರ್ಗಕ್ಕೆ) ಸಮೀಪವಾಗಿರುವುದರಿಂದ, ಜನಗಳು ಇದನ್ನು ದುರ್ಗ ದೇವಾಲಯ ಎಂದು ಕರೆದಿರಬಹುದು.

ಲಾಳಾಕಾರದ ಹಿಂಭಾಗವನ್ನು ಹೊಂದಿರುವುದೇ ಈ ದೇವಾಲಯದ ವೈಶಿಷ್ಟ್ಯ. ಅದೇ ಇದರ ಪ್ರಾಮುಖ್ಯತೆಗೂ ಕಾರಣ. ಸಾಮಾನ್ಯವಾಗಿ ಗಜಪೃಷ್ಠಾಕಾರ ಅಥವಾ ಲಾಳಾಕಾರದ ವಿನ್ಯಾಸ ಕಂಡುಬರುವುದು ಬೌದ್ಧ ದೇವಾಲಯಗಳಲ್ಲಿ. ಆದರೆ ಈ ದೇವಾಲಯವು ಬೌದ್ಧ ಧರ್ಮಕ್ಕೆ ಸಂಬಂಧಿಸಿದ್ದಲ್ಲವಾದರೂ, ಇದರಲ್ಲಿ ಲಾಳಾಕಾರದ ವಿನ್ಯಾಸವಿರುವುದು ಒಂದು ಸೋಜಿಗವೇ ಸರಿ. ಇದಕ್ಕೆ ಕಾರಣವೇನೆಂಬುದನ್ನು ಇತಿಹಾಸಕಾರರು ಸಮರ್ಪಕವಾಗಿ ವಿವರಿಸಿಲ್ಲ. ಬಹುಶಃ ಒಬ್ಬ ವಾಸ್ತುಶಿಲ್ಪಿಯು ಈ ರೀತಿ ಲಾಳಾಕಾರದ ವಿನ್ಯಾಸವನ್ನು ಹಿಂದೂ ದೇವಾಲಯದಲ್ಲಿ ಅಳವಡಿಸುವ ಪ್ರಯೋಗವನ್ನು ನಡೆಸಿರಬಹುದು. ಅದು ಜನಗಳಿಗೆ ಇಷ್ಟವಾಗಲಿಲ್ಲವೆಂದು ತೋರುತ್ತದೆ. ಆದುದರಿಂದ ಈ ರೀತಿಯ ಪ್ರಯತ್ನವನ್ನು ಹೆಚ್ಚಿಗೆ ಮುಂದುವರಿಸಲಿಲ್ಲ. ಐಹೊಳೆ ಸಮೀಪದಲ್ಲೇ ಇರುವ ಚಾಳುಕ್ಯ ವಾಸ್ತುಶಿಲ್ಪಕ್ಕೆ ಹೆಸರಾದ ಮಹಾಕೂಟದಲ್ಲಿ ಈ ರೀತಿಯ ಲಾಳಾಕಾರದ ಒಂದು ದೇವಾಲಯವಿದೆ.

ಈ ದೇವಾಲಯದಲ್ಲಿ ಲಾಳಾಕಾರದ ಗರ್ಭಗೃಹ, ಸಭಾಮಂಡಪ, ಮಂಡಪ ಮತ್ತು ಮುಖ ಮಂಡಪಗಳಿವೆ. ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ಅಧಿಷ್ಠಾನದಲ್ಲಿ ಆರು ದಿಂಡುಗಳಿವೆ. ಮಂಡಪದ ಉತ್ತರ ಮತ್ತು ದಕ್ಷಿಣಗಳಲ್ಲಿ ದೇವಾಲಯ ಪ್ರವೇಶಿಸಲು ಮೆಟ್ಟಿಲುಗಳಿವೆ. ಕೆಳಗಿನ ಗೋಡೆಯ ಮೇಲೆ ಸುತ್ತಲೂ ಕಟ್ಟಡದ ಪೂರ್ತಿ ಚೌಕಾಕಾರದ ಕಂಬಗಳಿವೆ. ಇದರಿಂದಾಗಿ ಎರಡು ಪ್ರದಕ್ಷಿಣ ಪಥಗಳು ಕಾಣಬರುತ್ತವೆ. ಇದೊಂದು ವೈಶಿಷ್ಟ್ಯ. ಉದ್ದವಾಗಿರುವ ಸಭಾಮಂಡಪವು ಕಂಬಗಳಿಂದ ಮೂರು ಭಾಗಗಳಾಗಿ ವಿಭಾಗಿತವಾಗಿದೆ. ಇಲ್ಲಿರುವ ಹೆಚ್ಚಿನ ಸಂಖ್ಯೆಯ ಕಂಬಗಳನ್ನು ಕಲಾಕಾರನು ಪೌರಾಣಿಕ ಕಥೆಗಳು ಹಾಗೂ ಇತರ ಶಿಲ್ಪಗಳನ್ನು ಕೆತ್ತಲು ಬಳಸಿಕೊಂಡಿದ್ದಾನೆ. ಈ ಶಿಲ್ಪಗಳು ಉತ್ತಮವಾಗಿದ್ದು ದೇವಾಲಯದ ಸೌಂದರ್ಯಕ್ಕೆ ಕಾರಣವಾಗಿವೆ.

ಮುಖಮಂಡಪದ ಕಂಬಗಳ ಮೇಲೆ ಶೃಂಗಾರದ ಭಂಗಿಗಳಲ್ಲಿರುವ ಮಿಥುನ ಶಿಲ್ಪಗಳಿವೆ. ಇನ್ನೊಂದು ಕಂಬದ ಮೇಲೆ ಅಪಸ್ಮಾರನ ಮೇಲೆ ನೃತ್ಯಮಾಡುತ್ತಿರುವ ಶಿವ ಶಿಲ್ಪವಿದೆ. ಮುಖಮಂಡಪದ ಒಳಗಿನ ಗೋಡೆಯಲ್ಲಿ ರಾಮಾಯಣ ಕಥೆ, ಅರ್ಧನಾರೀಶ್ವರ, ಹಿರಣ್ಯಕಶಿಪುವನ್ನು ಕೊಲ್ಲುತ್ತಿರುವ ಉಗ್ರ ನರಸಿಂಹ ಮುಂತಾದ ಶಿಲ್ಪಗಳಿವೆ. ಮಂಡಪದ ದ್ವಾರಬಂಧವೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ದ್ವಾರಪಾಲಕ ವಿಗ್ರಹಗಳು, ಗಂಗಾ, ಯಮುನಾ ಮತ್ತು ಇತರ ಶಿಲ್ಪಗಳಿವೆ. ದುರದೃಷ್ಟದ ಸಂಗತಿಯೆಂದರೆ ಈ ದೇವಾಲಯದ ಕಾಲವನ್ನು ತಿಳಿಯಲು ಸಹಾಯಕವಾಗುವ ಯಾವ ಶಾಸನವೂ ಇಲ್ಲಿ ದೊರಕಿಲ್ಲ. ಅನೇಕ ವಿದ್ವಾಂಸರು ಇದರ ಕಾಲ ಕ್ರಿ.ಶ. 600 ಎಂದು ಭಾವಿಸಿದರೆ, ಮತ್ತೆ ಕೆಲವರು ಇದು ಕ್ರಿ.ಶ. ಏಳನೆಯ ಶತಮಾನದ ಉತ್ತರಾರ್ಧದ್ದೆಂದು ಅಭಿಪ್ರಾಯಪಡುತ್ತಾರೆ.

ಮಾಲೆಗಿತ್ತಿ ಶಿವಾಲಯ, ಬಾದಾಮಿ

ಬಾದಾಮಿ (ಸಂಸ್ಕೃತ ರೂಪ ವಾತಾಪಿ) ಪ್ರಾಚೀನ ಚಾಳುಕ್ಯರ ರಾಜಧಾನಿಯಾಗಿತ್ತು. ಈ ವಂಶದ ಪ್ರಾಚೀನ ದೊರೆಗಳಲ್ಲಿ ಒಬ್ಬನಾದ ಮೊದಲನೆಯ ಪುಲಕೇಶಿಯು ಬಾದಾಮಿಯಲ್ಲಿ ಕ್ರಿ.ಶ. 547ರಲ್ಲಿ ಒಂದು ಬಲವಾದ ಕೋಟೆಯನ್ನು ನಿರ್ಮಿಸಿ, ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಆನಂತರ ಇಲ್ಲಿ ಆಳಿದ ರಾಜರು ಸುಮಾರು ಮುನ್ನೂರು ವರ್ಷಗಳ ಕಾಲ ಕಲ್ಲಿನಲ್ಲಿ ಕೊರೆದ ಗುಹಾಲಯಗಳು ಮತ್ತು ಕಟ್ಟಿದ ದೇವಾಲಯಗಳನ್ನು ನಿರ್ಮಿಸಿದರು. ಇದರಿಂದಾಗಿ ಬಾದಾಮಿಯು ಕರ್ನಾಟಕ ವಾಸ್ತುಶಿಲ್ಪ ಕಲೆಯ ಖ್ಯಾತ ಕೇಂದ್ರವಾಯಿತು.

ಬಾದಾಮಿಯಲ್ಲಿ ಅನೇಕ ದೇವಾಲಯಗಳಿದ್ದು, ಅವುಗಳಲ್ಲಿ ಮಾಲೆಗಿತ್ತಿ ಶಿವಾಲಯ ಹಲವು ಕಾರಣಗಳಿಂದಾಗಿ ಪ್ರಸಿದ್ಧಿ ಪಡೆದಿದೆ. ಒಬ್ಬ ಹೂವು ಮಾರುವ ಹೆಂಗಸಿನ ದೆಸೆಯಿಂದಾಗಿ ಈ ದೇವಾಲಯಕ್ಕೆ ಮಾಲೆಗಿತ್ತಿ ಶಿವಾಲಯ ಎಂಬ ಹೆಸರು ಬಂದಿರಬೇಕು. ಈ ದೇವಾಲಯವನ್ನು ನಿರ್ಮಿಸಿರುವ ಸ್ಥಳವೇ ರಮಣೀಯವಾಗಿದೆ. ಬಾದಾಮಿ ಊರನ್ನೇ ವೀಕ್ಷಿಸುತ್ತಿರುವ ಏರುಪೇರಿನ ಬೆಟ್ಟ ಚಾಚುವಿನಲ್ಲಿ ಈ ದೇವಾಲಯ ನಿರ್ಮಾಣಗೊಂಡಿದೆ. ಬಾದಾಮಿ ಚಾಳುಕ್ಯ ವಾಸ್ತುಶಿಲ್ಪ ಶೈಲಿಯ ವಿಕಾಸದ ದೃಷ್ಟಿಯಿಂದ ಮಾಲೆಗಿತ್ತಿ ಶಿವಾಲಯ ಪ್ರಮುಖವಾದದ್ದು. ಈ ಶೈಲಿಯ ಒಂದು ಹಂತವನ್ನು ಇದು ನಿರೂಪಿಸುತ್ತದೆ. ಅಷ್ಟಕೋನಾಕಾರದ ಶಿಖರ ಹಾಗೂ ಸಣ್ಣ ಗುಡಿಗಳಿರುವ ದೇವಾಲಯಕ್ಕೆ ಇದೊಂದು ಉತ್ತಮ ಉದಾಹರಣೆ. ಇದೊಂದು ವಿಶಾಲವಾದ ದೇವಾಲಯವೇನೂ ಅಲ್ಲ. ಆದರೆ ಕಾಲದಿಂದ ಉಂಟಾಗುವ ಅಪಾಯಗಳನ್ನು ಎದುರಿಸುವಂತಹ ಮಜಬೂತಾದ ಕಟ್ಟಡ. ಇದರಲ್ಲಿ ವಿಶೇಷವಾಗಿ ಸಂಸ್ಕರಿಸಿದ ಭಾಗಗಳಿಲ್ಲದಿದ್ದರೂ, ಇದಕ್ಕೆ ತನ್ನದೇ ಆದ ಭವ್ಯತೆಯಿದೆ.

ಈ ದೇವಾಲಯದಲ್ಲಿ ಗರ್ಭಗೃಹ, ಸಭಾಮಂಡಪ ಮತ್ತು ಮುಖಮಂಡಪಗಳಿವೆ. ಅಧಿಷ್ಠಾನದಲ್ಲಿ ಅನೇಕ ದಿಂಡುಗಳಿವೆ. ಅವುಗಳಲ್ಲಿ ಒಂದು ತುಂಬ ದಪ್ಪನಾಗಿದ್ದು ಅವುಗಳ ಮೇಲೆ ಗಣಗಳ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಗೋಡೆಯ ಮೇಲೆ ಸಮಾನಾಂತರದಲ್ಲಿ ಅರೆಗಂಬಗಳಿವೆ. ಸಭಾಮಂಡಪದ ಕೋಷ್ಠ ಒಂದರಲ್ಲಿ ವಿಷ್ಣುವಿನ ಶಿಲ್ಪವಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಮೇಲ್ಭಾಗದಲ್ಲಿ ಮುಂಜೂರು ಇದ್ದು ಅದರ ಮೇಲೆ ಮತ್ತೆ ಕೆಲವು ದಿಂಡುಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ರೀತಿಯ ಶಿಖರವಿದೆ. ಇದು ಸಣ್ಣ ಪ್ರಮಾಣದಲ್ಲಿದ್ದು ಅಂದವಾಗಿ ಕಾಣುತ್ತದೆ. ಮುಖಮಂಡಪದಲ್ಲಿ ನಾಲ್ಕು ಕಂಬಗಳಿದ್ದು, ಚಾವಣಿಗೆ ಆಸರೆಯಾಗಿವೆ. ಇಲ್ಲಿರುವ ಎರಡು ದ್ವಾರಪಾಲ ಶಿಲ್ಪಗಳು ಕಲಾತ್ಮಕವಾಗಿದ್ದು ಸುಂದರ ಮುಖಭಾವ ಹಾಗೂ ಚಟುವಟಿಕೆಯ ಭಂಗಿಯಲ್ಲಿವೆ.

ದಕ್ಷಿಣ ಭಾಗದ ಗೋಡೆಯಲ್ಲಿ ತ್ರಿಶೂಲ ಮತ್ತು ಸರ್ಪವನ್ನು ಹಿಡಿದಿರುವ ಶಿವನ ಶಿಲ್ಪವಿದೆ. ಸಭಾಮಂಡಪದ ಒಳಗಿನ ಚಾವಣಿಯಲ್ಲಿ ಕಮಲ ವಿನ್ಯಾಸದಲ್ಲಿ ಗರುಡನ ಮೇಲೆ ಕುಳಿತಿರುವ ವಿಷ್ಣುವಿನ ಶಿಲ್ಪವಿದೆ. ಗರ್ಭಗೃಹದ ದ್ವಾರಬಂಧ ವಿಶೇಷವಾಗಿ ಅಲಂಕೃತವಾಗಿದ್ದು ಅದರ ಮೇಲೆ ಲತೆ, ಪುಷ್ಪ, ಅರೆಗಂಬ ವಿನ್ಯಾಸಗಳು, ನಾಗ, ಮಿಥುನ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ನಟರಾಜನ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇಲ್ಲಿನ ಒಂದು ಶಾಸನದ ಪ್ರಕಾರ ಆರ್ಯಮಿಂಚಿ ಉಪಾಧ್ಯಾಯನು ಈ ದೇವಾಲಯದ ಶಿಲ್ಪಿ. ಶೈಲಿಯ ಆಧಾರದ ಮೇಲೆ ಈ ದೇವಾಲಯ ಕ್ರಿ.ಶ. ಏಳನೆಯ ಶತಮಾನದ ಕೃತಿ ಎಂದು ಹೇಳಬಹುದು.

## ದೇವಾಲಯಗಳ ಸಮುಚ್ಚಯ, ಪಟ್ಟದಕಲ್ಲು

ಹನ್ನೊಂದು ಶತಮಾನಗಳ ಹಿಂದೆ, ಬಾದಾಮಿ ಚಾಳುಕ್ಯರ ಕಾಲದಲ್ಲಿ ಪಟ್ಟದಕಲ್ಲು ರಾಜಕೀಯ ಮತ್ತು ಕಲಾಚಟುವಟಿಕೆಗಳಿಂದ ಪುಟಿಯುತ್ತಿದ್ದ ನಗರವಾಗಿತ್ತು. ಮಲಪ್ರಭಾ ನದಿಯ ಎಡ ದಂಡೆಯ ಮೇಲಿದ್ದು, ಮರಳುಗಲ್ಲಿನ ಬೆಟ್ಟಗಳಿಂದ ಆವೃತವಾಗಿದ್ದು, ಪ್ರಾಕೃತಿಕ ಸೌಂದರ್ಯದ ನೆಲೆಯಾಗಿದ್ದ ಈ ಸುಂದರ ಪವಿತ್ರ ತಾಣ ಸ್ವಾಭಾವಿಕವಾಗಿ ರಾಜರ ಪಟ್ಟಾಭಿಷೇಕಕ್ಕೆ ಯೋಗ್ಯವಾದ ಸ್ಥಳವೆನಿಸಿತ್ತು. ಆದುದರಿಂದಲೇ ಇದಕ್ಕೆ ಪಟ್ಟದಕಲ್ಲು ಎನ್ನುವ ಹೆಸರು ಬಂದಿತ್ತು. ಇದಕ್ಕೆ ಕಿಸುವೊಳಲು ಎನ್ನುವ ಹೆಸರೂ ಇದ್ದು ಅದನ್ನು ಸಂಸ್ಕೃತದಲ್ಲಿ ರಕ್ತಪುರ ಎಂದು ಕರೆಯುತ್ತಿದ್ದರು.

ಐಹೊಳೆಯ ಮತ್ತು ಬಾದಾಮಿಯ ಜೊತೆಯಲ್ಲಿ ಪಟ್ಟದಕಲ್ಲು ಪ್ರಾಚೀನ ಚಾಳುಕ್ಯ ವಾಸ್ತುಶಿಲ್ಪದ ತೊಟ್ಟಿಲು ಎಂದೆನಿಸಿದೆ. ಶಿಲ್ಪಶಾಸ್ತ್ರ ಗ್ರಂಥಗಳು ವಾಸ್ತುಶಿಲ್ಪ ಶೈಲಿಗಳನ್ನು ಪ್ರಮಾಣಭೂತವಾಗಿ ಮಾಡುವುದಕ್ಕೆ ಮುಂಚೆ, ಚಾಳುಕ್ಯ ವಾಸ್ತುಶಿಲ್ಪಿಗಳು ಅವುಗಳನ್ನು ಕುರಿತು ಪ್ರಯೋಗಗಳನ್ನು ನಡೆಸಿದರೆಂದು ಭಾವಿಸಲಾಗಿದೆ. ಆದುದರಿಂದ ವಿದ್ವಾಂಸರು ಈ ಸ್ಥಳಗಳನ್ನು ವಾಸ್ತು ಪ್ರಯೋಗಶಾಲೆ ಎಂದು ಕರೆಯುತ್ತಾರೆ. ವಾಸ್ತವವಾಗಿ ಪಟ್ಟದಕಲ್ಲು ಪ್ರಾಚೀನ ವಾಸ್ತುಶಿಲ್ಪದ ಕೊನೆಯ ಹಂತವನ್ನು ಸೂಚಿಸುತ್ತದೆ. ಈ ಶೈಲಿಗೆ ಸೇರಿದ ಮುಖ್ಯವಾದ ಹನ್ನೆರಡು ದೇವಾಲಯಗಳು ಪಟ್ಟದಕಲ್ಲಿನಲ್ಲಿವೆ. ಪ್ರಾಚೀನ ಚಾಳುಕ್ಯ ದೊರೆಗಳ ಕಾಲದಲ್ಲಿ ದ್ರಾವಿಡ ಹಾಗೂ ನಾಗರ ಶೈಲಿಯ ದೇವಾಲಯಗಳು ಪಟ್ಟದಕಲ್ಲಿನಲ್ಲಿ ನಿರ್ಮಾಣಗೊಂಡವು.

ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ ಹಾಗೂ ಜೈನ ದೇವಾಲಯಗಳು ದ್ರಾವಿಡ ಶೈಲಿಯ ದೇಗುಲಗಳು; ಗಳಗನಾಥ, ಪಾಪನಾಥ, ಕಾಶಿ ವಿಶ್ವೇಶ್ವರ, ಕಾಡಸಿದ್ದೇಶ್ವರ ಮತ್ತು ಜಂಬುಲಿಂಗ ದೇವಾಲಯಗಳು ನಾಗರ ಅಥವಾ ಉತ್ತರ ಭಾರತ ವಾಸ್ತುಶೈಲಿಗೆ ಸೇರಿದವುಗಳು. ಖಚಿತವಾಗಿ ಕಾಲ ನಿರ್ಧಾರವಾಗಿರುವ ದೇವಾಲಯಗಳನ್ನು ಆಧರಿಸಿ ಹೇಳುವುದಾದರೆ, ಈ ದೇವಾಲಯ ನಿರ್ಮಾಣ ಕಾರ್ಯ ಪಟ್ಟದಕಲ್ಲಿನಲ್ಲಿ ಕ್ರಿ.ಶ. ಏಳನೆಯ ಶತಮಾನದಿಂದ ಆರಂಭವಾಗಿ ಕ್ರಿ.ಶ. ಒಂಬತ್ತನೆಯ ಶತಮಾನದ ಮಧ್ಯಭಾಗದವರೆಗೆ ಮುಂದುವರಿದಿದ್ದಿತು. ಈ ರೀತಿ ಮುನ್ನೂರು ವರ್ಷಗಳ ಕಾಲ ವಾಸ್ತುಶಿಲ್ಪದ ವಿಕಾಸವು ಕರ್ನಾಟಕದಲ್ಲಿ ಮತ್ತು ವಿಶೇಷವಾಗಿ ಪಟ್ಟದಕಲ್ಲಿನಲ್ಲಿ ನಡೆಯಿತು. ಇದರಲ್ಲಿ ಖ್ಯಾತ ವಾಸ್ತುಶಿಲ್ಪಿಗಳಾದ ರೇವಡಿ ಓವಜ್ಜ, ಅನಿವಾರಿತ ಗುಂಡ ಮತ್ತು ಅವರಿಗೆ ಸಹಾಯಕರಾಗಿ ಚಂಗಮ್ಮ, ಪುಲ್ಲಪ್ಪನ್, ಬಲದೇವ ಮತ್ತು ಇತರರು ಕಾರ್ಯ ನಿರ್ವಹಿಸಿದ್ದರು. ಇದಕ್ಕೆ ಪ್ರಸಿದ್ಧ ನೃತ್ಯಗುರು ಅಚಲನ್, ದೇವದಾಸಿ ಚಲಬ್ಬೆ ಮುಂತಾದವರ ಮಾರ್ಗದರ್ಶನವೂ ದೊರಕಿತ್ತು. ಇವೆಲ್ಲವುಗಳಿಗಿಂತ ಮಿಗಿಲಾಗಿ ಪ್ರಾಚೀನ ಚಾಳುಕ್ಯ ದೊರೆಗಳು, ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯಂತಹ ರಾಣಿಯರು, ಅಧಿಕಾರಿಗಳು, ಮಂತ್ರಿಗಳು ಮುಂತಾದವರು ಈ ದೇವಾಲಯಗಳನ್ನು ನಿರ್ಮಾಣ ಮಾಡಿದ್ದುದಲ್ಲದೆ ಭೂದಾನ ಮತ್ತು ಧನದಾನಗಳನ್ನು ಮಾಡಿ, ಇವುಗಳ ಸಂರಕ್ಷಣೆ ಮತ್ತು ಪೂಜಾಕೈಂಕರ್ಯಗಳಿಗೆ ಅನುವು ಮಾಡಿಕೊಟ್ಟಿದ್ದರು. ಇಂತಹ ಸುಂದರವಾದ ದೇವಾಲಯಗಳನ್ನು ಸಂದರ್ಶಿಸಲು ಭಾರತೀಯರು ಹಾಗೂ ವಿದೇಶೀಯರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ನಮ್ಮ ಕಲೆಯ ಸೌಂದರ್ಯವನ್ನು ಸವಿಯುವುದು ಸ್ವಾಭಾವಿಕವಾಗಿಯೇ ಇದೆ. ಆದುದರಿಂದ ಯುನೆಸ್ಕೋ ಪಟ್ಟದಕಲ್ಲನ್ನು ವಿಶ್ವಪಾರಂಪರಿಕ ನೆಲೆ ಎಂಬುದಾಗಿ ಗುರುತಿಸಿದೆ. ನಿಜವಾಗಿಯೂ ಕರ್ನಾಟಕಕ್ಕೆ ಇದೊಂದು ಹೆಮ್ಮೆ ಮತ್ತು ಗೌರವ.

## ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ಸಂಗಮೇಶ್ವರ ದೇವಾಲಯ ಪಟ್ಟದಕಲ್ಲಿನಲ್ಲಿರುವ ಮತ್ತೊಂದು ದ್ರಾವಿಡ ಶೈಲಿಯ ದೇಗುಲ. ಚಾಳುಕ್ಯ ದೊರೆ ವಿಜಯಾದಿತ್ಯನು (ಕ್ರಿ.ಶ. 693-733) ಈ ದೇಗುಲವನ್ನು ನಿರ್ಮಿಸಿ ಇದರಲ್ಲಿ ವಿಜಯೇಶ್ವರ ಶಿವಲಿಂಗವನ್ನು ಸ್ಥಾಪಿಸಿದನು. ಆದರೆ ಇಂದು ಇದನ್ನು ಸಂಗಮೇಶ್ವರ ಎಂದು ಕರೆಯಲಾಗಿದೆ. ದುರದೃಷ್ಟವಶಾತ್ ಈ ದೇವಾಲಯದ ಕೆಲವು ಭಾಗಗಳು, ವಿಶೇಷವಾಗಿ ಮಂಡಪದ ದಕ್ಷಿಣ ಭಾಗವೂ ಸೇರಿದಂತೆ ಬಿದ್ದುಹೋಗಿವೆ.

ಈ ದೇವಾಲಯದಲ್ಲಿ ಗರ್ಭಗೃಹ, ಎರಡು ಸಣ್ಣ ಗುಡಿಗಳು, ಅಂತರಾಳ ಮತ್ತು ತೆರೆದ ಮಂಡಪಗಳಿವೆ. ಅಧಿಷ್ಠಾನದಲ್ಲಿ ಅಲಂಕೃತ ದಿಂಡುಗಳಿವೆ. ಗರ್ಭಗೃಹದ ಮೇಲೆ ಎರಡು ತಲದ ವಿಮಾನ, ಚೌಕವಾದ ಸ್ತೂಪಿ ಮತ್ತು ಕಲಶಗಳಿವೆ. ಗರ್ಭಗೃಹದ ಹೊರಗೋಡೆಯ ಮೇಲೆ ಸಮಾನಾಂತರದಲ್ಲಿ ಅರೆಗಂಬಗಳು, ಸೂಕ್ಷ್ಮ ಶಿಖರಗಳು ಮತ್ತು ಇತರ ಅಲಂಕಾರ ವಿನ್ಯಾಸಗಳಿವೆ. ಇಲ್ಲಿ ಸುಂದರವಾದ ವಿಷ್ಣು, ವರಾಹ, ಗಜಾಸುರ ಸಂಹಾರ, ನಂದಿಸಹಿತ ಶಿವ, ಭೃಂಗಿಯೊಡನಿರುವ ಶಿವ, ನಟರಾಜ, ಉಗ್ರ ನರಸಿಂಹ, ವಿಷ್ಣು ಮುಂತಾದ ಶಿಲ್ಪಗಳಿವೆ. ಇವುಗಳಲ್ಲಿ ಕೆಲವು ಅಪೂರ್ಣವಾಗಿವೆ.

ಮಂಡಪದಲ್ಲಿ ಒಂಬತ್ತು ಅಡಿ ಎತ್ತರದ ಚೌಕಾಕಾರದ ಕಂಬಗಳಿವೆ. ಇವುಗಳಿಗೆ ಪೀಠಗಳು ಇಲ್ಲದಿರುವುದರಿಂದ, ನೆಲದಿಂದಲೇ ಕಂಬಗಳು ಮೇಲೆದ್ದಿರುವಂತೆ ಕಾಣಬರುತ್ತದೆ. ಇದು ಆಕರ್ಷಕವಾಗಿ ಕಾಣಬರುತ್ತದೆ.

ಪ್ರಧಾನ ಗರ್ಭಗೃಹವು ಚೌಕಾಕಾರದಲ್ಲಿದ್ದು, ಅದರ ಮುಂದಿರುವ ಅಂತರಾಳವೂ ಸೇರಿದಂತೆ ಪ್ರದಕ್ಷಿಣ ಪಥವಿದೆ. ಈಗ ಸಂಗಮೇಶ್ವರ ಎಂದು ಕರೆಯಲಾಗುವ ಕರಿಕಲ್ಲಿನ ಶಿವಲಿಂಗವು ಗರ್ಭಗೃಹದಲ್ಲಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಗಂಗಾ, ಯಮುನಾ ಶಿಲ್ಪಗಳು ಹಾಗೂ ನಂದಿ, ವೀರಭದ್ರ, ದ್ವಾರಪಾಲರಿದ್ದಾರೆ. ಪ್ರದಕ್ಷಿಣ ಪಥದ ಗೋಡೆಯಲ್ಲಿ ಜಾಲಂಧ್ರಗಳಿದ್ದು ಸಾಕಷ್ಟು ಗಾಳಿ, ಮತ್ತು ಬೆಳಕು ಒಳಕ್ಕೆ ಬರುವಂತೆ ಮಾಡಿವೆ. ಪ್ರಧಾನ ಗರ್ಭಗೃಹಕ್ಕೆ ಹೊಂದಿಕೊಂಡ ಎರಡು ಗುಡಿಗಳಿವೆ. ಈಗ ಇವುಗಳಲ್ಲಿ ದೇವತಾಮೂರ್ತಿಗಳಿಲ್ಲ. ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯಗಳಲ್ಲಿರುವಂತೆ, ಈ ದೇವಾಲಯದ ಕಂಬಗಳು ಅಲಂಕಾರಯುತವಾಗಿಲ್ಲ. ಇಲ್ಲಿನ ಕಂಬಗಳ ಮೇಲಿರುವ ಶಾಸನಗಳು ಗಮನಾರ್ಹವಾದವು. ಚಾವಣಿಯ ಹಂತದಲ್ಲಿ ಮೂಲೆಗಳಲ್ಲಿ ದೇವಾಲಯದ ಭಾರವನ್ನು ಹೊತ್ತಿರುವಂತೆ ಕಾಣಬರುವ ಕುಬ್ಜ ದೇವಗಣಗಳ ಶಿಲ್ಪಗಳನ್ನು ಕೆತ್ತಲಾಗಿದೆ.

ಇತರ ಶಿಲ್ಪಗಳಾದ ನಂದಿಯೊಡನೆ ಇರುವ ಶಿವ, ಭೃಂಗಿಯ ಜೊತೆ ಇರುವ ಶಿವ, ಗಜಸಂಹಾರಮೂರ್ತಿ ಮುಂತಾದವು ಉತ್ತಮ ಶಿಲ್ಪಗಳಿಗೆ ಉದಾಹರಣೆಗಳು. ಭಾಗಶಃ ಈ ದೇವಾಲಯವು ಹಾಳಾಗಿದ್ದರೂ, ಒಟ್ಟನಲ್ಲಿ ನೋಡಿದಾಗ ಸುಂದರವಾದ ಚಾಳುಕ್ಯ ದೇವಾಲಯವೆನಿಸುತ್ತದೆ.

ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಬಾದಾಮಿ ಚಾಳುಕ್ಯರ ಕಾಲದ ದೇವಾಲಯಗಳ ತೊಟ್ಟಿಲು ಎಂದು ಖ್ಯಾತವಾಗಿರುವ ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯ ಹೆಚ್ಚು ಪ್ರಮುಖವಾದ ದೇವಾಲಯಗಳಲ್ಲಿ ಗಮನಾರ್ಹವಾದುದು. ಇಲ್ಲಿ ದೊರಕಿರುವ ಶಾಸನದ ಪ್ರಕಾರ, ಈ ದೇವಾಲಯದ ಮೂಲ ಹೆಸರು ಲೋಕೇಶ್ವರ. ಚಾಳುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯನಿಗೆ ಲೋಕಮಹಾದೇವಿ ಎಂಬ ರಾಣಿಯಿದ್ದಳು. ತನ್ನ ಗಂಡ ಇಮ್ಮಡಿ ವಿಕ್ರಮಾದಿತ್ಯನು ಕಾಂಚಿಯ ಪಲ್ಲವರ ಮೇಲೆ ಮೂರು ಸಾರಿ ವಿಜಯವನ್ನು ಸಂಪಾದಿಸಿದುದರ ನೆನಪಿಗಾಗಿ ಈ ದೇವಾಲಯವನ್ನು ನಿರ್ಮಿಸಿದಳು. ಚಾಳುಕ್ಯ ದೊರೆಯು ಪಲ್ಲವ ರಾಜ್ಯದಿಂದ ವಾಸ್ತುಶಿಲ್ಪಿಗಳನ್ನು ಕರೆದುಕೊಂಡು ಬಂದು ಅವರಿಂದ ಈ ದೇವಾಲಯವನ್ನು ನಿರ್ಮಾಣ ಮಾಡಿಸಿದನು. ಆದುದರಿಂದ ಇದರಲ್ಲಿ ದ್ರಾವಿಡ ಲಕ್ಷಣಗಳಿವೆ. ಅನಿವಾರಿತ ಗುಂಡ ಎನ್ನುವ ವಾಸ್ತುಶಿಲ್ಪಿಯು ಈ ದೇವಾಲಯವನ್ನು ಸಂಯೋಜಿಸಿದನು. ಇದರಲ್ಲಿ ದ್ರಾವಿಡ ಲಕ್ಷಣಗಳ ಜೊತೆಗೆ ಸ್ಥಳೀಯ ಲಕ್ಷಣಗಳೂ ಸೇರಿಕೊಂಡಿವೆ. ಬಹುಶಃ ಈ ದೇವಾಲಯ ಸುಮಾರು ಕ್ರಿ.ಶ. 740ರಲ್ಲಿ ರಚಿತವಾಗಿರಬಹುದೆಂದು ತೋರುತ್ತದೆ.

ಇದು ದೊಡ್ಡ ದೇವಾಲಯವಾಗಿದ್ದು 224 ಅಡಿ ಉದ್ದ ಮತ್ತು 105 ಅಡಿ ಅಗಲದ ಪ್ರಾಕಾರದಲ್ಲಿದೆ. ಇದರಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥ, ಮಹಾಮಂಡಪ, ಮುಖಮಂಡಪ ಮತ್ತು ಪ್ರತ್ಯೇಕವಾದ ನಂದಿಮಂಡಪವಿದೆ. ಗರ್ಭಗುಡಿಯ ಮೇಲೆ ಮೂರು ತಲದ ದ್ರಾವಿಡ ವಿಮಾನವಿದೆ. ಚೌಕವಾದ ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಕರಿಯಕಲ್ಲಿನ ಶಿವಲಿಂಗವಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣ ಪಥವಿದೆ.

ವಿಶಾಲವಾದ ಮುಖ ಮಂಡಪದಲ್ಲಿ ಹದಿನೆಂಟು ಕಂಬಗಳಿದ್ದು, ಇಡೀ ಚಾವಣಿಯನ್ನು ಹೊತ್ತುಕೊಂಡಿರುವಂತೆ ಕಾಣಬರುತ್ತವೆ. ಅದರಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಗೆ ಸಂಬಂಧಿಸಿದ ಶಿಲ್ಪಗಳಿವೆ. ಇಲ್ಲಿರುವ ದ್ವಾರಪಾಲರು, ಶಂಖನಿಧಿ ಮತ್ತು ಪದ್ಮನಿಧಿ, ಉಷಾ ಮತ್ತು ಪ್ರತ್ಯೂಷಾ ಸಹಿತ ಸೂರ್ಯನ ಶಿಲ್ಪ ಸುಂದರವಾಗಿವೆ. ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ನರಸಿಂಹ, ಕೈಲಾಸವನ್ನು ಮೇಲೆತ್ತುತ್ತಿರುವ ರಾವಣ, ಗಜೇಂದ್ರ ಮೋಕ್ಷ ಮುಂತಾದ ಶಿಲ್ಪಗಳು ಗಮನಾರ್ಹವಾದವು. ಬಾಗಿಲುವಾಡಗಳಲ್ಲಿ ನವಿರಾಗಿ ಕೊರೆದಿರುವ ಲತೆಗಳು ಮತ್ತು ಗಂಗಾಯಮುನೆಯವರ ಶಿಲ್ಪಗಳಿವೆ. ಈ ದೇವಾಲಯದ ಇನ್ನೊಂದು ಆಕರ್ಷಣೆಯೆಂದರೆ ಶೃಂಗಾರ ಭಂಗಿಯಲ್ಲಿರುವ ಅನೇಕ ದಂಪತಿಗಳ ಶಿಲ್ಪಗಳು. ಇವುಗಳಲ್ಲಿ ಕೆಲವು ಚಾಳುಕ್ಯ ಶಿಲ್ಪಶೈಲಿಗೆ ಉತ್ತಮ ಉದಾಹರಣೆಗಳು. ಅತಿರೇಕವಿಲ್ಲದ, ಹಿತಮಿತವಾದ ರೀತಿಯಲ್ಲಿ ವಾಸ್ತು ಮತ್ತು ಶಿಲ್ಪಗಳು ಇಲ್ಲಿ ಮಿಳಿತವಾಗಿರುವುದು ಈ ದೇವಾಲಯದ ಹೆಚ್ಚಳ.

ಕಾಂಚಿಯ ಕೈಲಾಸನಾಥ ದೇವಾಲಯದ ಮಾದರಿಯಲ್ಲಿ ಈ ದೇವಾಲಯ ರಚಿತವಾಗಿದೆ ಎಂಬುದು ವಿದ್ವಾಂಸರ ಮತ. ಎಲ್ಲೋರದಲ್ಲಿರುವ ಕೈಲಾಸ ದೇವಾಲಯಕ್ಕೆ ಇದು ಮಾದರಿಯನ್ನು ಒದಗಿಸಿಕೊಟ್ಟಿತು ಎಂದು ನಂಬಲಾಗಿದೆ. ಇದೇ ಈ ದೇವಾಲಯದ ವೈಶಿಷ್ಟ್ಯ.

## ಪಾಪನಾಥ ದೇವಾಲಯ, ಪಟ್ಟದಕಲ್ಲು

ಪಟ್ಟದಕಲ್ಲಿನಲ್ಲಿರುವ ಇನ್ನೊಂದು ವಿಶಾಲವಾದ ದೇವಾಲಯವೇ ಪಾಪನಾಥ ದೇಗುಲ. ದಕ್ಷಿಣ ಭಾರತ ಮತ್ತು ಉತ್ತರ ಭಾರತದ ವಾಸ್ತುಶಿಲ್ಪ ಶೈಲಿಯ ವಿಕಾಸದಲ್ಲಿ ಪ್ರಮುಖವಾದ ಹಂತವನ್ನು ಸೂಚಿಸುವುದೇ ಈ ದೇವಾಲಯದ ಮುಖ್ಯ ಲಕ್ಷಣ. ಇದನ್ನು ಕೆಲವರು ದ್ರಾವಿಡ, ನಾಗರ ಎಂದೂ, ಇದರ ಮಿಳಿತವನ್ನು ಕೆಲವರು ವೇಸರ ಎಂದು ಕರೆಯುತ್ತಾರೆ. ಇಲ್ಲಿನ ಶಿಖರವು ರೇಖಾನಾಗರ ಶೈಲಿಯನ್ನು ಸೂಚಿಸಿದರೆ, ಶಾಲ, ಕೂಟ, ಹಾರ ಮುಂತಾದವು ದ್ರಾವಿಡ ರೀತಿಯ ಲಕ್ಷಣಗಳನ್ನು ಸೂಚಿಸುತ್ತವೆ. ಈ ದೇವಾಲಯವು ಎರಡೂ ಲಕ್ಷಣಗನ್ನು ತೋರಿಸುವುದರಿಂದ, ಇದು ವಿಶಿಷ್ಟವೆನಿಸಿದೆ. ಆದರೆ ಈ ದೇವಾಲಯದ ನಿರ್ಮಾಣ ಕಾಲವನ್ನು ತಿಳಿಯಲು ಯಾವ ಆಧಾರಗಳೂ ದೊರಕಿಲ್ಲ. ವಿರೂಪಾಕ್ಷ ದೇವಾಲಯದಲ್ಲಿ ಕಾರ್ಯನಿರ್ವಹಿಸಿದ ಶಿಲ್ಪಿಗಳಾದ ಸರ್ವಸಿದ್ಧಿ ಆಚಾರಿ, ಬಲದೇವ ಮತ್ತು ಚಂಗಮ್ಮ ಈ ದೇವಾಲಯದಲ್ಲಿ ಕಾರ್ಯನಿರ್ವಹಿಸಿದ್ದರೂ ಪಾಪನಾಥ ದೇವಾಲಯ, ವಿರೂಪಾಕ್ಷ ದೇವಾಲಯದಷ್ಟು ಪರಿಷ್ಕೃತ ದೇವಾಲಯದಂತೆ ಕಂಡುಬರುವುದಿಲ್ಲ. ಈ ಮಾಹಿತಿಯ ಆಧಾರದ ಮೇಲೆ ಹೇಳುವುದಾದರೆ, ವಿರೂಪಾಕ್ಷ ದೇವಾಲಯದ ನಿರ್ಮಾಣಕ್ಕೆ ಸ್ವಲ್ಪ ಮುಂಚೆ ಅಥವಾ ನಂತರ, ಪಾಪನಾಥ ದೇವಾಲಯದ ನಿರ್ಮಾಣವಾಗಿರಬೇಕು. ವಿರೂಪಾಕ್ಷ ದೇವಾಲಯವು ಸುಮಾರು ಕ್ರಿ.ಶ. 740ರಲ್ಲಿ ನಿರ್ಮಾಣಗೊಂಡಿದ್ದೆಂದು ಭಾವಿಸಲಾಗಿರುವುದರಿಂದ, ಪಾಪನಾಥ ದೇವಾಲಯವು ಈ ತೇದಿಗಿಂತ ಒಂದು ದಶಕ ಮೊದಲು ಅಥವಾ ಆನಂತರದ ಕಾಲದಲ್ಲಿ ರಚಿತವಾಗಿರಬಹುದು.

ಪಾಪನಾಥ ದೇವಾಲಯದಲ್ಲಿ ಒಂದು ಗರ್ಭಗೃಹ, ಸುಕನಾಸಿ, ಪ್ರದಕ್ಷಿಣ ಪಥ, ಅರ್ಧಮಂಡಪ, ಸಭಾಮಂಡಪ ಮತ್ತು ಮುಖಮಂಡಪಗಳಿವೆ. ಮುಖಮಂಡಪದಲ್ಲಿ ಎರಡೂ ಕಂಬಗಳಿದ್ದು ಪ್ರವೇಶ ದ್ವಾರದ ಜಗಲಿಯಂತಿದೆ.

ಗರ್ಭಗೃಹದಲ್ಲಿ ಪೀಠದ ಮೇಲೆ ಚೆನ್ನಾಗಿ ನಯಮಾಡಿದ ಹೊಳಪುಳ್ಳ ಶಿವಲಿಂಗವಿದೆ. ಗರ್ಭಗೃಹದ ದ್ವಾರಬಂಧದಲ್ಲಿ, ದ್ವಾರಪಾಲ, ಅಷ್ಟದಿಕ್ಪಾಲಕರು, ಇಂದ್ರ, ಗಜಲಕ್ಷ್ಮಿ ಮತ್ತು ಚಾಮರಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಉತ್ತರ, ದಕ್ಷಿಣ ಮತ್ತು ಪಶ್ಚಿಮದ ಗೋಡೆಗಳಲ್ಲಿರುವ ದೇವಕೋಷ್ಠಗಳಲ್ಲಿ ವಿಷ್ಣು, ಶಿವ ಮತ್ತು ಸೂರ್ಯ ಶಿಲ್ಪಗಳಿವೆ. ಸುಕನಾಸಿಯ ಬಾಗಿಲುವಾಡದಲ್ಲಿ ನಂದಿ ಮತ್ತು ವೀರಭದ್ರ, ದ್ವಾರಪಾಲರಾಗಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಸಭಾಮಂಡಪದಲ್ಲಿ ನಯವಾಗಿ ಶಿಲ್ಪಿಸಿದ ನಾಲ್ಕು ಸಾಲು ಕಂಬಗಳಿದ್ದು ಅವುಗಳ ಮೇಲೆ ಮಿಥುನ ಶಿಲ್ಪಗಳು, ಎಂಟು ಕೈಗಳ ಮಹಿಷಾಸುರಮರ್ದಿನಿ, ಕತ್ತಿಯನ್ನು ಹಿಡಿದಿರುವ ವೀರ, ರಾಜದಂಪತಿಗಳು, ವಾದ್ಯವನ್ನು ನುಡಿಸುತ್ತಿರುವ ಸಂಗೀತಗಾರರು ಇತ್ಯಾದಿ ಶಿಲ್ಪಗಳು ಕಾಣಬರುತ್ತವೆ. ಚಾವಣಿಯಲ್ಲಿ ಉಬ್ಬುಶಿಲ್ಪದ ಗಜಲಕ್ಷ್ಮಿ, ನಾಗ, ಅನಂತಶಾಯಿ ವಿಷ್ಣು, ಅಷ್ಟದಿಕ್ಪಾಲಕರು ಮತ್ತು ಕಮಲದ ಹೂವುಗಳಿವೆ. ಈ ದೇವಾಲಯದಲ್ಲಿರುವ ರಾಮಾಯಣದ ಕಥಾನಕ ಶಿಲ್ಪ ಫಲಕಗಳು ಬಹಳ ವಿಶದವಾಗಿ ಮತ್ತು ಸುಂದರವಾಗಿ ಕೆತ್ತಲ್ಪಟ್ಟಿದೆ. ಕೆಲವು ವಿಷಯಗಳಲ್ಲಿ ಇದು ವಿರೂಪಾಕ್ಷ ದೇವಾಲಯಕ್ಕಿಂತ ಭಿನ್ನವಾಗಿದೆ ಎಂದು ಭಾವಿಸಲಾಗಿದ್ದರೂ, ಪಾಪನಾಥ ದೇವಾಲಯವು ಇತರ ಲಕ್ಷಣಗಳಿಂದ, ವಿಶೇಷವಾಗಿ ಉತ್ತಮ ಶಿಲ್ಪಗಳಿಂದ ಸುಂದರ ದೇವಾಲಯವೆನಿಸಿದೆ.

ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

ಮಲ್ಲಿಕಾರ್ಜುನ ದೇವಾಲಯ ಪಟ್ಟದಕಲ್ಲಿನಲ್ಲಿರುವ ಮತ್ತೊಂದು ಸುಂದರ ದ್ರಾವಿಡಶೈಲಿಯ ದೇವಾಲಯ. ಈ ದೇವಾಲಯದಲ್ಲೇ ದೊರಕಿರುವ ಶಾಸನದಿಂದ ಚಾಳುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯನ ರಾಣಿಯಾದ ತ್ರೈಲೋಕ್ಯಮಹಾದೇವಿಯು ಸುಮಾರು ಕ್ರಿ.ಶ. 740ರಲ್ಲಿ ಈ ದೇವಾಲಯವನ್ನು ನಿರ್ಮಿಸಿದಳೆಂದು ತಿಳಿದು ಬರುತ್ತದೆ. ಈಗ ಇದನ್ನು ಮಲ್ಲಿಕಾರ್ಜುನ ದೇವಾಲಯ ಎಂದು ಕರೆಯುತ್ತಿದ್ದರೂ, ಇದರ ಮೂಲ ಹೆಸರು ತ್ರೈಲೋಕ್ಯೇಶ್ವರ ದೇವಾಲಯ. ಈ ರಾಣಿಯ ಸಹೋದರಿಯಾದ ಲೋಕಮಹಾದೇವಿಯು ಕ್ರಿ.ಶ. 740ರಲ್ಲಿ ಪಟ್ಟದಕಲ್ಲಿನಲ್ಲಿ ಇನ್ನೊಂದು ಶಿವ ದೇವಾಲಯವನ್ನು ನಿರ್ಮಿಸಿದ್ದಳೆಂಬುದು ಆಸಕ್ತಿಕರ ಸಂಗತಿ. ಈಗ ಅದು ವಿರೂಪಾಕ್ಷ ದೇವಾಲಯವೆಂದು ಪ್ರಸಿದ್ಧಿಯಾಗಿದೆ. ಈ ಎರಡೂ ದೇವಾಲಯಗಳು ಕ್ರಿ.ಶ. 740ರಲ್ಲಿ ನಿರ್ಮಾಣಗೊಂಡಿದ್ದುದರಿಂದ, ಇವುಗಳಲ್ಲಿ ತುಂಬ ಸಾಮ್ಯತೆಯಿದ್ದು, ಅವಳಿ ದೇವಾಲಯಗಳಂತೆ ಕಾಣಬರುತ್ತವೆ. ಆದರೆ ಮಲ್ಲಿಕಾರ್ಜುನ ದೇವಾಲಯವು ವಿರೂಪಾಕ್ಷ ದೇವಾಲಯಕ್ಕಿಂತ ಸ್ವಲ್ಪ ಸಣ್ಣದು.

ಈ ದೇವಾಲಯ ಪೂರ್ವ ಪಶ್ಚಿಮವಾಗಿ 84 ಅಡಿಗಳು, ಉತ್ತರ ದಕ್ಷಿಣವಾಗಿ 56 ಅಡಿಗಳು ಇವೆ. ಇದರ ವಿಮಾನವು ದ್ರಾವಿಡ ರೀತಿಯಲ್ಲಿದೆ. ಇದು ವಿರೂಪಾಕ್ಷ ದೇವಾಲಯದ ವಿಮಾನಕ್ಕಿಂತ ಕಳಶದ ಹಂತದಲ್ಲಿ ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ಸುಕನಾಸಿ ಮುಂಚಾಚು ಇದ್ದು ಅದರಲ್ಲಿ ನಟರಾಜನ ಶಿಲ್ಪವಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ಮುಖಮಂಡಪ, ಸಭಾಮಂಡಪ ಮತ್ತು ನಂದಿಮಂಡಪಗಳಿವೆ. ದೇವಾಲಯದ ಹೊರ ಗೋಡೆಯ ಅಧಿಷ್ಠಾನದಲ್ಲಿ ಅನೇಕ ರೀತಿಯ ದಿಂಡುಗಳಿವೆ. ಇದರ ಮೇಲಿನ ಗೋಡೆಯಲ್ಲಿ ಸಣ್ಣಪ್ರಮಾಣದ ಶಿಖರಗಳು, ಅರೆಗಂಬಗಳು ಮತ್ತು ಗೂಡುಗಳಿವೆ. ಗೂಡುಗಳಲ್ಲಿ ದೇವ ದೇವತೆಯರ ಶಿಲ್ಪಗಳಿವೆ. ಇದರ ಮೇಲೆ ಅಲಂಕೃತವಾದ ಆದರೆ ದಪ್ಪನಾದ ಮುಂಚೂರು ಇದೆ. ಪಶ್ಚಿಮದಲ್ಲಿ ಮೂರು ತಲಗಳ ವಿಮಾನವಿದೆ. ಅದರ ಮೇಲೆ ತುದಿಯಲ್ಲಿ ಶಿಖರವಿದೆ.

ಮಹಾಮಂಡಪದಲ್ಲಿ ಹದಿನಾರು ಸ್ತಂಭಗಳಿದ್ದು, ಅವುಗಳ ಮೇಲೆ ರಾಮಾಯಣ, ಮಹಾಭಾರತ ಮತ್ತು ಪಂಚತಂತ್ರ ಕಥೆಗಳನ್ನು ಕಡೆಯಲಾಗಿದೆ. ಈ ದೇವಾಲಯದಲ್ಲಿ ಕಾಣಬರುವ ಇತರ ಪ್ರಮುಖ ಶಿಲ್ಪಗಳೆಂದರೆ ಗಂಧರ್ವರು, ಪ್ರಣಯಾಸಕ್ತ ದಂಪತಿಗಳು, ಕೃಷ್ಣ ಲೀಲೆಗಳು, ಶಿವಪಾರ್ವತಿ, ರಾಮಾಯಣದ ಕಥೆ, ಮಹಿಷಾಸುರಮರ್ದಿನಿ ಇತ್ಯಾದಿಗಳು. ಉತ್ತಮ ಅಂಗಸೌಷ್ಠವವನ್ನು ಪ್ರದರ್ಶಿಸುವ ಈ ಶಿಲ್ಪಗಳು ಸುಂದರವಾಗಿವೆ.

ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಪಾಣಿಪೀಠದ ಮೇಲೆ, ರಾಮಬಾಣಲಿಂಗ ಎಂದು ಕರೆಯಲಾಗುವ ಶಿವಲಿಂಗವಿದೆ. ಚಾವಣಿಯಲ್ಲಿ ಕಮಲದ ಹೂವಿನ ಶಿಲ್ಪವಿದೆ. ಸುಕನಾಸಿಯ ಚಾವಣಿಯಲ್ಲಿ ಶಿವಪಾರ್ವತಿಯರ ಶಿಲ್ಪಗಳಿವೆ. ಗರ್ಭಗೃಹದ ಎಡ ಮತ್ತು ಬಲಭಾಗಗಳಲ್ಲಿ ಎರಡು ಸಣ್ಣ ಗುಡಿಗಳಿವೆ. ಅವುಗಳಲ್ಲಿ ಈಗ ವಿಗ್ರಹಗಳಿಲ್ಲ. ಗರ್ಭಗೃಹದ ಸುತ್ತ ಪ್ರದಕ್ಷಿಣಪಥವಿದೆ. ಮಂಡಪದ ದ್ವಾರಬಂಧದಲ್ಲಿ ಶೈವ ದ್ವಾರಪಾಲರಿದ್ದಾರೆ. ಹೀಗೆ ಮಲ್ಲಿಕಾರ್ಜುನ ದೇವಾಲಯವು ಪ್ರಾಚೀನ ಚಾಳುಕ್ಯರ ಕಾಲದ ಸುಂದರ ದೇವಾಲಯವೆನಿಸಿದೆ.

ಗಳಗನಾಥ ದೇವಾಲಯ, ಪಟ್ಟದಕಲ್ಲು

ಗಳಗನಾಥ ದೇವಾಲಯವು ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ಪಟ್ಟದಕಲ್ಲಿನಲ್ಲಿರುವ ಸುಂದರ ದೇವಾಲಯ. ಇದು ಪೂರ್ವಾಭಿಮುಖವಾಗಿದೆ. ಎತ್ತರವಾದ ನಾಗರ ರೀತಿಯ ಶಿಖರದಿಂದಾಗಿ ಈ ದೇವಾಲಯ ದೂರದಿಂದಲೇ ಜನಗಳನ್ನು ಆಕರ್ಷಿಸುತ್ತದೆ. ಇದನ್ನು ರೇಖಾನಾಗರವೆಂದು ಬಣ್ಣಿಸಲಾಗಿದೆ. ಇದು ಉತ್ತರ ಭಾರತದ ನಾಗರ ಶಿಖರದ ಉಪರೀತಿಯದ್ದಾಗಿದ್ದು ಈ ರೀತಿಯ ಶಿಖರಗಳು ಒರಿಸ್ಸದ ಭುವನೇಶ್ವರದ ದೇವಾಲಯಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಗಳಗನಾಥ ದೇವಾಲಯದ ಶಿಖರವು ಪ್ರಮಾಣಬದ್ಧವಾಗಿದ್ದು, ಇದು ಈ ದೇಗುಲದ ವೈಶಿಷ್ಟವೆನಿಸಿದೆ.

ಇದು ಒಳಬಾಗುಳ್ಳ ಹಾಗೂ ಆಮಲಕ (ನೆಲ್ಲಿಕಾಯಿ) ರೀತಿಯಲ್ಲಿ ಕಡೆಯಲಾದ ಕಲ್ಲುಗಳ ಭಾಗಗಳನ್ನು ಒಂದರ ಮೇಲೆ ಮತ್ತೊಂದರಂತೆ ಪೇರಿಸಿ, ಅವುಗಳ ಮಧ್ಯೆ ದಿಂಡುಗಳನ್ನು ಅಳವಡಿಸಿರುವುದರಿಂದ ಈ ರೀತಿಯ ವಿನ್ಯಾಸ ಉಂಟಾಗುತ್ತದೆ. ಇವುಗಳನ್ನು ಒಳಬಾಗುಳ್ಳ ರೀತಿಯಲ್ಲಿ ಹಿಂದೆ ಮುಂದೆ ಬರುವಂತೆ ಕೂರಿಸಿರುವುದರಿಂದ ಹೊಸ ರೀತಿಯ ವಿನ್ಯಾಸ ಕಾಣಬರುತ್ತದೆ. ಇದರ ಮೇಲೆ ಚೌಕವಾದ ಅಲಂಕೃತ ದಿಂಡನ್ನು ಸೇರಿಸಿ, ಆಮಲಕ ರೀತಿಯ ಕಲಶವನ್ನು ಮೇಲೆ ಸೇರಿಸುವುದರಿಂದ, ರೇಖಾನಾಗರ ಶೈಲಿಯ ಶಿಖರವು ವಿನ್ಯಾಸಗೊಳ್ಳುತ್ತದೆ. ಈ ರೀತಿಯ ಶಿಖರಕ್ಕೆ ಗಳಗನಾಥ ದೇವಾಲಯ ಪ್ರಸಿದ್ಧವಾಗಿದೆ.

ಗಳಗನಾಥ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ಸಭಾಮಂಟಪಗಳು ಕಾಣಬರುತ್ತವೆ. ಸುಕನಾಸಿ ಮತ್ತು ಗರ್ಭಗೃಹವನ್ನು ಸುತ್ತುವರಿದ ಪ್ರದಕ್ಷಿಣ ಪಥವಿದೆ. ಮಂಡಪವು ಪೂರ್ಣವಾಗಿ ಹಾಳಾಗಿದೆ. ಆದರ ತಳಪಾಯ ಮಾತ್ರ ದೊರಕಿದ್ದು, ಅಧಿಷ್ಠಾನ, ಭಿತ್ತಿ ಮತ್ತು ಚಾವಣಿಗಳು ಪೂರ್ಣವಾಗಿ ಹಾಳಾಗಿವೆ. ದೇವಾಲಯದ ಹತ್ತಿರ ಭಿನ್ನವಾದ ಎಂಟು ಕೈಗಳ ಅಂಧಕಾಸುರ ಸಂಹಾರಮೂರ್ತಿಯ ಶಿಲ್ಪ ದೊರಕಿದೆ. ಭಿನ್ನವಾಗಿದ್ದರೂ ಇದೊಂದು ಒಳ್ಳೆಯ ವಿಗ್ರಹ. ಶಿವನು ಅಂಧಕಾಸುರನನ್ನು ಭರ್ಜಿಯಿಂದ ಸಂಹರಿಸುವಂತೆ ಕೆತ್ತಲಾಗಿದೆ. ಶಿವನ ಇತರ ಕೈಗಳಲ್ಲಿ ಖಡ್ಗ, ತ್ರಿಶೂಲ ಇತ್ಯಾದಿ ಆಯುಧಗಳಿವೆ. ಸುಕನಾಸಿಯ ದ್ವಾರಬಂಧದಲ್ಲಿ ಪತ್ರಶಾಖೆಯಿದ್ದು, ಕೆಳಭಾಗದಲ್ಲಿ ಗಂಗಾ ಯಮುನೆಯರ ಹಾಗೂ ದ್ವಾರಪಾಲ ದಂಪತಿಗಳ ಕೆತ್ತನೆಗಳಿವೆ. ಲಲಾಟದಲ್ಲಿ ಶಿವನಟರಾಜನ ಶಿಲ್ಪವಿರುವುದರಿಂದ, ಮೂಲತಃ ಇದು ಶಿವ ದೇವಾಲಯವಾಗಿದ್ದಿತೆಂಬುದು ಖಚಿತವಾಗುತ್ತದೆ.

ಗರ್ಭಗೃಹದಲ್ಲಿ ಕರಿಕಲ್ಲಿನ ವಿಶೇಷ ಹೊಳಪುಳ್ಳ ಕ್ರಿ.ಶ. ಹನ್ನೆರಡನೆಯ ಶತಮಾನದ ಶಿವಲಿಂಗವಿದೆ. ಗರ್ಭಗೃಹದ ಹೊರಗೋಡೆಯಲ್ಲಿ ಮೂರು ದಿಂಡುಗಳಿದ್ದು ಮೇಲೆ ಕೋಷ್ಠಗಳೂ, ಅವುಗಳಲ್ಲಿ ಕುಬೇರ, ಗಜಲಕ್ಷ್ಮಿ ಮತ್ತು ಇತರ ದೇವದೇವತೆಗಳ ಶಿಲ್ಪಗಳಿವೆ.

ವಾಸ್ತುಶೈಲಿಯನ್ನು ಆಧರಿಸಿ ಹೇಳುವುದಾದರೆ ಈ ದೇವಾಲಯವು ಕ್ರಿ.ಶ. ಎಂಟನೆಯ ಶತಮಾನದ ಪೂರ್ವಾರ್ಧದಲ್ಲಿ (ಕ್ರಿ.ಶ. 700-750) ನಿರ್ಮಾಣವಾಗಿರಬೇಕೆಂದು ಸ್ವಲ್ಪ ಖಚಿತತೆಯಿಂದ ಹೇಳಬಹುದು.

ಜೈನ ದೇವಾಲಯ, ಪಟ್ಟದಕಲ್ಲು

ಬಾದಾಮಿ ಚಾಳುಕ್ಯರು ವೈದಿಕ ಹಿಂದೂ ಧರ್ಮದ ಅನುಯಾಯಿಗಳಾಗಿದ್ದರೂ ಕೂಡ ಅವರು ಜೈನಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟರು ಎನ್ನುವುದು ಅವರು ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ನಿರ್ಮಿಸಿದ ದೇವಾಲಯಗಳಿಂದ ತಿಳಿದುಬರುತ್ತದೆ. ಅವರು ಜೈನ ದೇವಾಲಯಗಳಿಗೆ ಧಾರಾಳವಾಗಿ ಭೂದಾನಗಳನ್ನು ಮಾಡಿದರು. ಜೈನ ನಾರಾಯಣ ದೇವಾಲಯವು ಪಟ್ಟದಕಲ್ಲಿನಲ್ಲಿ ಚಾಳುಕ್ಯರು ನಿರ್ಮಿಸಿದ ಜೈನ ದೇವಾಲಯ.

ಪಟ್ಟದಕಲ್ಲು ಊರಿನಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಈ ಜೈನ ದೇವಾಲಯವಿದೆ. ಇದೂ ಕೆಂಪು ಮರಳುಗಲ್ಲಿನಲ್ಲಿ ಕಟ್ಟಲಾದ ದೇಗುಲ. ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಡಪ, ಸಭಾಮಂಡಪ ಮತ್ತು ಮುಖಮಂಡಪಗಳು ಇವೆ. ಇದು ಪೂರ್ವಾಭಿಮುಖವಾಗಿದೆ. ಇದರಲ್ಲಿ ಪ್ರದಕ್ಷಿಣಾಪಥವೂ ಇದ್ದಿತು. ಈಗ ಇದರ ಗೋಡೆಗಳು ಬಿದ್ದುಹೋಗಿವೆ. ಪ್ರತ್ಯೇಕವಾಗಿ ಅರ್ಧಮಂಡಪವನ್ನು ನಿರ್ಮಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಇದು ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯಗಳ ಮುಂದಿನ ಬೆಳವಣಿಗೆಯನ್ನು ಸೂಚಿಸುತ್ತದೆ. ಮುಂದಿನ ಭಾಗವು ಸ್ವಲ್ಪ ಭಿನ್ನರೀತಿಯಲ್ಲಿದ್ದು ಮುಂದೆ ಮತ್ತು ಹಿಂದೆ ಕಂಬಗಳಿವೆ. ಈ ಲಕ್ಷಣಗಳಿಂದ ಅರ್ಧಮಂಡಪವು ಇನ್ನೂ ಹೆಚ್ಚಿನ ವಿಕಾಸವನ್ನು ತೋರಿಸುತ್ತದೆ. ಎರಡು ಕಡೆಗಳಲ್ಲಿಯೂ ಗೂಡುಗಳಿದ್ದು ಅವುಗಳಲ್ಲಿ ಜೈನ ಶಿಲ್ಪಗಳಿದ್ದವು. ಸಭಾಮಂಡಪ ಮತ್ತು ಮುಖಮಂಡಪಗಳ ಕಂಬವೂ ಭಿನ್ನರೀತಿಯಲ್ಲಿದ್ದು ಅವುಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಸಭಾಮಂಡಪದಲ್ಲಿ ನಾಲ್ಕು ಸಾಲುಗಳ ಕಂಬಗಳಿವೆ.

ವಿಮಾನವು ದ್ರಾವಿಡ ಶೈಲಿಯ ಅಷ್ಟಕೋನಾಕೃತಿಯಲ್ಲಿದೆ. ಇಷ್ಟೊಂದು ಎತ್ತರವಾದ ದೇವಾಲಯಕ್ಕೆ ಈ ವಿಮಾನವು ಸ್ವಲ್ಪ ಸಣ್ಣದೆನಿಸುತ್ತದೆ. ಗರ್ಭಗೃಹದ ಮೇಲಿನ ಅಂತಸ್ತಿನಲ್ಲಿ ಮೇಗುತಿ, ಲಾಡ್‌ಖಾನ್ ಮುಂತಾದ ದೇವಾಲಯಗಳಲ್ಲಿರುವಂತೆ ಇನ್ನೊಂದು ಗರ್ಭಗೃಹವಿದೆ. ಹೊರಗೋಡೆಯ ಉತ್ತರ ದಕ್ಷಿಣ ಭಾಗಗಳಲ್ಲಿ ಜೈನ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಈಗ ಶಿವಲಿಂಗವಿದೆ.

ಮುಖಮಂಡಪವು ಸುಂದರವಾಗಿದ್ದು, ಅದಕ್ಕೆ ಪೂರ್ವದಲ್ಲಿ ಪ್ರವೇಶದ ಮೆಟ್ಟಿಲುಗಳಿವೆ. ಇದರಲ್ಲಿ ಕಕ್ಷಾಸನವಿದೆ. ಈ ಕಕ್ಷಾಸನದ ಹೊರಗೋಡೆಯಲ್ಲಿ ಪದ್ಮನಿಧಿ, ನರ್ತಕಿ, ನಾಗಗಳೊಡನೆ ಆಡುತ್ತಿರುವ ಗಣಗಳು ಮತ್ತು ಪೂರ್ಣಕುಂಭ ಮುಂತಾದ ಶಿಲ್ಪಗಳಿವೆ. ಸಮಾನ ಅಂತರದಲ್ಲಿ ಅರೆಗಂಬಗಳಿವೆ. ಇಲ್ಲಿ ಕಾಣಬರುವ ಇತರ ಶಿಲ್ಪಗಳೆಂದರೆ ಪ್ರಣಯಾಸಕ್ತ ದಂಪತಿಗಳು, ಹಾರಾಡುತ್ತಿರುವ ಗಂಧರ್ವರು, ಆನೆಯ ಮೇಲಿನ ಸವಾರರು, ಹೂವನ್ನು ಕೈಯಲ್ಲಿ ಹಿಡಿದಿರುವ ದೇವತೆ ಇತ್ಯಾದಿ.

ಈ ದೇವಾಲಯದ ತೇದಿಯನ್ನು ನಿರ್ಧರಿಸಲು ಶಾಸನಗಳಿಲ್ಲ. ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿಗಿಂತ ವಾಸ್ತುಶಿಲ್ಪ ಶೈಲಿಯಲ್ಲಿ ಹೆಚ್ಚಿನ ವಿಕಾಸವನ್ನು ಇದು ತೋರಿಸುವುದರಿಂದ, ಈ ದೇವಾಲಯವನ್ನು ಕ್ರಿ.ಶ. ಒಂಬತ್ತನೆಯ ಶತಮಾನದ ಮಧ್ಯದಲ್ಲಿ ಕಟ್ಟಲಾಗಿರಬೇಕೆಂದು ಭಾವಿಸಬಹುದು. ಒಟ್ಟಿನಲ್ಲಿ ಚಾಳುಕ್ಯರು ಜೈನಧರ್ಮಕ್ಕೆ ಪ್ರೋತ್ಸಾಹ ಕೊಟ್ಟಿದ್ದರು ಎಂಬುದು ಪಟ್ಟದಕಲ್ಲಿನಲ್ಲಿನ ಈ ದೇವಾಲಯದಿಂದ ತಿಳಿದುಬರುತ್ತದೆ.

ಮಧುಕೇಶ್ವರ ದೇವಾಲಯ, ಬನವಾಸಿ

ಪ್ರಾಚೀನ ಕದಂಬರ ರಾಜಧಾನಿ ಬನವಾಸಿಯಲ್ಲಿ ನಿರ್ಮಾಣಗೊಂಡಿರುವ ಮಧುಕೇಶ್ವರ ದೇವಾಲಯ ಕೇವಲ ಒಂದು ದೇವಾಲಯವಲ್ಲ; ಪ್ರಾಚೀನ ಬನವಾಸಿ ಕದಂಬರ ಕಾಲದಿಂದ ಆರಂಭವಾಗಿ ಕ್ರಿ.ಶ. 16-17ನೇ ಶತಮಾನದ ಸೋಂದ ದೊರೆಗಳ ಕಾಲದವರೆಗೆ, ವಿವಿಧ ಕಾಲಗಳಲ್ಲಿ ಕಟ್ಟಲಾದ ಒಂದು ದೊಡ್ಡ ಸಂಕೀರ್ಣ. ತೆಳು ಕೆಂಪುಕಲ್ಲಿನಿಂದ ನಿರ್ಮಾಣಗೊಂಡ ಈ ದೇಗುಲದ ಪ್ರಾಚೀನತಮ ಭಾಗವೆಂದರೆ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಪ್ರದಕ್ಷಿಣ ಪಥ. ಇವುಗಳನ್ನು ಏಳುಎಂಟನೆಯ ಶತಮಾನದಲ್ಲಿ ನಿರ್ಮಿಸಿರಬೇಕು. ಕ್ರಿ.ಶ. ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಇನ್ನೊಂದು ಮಂಡಪ, ದೊಡ್ಡ ಮೂರು ಪ್ರವೇಶದ್ವಾರಗಳ ಮುಖಮಂಡಪ ಮತ್ತು ಪ್ರಾಕಾರವನ್ನು ಸೇರಿಸಲಾಯಿತು. ಸೋಂದ ನಾಯಕ ಸದಾಶಿವರಾಯನ ಆಳ್ವಿಕೆಯ ಸಮಯದಲ್ಲಿ ಸದಾಶಿವ ಮತ್ತು ಪಾರ್ವತಿ ದೇವಾಲಯಗಳು ನಿರ್ಮಾಣಗೊಂಡವು. ಸುಮಾರು ಇದೇ ಸಮಯದಲ್ಲಿ ಏಕಕೂಟ ದೇವಾಲಯವನ್ನು ದ್ವಿಕೂಟವನ್ನಾಗಿ ಪರಿವರ್ತಿಸಲಾಯಿತು. ಪ್ರಾಕಾರದಲ್ಲಿ ಆದಿ ಮಧುಕೇಶ್ವರ ಮತ್ತು ಅಮೃತೇಶ್ವರ ಎಂಬ ಹೆಸರಿನ ಎರಡು ಸಣ್ಣ ಗುಡಿಗಳಿವೆ. ಬಹುಶಃ ಇವು ಅತ್ಯಂತ ಪ್ರಾಚೀನವಾಗಿದ್ದು, ಕ್ರಿ.ಶ. ಐದನೆಯ ಶತಮಾನಕ್ಕೆ ಸೇರಿದ್ದಿರಬಹುದೆಂದು ಭಾವಿಸಲಾಗಿದೆ. ಇಲ್ಲಿ ಆದಿಮಾಧವ (ವಿಷ್ಣು) ಎಂದು ಕರೆಯಲಾದ ಇನ್ನೊಂದು ಶಿಲ್ಪವಿದೆ. ಇದು ತುಂಬ ಪ್ರಾಚೀನ ಶಿಲ್ಪವಾಗಿದ್ದು ಕ್ರಿ.ಶ. ಎಂಟನೆಯ ಶತಮಾನದ್ದಿರಬೇಕೆಂದು ಊಹಿಸಲಾಗಿದೆ.

ಇಲ್ಲಿನ ಪ್ರಾಚೀನ ಭಾಗಗಳು ಬಾದಾಮಿ ಚಾಳುಕ್ಯರ ದೇಗುಲಗಳನ್ನು ಹೋಲುತ್ತವೆ. ಗರ್ಭಗೃಹದಲ್ಲಿ ಮಧುಕೇಶ್ವರ ಎಂಬ ಶಿವಲಿಂಗವಿದೆ. ನವರಂಗದಲ್ಲಿರುವ ಕೋಷ್ಠದಲ್ಲಿ ಆದಿಮಾಧವ ಮತ್ತು ಕಾರ್ತಿಕೇಯ ಶಿಲ್ಪಗಳಿವೆ. ನವರಂಗದಲ್ಲಿ ನಾಲ್ಕು ಸಾಲಿನಲ್ಲಿ ಹನ್ನೆರಡು ಸುಂದರವಾದ ಕಂಬಗಳಿವೆ. ಅವುಗಲ್ಲಿ ಚೌಕಪೀಠಗಳಿವೆ ಮತ್ತು ಕುಶನ್ ರೀತಿಯ ಬೋದಿಗೆಗಳಿವೆ. ಒಳಗಡೆ ಕಕ್ಷಾಸನಗಳಿವೆ. ಈ ಭಾಗವನ್ನು ಹಾನಗಲ್ ಕದಂಬರ ಕಾಲದಲ್ಲಿ ಅಂದರೆ ಕ್ರಿ.ಶ. ಹನ್ನೊಂದು-ಹನ್ನೆರಡನೆಯ ಶತಮಾನಗಳಲ್ಲಿ ಸೇರಿಸಲಾಯಿತು. ಇಲ್ಲಿ ವಿಜಯನಗರ ದೊರೆ ಮೊದಲನೆಯ ಹರಿಹರನ ಕಾಲದ ಶಾಸನವಿದೆ. ಬಹುಶಃ ಇದನ್ನು ವಿಜಯನಗರದ ಮಂತ್ರಿಯೊಬ್ಬನು ಪುನರ್ನಿರ್ಮಿಸಿದನೆಂದು ತೋರುತ್ತದೆ.

ಸೋಂದ ರಾಜವಂಶದ ಸದಾಶಿವನಾಯಕ ಮತ್ತು ರಘುನಾಥನಾಯಕರು ನಿರ್ಮಿಸಿದ ಎರಡು ಸುಂದರವಾದ ಏಕಶಿಲಾನಿರ್ಮಿತವಾದ ಮಂಡಪಗಳಿವೆ. ಇವೆರಡೂ ತುಂಬ ಕಲಾತ್ಮಕವಾಗಿವೆ. ಗರ್ಭಗೃಹದ ಮೇಲಿರುವ ಶಿಖರವು ಕದಂಬ ನಾಗರ ಶೈಲಿಗೆ ಸೇರಿದುದಾಗಿದೆ. ಪ್ರಧಾನ ದೇವಾಲಯದ ಬಲಭಾಗದಲ್ಲಿ ವೀರಭದ್ರ ಗುಡಿಯಿದೆ. ಇದಕ್ಕಿಂತ ಸ್ವಲ್ಪ ಮುಂದೆ ನರಸಿಂಹ ಗುಡಿಯಿದೆ. ಇದರಲ್ಲಿ ಎರಡು ಕೈಗಳ ನರಸಿಂಹನ ಶಿಲ್ಪವಿದೆ. ಕ್ರಿ.ಶ. 1552ರ ಶಾಸನದ ಪ್ರಕಾರ ಪಾರ್ವತಿ ಮತ್ತು ನಾರದ ಗುಡಿಗಳು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡವು. ಶಿತಿಕಂಠೇಶ್ವರ ದೇವಾಲಯದಲ್ಲಿ ಗರ್ಭಗೃಹ ಮತ್ತು ಅಂತರಾಳ ಮತ್ತು ಕದಂಬನಾಗರ ಶಿಖರವಿದೆ. ಇವೆಲ್ಲವೂ ವಿಶಾಲವಾದ ಪ್ರಾಕಾರದ ಒಳಗೆ ನಿರ್ಮಿತವಾಗಿವೆ. ಇದಕ್ಕೆ ಪೂರ್ವ ಮತ್ತು ಉತ್ತರಗಳಲ್ಲಿ ಪ್ರವೇಶದ್ವಾರಗಳಿವೆ. ಮುಂಭಾಗದಲ್ಲಿ ಎರಡು ಮುಖಮಂಡಪಗಳಿವೆ. ಪ್ರಾಕಾರದ ಒಳಗೆ ಮಂಡಪದ ಮುಂಭಾಗದಲ್ಲಿ ಎರಡು ಧ್ವಜಸ್ತಂಭಗಳಿವೆ. ಇದು ಪ್ರಸಿದ್ಧವಾಗಿರುವ ಶಿವ ದೇವಾಲಯವಾಗಿದ್ದು ಕರ್ನಾಟಕದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯ ಯಾತ್ರಿಕರು ಈ ದೇವಾಲಯಕ್ಕೆ ಬರುತ್ತಾರೆ.

## ಪಾರ್ವತಿ ಮತ್ತು ಕಾರ್ತಿಕೇಯ ದೇವಾಲಯಗಳು, ಸಂಡೂರು

ಕಬ್ಬಿಣ ಮತ್ತು ಮ್ಯಾಂಗನೀಸಿನ ನಿಕ್ಷೇಪಗಳಿಂದಾಗಿ ಸಂಡೂರು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಅದುರಿನಿಂದ ಲೋಹವನ್ನು ತೆಗೆಯುವುದೇ ಈ ಸ್ಥಳದ ಪ್ರಮುಖ ಉದ್ಯೋಗವಾಗಿದೆ. ಸುತ್ತಮುತ್ತಲೂ ಇರುವ ಸಣ್ಣಪುಟ್ಟ ಬೆಟ್ಟಗಳಿಂದ ರಮಣೀಯವಾಗಿ ಕಾಣುತ್ತದೆ ಈ ಸ್ಥಳ. ಈ ತರಹದ ಒಂದು ಬೆಟ್ಟದ ಹೆಸರೇ ಕುಮಾರಸ್ವಾಮಿ ಬೆಟ್ಟ. ಪರಂಪರೆಯ ಪ್ರಕಾರ ಈಶ್ವರನ ಮಗನಾದ ಕಾರ್ತಿಕೇಯ ಅಥವಾ ಕುಮಾರಸ್ವಾಮಿ ಇಲ್ಲಿ ತಂಗಿದ್ದಾಗ, ಈ ಬೆಟ್ಟದಲ್ಲಿ ವಾಸವಾಗಿದ್ದ ತಾರಕಾಸುರನನ್ನು ಸಂಹಾರಮಾಡಿದನು. ಆದುದರಿಂದಲೇ ಇದಕ್ಕೆ ಕುಮಾರಸ್ವಾಮಿ ಬೆಟ್ಟ ಎಂಬ ಹೆಸರಾಯಿತು. ಸುತ್ತಮುತ್ತಲೂ ಇರುವ ಹರಿದ್ವರ್ಣದ ಗಿಡಮರಗಳಿಂದ ಹಾಗೂ ಪ್ರಕೃತಿಯ ಸಿರಿಯ ಮಡಿಲಲ್ಲಿರುವುದರಿಂದ ಈ ದೇವಾಲಯಗಳ ಸೌಂದರ್ಯ ವಿಶೇಷವಾಗಿ ಕಂಡುಬರುತ್ತದೆ.

ಈ ಬೆಟ್ಟದಲ್ಲಿ ಅನೇಕ ದೇವಾಲಯಗಳಿದ್ದರೂ ಅವುಗಳಲ್ಲಿ ಮುಖ್ಯವಾದವು ಪಾರ್ವತಿ ಮತ್ತು ಕಾರ್ತಿಕೇಯ ದೇಗುಲಗಳು. ಅವು ಅಕ್ಕಪಕ್ಕದಲ್ಲೇ ನಿರ್ಮಿತವಾಗಿದ್ದರೂ, ಅವು ಎರಡೂ ಭಿನ್ನ ರಾಜಮನೆತನ ಹಾಗೂ ಶೈಲಿಗಳಿಗೆ ಸೇರಿದವು. ಕಾಲಮಾನದೃಷ್ಟಿಯಿಂದ ಇವುಗಳೆರಡಕ್ಕೂ ಕೆಲವು ಶತಮಾನಗಳ ಅಂತರವೇ ಇದೆ. ಈ ಎರಡರಲ್ಲಿ ಹೆಚ್ಚು ಪ್ರಾಚೀನವಾದುದು ಪಾರ್ವತಿ ದೇವಾಲಯ.

ಪಾರ್ವತಿ ದೇವಾಲಯದಲ್ಲಿ ಗರ್ಭಗೃಹ ಮತ್ತು ನವರಂಗವಿದೆ. ಇದರಲ್ಲಿ ಬಾದಾಮಿ ಚಾಳುಕ್ಯರ ಮತ್ತು ರಾಷ್ಟ್ರಕೂಟರ ಕಾಲದ ಆರು ಕಂಬಗಳಿವೆ. ಗರ್ಭಗೃಹದ ಮಧ್ಯದಲ್ಲಿ ನಾಲ್ಕೂವರೆ ಅಡಿ ಎತ್ತರದ ನಾಲ್ಕು ಭುಜಗಳ, ನಿಂತಿರುವ ಪಾರ್ವತಿ ವಿಗ್ರಹವಿದೆ. ನವರಂಗದ ಗೂಡುಗಳಲ್ಲಿ ಕೇಶವ, ಮಾಧವ, ಸೂರ್ಯ, ಯಮಧರ್ಮ ಮುಂತಾದ ದೇವತೆಗಳ ಶಿಲ್ಪಗಳಿವೆ. ಸೂರ್ಯನ ಶಿಲ್ಪ ಅಂದವಾಗಿದ್ದು, ಸೂರ್ಯನು ಅಲಂಕಾರ ಭೂಷಿತನಾಗಿದ್ದಾನೆ. ಒಂದು ಕೈಯಲ್ಲಿ ಕಮಲ ಪುಷ್ಪ ಹಿಡಿದಿದ್ದರೆ, ಮತ್ತೊಂದು ಕೈ ಅಭಯ ಮುದ್ರೆಯಲ್ಲಿದೆ. ಮಹಿಷನ ಮೇಲೆ ಕುಳಿತಿರುವ ಯಮಧರ್ಮರಾಯನ ಶಿಲ್ಪ ವಿಶಿಷ್ಟವಾದದ್ದು. ಇಲ್ಲಿ ದ್ರಾವಿಡ ರೀತಿಯ ಶಿಖರವಿದ್ದು, ಸುಕನಾಸಿ ಮುಂಚಾಚು ಎದ್ದು ಕಾಣುತ್ತದೆ. ಈ ದೇವಾಲಯ ಕ್ರಿ.ಶ. ಎಂಟನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರಲ್ಲಿ ಬಾದಾಮಿ ಚಾಳುಕ್ಯ ಹಾಗೂ ರಾಷ್ಟ್ರಕೂಟ ವಾಸ್ತುಶಿಲ್ಪ ಲಕ್ಷಣಗಳು ಕಾಣಬರುತ್ತವೆ.

ಕಾರ್ತಿಕೇಯ ದೇವಾಲಯದಲ್ಲಿಯೂ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ನಿಂತಿರುವ ಕಾರ್ತಿಕೇಯನ ಶಿಲ್ಪವಿದೆ. ಇವನು ಒಂದು ಕೈಯಲ್ಲಿ ರುಂಡವನ್ನು ಹಿಡಿದಿದ್ದಾನೆ; ಇನ್ನೊಂದು ಕೈ ಅಭಯಮುದ್ರೆಯಲ್ಲಿದೆ; ಅದರ ಮೇಲೆ ಕ್ರೌಂಚಪಕ್ಷಿಯಿದೆ. ನವರಂಗದಲ್ಲಿ ಅಲಂಕೃತ ಕಂಬಗಳಿವೆ. ದೇವಾಲಯದ ಹೊರಭಾಗದ ಕೆಳಗೆ ವಿವಿಧ ರೀತಿಯ ಅಲಂಕೃತ ದಿಂಡುಗಳು, ಭಿತ್ತಿಯಲ್ಲಿ ಅರೆಗಂಬಗಳು, ಅದರ ಮೇಲೆ ಅಲಂಕೃತ ಮುಂಜೂರುಗಳಿವೆ. ಅರೆಗಂಬಗಳು ನೀವಾಗಿದ್ದು, ದೇವಾಲಯದ ಗೋಡೆಯ ಅಂದವನ್ನು ಹೆಚ್ಚಿಸಿವೆ. ಗರ್ಭಗೃಹದ ಮೇಲೆ ದ್ರಾವಿಡ ರೀತಿಯ ವಿಮಾನವಿದೆ. ಈ ದೇವಾಲಯದ ನಿರ್ಮಾಣ ಕಾಲ ಕ್ರಿ.ಶ. ಹನ್ನೊಂದನೆಯ ಶತಮಾನ.

ಶ್ರೀರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ

ಮೈಸೂರಿಗೆ ಸಮೀಪದಲ್ಲಿ ಕಾವೇರಿ ನದಿಯ ತೀರದಲ್ಲಿರುವ ಶ್ರೀರಂಗಪಟ್ಟಣ ಕರ್ನಾಟಕದ ಪವಿತ್ರ ಸ್ಥಳಗಳಲ್ಲೊಂದು. ಇದು ಪ್ರಾಚೀನ ಕಾಲದಲ್ಲಿ ಗಂಗ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳ ಭಾಗವಾಗಿದ್ದು, ಆನಂತರ ಟಿಪ್ಪುಸುಲ್ತಾನನ ರಾಜಧಾನಿಯಾಗಿ ಪ್ರಖ್ಯಾತಿ ಪಡೆಯಿತು. ಪವಿತ್ರವಾದ ಕಾವೇರಿ ನದಿಯಿಂದ ಮತ್ತು ರಂಗನಾಥನ ದೇವಾಲಯದಿಂದ ಈಗ ವಿಶೇಷ ಪ್ರಸಿದ್ಧಿ ಪಡೆದಿದೆ.

ರಂಗನಾಥ ಸ್ವಾಮಿ ದೇವಾಲಯ ಕರ್ನಾಟಕದಲ್ಲಿ ವಿಶಾಲವಾದ ದ್ರಾವಿಡ ಶೈಲಿಯ ದೇವಾಲಯ. ಪರಂಪರೆಯಿಂದ ಇದು ಗೌತಮ ಕ್ಷೇತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕ್ರಿ.ಶ. 894ರಲ್ಲಿ ತಿರುಮಲಯ್ಯನೆಂಬ ಗಂಗ ಸಾಮಂತನು ಈ ದೇವಾಲಯವನ್ನು ಕಟ್ಟಿಸಿ ಈ ಊರಿಗೆ ಶ್ರೀರಂಗಪುರ ಎಂಬ ಹೆಸರು ಕೊಟ್ಟನೆಂದು ಹೇಳಲಾಗಿದೆ. ಗರ್ಭಗೃಹದಲ್ಲಿ ಬೃಹತ್ತಾದ ಏಳು ಹೆಡೆಗಳ ಆದಿಶೇಷನ ಮೇಲೆ ಪವಡಿಸಿರುವ ವಿಷ್ಣುವಿನ ವಿಗ್ರಹವಿದೆ. ತನ್ನ ಬಲಗೈಯನ್ನು ತಲೆಗೆ ಆಧಾರವಾಗಿಟ್ಟುಕೊಂಡು, ಎಡಗೈಯನ್ನು ತನ್ನ ಶರೀರದ ಮೇಲೆ ಚಾಚಿಕೊಂಡಿರುವಂತೆ ವಿಗ್ರಹವನ್ನು ಕೆತ್ತಲಾಗಿದೆ. ಕಿರೀಟವೂ ಸೇರಿದಂತೆ ಅನೇಕ ಆಭರಣಗಳನ್ನು ದೇವರು ಧರಿಸಿದ್ದಾನೆ. ಅವನ ಪಾದಗಳ ಹತ್ತಿರ ಲಕ್ಷ್ಮಿ ಅಥವಾ ಕಾವೇರಿ ಮತ್ತು ಗೌತಮ ಋಷಿಗಳಿದ್ದಾರೆ. ಶಯನ ಭಂಗಿಯಲ್ಲಿರುವ ವಿಷ್ಣುವಿನ ಸುಂದರ ವಿಗ್ರಹಗಳಲ್ಲಿ ಇದೊಂದು. ಮಧ್ಯದಲ್ಲಿ ಕಮಲಪುಷ್ಪದ ವಿನ್ಯಾಸವಿರುವ ಭುವನೇಶ್ವರಿ ಸುಕನಾಸಿಯ ಚಾವಣಿಯಲ್ಲಿದೆ. ನವರಂಗವು ಸುಂದರ ಕಟ್ಟಡ. ಇದರಲ್ಲಿ ಘಂಟಾಕೃತಿಯ ಎಂಟು ಕೋನಗಳ ನಕ್ಷತ್ರಾಕಾರದ ಕಂಬಗಳಿವೆ. ನವರಂಗದ ದ್ವಾರಬಂಧದ ಎರಡು ಕಡೆಗಳಲ್ಲಿ ಎತ್ತರವಾದ ಎರಡು ದ್ವಾರಪಾಲ ವಿಗ್ರಹಗಳಿವೆ. ನವರಂಗದ ಮುಂಭಾಗದಲ್ಲಿ ವಿಶಾಲವಾದ ಕಂಬಗಳ ಮಂಡಪವಿದೆ. ಇದರ ಮುಂದೆ ಇರುವ ಧ್ವಜಸ್ತಂಭದ ಹತ್ತಿರ ಇದಕ್ಕೆ ಪ್ರವೇಶದ್ವಾರವಿದೆ. ಇದರಲ್ಲಿರುವ ಕಂಬಗಳು ಹೊಯ್ಸಳ ಶೈಲಿಗೆ ಸೇರಿದ್ದು, ಚೌಕ, ನಕ್ಷತ್ರಾಕಾರ, ಘನಾಕಾರ ಮುಂತಾದ ವಿನ್ಯಾಸಗಳನ್ನು ಹೊಂದಿವೆ. ಬಹುಶಃ ನವರಂಗ ಮತ್ತು ಈ ಮಂಡಪವನ್ನು ಆನಂತರದ ಕಾಲದಲ್ಲಿ ಕಟ್ಟಲಾಗಿದ್ದು ಹೊಯ್ಸಳ ಕಂಬಗಳನ್ನೂ ಬಳಸಿರಬಹುದೆಂದು ಭಾವಿಸಲಾಗಿದೆ. ಮನವಾಳಮುನಿ ಮತ್ತು ಶ್ರೀವೈಷ್ಣವ ಆಳ್ವಾರರ ಸಣ್ಣ ಗುಡಿಗಳು ಇಲ್ಲಿವೆ. ನೈರುತ್ಯದಲ್ಲಿ ರಂಗನಾಯಕಿ ಎಂಬ ಹೆಸರಿನ ವಿಷ್ಣುವಿನ ಪತ್ನಿ ಲಕ್ಷ್ಮಿಯ ಗುಡಿಯಿದೆ. ಈ ರಂಗನಾಯಕಿಯ ವಿಗ್ರಹವು ವಿಜಯನಗರ ಕಾಲದ್ದು. ಕೆಲವು ಕಂಬಗಳ ಮೇಲೆ ವಿಷ್ಣುವಿನ 24 ರೂಪಗಳನ್ನು ಕೆತ್ತಲಾಗಿದ್ದು, ಅವುಗಳಲ್ಲಿ ಗುರುತು ಪಟ್ಟಿಗಳಿವೆ.

ಪೂರ್ವದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ವಿಶಾಲವಾದ ಕಂಬಗಳ ಮುಖಮಂಡಪವಿದೆ. ಈ ಎಲ್ಲವೂ ವಿಶಾಲವಾದ ಹಾಗೂ ಎತ್ತರವಾದ ಪ್ರಾಕಾರ ಗೋಡೆಯ ಒಳಗೆ ಇವೆ. ಇದಕ್ಕೆ ಮಹಾದ್ವಾರವಿದ್ದು, ಎತ್ತರ ಹಾಗೂ ಭವ್ಯವಾದ ಗಾರೆಯ ಗೋಪುರ ಮತ್ತು ಕಲಶಗಳಿವೆ. ಹೀಗೆ ರಂಗನಾಥಸ್ವಾಮಿ ದೇವಾಲಯವು ವಿವಿಧ ಕಾಲಗಳಲ್ಲಿ ನಿರ್ಮಿಸಲಾದ ದೇವಾಲಯ ಸಂಕೀರ್ಣವಾಗಿದೆ. ಶಯನ ಭಂಗಿಯಲ್ಲಿರುವ ಸುಂದರ ರಂಗನಾಥನ ದೇವಾಲಯವು ಕರ್ನಾಟಕದಲ್ಲೆಲ್ಲ ಪ್ರಸಿದ್ಧವಾಗಿದೆ. ಈ ದೇವಾಲಯ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತದೆ.

ಅನಂತೇಶ್ವರ ದೇವಾಲಯ, ಉಡುಪಿ

ಪವಿತ್ರ ಶ್ರೀ ಕೃಷ್ಣ ದೇವಾಲಯವಿರುವ ಉಡುಪಿ ಕರ್ನಾಟಕದ ಉಡುಪಿ ಜಿಲ್ಲೆಯಲ್ಲಿದ್ದು, ಇದೊಂದು ಪ್ರಖ್ಯಾತವಾದ ಯಾತ್ರಾಸ್ಥಳ ಕೇಂದ್ರವಾಗಿದ್ದು, ದೇಶದ ವಿವಿಧ ಭಾಗಗಳಿಂದ ನೂರಾರು ಜನಗಳನ್ನು ಆಕರ್ಷಿಸುತ್ತದೆ. ದ್ವೈತ ಮತಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ಪವಿತ್ರ ಸ್ಥಳವೂ ಇದಾಗಿದೆ. ಉಡುಪಿಯಲ್ಲಿರುವ ಅಷ್ಟ ಮಠಗಳೂ ಹಾಗೂ ಶ್ರೀಕೃಷ್ಣನ ಪೂಜಾಕೈಂಕರ್ಯವನ್ನು ನೆರವೇರಿಸುವ ಪರ್ಯಾಯ ಪದ್ಧತಿಯೂ ಇಲ್ಲಿನ ವೈಶಿಷ್ಟ್ಯ.

ಶ್ರೀ ಕೃಷ್ಣ ದೇವಾಲಯದ ನಂತರ ಪ್ರಾಮುಖ್ಯ ಪಡೆದಿರುವ ಆದರೆ ಅದಕ್ಕಿಂತಲೂ ಹೆಚ್ಚು ಪ್ರಾಚೀನತೆ ಹೊಂದಿರುವ ದೇವಾಲಯವೆಂದರೆ ಉಡುಪಿಯ ಅನಂತೇಶ್ವರ ದೇವಾಲಯ. ಇದು ಇಡೀ ಕರಾವಳಿ ಪ್ರದೇಶದಲ್ಲೇ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದ್ದು, ಇದರ ನಿರ್ಮಾಣ ಕೊನೆಯ ಪಕ್ಷ ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಆಗಿರಬೇಕು. ಅವ್ಯಾಹತವಾಗಿ ಹಾಗೂ ವಿಶೇಷವಾಗಿ ಮಳೆ ಬೀಳುವ ಲಕ್ಷಣ ಹೊಂದಿರುವ ಕರಾವಳಿ ಪ್ರದೇಶದ ವಾಸ್ತುಶಿಲ್ಪ ಶೈಲಿಯ ದೇವಾಲಯಗಳಿಗೆ ಇದೊಂದು ಉತ್ತಮ ಉದಾಹರಣೆ. ಇದೊಂದು ಗಜಪೃಷ್ಠಾಕೃತಿಯ ಎರಡು ಅಂತಸ್ತಿನ ದೇವಾಲಯ. ಜಗತಿಯೂ ಸೇರಿದಂತೆ ದೇವಾಲಯದ ಕೆಳಭಾಗಗಳು, ಕಂಬಗಳು ಮತ್ತು ಗರ್ಭಗೃಹ ಕಲ್ಲಿನಿಂದ ನಿರ್ಮಾಣಗೊಂಡಿದ್ದರೆ, ಅಕ್ಕಪಕ್ಕದ ಗೋಡೆಗಳು, ಮುಂದಿನ ಮಂಡಪಗಳು ಹಾಗೂ ಚಾವಣಿ ಮರದಿಂದ ಮಾಡಲ್ಪಟ್ಟಿವೆ. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಕೆಳಗಿನ ಮತ್ತು ಮೇಲಿನ ಚಾವಣಿಗಳು ಇಳಿಜಾರಾಗಿ ನಿರ್ಮಾಣಗೊಂಡಿರುವುದು. ಈ ಇಳಿಜಾರು ಚಾವಣಿಗೆ ತಾಮ್ರದ ತಗಡುಗಳನ್ನು ಹೊದಿಸಲಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಗಳ ದೇವಾಲಯಗಳಲ್ಲಿ ಕಾಣಬರುವ ಪದ್ಧತಿ. ಈ ಕಾರಣಗಳಿಂದಾಗಿ ಈ ದೇವಾಲಯ ವೈಶಿಷ್ಟ್ಯಪೂರ್ಣವಾಗಿದೆ.

ದೇವಾಲಯದ ಒಳಭಾಗದಲ್ಲಿ ಒಂದು ಗರ್ಭಗೃಹ, ಎರಡು ಮೊಗಸಾಲೆ ಮತ್ತು ಸೇರಿದಂತಿರುವ ಮಂಡಪಗಳಿವೆ. ಒಳಭಾಗದಲ್ಲಿ ಶಿಲೆಯಿಂದ ನಿರ್ಮಾಣಗೊಂಡ ಒಂದು ಗುಡಿಯಿದೆ. ಇದರಲ್ಲಿ ಮಧ್ವಾಚಾರ್ಯರ ಪವಿತ್ರ ಪೀಠವಿದೆ. ಮುಖಮಂಡಪದ ಪ್ರವೇಶದ್ವಾರದಲ್ಲಿ ಮೆಟ್ಟಿಲುಗಳು ತಾಳ್ವಾರಗಳೂ ಇವೆ. ಇದನ್ನು ಆನೆಕಲ್ಲು ಎಂದು ಕರೆಯುತ್ತಾರೆ. ನಂತರ ಗುಡಿಯ ಸುತ್ತಲೂ ವಿಶಾಲವಾದ ಪ್ರದಕ್ಷಿಣ ಪಥವಿದೆ. ನೈರುತ್ಯ ಮೂಲೆಯಲ್ಲಿ ಅಯ್ಯಪ್ಪನ ಗುಡಿಯಿದೆ. ಗರ್ಭಗುಡಿಯ ಸಮೀಪದಲ್ಲಿ ಗಣಪತಿಯ ಗುಡಿಯಿದೆ. ಉತ್ತರ ಭಾಗದಲ್ಲಿ ಒಂದು ಸಣ್ಣ ಕೊಳವಿದ್ದು, ಇದರ ಜಲವನ್ನು ದೇವರ ಅಭಿಷೇಕ ಮುಂತಾದ ಪೂಜಾಕಾರ್ಯಗಳಿಗೆ ಬಳಸಲಾಗುತ್ತದೆ. ಈ ರೀತಿ ಗರ್ಭಗೃಹವೂ ಸೇರಿದಂತೆ ಈ ಎಲ್ಲ ಭಾಗಗಳೂ ತಮ್ಮ ಮೂಲಸ್ವರೂಪವನ್ನು ಉಳಿಸಿಕೊಂಡು ಬಂದಿವೆ.

ನವರಂಗದಲ್ಲಿ ದೊಡ್ಡ ಪ್ರಮಾಣದ ಹನ್ನೆರಡು ಕಂಬಗಳಿವೆ. ಇನ್ನೊಂದು ಆಕರ್ಷಣೆಯೆಂದರೆ ದೇವಾಲಯದ ಪ್ರವೇಶದಲ್ಲಿರುವ ಹತ್ತು ಅಡಿ ಎತ್ತರದ ಬಲಿಪೀಠ. ದೇವಾಲಯದ ಮುಂಭಾಗದಲ್ಲಿರುವ ನಲವತ್ತು ಅಡಿ ಎತ್ತರದ ಕಂಬವು ವಿಜಯನಗರ ಕಾಲದ ನಿರ್ಮಾಣ. ಈ ದೇವಾಲಯಕ್ಕೆ ಸಮೀಪದಲ್ಲಿರುವ ಚಂದ್ರಮೌಳೀಶ್ವರ ಅಥವಾ ಚಂದ್ರೇಶ್ವರ ದೇವಾಲಯವೂ ಪ್ರಾಚೀನ ವಾಸ್ತುವಾಗಿದ್ದು ಕ್ರಿ.ಶ. ಒಂಬತ್ತನೆಯ ಶತಮಾನದ ರಚನೆ. ಈ ಎರಡೂ ದೇವಾಲಯಗಳನ್ನು ಪೂರ್ವ ಮತ್ತು ಪಶ್ಚಿಮ ದೇವಾಲಯಗಳೆಂದು ಕರೆಯುವ ವಾಡಿಕೆಯಿದೆ. ಹೀಗೆ ಅನಂತೇಶ್ವರ ದೇವಾಲಯವು ಕರ್ನಾಟಕ ಕರಾವಳಿ ವಾಸ್ತುಶಿಲ್ಪವನ್ನು ಮೈಗೂಡಿಸಿಕೊಂಡ ದೇವಾಲಯವಾಗಿದೆ.

ಗವಿ ಗಂಗಾಧರೇಶ್ವರ ದೇವಾಲಯ, ಬೆಂಗಳೂರು

ಬೆಂಗಳೂರಿನ ಮುಖ್ಯ ಭಾಗದಲ್ಲಿರುವ ಬಸವನಗುಡಿಯ ಗವಿಪುರಂನಲ್ಲಿರುವ ಗಂಗಾಧರೇಶ್ವರನ ಗುಹಾಲಯ ಪ್ರಾಚೀನ ಕಾಲದ ವಿಶಿಷ್ಟ ವಾಸ್ತುರಚನೆ. ಮೂಲ ಆಲಯವು ಬಂಡೆಯನ್ನು ಕೊರೆದು ಮಾಡಲಾಗಿದ್ದು ಮೂವತ್ತು ಅಡಿ ಅಗಲ ಮತ್ತು ಏಳು ಅಡಿ ಎತ್ತರದ ದ್ವಾರವಿದೆ. ಇದರ ಮುಂಭಾಗದಲ್ಲಿ ಬೆಂಗಳೂರಿನ ಸ್ಥಾಪಕ ಕೆಂಪೇಗೌಡರ ಕಾಲದಲ್ಲಿ ನಿರ್ಮಿಸಲಾದ ಮಂಡಪ ಹಾಗೂ ಶಿಖರಗಳಿವೆ. ಇದರ ಮುಂದೆ ಇರುವ ಏಕಶಿಲೆಯ ಬೃಹತ್ ಗಾತ್ರದ ತ್ರಿಶೂಲ, ಡಮರು ಮತ್ತು ಛತ್ರಿಗಳು ವಿಶೇಷ ಮಹತ್ವದ ಶಿಲ್ಪಗಳು. ಇವು ತುಂಬ ದೊಡ್ಡಗಾತ್ರದಲ್ಲಿದ್ದು ಎದ್ದು ಕಾಣುತ್ತವೆ.

ಈ ಗುಹಾಲಯದಲ್ಲಿ ಎರಡು ಗರ್ಭಗೃಹಗಳಿವೆ. ಎಡಭಾಗದ್ದು ಶಿವನಿಗೂ ಬಲಭಾಗದ್ದು ದುರ್ಗಿಗೂ ಅರ್ಪಿತವಾಗಿವೆ. ಎರಡೂ ಗಜಪೃಷ್ಠಾಕೃತಿಯಲ್ಲಿವೆ. ಗಂಗಾಧರೇಶ್ವರ ಗುಡಿಯ ಮುಂಭಾಗದಲ್ಲಿ ಸುಕನಾಸಿ ಮತ್ತು ಅದರ ಮುಂದೆ ನಂದಿ ಇದೆ. ಶಿವಲಿಂಗ ಮತ್ತು ನಂದಿಗಳೆರಡೂ ಕಲ್ಲಿನಿಂದ ಕೊರೆದವುಗಳಾಗಿವೆ. ದುರ್ಗಾ ಗುಡಿಯ ಮುಂದೆ ಸುಕನಾಸಿ ಇಲ್ಲ. ಆದರೆ ಎರಡು ಕಂಬಗಳಿವೆ. ಈ ಎರಡು ಗುಡಿಗಳಿಗೂ ಪ್ರತ್ಯೇಕ ಪ್ರದಕ್ಷಿಣ ಪಥಗಳಿವೆ. ದುರ್ಗಾದೇವಾಲಯದ ಬಲಭಾಗದಲ್ಲಿ ಒಂದು ಚೌಕಾಕಾರದ ಗುಡಿಯಿದೆ. ಅದರಲ್ಲಿ ಈಗ ಯಾವ ವಿಗ್ರಹವೂ ಇಲ್ಲ. ಬಲಭಾಗದಲ್ಲಿ ಇನ್ನೂ ಎರಡು ಸಣ್ಣ ಗುಹೆಗಳಿವೆ. ಅಲ್ಲಿರುವ ಇಟ್ಟಿಗೆ ಗೋಡೆಗಳು ಆನಂತರದ ಕಾಲದವು. ಆದರೆ ಗುಹಾಲಯದ ಒಳಭಾಗದಲ್ಲಿ ಚಾವಣಿಗೆ ಆಸರೆಯಾಗಿರುವ ಕಲ್ಲಿನಿಂದ ಕೊರೆಯಲಾದ ಕಂಬಗಳಿವೆ.

ಗಂಗಾಧರೇಶ್ವರ ದೇವಾಲಯದಲ್ಲಿ ಅರೆಗಂಬಗಳು ಮತ್ತು ಗೂಡುಗಳ ಅಲಂಕಾರಹೊಂದಿರುವ ಶಿಖರವಿದೆ. ಇದರ ಮೇಲೆ ವರ್ತುಲಾಕಾರದ ಕಲಶವಿದೆ. ಸೂರ್ಯಗುಡಿಗೆ ಅಷ್ಟಕೋನಾಕಾರದ ವಿಮಾನವಿದೆ. ಇವೆರಡೂ ಬೆಂಗಳೂರಿನ ಸ್ಥಾಪಕ ಕೆಂಪೇಗೌಡರ ಕಾಲದಲ್ಲಿ ನಿರ್ಮಾಣಗೊಂಡವು.

ಈ ದೇವಾಲಯದಲ್ಲಿ ಕೆಲವು ಸುಂದರ ಶಿಲ್ಪಗಳೂ ಇವೆ. ದುರ್ಗಾಗುಡಿಯಲ್ಲಿ ನಾಲ್ಕು ಅಡಿ ಎತ್ತರದ ನಾಲ್ಕು ಬಾಹುಗಳ ಲಕ್ಷ್ಮಿಯ ವಿಗ್ರಹವಿದೆ. ಭೈರವ, ದಕ್ಷಿಣಾಮೂರ್ತಿ, ಸಪ್ತಮಾತೃಕೆಯರ ಶಿಲ್ಪಗಳು ಒಳಭಾಗದಲ್ಲಿವೆ. ಇವುಗಳಲ್ಲಿ ಕೆಲವು ಚೋಳರ ಕಾಲದ್ದಾಗಿದ್ದು ಕ್ರಿ.ಶ. ಹನ್ನೊಂದನೆಯ ಶತಮಾನಕ್ಕೆ ಸೇರುತ್ತವೆ. ಈ ದೇವಾಲಯದ ಕಾಲವನ್ನು ನಿರ್ಣಯಿಸುವುದಕ್ಕೆ ಸಹಕಾರಿಯಾದ ಯಾವ ಶಾಸನವೂ ದೊರಕಿಲ್ಲ. ಆದರೆ ವಾಸ್ತುಶಿಲ್ಪ ಕಲಾಶೈಲಿಯ ದೃಷ್ಟಿಯಿಂದ, ಈ ದೇವಾಲಯದ ಮೂಲಭಾಗಗಳು ಚೋಳ ಅಥವಾ ಗಂಗರ ಕಾಲದ್ದಾಗಿದ್ದು, ಕ್ರಿ.ಶ. ಹನ್ನೊಂದನೆಯ ಶತಮಾನಕ್ಕೆ ಸೇರುತ್ತವೆ ಎಂದು ಭಾಸವಾಗುತ್ತದೆ. ಮಂಡಪ, ಶಿಖರ, ಏಕಶಿಲಾ ಶಿಲ್ಪಗಳು ಮುಂತಾದವು ಕೆಂಪೇಗೌಡರ ಕಾಲದಲ್ಲಿ ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಮೂಲದೇವಾಲಯಕ್ಕೆ ಸೇರ್ಪಡೆಗೊಂಡವು. ಕಲ್ಲಿನಲ್ಲಿ ಕೊರೆಯಲಾದ ದೇವಾಲಯವಾದುದರಿಂದ ಇದು ಬೆಂಗಳೂರು ನಗರದಲ್ಲಿ ವಿಶಿಷ್ಟ ದೇವಾಲಯವೆನಿಸಿದೆ.

ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು

ನಂಜನಗೂಡು, ಮೈಸೂರಿಗೆ 25 ಕಿಲೋಮೀಟರ್ ದೂರದಲ್ಲಿರುವ ಪವಿತ್ರ ಯಾತ್ರಾಸ್ಥಳ. ಇಲ್ಲಿರುವ ಶ್ರೀಕಂಠೇಶ್ವರ ಅಥವಾ ನಂಜುಂಡೇಶ್ವರನ ದೇವಾಲಯದಿಂದಾಗಿ, ಕರ್ನಾಟಕದಾದ್ಯಂತ ಇದು ಪ್ರಸಿದ್ಧಿ ಪಡೆದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನಗಳು ದೇವರ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಾರೆ. ವಿಶಾಲವಾದ ಪ್ರಾಕಾರದಲ್ಲಿರುವ ಇದರ ದ್ರಾವಿಡ ರೀತಿಯ ಗೋಪುರ ಭವ್ಯವಾಗಿದೆ. ವರ್ತುಲಾಕಾರದ ಸ್ತಂಭಗಳಿರುವ ಚೌಕಾಕಾರದ ಗರ್ಭಗೃಹ ಮತ್ತು ಅದರ ಮುಂದಿರುವ ಅಂತರಾಳ, ಗಂಗರ ಕಾಲದಲ್ಲಿ ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ನಿರ್ಮಿತವಾದವು. ಮುಂಭಾಗದಲ್ಲಿರುವ ಮಂಡಪದಲ್ಲಿ ಕ್ರಿ.ಶ. ಹದಿಮೂರನೆಯ ಶತಮಾನದ ಹೊಯ್ಸಳ ಶೈಲಿಯ ಕಂಬಗಳಿವೆ. ಅಲ್ಲಿರುವ ನೃತ್ಯ ಗಣಪತಿಯ ಶಿಲ್ಪವೂ ಹೊಯ್ಸಳ ಕಾಲದ್ದು.

ಪ್ರಧಾನ ದೇವಾಲಯದ ಎಡಭಾಗದಲ್ಲಿ ನಾರಾಯಣನ ಗುಡಿಯೂ, ಅದರ ಹಿಂಭಾಗದಲ್ಲಿ ಚಂಡಿಕೇಶ್ವರನ ಗುಡಿಯೂ ಇದೆ. ವಾಯವ್ಯದಲ್ಲಿ ಪಾರ್ವತಿ ದೇವಾಲಯವಿದೆ. ಇದಕ್ಕೆ ಕಂಬಗಳುಳ್ಳ ಸಭಾಮಂಟಪವಿದೆ. ಪಾರ್ವತಿ, ನಾರಾಯಣ ದೇಗುಲಗಳು ಹಾಗೂ ಗೋಪುರವು ವಿಜಯನಗರದ ಕಾಲದ ರಚನೆಗಳು. ಪ್ರಧಾನ ಆಲಯದ ಬಲಭಾಗದಲ್ಲಿ ಏಳು ಹೆಡೆಗಳ ಸರ್ಪದ ಅಡಿಯಲ್ಲಿ ನವಿಲಿನ ಮೇಲೆ ಕುಳಿತಿರುವ ಸುಬ್ರಹ್ಮಣ್ಯನ ವಿಗ್ರಹವಿರುವ ಸಣ್ಣ ಗುಡಿ ಇದೆ. ಪ್ರಧಾನ ಆಲಯದ ಮೇಲೆ ವಿಜಯನಗರ ಕಾಲದ ಗಾರೆಯ ಶಿಖರವಿದೆ. ಮೈಸೂರಿನ ಒಡೆಯರ್ ದೊರೆಗಳೂ ಈ ದೇವಾಲಯಕ್ಕೆ ಕೆಲವು ಭಾಗಗಳನ್ನು ಸೇರಿಸಿದರು. ಒಂಬತ್ತು ಹಂತಗಳ ಎತ್ತರದ ದ್ರಾವಿಡಶೈಲಿಯ ಗಾರೆಯ ಗೋಪುರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ರಾಣಿ ದೇವಾಜಮ್ಮಣ್ಣಿಯು ಕ್ರಿ.ಶ. 1849ರಲ್ಲಿ ನಿರ್ಮಿಸಿದಳು. ದಳವಾಯಿ ವಿಕ್ರಮರಾಯನು ನಿರ್ಮಿಸಿದ ಆರು ಅಡಿ ಎತ್ತರದ ಭವ್ಯ ನಂದಿಯನ್ನುಳ್ಳ ಗುಡಿಯು ಅಂಗಳಕ್ಕೆ ಮುಖಮಾಡಿದೆ.

ಸುತ್ತಲೂ ಪ್ರಾಕಾರದಲ್ಲಿ ಸಣ್ಣ ಗುಡಿಗಳಿದ್ದು ಅವುಗಳಲ್ಲಿ 122 ವಿಗ್ರಹಗಳಿವೆ. ಇವುಗಳಲ್ಲಿ ಮುಖ್ಯವಾದವು ದಿಕ್ಪಾಲರು, ವೀರಭದ್ರ, ದಕ್ಷಿಣಾಮೂರ್ತಿ, ತಾಂಡವೇಶ್ವರ, ಶಿವನ ವಿವಿಧ ರೂಪಗಳು, ಗಣಪತಿ, ಸಪ್ತಮಾತೃಕೆಯರು, ಇತ್ಯಾದಿ. ಗರ್ಭಗೃಹದಲ್ಲಿರುವ ಶಿವಲಿಂಗವು ಸುಮಾರು ಮೂರು ಅಡಿ ಎತ್ತರವಾಗಿದ್ದು, ಅದಕ್ಕೆ ಪೂಜೆಗಳು ನಡೆಯುತ್ತವೆ. ಪಾರ್ವತಿ ವಿಗ್ರಹವು ಸುಮಾರು ಐದು ಅಡಿ ಎತ್ತರವಾಗಿದ್ದು ಅದೊಂದು ಮಧ್ಯಕಾಲೀನ ಸುಂದರ ಶಿಲ್ಪ. ಈ ರೀತಿ ಈ ದೇವಾಲಯಕ್ಕೆ ಕ್ರಿ.ಶ. ಹತ್ತನೆಯ ಶತಮಾನದಿಂದ ಆರಂಭವಾಗಿ ಸಾವಿರ ವರ್ಷಗಳ ಇತಿಹಾಸವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಈ ದೇವಾಲಯದ ಪೋಷಕರಾಗಿದ್ದರು. ಪತ್ನಿಯರ ಸಮೇತ ಇರುವ ಅವರ ಶಿಲ್ಪಗಳು ಈ ದೇವಾಲಯದಲ್ಲಿವೆ. ಪವಿತ್ರವಾದ ಕಪಿಲಾ ತೀರದಲ್ಲಿರುವ ಇದು ಪುರಾಣ ಕಾಲದಲ್ಲಿ ಗೌತಮ ಮತ್ತು ಪರಶುರಾಮಕ್ಷೇತ್ರ ಎಂದು ಪ್ರಖ್ಯಾತವಾಗಿತ್ತು. ಹೈದರ್ ಮತ್ತು ಟಿಪ್ಪುಸುಲ್ತಾನ್ ಕೂಡ ಈ ದೇವಾಲಯಕ್ಕೆ ಕೆಲವು ಕೊಡುಗೆಗಳನ್ನು ನೀಡಿದ್ದರು. ಶ್ರೀಕಂಠೇಶ್ವರ ಕರ್ನಾಟಕದಲ್ಲಿರುವ ಸಾವಿರಾರು ಕುಟುಂಬಗಳಿಗೆ ಮನೆದೇವರು. ಆದುದರಿಂದ ಈ ಕುಟುಂಬಗಳು ತಮ್ಮ ಮನೆಯಲ್ಲಿ ನಡೆಯುವ ದೊಡ್ಡ ಸಮಾರಂಭಗಳಿಗೆ ಮುಂಚೆ ಇಲ್ಲವೇ ಅನಂತರ ಇಲ್ಲಿಗೆ ಬಂದು ದರ್ಶನ ಪಡೆಯುತ್ತಾರೆ. ವರ್ಷಂಪ್ರತಿ ನಡೆಯುವ ನಂಜನಗೂಡಿನ ರಥೋತ್ಸವ ಸುತ್ತಮುತ್ತಲಿನ ಸಾವಿರಾರು ಜನಗಳನ್ನು ಆಕರ್ಷಿಸುತ್ತದೆ. ಈ ರೀತಿ ಇದು ಕರ್ನಾಟಕದಲ್ಲಿ ಪವಿತ್ರ ಶೈವ ಕ್ಷೇತ್ರಗಳಲ್ಲಿ ಮುಖ್ಯವಾದುದು.

ಭೋಗನಂದೀಶ್ವರ ದೇವಾಲಯ, ನಂದಿ

ಕೋಲಾರ ಜಿಲ್ಲೆಯಲ್ಲಿರುವ ಭೋಗನಂದೀಶ್ವರ ದೇವಾಲಯ, ಕರ್ನಾಟಕದಲ್ಲಿರುವ ಸುಂದರ ದ್ರಾವಿಡ ದೇವಾಲಯಗಳಲ್ಲಿ ಮುಖ್ಯವಾದುದು. ವಾಸ್ತವವಾಗಿ ಇದು ಒಂದು ದೇವಾಲಯವಲ್ಲ; ಕ್ರಿ.ಶ. ಎಂಟನೆಯ ಶತಮಾನದಿಂದ ಆರಂಭವಾಗಿ ಆರುನೂರು ವರ್ಷಗಳಲ್ಲಿ ಬೆಳೆದು ಬಂದ ದೇವಾಲಯ ಸಂಕೀರ್ಣ. ಇಲ್ಲಿ ದೊರಕಿರುವ ಶಾಸನಗಳನ್ನು ಆಧರಿಸಿ ಹೇಳುವುದಾದರೆ ಬಾಣ ದೊರೆ ವಿದ್ಯಾಧರನ ರಾಣಿ ರತ್ನಾವಳಿಯು ಈ ದೇವಾಲಯವನ್ನು ನಿರ್ಮಿಸಿದಳು. ಬಾಣ ವಿದ್ಯಾಧರನು ಕ್ರಿ.ಶ. ಎಂಟನೆಯ ಶತಮಾನದ ಕೊನೆಯ ಪಾದದಲ್ಲಿ ಆಳುತ್ತಿದ್ದನೆಂದು ತಿಳಿದಿರುವುದರಿಂದ ಈ ದೇವಾಲಯದ ಅತ್ಯಂತ ಪ್ರಾಚೀನ ಭಾಗವು ಆ ಕಾಲಕ್ಕೆ ಸೇರಿದ್ದೆಂದು ಹೇಳಬೇಕಾಗುತ್ತದೆ. ಈ ದೇವಾಲಯದಲ್ಲಿ ಕ್ರಿ.ಶ. ಹನ್ನೊಂದನೆಯ ಶತಮಾನದ ಅನೇಕ ಚೋಳರ ಶಾಸನಗಳೂ ದೊರಕಿವೆ.

320 ಅಡಿ ಉದ್ದ ಮತ್ತು 250 ಅಡಿ ಅಗಲವಿರುವ ವಿಶಾಲವಾದ ಪ್ರಾಕಾರದಲ್ಲಿ ಈ ದೇವಾಲಯವಿದೆ. ಮೂಲ ದೇವಾಲಯದಲ್ಲಿ ಎರಡು ಗರ್ಭಗೃಹಗಳು, ಎರಡು ಸುಕನಾಸಿ, ಒಂದು ನವರಂಗ ಮತ್ತು ಎರಡು ನಂದಿ ಮಂಡಪಗಳಿದ್ದವು. ಉತ್ತರ ಮತ್ತು ದಕ್ಷಿಣ ಗರ್ಭಗೃಹಗಳು ಕ್ರಮವಾಗಿ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವರುಗಳಿಗಾಗಿ ನಿರ್ಮಾಣಗೊಂಡಿದ್ದವು. ಸುಕನಾಸಿ ಮತ್ತು ನವರಂಗಗಳಲ್ಲಿ ಶಿಲ್ಪಾಲಂಕಾರಗಳೂ ಸುಂದರ ಜಾಲಂಧ್ರಗಳೂ ಇವೆ. ನಂದಿ ಮಂಡಪದಲ್ಲಿ ಚೋಳರ ಶಾಸನಗಳಿದ್ದು, ಬಹುಶಃ ಇದು ಚೋಳರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು. ನವರಂಗದಲ್ಲಿರುವ ನಾಲ್ಕು ಕಂಬಗಳ ನಾಲ್ಕೂ ಕಡೆ ನಾಜೂಕಾದ ಕೆತ್ತನೆಗಳಿವೆ. ಈ ಕಂಬಗಳ ಚಾವಣಿಯ ಮೇಲಿರುವ ಭುವನೇಶ್ವರಿಯಲ್ಲಿ ಶಿವ ಪಾರ್ವತಿಯರು ಮತ್ತು ಅಷ್ಟದಿಕ್ಪಾಲರ ಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣಗಳಲ್ಲಿ ಪ್ರವೇಶದ್ವಾರಗಳಿರುವ ನಂದಿ ಮಂಡಪವಿದೆ. ಇದರ ಮುಂಭಾಗದಲ್ಲಿ ಕರಿಕಲ್ಲಿನ ಕಲ್ಯಾಣಮಂಡಪವಿದೆ. ಅದರಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳ ಭುವನೇಶ್ವರಿ ಇದೆ. ಮೇಲಿನ ಕಲ್ಲಿನ ಜಂತಿಗಳಲ್ಲಿ ಶಿವ, ವಿಷ್ಣು, ಲಕ್ಷ್ಮೀ ಮುಂತಾದ ಶಿಲ್ಪಗಳಿವೆ. ಕಂಬಗಳ ಮೇಲೆ, ಹನುಮಾನ್, ವಿಷ್ಣು, ಲಿಂಗೋದ್ಭವ, ಕೃಷ್ಣ, ಸೂರ್ಯ, ತಾಂಡವೇಶ್ವರ, ಬ್ರಹ್ಮ, ಗೋಪಾಲಕೃಷ್ಣ ಮುಂತಾದ ಕೆತ್ತನೆಗಳಿವೆ. ಮುಖಮಂಡಪದ ಮುಂದಿರುವ ಪಾತಾಳಾಂಕಣ ಒಂದು ಮೊಗಸಾಲೆಯಿಂದ ಆವೃತವಾಗಿದ್ದು, ಅಲಂಕೃತ ಜಗತಿಯ ಮೇಲಿದೆ.

ಪ್ರಾಚೀನ ದೇವಾಲಯದ ಹೊರಗೋಡೆಗಳ ಮೇಲೆ ಅಲಂಕೃತ ದಿಂಡುಗಳು, ಅರೆಗಂಬಗಳು, ಸೂಕ್ಷ್ಮ ಪ್ರಮಾಣದ ಶಿಖರಗಳು, ಜಾಲಂಧ್ರಗಳು ಮತ್ತು ಅಲ್ಲಲ್ಲಿ ಕೆಲವು ಶಿಲ್ಪಗಳಿವೆ. ಪ್ರಾಕಾರದಲ್ಲಿ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರರ ಪತ್ನಿಯರಾದ ಪ್ರಸನ್ನ ಪಾರ್ವತಿ ಮತ್ತು ಅಪಿತಕುಚಾಂಬಾ ದೇವಿಯರ, ಅನಂತರದ ಕಾಲದ ಗುಡಿಗಳಿವೆ. ಹೊರಭಾಗದ ಉತ್ತರದ ಕಡೆ ಹದಿನಾರು ಕಂಬಗಳ ವಸಂತ ಮಂಡಪವಿದೆ. ಅದರ ಎದುರಿಗೆ ಪುಷ್ಕರಿಣಿ ಇದೆ. ಈ ರೀತಿ ಇದು ವಿಶಾಲವಾಗಿರುವ ಸುಂದರ ದೇವಾಲಯ ಸಂಕೀರ್ಣವಾಗಿದ್ದು ಹೆಚ್ಚಿನ ಸಂಖ್ಯೆಯ ಭಕ್ತರನ್ನು ಆಕರ್ಷಿಸುತ್ತದೆ.

ಪಂಚಕೂಟ ಬಸದಿ, ಕಂಬದಹಳ್ಳಿ

ಕಂಬದಹಳ್ಳಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿರುವ ಒಂದು ಸಣ್ಣಗ್ರಾಮ. ಈ ಗ್ರಾಮವನ್ನು ಪ್ರವೇಶಿಸಿದ ಕೂಡಲೆ ಐವತ್ತು ಅಡಿಗಳ ಎತ್ತರದ ಕಂಬವು ಯಾತ್ರಿಕರನ್ನು ಸ್ವಾಗತಿಸುತ್ತದೆ. ಈ ಭವ್ಯ ಕಂಬದಿಂದಾಗಿ ಈ ಗ್ರಾಮಕ್ಕೆ ಕಂಬದ ಹಳ್ಳಿ ಎಂದು ಹೆಸರು ಬಂದಿದೆ. ಈ ಎತ್ತರದ ಕಂಬದ ತುದಿಯಲ್ಲಿ ಒಂದು ಪುಟ್ಟ ಮಂಡಪವಿದ್ದು, ಅದರಲ್ಲಿ ಪೂರ್ವಾಭಿಮುಖವಾಗಿರುವ ಬ್ರಹ್ಮನ ವಿಗ್ರಹವಿದೆ. ಬಹುಶಃ ಇದು ಕರ್ನಾಟಕದಲ್ಲಿರುವ ಈ ರೀತಿಯ ಕಂಬಗಳಲ್ಲಿ ಅತ್ಯಂತ ಎತ್ತರವಾದದ್ದೆಂದು ಭಾವಿಸಲಾಗಿದೆ. ಕಂಬದ ದಕ್ಷಿಣಕ್ಕೆ ಪಂಚಬಸದಿ ಅಥವಾ ಪಂಚಕೂಟ ಬಸದಿ ಎಂಬ ಐದು ಗರ್ಭಗೃಹಗಳ ಜೈನ ದೇವಾಲಯವಿದೆ. ಈ ಐದು ಗರ್ಭಗೃಹಗಳಿಗೂ ದ್ರಾವಿಡ ರೀತಿಯ ಶಿಖರಗಳಿವೆ. ದೇವಾಲಯದ ಅಧಿಷ್ಠಾನವನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಲಾಗಿದೆ. ಅಧಿಷ್ಠಾನದಲ್ಲಿ ಸಾದಾ ದಿಂಡುಗಳು ಮತ್ತು ಅವುಗಳ ಮೇಲೆ ಅಲಂಕೃತ ದಿಂಡುಗಳೂ ಇವೆ.

ಉತ್ತರಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ಆದಿನಾಥ ತೀರ್ಥಂಕರನ ವಿಗ್ರಹವಿದೆ. ಕುಳಿತಿರುವ ಈ ವಿಗ್ರಹದ ಎರಡು ಕಡೆಗಳಲ್ಲಿ ಚಾಮರಧಾರರಿದ್ದಾರೆ. ಸುಕನಾಸಿಯಲ್ಲಿ ನಿಂತಿರುವ ಎರಡು ಪಾರ್ಶ್ವನಾಥ ವಿಗ್ರಹಗಳಿವೆ. ನವರಂಗದಲ್ಲಿ ಇನ್ನೊಬ್ಬ ತೀರ್ಥಂಕರನ ವಿಗ್ರಹವಿದೆ. ನವರಂಗದ ಭುವನೇಶ್ವರಿಯು ಚಪ್ಪಟೆಯಾಗಿದ್ದು, ಧರಣೇಂದ್ರ ಯಕ್ಷ ಮತ್ತು ಅಷ್ಟ ದಿಕ್ಪಾಲರ ತಗ್ಗು ಶಿಲ್ಪಗಳಿವೆ. ಧರಣೇಂದ್ರ ಯಕ್ಷನನ್ನು ಶಂಖವನ್ನು ಊದುತ್ತಿರುವಂತೆ ಕೆತ್ತಲಾಗಿದೆ. ಚಪ್ಪಟೆಯಾಗಿ ವಿನ್ಯಾಸಗೊಳಿಸಲಾಗಿದ್ದರೂ, ನವಿರಾದ ಶಿಲ್ಪಗಳಿಂದ ಇದು ನೋಡಲು ಅಂದವಾಗಿ ಕಾಣಬರುತ್ತದೆ. ಪ್ರಧಾನ ಗರ್ಭಗೃಹದ ಉತ್ತರ ಮತ್ತು ದಕ್ಷಿಣಗಳಲ್ಲಿ ಇನ್ನೆರಡು ಗರ್ಭಗೃಹಗಳಿವೆ. ಬಲಭಾಗದ ಗರ್ಭಗೃಹದಲ್ಲಿ ಕುಳಿತಿರುವ ನೇಮಿನಾಥನ ವಿಗ್ರಹವೂ, ಎಡಭಾಗದ ಗರ್ಭಗೃಹದಲ್ಲಿ ಶಾಂತಿನಾಥನ ವಿಗ್ರಹವೂ ಇದೆ. ಉತ್ತರದಲ್ಲಿ ಪರಸ್ಪರ ಅಭಿಮುಖವಾಗಿರುವ ಇನ್ನೆರಡು ಗರ್ಭಗುಡಿಗಳಿವೆ. ಹೀಗೆ ಈ ದೇವಾಲಯದಲ್ಲಿ ಒಟ್ಟು ಐದು ಗರ್ಭಗೃಹಗಳಿರುವುದರಿಂದ, ಇದಕ್ಕೆ ಪಂಚಕೂಟ ಬಸದಿ ಎಂಬ ಹೆಸರು ಬಂದಿದೆ. ಈ ರೀತಿ ಐದು ಗರ್ಭಗೃಹಗಳನ್ನು ಸಮಂಜಸವಾಗಿ ಒಂದೆಡೆ ಅಳವಡಿಸಿರುವುದೇ ಇಲ್ಲಿನ ಪ್ರಮುಖ ಆಕರ್ಷಣೆ. ಈ ಎರಡರ ಚಾವಣಿಯಲ್ಲಿ ಧರಣೇಂದ್ರ ಯಕ್ಷ ಮತ್ತು ಅಷ್ಟ ದಿಕ್ಪಾಲರ ತಗ್ಗು ಶಿಲ್ಪಗಳಿವೆ. ಈ ದೇವಾಲಯಗಳ ಹೊರಗೋಡೆಗಳ ಗೂಡುಗಳಲ್ಲಿ ತೀರ್ಥಂಕರರ ಶಿಲ್ಪಗಳಿವೆ. ಗೋಡೆಗಳಲ್ಲಿ ಅಲಂಕೃತ ದಿಂಡುಗಳಿವೆ. ಅವುಗಳಲ್ಲಿ ಲತಾಲಂಕಾರ, ಮಕರ, ಯಾಳಿ, ಗಂಧರ್ವರು, ಮುಕ್ಕೊಡೆ, ಮತ್ಸ್ಯ, ಸಿಂಹ ಮುಖ, ಚೈತ್ಯ ಗವಾಕ್ಷಗಳಿದ್ದವು. ದೇವಾಲಯದ ಕೆಳಭಾಗವು ಅಷ್ಟಕೋನಾಕೃತಿಯಲ್ಲಿದ್ದು, ಅವುಗಳ ಪಟ್ಟಿಕೆಯಲ್ಲಿ ಜಿನ, ಯಕ್ಷ ಮತ್ತು ಇತರ ಅಲಂಕಾರಗಳಿವೆ. ಶಿಖರಗಳು ಚೌಕ, ವೃತ್ತಾಕಾರ, ಅಷ್ಟಕೋನಾಕಾರವಾಗಿದ್ದು ವೈವಿಧ್ಯತೆಯನ್ನು ತೋರಿಸುತ್ತವೆ. ಅವುಗಳಲ್ಲಿ ವಿವಿಧ ರೀತಿಯ ಅಲಂಕಾರಗಳೂ ಇವೆ. ಈ ದೇವಾಲಯದ ನಿರ್ಮಾಣ ಕಾಲವನ್ನು ಖಚಿತವಾಗಿ ತಿಳಿಯುವ ಶಾಸನಗಳು ದೊರಕಿಲ್ಲ. ಆದರೆ ಶೈಲಿಯ ಆಧಾರದ ಮೇಲೆ ಈ ದೇವಾಲಯದ ನಿರ್ಮಾಣ ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಆಯಿತೆಂದು ಭಾವಿಸಲಾಗಿದೆ.

ಕಂಬದಹಳ್ಳಿಯು ಹೊಯ್ಸಳರ ಕಾಲದ ಶಾಂತಿನಾಥ ಬಸದಿಗೂ ಪ್ರಸಿದ್ಧವಾಗಿದೆ.

ಚಾಮುಂಡರಾಯ ಬಸದಿ, ಶ್ರವಣಬೆಳಗೊಳ

ಶ್ರವಣಬೆಳಗೊಳದಲ್ಲಿರುವ ಚಾಮುಂಡರಾಯ ಬಸದಿಯು ಬೆಟ್ಟದ ಮೇಲಿರುವ ದೇವಾಲಯಗಳಲ್ಲಿ ವಿಶಾಲವಾಗಿದ್ದು ಶೈಲಿ ಮತ್ತು ಅಲಂಕಾರಗಳಿಂದ ಗಮನಾರ್ಹವಾಗಿದೆ. ಇದರ ಉದ್ದ 68 ಅಡಿ ಮತ್ತು ಅಗಲ 36 ಅಡಿ. ದೇವಾಲಯದಲ್ಲಿ ಒಂದು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಡಪಗಳಿವೆ. ಗರ್ಭಗೃಹದ ಮೇಲೆ ಇನ್ನೊಂದು ಗರ್ಭಗೃಹ ಹಾಗೂ ದ್ರಾವಿಡ ರೀತಿಯ ವಿಮಾನವಿದೆ. ಹೊರಗೋಡೆಯ ಮೇಲೆ ಅರೆಗಂಬಗಳು, ಅಲಂಕೃತ ಗೂಡುಗಳು, ಯಾಳಿಗಳು ಮತ್ತು ಜಿನ ವಿಗ್ರಹಗಳಿರುವ ಪಟ್ಟಿಕೆಗಳಿವೆ. ಮೇಲಿನ ಅಂತಸ್ತಿನ ಗರ್ಭಗೃಹದ ಹೊರಗೋಡೆಯ ಮೇಲೂ ಇದೇ ರೀತಿಯ ಪಟ್ಟಿಕೆಗಳೂ ಇವೆ. ಇವು ತುಂಬ ಸುಂದರವಾಗಿದ್ದು ದೂರದಿಂದಲೇ ಯಾತ್ರಿಕರನ್ನು ಸೆಳೆಯುತ್ತವೆ. ಮುಖಮಂಡಪದಲ್ಲಿ ನಾಲ್ಕು ಕಂಬಗಳಿದ್ದು, ಮೂರು ಕಡೆಗಳಲ್ಲಿ ಇಳಿಜಾರಾದ ಮುಂಜೂರಿದೆ. ಈ ರೀತಿ ಎಲ್ಲ ದೃಷ್ಟಿಗಳಿಂದಲೂ ಇದೊಂದು ಸುಂದರ ಬಸದಿ ಎನಿಸಿದೆ. ದೇವಾಲಯದ ಕೆಳಭಾಗವೂ ಗಮನಾರ್ಹವಾದುದು. ಅಧಿಷ್ಠಾನದಲ್ಲಿ ಅಲಂಕಾರರಹಿತ ಪಟ್ಟಿಕೆಯಿದ್ದು ಅದರ ಮೇಲೆ ಸ್ವಲ್ಪ ಮುಂಚಾಚಿರುವ ದಿಂಡು ಇದೆ. ಇದರ ಮೇಲೆ ಇನ್ನೊಂದು ಇದೇ ರೀತಿಯ ದಿಂಡು ಕಾಣಬರುತ್ತದೆ. ಎರಡು ದಿಂಡುಗಳ ಮಧ್ಯ ಭಾಗದಲ್ಲಿ ಸಣ್ಣಪುಟ್ಟ ಅಲಂಕಾರಿಕ ವಿನ್ಯಾಸಗಳನ್ನು ಕೆತ್ತಲಾಗಿದೆ. ಇದರ ಮೇಲೆ ಭಿತ್ತಿಯಲ್ಲಿ ಅರೆಗಂಬಗಳಿವೆ. ಇದರ ಮೇಲೆ ಚಾವಣಿಯ ಹಂತದಲ್ಲಿ ಅಲಂಕೃತ ಮುಂಜೂರು ಇದೆ. ದೇವಾಲಯದಲ್ಲೇ ಇದು ಅಲಂಕೃತವಾದ ಭಾಗ ಎಂದು ಹೇಳಬಹುದು.

ಕೆಳಗಿನ ಗರ್ಭಗೃಹದಲ್ಲಿ ಈಗ ನೇಮಿನಾಥನ ವಿಗ್ರಹವಿದೆ. ಇದು ಐದು ಅಡಿ ಎತ್ತರವಾಗಿದ್ದು ಎರಡು ಕಡೆಗಳಲ್ಲಿಯೂ ಚಾಮರಧಾರಿಯರಿದ್ದಾರೆ. ಗರ್ಭಗೃಹದ ಬಾಗಿಲುವಾಡದಲ್ಲಿ ಸರ್ವಾಣ್ಹಯಕ್ಷ ಮತ್ತು ಕೂಷ್ಮಾಂಡಿನೀ ಯಕ್ಷಿಯರ ಶಿಲ್ಪಗಳಿವೆ. ಈಗಿನ ನೇಮಿನಾಥ ಶಿಲ್ಪವು ಮೂಲತಃ ಬೇರೆ ದೇವಾಲಯಕ್ಕೆ ಸೇರಿದ್ದಿತೆಂದು ಭಾವಿಸಲಾಗಿದೆ. ಮೇಲಿನ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಪಾರ್ಶ್ವನಾಥ ವಿಗ್ರಹವಿದೆ. ಇದರ ಪೀಠದ ಮೇಲೆ ಒಂದು ಶಾಸನವಿದೆ. ಈ ದೇವಾಲಯವನ್ನು ಚಾಮುಂಡರಾಯನ ಮಗನಾದ ಜಿನದೇವನು ನಿರ್ಮಿಸಿದನೆಂದು ಈ ಶಾಸನ ತಿಳಿಸುತ್ತದೆ. ಬಹುಶಃ ಇದು ಮೇಲಿನ ಗರ್ಭಗೃಹದಲ್ಲಿ ಸ್ಥಾಪಿಸಿದ ವಿಗ್ರಹಕ್ಕೆ ಸಂಬಂಧಿಸಿದ್ದೆಂದು ಭಾವಿಸಲಾಗಿದೆ. ನೇಮಿನಾಥನ ವಿಗ್ರಹದ ಪೀಠದ ಮೇಲೆ ಇನ್ನೊಂದು ಶಾಸನವಿದೆ. ಹೊಯ್ಸಳ ಗಂಗರಾಜನ ಮಗ ಏಚಣನು ಈ ವಿಗ್ರಹವನ್ನು ಕ್ರಿ.ಶ. 1128ರಲ್ಲಿ ಸ್ಥಾಪಿಸಿದನೆಂದು ಈ ಶಾಸನ ತಿಳಿಸುತ್ತದೆ. ಈ ಎಲ್ಲ ಮಾಹಿತಿಗಳನ್ನೂ ಗಮನಿಸಿದರೆ, ಚಾಮುಂಡರಾಯ ಈ ದೇವಾಲಯವನ್ನು ಕ್ರಿ.ಶ. 982ರಲ್ಲಿ ಸ್ಥಾಪಿಸಿದನೆಂದೂ, ಅವನ ಮಗ ಜಿನದೇವನು ಮೇಲಿನ ಗರ್ಭಗೃಹವನ್ನು ಕ್ರಿ.ಶ. 995ರಲ್ಲಿ ಸೇರಿಸಿದನೆಂದೂ, ಈಗಿರುವ ವಿಗ್ರಹವನ್ನು ಕ್ರಿ.ಶ. 1128ರಲ್ಲಿ ಸ್ಥಾಪಿಸಲಾಯಿತೆಂದು ತೀರ್ಮಾನಿಸಬಹುದು. ಈ ದೇವಾಲಯದ ಹೆಸರೇ ತಿಳಿಸುವಂತೆ ಅತ್ಯಂತ ಭವ್ಯವಾದ ಹಾಗೂ ಎತ್ತರವಾದ ಗೊಮ್ಮಟೇಶ್ವರ ವಿಗ್ರಹವನ್ನು ನಿರ್ಮಿಸಿ ಖ್ಯಾತನಾಗಿರುವ ಮಂತ್ರಿ ಚಾಮುಂಡರಾಯನೇ ಈ ದೇವಾಲಯವನ್ನು ನಿರ್ಮಿಸಿದನೆಂಬುದು ಖಚಿತವಾಗುತ್ತದೆ. ಶ್ರವಣಬೆಳಗೊಳದಲ್ಲಿ ನಿರ್ಮಿತವಾದ ಗಂಗರ ಕಾಲದ ದೇವಾಲಯಗಳಲ್ಲಿ ಚಾಮುಂಡರಾಯ ಬಸದಿಯು ಪ್ರಮುಖವಾದುದು.

## ಅಗಸ್ತ್ಯೇಶ್ವರ ದೇವಾಲಯ, ಟಿ.ನರಸಿಪುರ

ತಿರುಮಕೂಡಲು ನರಸಿಪುರ ಅಥವಾ ಟಿ.ನರಸಿಪುರ, ಕಾವೇರಿ, ಕಪಿಲಾ ಮತ್ತು ಸ್ಫಟಿಕ ಸರೋವರ (ಹೊರಗಡೆ ಕಾಣದಿರುವ)ಗಳ ಪವಿತ್ರ ಸಂಗಮ ಸ್ಥಳ. ಇದನ್ನು ದಕ್ಷಿಣ ಭಾರತದ ಪ್ರಯಾಗ ಎಂದೂ ಕರೆಯುವುದುಂಟು. ಐತಿಹ್ಯಗಳ ಪ್ರಕಾರ, ಅಗಸ್ತ್ಯ ಮಹರ್ಷಿಯು ಹನುಮಂತನಿಗೆ ನರ್ಮದಾನದಿಯಿಂದ ಒಂದು ಶಿವಲಿಂಗವನ್ನು ತರುವಂತೆ ಆಜ್ಞಾಪಿಸಿದನು. ಆದರೆ ಹನುಮಂತನು ಹಿಂತಿರುಗಿ ಬರುವುದು ತಡವಾಯಿತು. ಇದರಿಂದ ಕೋಪಗೊಂಡ ಅಗಸ್ತ್ಯ ಮುನಿಯು ಮರಳಿನಿಂದಲೇ ಒಂದು ಶಿವಲಿಂಗವನ್ನು ಮಾಡಿ ಅದನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಿದನು. ಆದುದರಿಂದ ಈ ಶಿವಲಿಂಗ ಆಗಸ್ತ್ಯೇಶ್ವರ ಎನ್ನುವ ಹೆಸರಿನಿಂದ ಪ್ರಸಿದ್ಧಿ ಪಡೆಯಿತು.

ಇದೊಂದು ದ್ರಾವಿಡ ಮಾದರಿಯ ದೇವಾಲಯ ಸಂಕೀರ್ಣ. ಇದರ ಪ್ರಾಚೀನತಮ ಭಾಗವಾದ ಗರ್ಭಗೃಹವು ಗಂಗ ಅಥವಾ ಚೋಳರ ಕಾಲದ್ದಾಗಿದ್ದು, ಆನಂತರದ ಕಾಲದಲ್ಲಿ, ಅಂದರೆ ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಆಳ್ವಿಕೆಯ ಸಮಯಗಳಲ್ಲಿ ಇತರ ಭಾಗಗಳು ಸೇರಿಸಲ್ಪಟ್ಟವು. ಈ ದೇವಾಲಯದಲ್ಲಿ ಒಂದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಡಪಗಳಿವೆ. ಆನಂತರ ಅಂದರೆ ಬಹುಶಃ ಹತ್ತೊಂಬತ್ತನೆಯ ಶತಮಾನದಲ್ಲಿ ಇನ್ನೊಂದು ಮಂಡಪವನ್ನು ಸೇರಿಸಲಾಯಿತು. ಈ ಎಲ್ಲ ಭಾಗಗಳನ್ನು ಒಳಗೊಂಡಂತೆ ವಿಶಾಲವಾದ ಪ್ರಾಕಾರವನ್ನು ನಿರ್ಮಿಸಲಾಯಿತು. ಇದರ ಮುಂದೆ ದೀಪಸ್ತಂಭವನ್ನು ಹೊಂದಿರುವ ತೋರಣವನ್ನು ಸೇರಿಸಲಾಯಿತು. ನವರಂಗದಲ್ಲಿ ಹೊಯ್ಸಳ ಶೈಲಿಯ ಕಂಬಗಳಿವೆ.

ಮಂಡಪದ ಪೂರ್ವಚಾವಣಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಒಳಗೊಂಡ ವರ್ಣಚಿತ್ರಗಳಿವೆ. ಇದು ಒಡೆಯರ್ ಕಾಲದ ವರ್ಣಚಿತ್ರಕ್ಕೆ ಉತ್ತಮ ಉದಾಹರಣೆ. ದೇವಾಲಯದ ವಿವಿಧ ಭಾಗಗಳಲ್ಲಿ ಕೆಲವು ಸುಂದರ ಶಿಲ್ಪಗಳನ್ನು ಅಳವಡಿಸಲಾಗಿದೆ. ಅವುಗಳಲ್ಲಿ ಗಮನಾರ್ಹವಾದವು ಸುಬ್ರಹ್ಮಣ್ಯ, ಗಣಪತಿ, ಮಹಿಷಮರ್ದಿನಿ, ದುರ್ಗಿ, ವಿಷ್ಣು, ದಕ್ಷಿಣಾಮೂರ್ತಿ ಮತ್ತು ದ್ವಾರಪಾಲ ಶಿಲ್ಪಗಳು.

ಗರ್ಭಗುಡಿಯ ವಾಯವ್ಯದಲ್ಲಿ ದೇವಿ ಗುಡಿಯಿದೆ. ಅಗಸ್ತ್ಯೇಶ್ವರನ ಪತ್ನಿಯ ಹೆಸರು ಪೂರ್ಣಮಂಗಳ ಕಾಮಾಕ್ಷಿ. ವಿಜಯನಗರ ದೊರೆ ಕೃಷ್ಣದೇವರಾಯನ ಅರಮನೆಯಲ್ಲಿ ಅಧಿಕಾರ ನೋಡಿಕೊಳ್ಳುತ್ತಿದ್ದ ಒಬ್ಬ ವ್ಯಾಪಾರಿಯಿಂದ ಈ ದೇವತೆಯ ಗುಡಿಯು ನಿರ್ಮಿಸಲ್ಪಟ್ಟಿತು. ಸ್ಥಳೀಯವಾಗಿ ಅಶ್ವತ್ಥನಾರಾಯಣ ಎಂಬ ಹೆಸರಿನಿಂದ ಕರೆಯಲಾಗುವ ವಿಷ್ಣುವಿನ ಶಿಲ್ಪವೊಂದು ಇಲ್ಲಿದೆ. ಇದು ಅಷ್ಟಭುಜಗಳನ್ನು ಹೊಂದಿದ್ದು ಹೊಯ್ಸಳ ಶೈಲಿಯ ಶಿಲ್ಪ. ಇಲ್ಲಿ ತೆರೆದಿರುವ ಅನೇಕ ಗುಡಿಗಳಿದ್ದು ಅವುಗಳಲ್ಲಿ ಈಶ್ವರ ಲಿಂಗಗಳಿವೆ. ಇವುಗಳಲ್ಲಿ ಪ್ರಮುಖವಾದುದು ಮಾರ್ಕಂಡೇಯ ಮತ್ತು ಸೋಮೇಶ್ವರ ಲಿಂಗಗಳು. ಇಲ್ಲಿ ಪವಿತ್ರವಾದ ಅಶ್ವತ್ಥ ವೃಕ್ಷವಿದೆ. ಈ ದೇವಾಲಯದ ಸಂಕೀರ್ಣದ ಸಮೀಪದಲ್ಲಿ ಸೋಸಲೆ ಮಠ, ಶೃಂಗೇರಿ ಮಠಗಳಿವೆ ಹಾಗೂ ಇನ್ನೂ ಅನೇಕ ಗುಡಿಗಳಿವೆ. ಅಗಸ್ತ್ಯೇಶ್ವರ ದೇವಾಲಯ ವಿಶೇಷವಾಗಿ ಕುಂಭಮೇಳದ ಸಮಯದಲ್ಲಿ ಸಾವಿರಾರು ಭಕ್ತಾದಿಗಳನ್ನು ಆಕರ್ಷಿಸುತ್ತದೆ.

ಗೊಮ್ಮಟೇಶ್ವರ, ಶ್ರವಣಬೆಳಗೊಳ

ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಶಿಲ್ಪ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಶಿಲಾಮೂರ್ತಿಯೆಂಬ ಕೀರ್ತಿಗೆ ಪಾತ್ರವಾಗಿದ್ದು, ಕರ್ನಾಟಕಕ್ಕೆ ಸಾಂಸ್ಕೃತಿಕ ಜಗತ್ತಿನಲ್ಲಿ ಅಂತರ ರಾಷ್ಟ್ರೀಯ ಖ್ಯಾತಿಯನ್ನು ದೊರಕಿಸಿಕೊಟ್ಟಿದೆ. ಶ್ರವಣಬೆಳಗೊಳವು ಜೈನರಿಗೆ ಅತ್ಯಂತ ಪವಿತ್ರವಾದ ಧಾರ್ಮಿಕ ಸ್ಥಳವಾಗಿದೆ. ಭದ್ರಬಾಹು ಮುನಿಯು ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ಜೊತೆಗೆ ಬಂದು ನೆಲಸಿದನೆಂಬ ಐತಿಹ್ಯದಿಂದ, ಸ್ಥಳದ ಪ್ರಾಚೀನತೆಯು ಕ್ರಿ.ಪೂ. ಮೂರನೆಯ ಶತಮಾನಕ್ಕೆ ಸೇರುತ್ತದೆ. ಅಂದಿನಿಂದ ಕರ್ನಾಟಕದ ರಾಜಮನೆತನಗಳಾದ ತಲಕಾಡಿನ ಗಂಗರು, ಚಾಳುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಇತರರು ಈ ಪವಿತ್ರ ಸ್ಥಳಕ್ಕೆ ಪೋಷಣೆ ನೀಡಿದರು. ಆದರೆ ಈ ಸ್ಥಳವು ಗಂಗ ದೊರೆ ನಾಲ್ಕನೆಯ ರಾಚಮಲ್ಲನ (ಕ್ರಿ.ಶ. 974-999) ಕಾಲದಲ್ಲಿ ಪ್ರಾಮುಖ್ಯಕ್ಕೆ ಬಂದಿತು. ಅವನ ಮಂತ್ರಿಯಾದ ಚಾಮುಂಡರಾಯನು ಪ್ರಾಕೃತಿಕ ಸೌಂದರ್ಯದಿಂದ ರಮಣೀಯವಾಗಿ ಕಾಣುವ ಬೆಟ್ಟದ ತುದಿಯಲ್ಲಿ ಗೊಮ್ಮಟೇಶ್ವರ ವಿಗ್ರಹವನ್ನು ಸ್ಥಾಪಿಸಿದನು. ಜೊತೆಗೆ ಅನೇಕ ಜೈನ ದೇವಾಲಯಗಳು ವಿವಿಧ ರಾಜವಂಶಗಳ ಕಾಲದಲ್ಲಿ ಇಲ್ಲಿ ಕಟ್ಟಲ್ಪಟ್ಟವು. ಇದರಿಂದಾಗಿ ಇದೊಂದು ಜೈನ ಕಲೆಯ ಬಯಲು ಸಂಗ್ರಹಾಲಯವಾಗಿ ಕಂಗೊಳಿಸುತ್ತಿದೆ.

ಶ್ರವಣಬೆಳಗೊಳದ ಪ್ರಮುಖ ಆಕರ್ಷಣೆ ಎಂದರೆ ಬಾಹುಬಲಿ ಅಥವಾ ಗೊಮ್ಮಟೇಶ್ವರನ ಬೃಹತ್ತಾದ ಶಿಲ್ಪ. ಇದರ ಎತ್ತರ 57 ಅಡಿಗಳಾಗಿದ್ದು, ಪ್ರಪಂಚದಲ್ಲೇ ಅತ್ಯಂತ ಎತ್ತರದ ವಿಗ್ರಹವೆನಿಸಿದೆ. ಉತ್ತರ ದಿಕ್ಕನ್ನು ನೋಡುತ್ತಿರುವ ಈ ನಗ್ನ ಶಿಲ್ಪ ಯೋಗ ಸ್ಥಿತಿಯಲ್ಲಿದೆ. ಪ್ರಸನ್ನವೂ ಶಾಂತವೂ ಆದ ಮುಖಮುದ್ರೆ ಅಸಾಧಾರಣವಾಗಿದೆ. ಗುಂಗುರು ಕೂದಲು, ಉದ್ದನೆಯ ಕಿವಿಗಳು, ವಿಶಾಲವಾದ ಭುಜ, ನೀಳುವಾಗಿ ಕೆಳಗೆ ಇಳಿಬಿಟ್ಟಿರುವ ಕೈಗಳು ಮತ್ತು ಹೊರಕ್ಕೆ ತಿರುಗಿರುವ ಹೆಬ್ಬೆರಳುಗಳಿಂದ ಈ ಶಿಲ್ಪ ಮನೋಹರವಾಗಿದೆ. ಕೆಳಭಾಗವು ಬೃಹತ್ತು ಹಾಗೂ ಮಹತ್ತುಗಳನ್ನು ಸೂಚಿಸುತ್ತದೆ. ಇಡೀ ವಿಗ್ರಹವು ಕಮಲ ಪುಷ್ಪಾಕಾರದ ಪೀಠದ ಮೇಲೆ ನಿಂತಿದೆ. ಪಾದಗಳ ಉದ್ದ ಒಂಬತ್ತು ಅಡಿ; ಕಾಲಿನ ಹೆಬ್ಬೆರಳಿನ ಉದ್ದ 2 ಅಡಿ 9 ಅಂಗುಲ; ಮಧ್ಯದ ಬೆರಳು 5 ಅಡಿ 3 ಅಂಗುಲ; ತೋರ್ಬೆರಳು 3 ಅಡಿ 9 ಅಂಗುಲ, ಅನಾಮಿಕದ ಉದ್ದ 4 ಅಡಿ 7 ಅಂಗುಲ ಮತ್ತು ಕಿರು ಬೆರಳಿನ ಉದ್ದ 3 ಅಡಿ 2 ಅಂಗುಲ.

ಗೊಮ್ಮಟೇಶ್ವರನ ಮುಖಭಾವ ಅತ್ಯಂತ ಕಲಾತ್ಮಕವಾಗಿದ್ದು, ಇದನ್ನು ಕೆತ್ತಿದ ಶಿಲ್ಪಿಯ ಕುಶಲಕಲೆಯ ಪರಿಣತಿಗೆ ಕನ್ನಡಿ ಹಿಡಿದಂತಿದೆ. ಕಣ್ಣುಗಳು ಅರ್ಧ ತೆರೆದಿದ್ದು, ಕಣ್ಣುಗುಡ್ಡೆಗಳು ನಿಜವಾದವೋ ಎನ್ನುವಷ್ಟರಮಟ್ಟಿಗೆ ಕಾಣಬರುತ್ತದೆ. ಇದು ಬಾಹುಬಲಿಯ ಚಿಂತಾಕ್ರಾಂತ ಸ್ಥಿತಿಯನ್ನು ಬಿಂಬಿಸುತ್ತದೆ. ಒಟ್ಟು ಪರಿಣಾಮ ಘನತೆ, ಲಾಲಿತ್ಯ ಮತ್ತು ಗಾಂಭೀರ್ಯದಿಂದ ಕೂಡಿದ್ದು ಜನಗಳಲ್ಲಿ ಕರುಣೆ ತೋರುವ ಈ ಲಕ್ಷಣದಿಂದಾಗಿ ಈ ರೀತಿಯ ಶಿಲ್ಪಶ್ರೇಣಿಯ ವಿಗ್ರಹಗಳಲ್ಲಿ ಇದು ಅತ್ಯುತ್ತಮವೆನಿಸಿದೆ. ಹೀಗೆ ಗೊಮ್ಮಟೇಶ್ವರನು ಜನಗಳ ಕಷ್ಟಕಾರ್ಪಣ್ಯಗಳನ್ನು ಒಂದು ಸಾವಿರ ವರ್ಷಗಳಿಂದ ನೋಡುತ್ತಾ ನಿಂತಿದ್ದಾನೆ. ಇದೇ ರೀತಿ ಜನಗಳು ಉತ್ತಮ ಹಾಗೂ ಸಾರ್ಥಕ ಜೀವನದ ಮಾರ್ಗದರ್ಶನಕ್ಕಾಗಿ ಅವನನ್ನು ನೋಡುತ್ತಿದ್ದಾರೆ. ಹೀಗೆ ಜನಗಳು ಧರ್ಮಮಾರ್ಗದಲ್ಲಿ ನಡೆಯಲು ಪ್ರೇರಣೆ ನೀಡುತ್ತಿದ್ದಾನೆ. ಹನ್ನೆರಡು ವರ್ಷಗಳಿಗೊಮ್ಮೆ ಇಲ್ಲಿ ಮಹಾಮಸ್ತಕಾಭಿಷೇಕವು ನಡೆಯುತ್ತದೆ. ಆಗ ದಿವ್ಯ ಗೊಮ್ಮಟೇಶ್ವರನಿಂದ ಅನುಗ್ರಹ ಪಡೆಯಲು ಲಕ್ಷಾಂತರ ಮಂದಿ ಇಲ್ಲಿ ಸೇರುತ್ತಾರೆ.

ರಾಮಲಿಂಗೇಶ್ವರ ದೇವಾಲಯ ಸಮುಚ್ಚಯ, ಆವನಿ

ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ಸಮೀಪದಲ್ಲಿರುವ ಆವನಿ ಪ್ರಖ್ಯಾತವಾದ ಧಾರ್ಮಿಕ ಹಾಗೂ ವಾಸ್ತುಶಿಲ್ಪ ಕೇಂದ್ರ. ಇಲ್ಲಿ ಶೃಂಗೇರಿ ಶಾರದಾಪೀಠಕ್ಕೆ ಸೇರಿದ ಶಂಕರಾಚಾರ್ಯ ಮಠವಿದೆ. ಆವನಿಯು ಪ್ರಾಚೀನ ಅವಂತಿಕಾ ಕ್ಷೇತ್ರವಾಗಿದ್ದಿತೆಂಬುದು ಪರಂಪರೆಯ ಐತಿಹ್ಯ. ಜೊತೆಗೆ ಇದು ರಾಮಾಯಣಕ್ಕೂ ಸಂಬಂಧ ಹೊಂದಿದ್ದು, ಸಮೀಪದಲ್ಲೇ ಇರುವ ಬೆಟ್ಟವನ್ನು ವಾಲ್ಮೀಕಿ ಪರ್ವತ ಎಂದು ಕರೆಯಲಾಗುತ್ತದೆ.

ಆವನಿಯಲ್ಲಿ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ ಮತು ಶತ್ರುಘ್ನೇಶ್ವರ ಎಂಬ ದೇವಾಲಯಗಳಿವೆ. ಇವು ಹೆಚ್ಚು ಕಡಿಮೆ ಪ್ರತ್ಯೇಕವಾಗಿದ್ದು ವಿಶಾಲವಾದ 270 ಅಡಿ ಉದ್ದ ಮತ್ತು 150 ಅಡಿ ಅಗಲದ ಪ್ರಾಕಾರದ ಒಳಗೆ ಇವೆ.

ಆವನಿಯು ತ್ರಿಭುವನಕರ್ತಾರ ಭಟಾರ ಎಂಬ ಪ್ರಖ್ಯಾತ ಶೈವ ಗುರುವಿನ ನೇತೃತ್ವದಲ್ಲಿ ಪ್ರಸಿದ್ಧ ಶೈವ ಕ್ಷೇತ್ರವಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಗುರುವು ಅನೇಕ ಶಿವದೇವಾಲಯಗಳನ್ನು ನಿರ್ಮಿಸಿದನೆಂದು ಹೇಳಲಾಗಿದೆ. ನೊಳಂಬ ವಂಶದ ರಾಣಿ ದಿವಬ್ಬರಸಿಯು ಇಲ್ಲಿ ಎರಡು ದೇವಾಲಯಗಳನ್ನು ನಿರ್ಮಿಸಿದಳೆಂದು ತಿಳಿದುಬಂದಿದೆ. ಲಕ್ಷ್ಮಣೇಶ್ವರ ಮತ್ತು ಭರತೇಶ್ವರ ದೇವಾಲಯಗಳೇ ಈ ಎರಡು ದೇವಾಲಯಗಳೆಂದು ವಿದ್ವಾಂಸರು ಭಾವಿಸಿದ್ದಾರೆ. ಲಕ್ಷ್ಮಣೇಶ್ವರ ದೇವಾಲಯದಲ್ಲಿ ಶಿವಲಿಂಗವಿರುವ ಗರ್ಭಗೃಹ, ಅಂತರಾಳ ಮತ್ತು ನಾಲ್ಕು ಸುಂದರ ಕಂಬಗಳ ನವರಂಗವಿದೆ. ಈ ದೇವಾಲಯವು ಅಲಂಕೃತ ದಿಂಡುಗಳನ್ನು ಹೊಂದಿದ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಗೋಡೆಗಳು ಒಳಚಾಚುಗಳನ್ನು ಹೊಂದಿದ್ದು ತಗ್ಗುಶಿಲ್ಪದ ಅರೆಗಂಬಗಳಿವೆ. ಗೂಡುಗಳಲ್ಲಿ ಶಿವ, ಭೈರವ, ನಟರಾಜ, ಗಣೇಶ, ಸೂರ್ಯ ಮುಂತಾದ ದೇವತೆಗಳ ಶಿಲ್ಪಗಳಿವೆ. ಲಕ್ಷ್ಮಣೇಶ್ವರ ದೇವಾಲಯದ ಎದುರಿಗೆ ಪಶ್ಚಿಮಾಭಿಮುಖವಾದ ಭರತೇಶ್ವರ ದೇವಾಲಯವಿದೆ. ಇದೂ ಕೂಡ ನೊಳಂಬ ರಾಜರ ಕಟ್ಟಡ. ಇದು ಅನೇಕ ಸಾರಿ ಜೀರ್ಣೋದ್ಧಾರಗೊಂಡಿದ್ದು, ತನ್ನ ಮೂಲ ಸ್ವರೂಪವನ್ನು ಬಹಳಷ್ಟು ಕಳೆದುಕೊಂಡಿದೆ. ಈ ದೇವಾಲಯದಲ್ಲಿ ಭರತೇಶ್ವರ ಎಂಬ ಲಿಂಗವಿರುವ ಗರ್ಭಗೃಹ, ಅಂತರಾಳ, ನಾಲ್ಕು ಕಂಬಗಳ ನವರಂಗವಿದೆ. ನವರಂಗದ ಚಾವಣಿಯಲ್ಲಿ ದಿಕ್ಪಾಲರ ಸಮೇತ ಇರುವ ಶಿವಪಾರ್ವತಿಯರ ಸುಂದರ ಶಿಲ್ಪವಿದೆ. ಈ ದೇವಾಲಯದಲ್ಲಿ ಕ್ರಿ.ಶ. ಹತ್ತನೆಯ ಶತಮಾನದ ನೊಳಂಬರ ಶಾಸನವಿದೆ. ಪ್ರಾಕಾರದ ಮುಂಭಾಗದಲ್ಲಿ ನಲವತ್ತು ಅಡಿ ಎತ್ತರದ ಕಗ್ಗಲ್ಲಿನ ಒಂದು ಸ್ತಂಭವಿದೆ. ಇದರ ಪೀಠವು ಘನಾಕೃತಿಯಲ್ಲಿದ್ದು, ಮಧ್ಯಭಾಗವು ಹದಿನಾರು ಮುಖವಾಗಿದ್ದು, ಕೊನೆಯ ತುದಿಯ ಭಾಗವು ಅಷ್ಟಕೋನಾಕೃತಿಯಲ್ಲಿದೆ. ನೊಳಂಬ ದೊರೆ ನನ್ನಿ ನೊಳಂಬನ ಮಂತ್ರಿಯಾಗಿದ್ದ ಬಸವಯ್ಯನು ಈ ಕಂಬವನ್ನು ಸ್ಥಾಪಿಸಿದನು. ಇದೂ ಕೂಡ ನೊಳಂಬರ ವಾಸ್ತುಕೃತಿ.

ಇನ್ನೆರಡು ದೇವಾಲಯಗಳಾದ ಶತ್ರುಘ್ನೇಶ್ವರ ಮತ್ತು ಅಂಜನೇಶ್ವರ, ವಾಸ್ತುಶಿಲ್ಪ ಶೈಲಿಯ ದೃಷ್ಟಿಯಿಂದ ನೊಳಂಬ ದೇವಾಲಯಗಳಂತೆ ಇದ್ದು ಅದೇ ಸಮಯದಲ್ಲಿ ಕಟ್ಟಲಾದ ದೇಗುಲಗಳಂತೆ ಭಾಸವಾಗುತ್ತವೆ. ಇದೇ ಕಾಲಕ್ಕೆ ಸೇರಿದ ರಾಮಲಿಂಗೇಶ್ವರ ದೇಗುಲ ದ್ರಾವಿಡ ರೀತಿಯ ವಿಮಾನವನ್ನು ಹೊಂದಿದೆ. ಗರ್ಭಗೃಹದಲ್ಲಿ ರಾಮಲಿಂಗೇಶ್ವರ ಲಿಂಗವಿದೆ. ಪಕ್ಕದಲ್ಲೇ ಪಾರ್ವತಿ ದೇವಾಲಯವಿದೆ. ಕಾಮಾಕ್ಷಿ ಮತ್ತು ಇತರ ಗುಡಿಗಳು ಅನಂತರದ ಕಾಲಕ್ಕೆ ಸೇರಿದವುಗಳಾಗಿವೆ.

ಬ್ರಹ್ಮ ಜಿನಾಲಯ, ಲಕ್ಕುಂಡಿ

ಲಕ್ಕುಂಡಿಯು ಪ್ರಾಚಿನ ಅಗ್ರಹಾರವಾಗಿದ್ದು, ಅದರಲ್ಲಿಯೂ ವಿಶೇಷವಾಗಿ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಖ್ಯಾತ ಧಾರ್ಮಿಕ ಹಾಗೂ ಶಿಕ್ಷಣ ಕೇಂದ್ರವಾಗಿತ್ತು. ಆಗಿನ ಕಾಲದಲ್ಲಿ ಅದೊಂದು ಪ್ರಾದೇಶಿಕ ರಾಜಧಾನಿಯೂ ಆಗಿತ್ತು. ಪ್ರಸಿದ್ಧ ಕನ್ನಡ ಕವಿ ರನ್ನನ ಆಶ್ರಯದಾತೆಯಾಗಿದ್ದ ಖ್ಯಾತ ಮಹಿಳೆ ಅತ್ತಿಮಬ್ಬೆಯೊಂದಿಗೆ ಈ ಊರು ಸಂಪರ್ಕ ಹೊಂದಿತ್ತು. ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದು. ಅವುಗಳಲ್ಲಿ ಈ ಬ್ರಹ್ಮ ಜಿನಾಲಯವು ಹೆಚ್ಚು ಪ್ರಸಿದ್ಧಿಯಾಗಿದೆ. ಬ್ರಹ್ಮಜಿನಾಲಯವನ್ನು ನಿರ್ಮಿಸಿದ ನಂತರ ಈಕೆ ಚಾಳುಕ್ಯ ದೊರೆ ಸತ್ಯಾಶ್ರಯನನ್ನು (ಕ್ರಿ.ಶ. 997-1008) ಈ ದೇವಾಲಯಕ್ಕೆ ದಾನ ನೀಡುವಂತೆ ಪ್ರಾರ್ಥಿಸಿದಳು. ಈ ರೀತಿ ಅತ್ತಿಮಬ್ಬೆಯ ಹೆಸರು ಈ ದೇವಾಲಯದೊಂದಿಗೆ ಸೇರಿಕೊಂಡಿದೆ. ಲಕ್ಕುಂಡಿಯಲ್ಲಿ ಅನೇಕ ದೇವಾಲಯಗಳಿದ್ದರೂ, ಅವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಬ್ರಹ್ಮ ಜಿನಾಲಯ.

ಈ ಜೈನ ದೇವಾಲಯವು ಕಲ್ಯಾಣದ ಚಾಳುಕ್ಯರ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಡಪಗಳಿವೆ. ಚೌಕಾಕಾರದ ಗರ್ಭಗೃಹದಲ್ಲಿ ಕಪ್ಪುಶಿಲೆಯ ಸಿಂಹಪೀಠದ ಮೇಲೆ ನಿಂತಿರುವ ಮಹಾವೀರ ತೀರ್ಥಂಕರನ ವಿಗ್ರಹವಿದೆ. ಅವನ ಎರಡೂ ಕಡೆಗಳಲ್ಲಿ ಚಾಮರಧಾರಿಯರಿದ್ದಾರೆ. ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಪದ್ಮಾವತಿ ಯಕ್ಷಿಯ ಉಬ್ಬು ಶಿಲ್ಪವೂ ಇದೆ. ಗರ್ಭಗೃಹದಲ್ಲಿ ಬ್ರಹ್ಮ ಮತ್ತು ಸರಸ್ವತಿಯರ ಶಿಲ್ಪಗಳೂ ಇವೆ. ಸರಸ್ವತಿಯ ಶಿಲ್ಪ ಈಗ ಸ್ವಲ್ಪ ಭಿನ್ನವಾಗಿದೆ.

ಚೌಕಾಕಾರದ ನವರಂಗದ ಮಧ್ಯದಲ್ಲಿ ಚಾಳುಕ್ಯ ಶೈಲಿಯ ನಾಲ್ಕು ಸುಂದರ ಕಂಬಗಳಿವೆ. ಕಂಬಗಳ ಪೀಠದಲ್ಲಿ ಸಂಗೀತಗಾರರು, ನೃತ್ಯಗಾರರು, ತಾಯಿ ಮತ್ತು ಮಗು ಮುಂತಾದ ತಗ್ಗು ಉಬ್ಬಿನ ಶಿಲ್ಪಗಳಿವೆ. ದ್ವಾರಬಂಧದಲ್ಲಿ ಲತಾಲಂಕಾರವಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇಕ್ಕೆಲಗಳಲ್ಲಿ ಚತುರ್ಮುಖ ಬ್ರಹ್ಮ ಮತ್ತು ಪದ್ಮಾವತಿ ಯಕ್ಷಿಯ ಶಿಲ್ಪವಿದೆ. ಮುಂಭಾಗದಲ್ಲಿರುವ ತೆರೆದ ಮುಖಮಂಡಪದಲ್ಲಿ ಇಪ್ಪತ್ತೆಂಟು ಸುಂದರ ಕಂಬಗಳೂ, ಕಕ್ಷಾಸನಗಳೂ ಇವೆ. ಇದರ ಪ್ರವೇಶದ್ವಾರದಲ್ಲಿ ಮೆಟ್ಟಿಲುಗಳೂ ತಾಳ್ವಾರಗಳೂ ಇವೆ.

ದೇವಾಲಯದ ಹೊರಗೋಡೆಯಲ್ಲಿ ದಿಂಡುಗಳಿಂದ ಕೂಡಿದ ಅಧಿಷ್ಠಾನ, ಅದರ ಮೇಲೆ ಅರೆಗಂಬಗಳು ಮತ್ತು ಅವುಗಳ ಮಧ್ಯೆ ಗೂಡುಗಳೂ ಕಾಣಬರುತ್ತವೆ. ಮೇಲ್ಭಾಗದಲ್ಲಿ ಅಲಂಕೃತ ಮುಂಚೂರು ಇದೆ. ಗರ್ಭಗೃಹದ ಮೇಲೆ ಐದು ಹಂತಗಳ ದ್ರಾವಿಡ ಶೈಲಿಯ ವಿಮಾನವಿದೆ. ಗರ್ಭಗೃಹದ ಮೇಲೆ ಇನ್ನೆರಡು ಗುಡಿಗಳಿವೆ. ಈ ರೀತಿ ಬ್ರಹ್ಮಜಿನಾಲಯವು ವಿಶಾಲವಾದುದು ಮಾತ್ರವಲ್ಲದೆ ಸುಂದರವಾಗಿಯೂ ಇದ್ದು ಕಲ್ಯಾಣದ ಚಾಳುಕ್ಯರು ಜೈನವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಗೂ, ಪ್ರಸಿದ್ಧ ಅತ್ತಿಮಬ್ಬೆಯು ನೀಡಿದ ಪೋಷಣೆಗೂ ಸಾಕ್ಷಿಯಾಗಿ ನಿಂತಿದೆ.

ಕೋಲಾರಮ್ಮ ದೇವಾಲಯ, ಕೋಲಾರ

ಕೋಲಾರ ನಗರದಲ್ಲಿರುವ ಕೋಲಾರಮ್ಮ ದೇವಾಲಯವು ಜನಾನುರಾಗಿಯಾದ ದೇವಾಲಯಮಾತ್ರವಲ್ಲದೆ, ಇಡೀ ಕೋಲಾರ ಜಿಲ್ಲೆಯಲ್ಲಿರುವ ಬೃಹತ್ ದೇವಾಲಯಗಳಲ್ಲಿ ಒಂದಾಗಿದೆ. ಕೋಲಾರವು ಪ್ರಾಚೀನ ನಗರವಾಗಿದ್ದು, ಹಿಂದಿನ ಕಾಲದಲ್ಲಿ ಕೋಲಾಹಲಪುರ, ಕುವಲಾಲ, ಕೋಲಾಲ, ಕೊನೆಗೆ ಕೋಲಾರ ಎಂಬ ಹೆಸರುಗಳಿಂದ ಪ್ರಸಿದ್ಧಿಯಾಗಿದ್ದಿತು. ಕೋಲಾಹಲಪುರವೆಂಬ ಹೆಸರು ಪೌರಾಣಿಕ ವ್ಯಕ್ತಿ ಪರಶುರಾಮನೊಡನೆ ಸಂಬಂಧಿಸಿದೆ. ಮತ್ತೊಂದು ಐತಿಹ್ಯದ ಪ್ರಕಾರ ಕೋಲ ಎಂಬ ದನಕಾಯುವ ಬಾಲಕನೊಬ್ಬನಿಗೆ ಭೂಮಿಯಲ್ಲಿ ನಿಧಿ ಸಿಕ್ಕಿತು. ದೇವತೆ ರೇಣುಕಾದೇವಿಯು ಕೋಲಾರಮ್ಮನ ರೂಪದಲ್ಲಿ ಒಂದು ದೇವಾಲಯವನ್ನು ನಿರ್ಮಿಸಬೇಕೆಂದು ಆದೇಶವಿತ್ತಳು. ಆದರಂತೆ ಕೋಲನು ದೇವಾಲಯವನ್ನು ನಿರ್ಮಿಸಿದನು. ಇವೆಲ್ಲವೂ ಪೌರಾಣಿಕ ಮಾಹಿತಿಗಳು. ಇತಿಹಾಸದ ಮಾಹಿತಿಯಂತೆ ಇದು ಗಂಗರ ಮೂಲನೆಲೆ; ಅವರು ಇಲ್ಲಿಂದ ತಲಕಾಡಿಗೆ ಹೋಗಿ ತಲಕಾಡಿನ ಗಂಗರು ಎಂದು ಪ್ರಸಿದ್ಧಿ ಪಡೆದರು. ಆನಂತರ ಇದು ಚೋಳರ ವಶವಾಯಿತು. ಹೊಯ್ಸಳರು ಚೋಳರನ್ನು ಸೋಲಿಸಿದ ಮೇಲೆ, ಕೋಲಾರ ಹೊಯ್ಸಳರ ರಾಜ್ಯಕ್ಕೆ ಸೇರಿತು. ಕೊನೆಗೆ ಇದು ವಿಜಯನಗರ ಸಾಮ್ರಾಜ್ಯದ ಭಾಗವಾಯಿತು.

ಕ್ರಿ.ಶ. 1033ರ ಶಾಸನದ ಪ್ರಕಾರ ಕೋಲಾರಮ್ಮ ದೇವಾಲಯವು ಚೋಳರ ಕಾಲದ ದೇಗುಲ. ಈ ಶಾಸನದಲ್ಲಿ ತಿಳಿಸಿರುವಂತೆ ಕೋಲಾರಮ್ಮ ದೇವಾಲಯವು ರಾಜೇಂದ್ರ ಚೋಳನ ಅಪ್ಪಣೆಯಂತೆ ಕಟ್ಟಲ್ಪಟ್ಟಿತು. ವಾಸ್ತವವಾಗಿ ಈ ದೊರೆಯ ದಂಡನಾಯಕ ಉತ್ತಮ ಚೋಳ ಬ್ರಹ್ಮಮಾರಾಯನ್ ಎಂಬುವವನು, ಈ ಹಿಂದೆ ಇಟ್ಟಿಗೆಯ ದೇವಾಲಯವಾಗಿದ್ದ ಇದನ್ನು ಕಲ್ಲಿನಲ್ಲಿ ನಿರ್ಮಿಸಿದನು.

ಈ ದೇವಾಲಯದ ರಚನಾಕ್ರಮ ಸ್ವಲ್ಪ ಭಿನ್ನವಾಗಿದೆ. ಇದೊಂದು ದ್ರಾವಿಡ ರೀತಿಯ ದೇವಾಲಯ. ಇದರ ಮಹಾದ್ವಾರ ಬೃಹತ್ತಾಗಿದ್ದು ನೋಡಲು ಭವ್ಯವಾಗಿದೆ. ಇದಕ್ಕೆ ಸುಂದರವಾಗಿ ಕಡೆದ ಬಾಗಿಲುವಾಡವಿದೆ. ಇದು ವಿಜಯನಗರ ಕಾಲದ್ದು. ಪ್ರಾಕಾರದ ಮಧ್ಯದಲ್ಲಿ ಗರ್ಭಗೃಹವಿದೆ. ಇದರಲ್ಲಿ ಸಪ್ತಮಾತೃಕೆಯರ ಮತ್ತು ಕೋಲಾರಮ್ಮನ ಶಿಲ್ಪಗಳಿವೆ. ಇದು ವಾಸ್ತವವಾಗಿ ಮಹಿಷಾಸುರಮರ್ದಿನಿಯ ವಿಗ್ರಹ. ದೇವಿಯು ತನ್ನ ಎಂಟು ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದುಕೊಂಡಿದ್ದಾಳೆ. ಇವಳ ಕಾಲಿನಡಿಯಲ್ಲಿ ಒಬ್ಬ ರಾಕ್ಷಸನಿದ್ದಾನೆ (ಮಹಿಷಾಸುರ). ಕುಳಿತಿರುವ ದೇವತೆಯ ಕ್ರೋಧದ ಮುಖಭಾವವು ಗಮನಾರ್ಹವಾದುದು. ಇನ್ನೊಂದು ಕೋಣೆಯಲ್ಲಿ ಗಾರೆಯಿಂದ ಮಾಡಿದ ವಿಗ್ರಹಗಳಿವೆ. ಕಲ್ಲಿನ ವಿಗ್ರಹಗಳು ಪ್ರತಿಷ್ಠಾಪನೆಗೊಳ್ಳುವುದಕ್ಕೆ ಮುಂಚೆ ಈ ಗಾರೆಯ ವಿಗ್ರಹಗಳನ್ನೇ ಪೂಜಿಸುತ್ತಿದ್ದರೆಂದು ಭಾವಿಸಲಾಗಿದೆ. ಅಲ್ಲಿ ಇನ್ನೊಂದು ಆರು ಅಡಿ ಎತ್ತರದ ಕಪಾಲಭೈರವ ಎಂಬ ಕಲ್ಲಿನ ವಿಗ್ರಹವಿದೆ. ಇದನ್ನು ಸ್ಥಳೀಯವಾಗಿ ಮುಕನಂಚಾರಮ್ಮ ಎಂದು ಕರೆಯಲಾಗುತ್ತದೆ. ಇದೇ ಕೋಲಾರಮ್ಮನ ಮೂಲ ವಿಗ್ರಹವೆಂದು ನಂಬಲಾಗಿದೆ. ಈ ದೇವತೆ ಜನಗಳನ್ನು ಚೇಳಿನ ಕಡಿತದ ನೋವಿನಿಂದ ಪಾರುಮಾಡುತ್ತಾಳೆಂಬ ನಂಬಿಕೆ ಆಸಕ್ತಿಕರವಾದದ್ದು. ಇಂದಿಗೂ ಜನಗಳು ಭವಿಷ್ಯದಲ್ಲಿ ಚೇಳಿನ ಕಡಿತದಿಂದ ಪಾರಾಗುವ ಉದ್ದೇಶದಿಂದ ಬೆಳ್ಳಿಯ ಚೇಳನ್ನು ದೇವಿಗೆ ಸಮರ್ಪಿಸುತ್ತಾರೆ. ಈ ರೀತಿ ಕೋಲಾರಮ್ಮ ದೇವಾಲಯವು ಕೋಲಾರದಲ್ಲಿ ಒಂದು ಪ್ರಸಿದ್ಧ ದೇವಾಲಯವೆನಿಸಿದೆ.

## ಲಕ್ಷ್ಮೀನರಸಿಂಹ ದೇವಾಲಯ, ಅಗರ

ಅಗರ ಮೈಸೂರು ಜಿಲ್ಲೆಯ ಯಳಂದೂರು ತಾಲೂಕಿನಲ್ಲಿರುವ ಪ್ರಾಚೀನ ಗ್ರಾಮ. ಇದು ಪ್ರಾಚೀನ ಕಾಲದಲ್ಲಿ ಚೋಳರ ರಾಜ್ಯಕ್ಕೆ ಸೇರಿದ್ದು ಅನೇಕ ತಮಿಳು ಭಾಷೆಯ ಚೋಳರ ಶಾಸನಗಳು ಮತ್ತು ಇತರ ಕನ್ನಡ ಶಾಸನಗಳು ಇಲ್ಲಿ ದೊರಕಿವೆ. ಶಾಸನಗಳಲ್ಲಿ ಈ ಊರನ್ನು ದುರ್ಗೈಯಾರ್ ಅಗರ ಅಥವಾ ದುರ್ಗಾಗ್ರಹಾರ ಎಂದು ಕರೆಯಲಾಗಿದೆ. ಅಗರ ಎನ್ನುವುದು ಅಗ್ರಹಾರ ಎನ್ನುವುದರ ಹ್ರಸ್ವರೂಪವಿರಬಹುದು. ನಾಲ್ಕು ಕೈಗಳ ಮತ್ತು ನಾಲ್ಕು ಅಡಿ ಎತ್ತರದ ದುರ್ಗೆಯ ವಿಗ್ರಹವು ಈ ದೇವಾಲಯದಲ್ಲಿದೆ. ಆದುದರಿಂದ ಈ ಸ್ಥಳಕ್ಕೆ ದುರ್ಗಾಗ್ರಹಾರ ಎಂಬ ಹೆಸರು ಬಂದಿದೆ ಎಂದು ಭಾವಿಸಬಹುದು.

ಇಲ್ಲಿರುವ ದೇಗುಲಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಲಕ್ಷ್ಮೀನರಸಿಂಹ ದೇವಾಲಯ. ಇದರಲ್ಲಿ ವೃತ್ತಾಕಾರದ ಗರ್ಭಗೃಹ, ಆಯತಾಕಾರದ ಅಂತರಾಳ ಮತ್ತು ಚೌಕಾಕಾರದ ಮಂಡಪಗಳಿವೆ. ಇಲ್ಲಿ ಅತ್ಯಂತ ಕುತೂಹಲಕಾರಿಯಾದ ಭಾಗವೆಂದರೆ ವೃತ್ತಾಕಾರದ ಗರ್ಭಗೃಹ. ಇದು ಬಹಳ ಅಪರೂಪ. ಶಿಲ್ಪಶಾಸ್ತ್ರ ಗ್ರಂಥಗಳು ಈ ರೀತಿಯ ದೇವಾಲಯಗಳನ್ನು ಘಟಪ್ರಾಸಾದ ಎಂದು ಕರೆಯುತ್ತವೆ. ಆದುದರಿಂದ ಅಗರದ ಲಕ್ಷ್ಮೀನರಸಿಂಹ ದೇವಾಲಯ ಘಟಪ್ರಾಸಾದ. ಮೈಸೂರಿಗೆ ಆರು ಮೈಲಿ ದೂರದಲ್ಲಿರುವ ಬೆಳಗೊಳದಲ್ಲಿ ಈ ರೀತಿಯ ಜನಾರ್ದನ ದೇವಾಲಯವಿದೆ ಎಂಬುದನ್ನು ಇಲ್ಲಿ ನೆನೆಯಬೇಕು. ದೇವಾಲಯದ ಹೊರಗೋಡೆಯಲ್ಲಿ ಮುಂಚಾಚಿರುವ ದಿಂಡುಗಳು, ಅದರ ಮೇಲೆ ಅರೆಗಂಬಗಳು ಮತ್ತು ವಿಗ್ರಹಗಳಿರುವ ದೇವಕೋಷ್ಠಗಳಿವೆ. ಮೇಲ್ಭಾಗದಲ್ಲಿ ಅಲಂಕೃತ ಮುಂಜೂರು ಇದೆ. ಅದರ ಮೇಲೆ ಮಟ್ಟಸವಾದ ಚಾವಣಿಯಿದೆ. ಈ ರೀತಿ ಇಡೀ ಗರ್ಭಗೃಹವು ತಳಪಾಯದಿಂದ ಹಿಡಿದು ಮೇಲಿನ ಚಾವಣಿಯವರೆಗೆ ವೃತ್ತಾಕಾರದಲ್ಲಿರುವುದರಿಂದ ಸುಂದರವಾಗಿ ಕಾಣುತ್ತದೆ. ಗರ್ಭಗೃಹದ ಅಧಿಷ್ಠಾನವು ಮಂಡಪದ ಅಧಿಷ್ಠಾನಕ್ಕಿಂತ ಬೇರೆಯದಾಗಿದೆ. ಗರ್ಭಗೃಹದ ಅಧಿಷ್ಠಾನವು ಸ್ವಲ್ಪ ದಪ್ಪ ದಿಂಡುಗಳನ್ನು ಹೊಂದಿದ್ದರೆ, ಮಂಡಪದ ಅಧಿಷ್ಠಾನವು ಹೊರಚಾಚಿದ ದಿಂಡುಗಳನ್ನು ಹೊಂದಿದೆ. ಇಲ್ಲಿಯ ಅರೆಗಂಬಗಳೂ ಭಿನ್ನವಾಗಿ ಕಾಣುತ್ತವೆ.

ಈ ದೇವಾಲಯದ ಅತ್ಯಂತ ಪ್ರಮುಖ ಆಕರ್ಷಣೆ ಎಂದರೆ ಸುಂದರವಾದ ನರಸಿಂಹ ವಿಗ್ರಹ. ಇದನ್ನು ಲಕ್ಷ್ಮೀನರಸಿಂಹ ಎಂದು ಸಾಮಾನ್ಯವಾಗಿ ಕರೆಯಲಾದರೂ, ಬೇರೆ ಕಡೆಗಳಲ್ಲಿರುವ ನರಸಿಂಹ ಶಿಲ್ಪದಲ್ಲಿ ಸಾಮಾನ್ಯವಾಗಿ ಕಂಡುಬರದ ನರಸಿಂಹನ ಐದು ಭಿನ್ನ ಲಕ್ಷಣಗಳನ್ನು ಇಲ್ಲಿ ಕಾಣುತ್ತೇವೆ. ಇವು ಯಾವುವೆಂದರೆ ಹಣೆಯಲ್ಲಿ ಮೂರನೆಯ ಕಣ್ಣಿರುವುದರಿಂದ ಉಗ್ರನರಸಿಂಹ; ಕಿವಿಗಳ ಬಳಿ ಜ್ವಾಲೆ ಇರುವುದರಿಂದ ಜ್ವಾಲಾನರಸಿಂಹ; ಯೋಗಪಟ್ಟದಲ್ಲಿರುವುದರಿಂದ ಯೋಗಾನರಸಿಂಹ; ಕೆಳಭಾಗದಲ್ಲಿ ಸಣ್ಣ ಪ್ರಮಾಣದ ಪ್ರಹ್ಲಾದನ ಶಿಲ್ಪವಿರುವುದರಿಂದ ಪ್ರಹ್ಲಾದನರಸಿಂಹ; ಮತ್ತೆ ಕೊನೆಯದಾಗಿ ವಕ್ಷಸ್ಥಳದಲ್ಲಿ ಲಕ್ಷ್ಮಿ ಇರುವುದರಿಂದ ಲಕ್ಷ್ಮೀನರಸಿಂಹ. ಈ ರೀತಿಯ ಪಂಚಲಕ್ಷಣಗಳನ್ನು ಹೊಂದಿರುವುದರಿಂದ ಈ ವಿಗ್ರಹ ವಿಶಿಷ್ಟವಾದುದು. ಆದುದರಿಂದ ಇದು ಪ್ರಖ್ಯಾತವಾಗಿದೆ. ಅಗರದಲ್ಲಿರುವ ಈ ದೇವಾಲಯ ಮತ್ತು ಇತರ ದೇವಾಲಯಗಳು ಚೋಳರ ಕಾಲದಲ್ಲಿ ನಿರ್ಮಾಣಗೊಂಡವು. ಈ ರೀತಿ ಈ ದೇವಾಲಯವು ವೃತ್ತಾಕಾರದ ಗರ್ಭಗೃಹ ಮತ್ತು ಐದು ಲಕ್ಷಣಗಳ ನರಸಿಂಹ ವಿಗ್ರಹದಿಂದಾಗಿ ವಿಶೇಷ ಪ್ರಖ್ಯಾತಿ ಪಡೆದಿದೆ.

ಪುಷ್ಕರಿಣಿ, ಮೇಲುಕೋಟೆ

ಮಂಡ್ಯ ಜಿಲ್ಲೆಯಲ್ಲಿರುವ ಮೇಲುಕೋಟೆ ಪ್ರಸಿದ್ಧ ಶ್ರೀವೈಷ್ಣವ ಕ್ಷೇತ್ರ. ಚೋಳನಾಡಿನಿಂದ ಕರ್ನಾಟಕಕ್ಕೆ ಬಂದ ಶ್ರೀರಾಮಾನುಜಾಚಾರ್ಯರು ಈ ಸ್ಥಳದಲ್ಲಿ ತಮ್ಮ ಮೊದಲಿನ ದಿನಗಳನ್ನು ಕಳೆದರು. ಮೇಲುಕೋಟೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ನರಸಿಂಹಬೆಟ್ಟ ಹಾಗೂ ಪುಷ್ಕರಿಣಿ ಅಥವಾ ಕಲ್ಯಾಣಿ ಪ್ರಮುಖವಾಗಿ ಕಂಡುಬರುತ್ತವೆ. ಪವಿತ್ರ ನೀರಿನ ಈ ಪುಷ್ಕರಿಣಿಯು ನರಸಿಂಹಬೆಟ್ಟದ ಪಶ್ಚಿಮ ಬುಡದಲ್ಲಿದೆ. ಇಂದಿಗೂ ಈ ಊರಿಗೆ ನೀರನ್ನು ಒದಗಿಸುವ ಮುಖ್ಯ ಆಕರವೇ ಈ ಪುಷ್ಕರಿಣಿ. ಶ್ರೀ ರಾಮಾನುಜಾಚಾರ್ಯರು ಈ ಊರಿನಲ್ಲಿದ್ದಾಗ, ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಿದ್ದರೆಂಬ ನಂಬಿಕೆಯಿಂದ, ಇಂದಿಗೂ ಇದು ಪವಿತ್ರವೆನಿಸಿದೆ. ಇದರಿಂದಾಗಿ ಇಲ್ಲಿ ಸ್ನಾನ ಮಾಡುವುದು ಪುಣ್ಯಕಾರ್ಯವೆಂದು ಭಕ್ತರು ಭಾವಿಸುತ್ತಾರೆ.

ಹೀಗೆ ಪಾವಿತ್ರ್ಯತೆಯನ್ನು ಪಡೆದುದರಿಂದ, ಅನೇಕ ಗುಡಿಗಳು ಮತ್ತು ಮಂಡಪಗಳು ಈ ಪುಷ್ಕರಿಣಿಯ ಸುತ್ತ ಈಚೆಗೆ ಕಟ್ಟಲ್ಪಟ್ಟವು. ಇವುಗಳಲ್ಲಿ ದೇವಾಲಯದ ಕೈಂಕರ್ಯಗಳು ಹಾಗೂ ಉತ್ಸವಗಳು ನಡೆಯುತ್ತವೆ. ಪುಷ್ಕರಿಣಿಯು ಚೌಕಾಕಾರದಲ್ಲಿದ್ದು, ಇದರ ಪ್ರತಿ ಪಾರ್ಶ್ವವೂ 300 ಅಡಿ ಉದ್ದವಾಗಿದೆ. ನಾಲ್ಕು ಕಡೆಗಳಲ್ಲಿಯೂ ಕಲ್ಯಾಣಿಯ ನೀರಿಗೆ ಇಳಿಯಲು ಅನುಕೂಲವಾಗುವಂತೆ ಮೆಟ್ಟಿಲುಗಳಿವೆ. ಪುಷ್ಕರಿಣಿಯ ಸುತ್ತಲೂ ಕಟ್ಟಲಾಗಿರುವ ಗುಡಿ ಹಾಗೂ ಮಂಡಪಗಳಲ್ಲಿ ಮುಖ್ಯವಾದುದು ಭುವನೇಶ್ವರಿ ಮಂಡಪ. ಇದು ಎಂಟು ತೆಳು ಕಂಬಗಳ ಮೇಲೆ ಆಧಾರಿತ ಅಷ್ಟಕೋನಾಕೃತಿಯ ಕಟ್ಟಡ. ಇದೊಂದು ತೆರೆದ ಮಂಡಪವಾಗಿದ್ದು ಇದರ ಸುತ್ತಲೂ ಮುಂಚಾಚಿದ ಸೂರು ಇದೆ. ಇದರ ಮೇಲೆ ಕೈಪಿಡಿ ಗೋಡೆ, ಅಲಂಕೃತಗೂಡುಗಳು ಹಾಗೂ ಅದರ ಮೇಲೆ ಗಾರೆಯ ಶಿಖರವಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ, ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅಪ್ಪಣೆಯ ಮೇರೆಗೆ ಇದನ್ನು ನಿರ್ಮಿಸಲಾಯಿತು. ಇದು ನೋಡಲು ಸಣ್ಣದಾಗಿ ಕಂಡರೂ, ಬಲು ಸುಂದರವಾಗಿದ್ದು ಪುಷ್ಕರಿಣಿಯ ಸೌಂದರ್ಯವನ್ನು ಹೆಚ್ಚಿಸಿದೆ.

ವಾಯವ್ಯ ಭಾಗದಲ್ಲಿರುವ ಅಹೋಬಲ ಮಠದಲ್ಲಿ ಹತ್ತೊಂಬತ್ತನೆಯ ಶತಮಾನಕ್ಕೆ ಸೇರಿರಬಹುದಾದ ಲಕ್ಷ್ಮೀನರಸಿಂಹನ ವಿಗ್ರಹವಿದೆ. ಪೂರ್ವದಲ್ಲಿ ಅಶ್ವತ್ಥ ವೃಕ್ಷದ ಪಕ್ಕದಲ್ಲಿ ಇನ್ನೆರಡು ಮಂಡಪಗಳಿವೆ. ಪಶ್ಚಿಮ ಭಾಗದಲ್ಲಿ ಪಂಚಭಾಗವತ ಮಂಡಪವಿದೆ. ಉತ್ತರ ಭಾಗದಲ್ಲಿ ಒಂದು ಸಣ್ಣ ಗುಡಿಯಿದ್ದು ಅದರಲ್ಲಿ ಆದಿಶೇಷನ ವಿಗ್ರಹವಿದೆ. ಅದರ ಪಕ್ಕದಲ್ಲೇ ಐವತ್ತು ಕಂಬಗಳಿರುವ ಇನ್ನೊಂದು ಮಂಡಪವಿದೆ. ನಾರಾಯಣಸ್ವಾಮಿಯ ಕಲ್ಯಾಣೋತ್ಸವ ನಡೆಯುವ ನಾಲ್ಕು ಮಂಡಪಗಳು ಪಕ್ಕದಲ್ಲಿವೆ. ಅನಂತರ ನಾಗವಲ್ಲಿ ಮಂಡಪ ಮತ್ತು ವರಾಹ ಮಂಡಪಗಳನ್ನು ಕಾಣಬಹುದು. ಇದರ ಪಕ್ಕದಲ್ಲೇ ಬಿಂದು ಮಾಧವ ಮಂಡಪವಿದೆ. ಇದರಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಹಿಡಿದಿರುವ ಐದು ಅಡಿ ಎತ್ತರದ ವಿಗ್ರಹವಿದೆ. ಬಹುಶಃ ಇದು ಹೊಯ್ಸಳರ ಕಾಲದ ವಿಗ್ರಹವಿರಬೇಕು. ಇನ್ನಿತರ ಪ್ರಮುಖ ಕಟ್ಟಡಗಳೆಂದರೆ ಪರಕಾಲ ಮಠ, ವೆಂಕಟರಮಣ ದೇವಾಲಯ, ಕಾಂಚಿಮಠ ಮತ್ತು ಶ್ರೀರಾಮ ದೇವಾಲಯ. ಈ ರೀತಿ ಮೇಲುಕೋಟೆಯ ಪುಷ್ಕರಿಣಿಯಲ್ಲಿ ಹತ್ತಾರು ಧಾರ್ಮಿಕ ಪೂಜಾಕಾರ್ಯಗಳು ನಡೆಯುವುದರಿಂದ ಹಾಗೂ ಅದರ ಸೌಂದರ್ಯದಿಂದ ಅದು ಪ್ರಖ್ಯಾತಿಯನ್ನು ಗಳಿಸಿದೆ.

## ಈಶ್ವರ ದೇವಾಲಯ, ಜಲಸಂಗ್ವಿ

ಇಲ್ಲಿ ದೊರಕಿರುವ ಶಾಸನಗಳು ಮತ್ತು ಪ್ರಾಚೀನ ಅವಶೇಷಗಳಿಂದ ಬೀದರ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಕಲ್ಯಾಣದ ಚಾಳುಕ್ಯರ ಸಾಮ್ರಾಜ್ಯಕ್ಕೆ ಸೇರಿದ್ದವು ಎಂಬುದು ತಿಳಿಯುತ್ತವೆ. ಬೀದರ್ ಜಿಲ್ಲೆಯಲ್ಲಿರುವ ಜಲಸಂಗ್ವಿ, ಕಲ್ಯಾಣ ಚಾಳುಕ್ಯರ ಶೈಲಿಯ ಸುಂದರ ಶಿವ ದೇವಾಲಯಕ್ಕೆ ಪ್ರಸಿದ್ಧಿಯಾಗಿದೆ.ಇದು ಕ್ರಿ.ಶ. 1100ರಲ್ಲಿ ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ರಚಿತವಾಯಿತು. ಈ ದೇವಾಲಯದ ಕೆಲವು ಭಾಗಗಳು ಹಾಳಾಗಿದ್ದರೂ, ಉಳಿದಿರುವ ಭಾಗಗಳಿಂದ ಈ ದೇವಾಲಯದ ವಾಸ್ತುಶಿಲ್ಪ ಮಹತ್ವವನ್ನು ತಿಳಿಯಬಹುದಾಗಿದೆ. ಈ ದೇವಾಲಯದಲ್ಲಿ ಒಂದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಂಡಪಗಳಿವೆ. ನಕ್ಷತ್ರಾಕಾರದ ಈ ದೇವಾಲಯದ ತಲ ವಿನ್ಯಾಸ ಗಮನಾರ್ಹವಾದುದು. ಅಧಿಷ್ಠಾನದಲ್ಲಿ ಅಡ್ಡದಿಂಡುಗಳಿದ್ದು ಮೇಲಿನ ದಿಂಡುಗಳಲ್ಲಿ ಅಲಂಕಾರಗಳಿವೆ. ಕೆಲವು ದಿಂಡುಗಳು ದಪ್ಪನಾಗಿವೆ. ಅವುಗಳ ಮೇಲಿರುವ ಗೋಡೆಯಲ್ಲಿ ಅರೆಗಂಬಗಳಿವೆ. ಇವುಗಳ ಮಧ್ಯದಲ್ಲಿ ಅಲಂಕಾರಯುಕ್ತ ಮದನಿಕೆ ಶಿಲ್ಪಗಳಿವೆ. ವಾಸ್ತವವಾಗಿ ಕೆಲವು ಚಾಳುಕ್ಯ ದೇವಾಲಯಗಳು ಈ ರೀತಿಯ ಶಿಲ್ಪಗಳಿಗೆ ಪ್ರಖ್ಯಾತವಾಗಿವೆ. ಇವುಗಳಲ್ಲದೆ ವರಾಹವಿಷ್ಣು, ಬ್ರಹ್ಮ, ಮಹೇಶ್ವರ, ನಾಟ್ಯಗಣಪತಿ ಮುಂತಾದ ಶಿಲ್ಪಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುತ್ತವೆ. ಮಟ್ಟಸವಾದ ಚಾವಣಿಯ ಹಂತದಲ್ಲಿ ಸರಣಿ ದಿಂಡುಗಳು ಕಾಣಬರುತ್ತವೆ. ಈಗ ಈ ದೇವಾಲಯದಲ್ಲಿ ಶಿಖರವಿಲ್ಲ.

ದೇವಾಲಯದ ಒಳಭಾಗದಲ್ಲೂ ಸುಂದರ ಶಿಲ್ಪಗಳಿವೆ. ಗರ್ಭಗೃಹದ ಬಾಗಿಲುವಾಡವು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು, ಲತಾ ವಿನ್ಯಾಸ ಮತ್ತು ತ್ರಿಶೂಲ ಹಾಗೂ ಡಮರುಗಳನ್ನು ಹಿಡಿದಿರುವ ಶೈವದ್ವಾರಪಾಲರು, ನಾಗನಾಗಿನಿಯರ ಶಿಲ್ಪಗಳಿವೆ. ನವರಂಗದ ಕಂಬಗಳಲ್ಲಿ ಚೌಕಾಕಾರದ ಪೀಠ, ಕಾಂಡದಲ್ಲಿ ಅಷ್ಟಬಾಹು ಮತ್ತು ಹದಿನಾರು ಮುಖಗಳ ಕೊಳಲು ವಿನ್ಯಾಸಗಳಿವೆ.

ಈ ದೇವಾಲಯದಲ್ಲಿ ಅನೇಕ ಮದನಿಕೆ ಶಿಲ್ಪಗಳಿವೆ. ಇವುಗಳಲ್ಲಿ ಅತಿ ಪ್ರಸಿದ್ಧವಾಗಿರುವುದು ಸರ್ವಾಭರಣಭೂಷಿತಳಾಗಿ ಸುಂದರ ಕೇಶವಿನ್ಯಾಸವನ್ನು ಹೊಂದಿರುವ ನಿಂತಿರುವ ಯುವತಿಯ ಶಿಲ್ಪ. ಈ ಸುಂದರಿಯು ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಪ್ರಶಸ್ತಿಯನ್ನು ಫಲಕದ ಮೇಲೆ ಕನ್ನಡ ಲಿಪಿಯಲ್ಲಿ ಬರೆಯುತ್ತಿದ್ದಾಳೆ. ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನು ಸಪ್ತನದಿಗಳು ಸೇರಿದಂತೆ ಇಡೀ ಭೂಮಿಯನ್ನು ಗೆದ್ದು, ರಾಜ್ಯಭಾರಮಾಡುತ್ತಿದ್ದಾನೆ ಎನ್ನುವುದೇ ಆಕೆ ಬರೆಯುತ್ತಿರುವ ಪದ್ಯದ ಅರ್ಥ. ಇನ್ನೊಂದು ಶಿಲ್ಪದಲ್ಲಿ ಕಪಿಯೊಂದು ಒಬ್ಬ ಯುವತಿಯನ್ನು ರೇಗಿಸುತ್ತಿರುವಂತೆ ತೋರಿಸಲಾಗಿದೆ. ಇನ್ನೊಂದರಲ್ಲಿ ಸುಂದರಿಯೊಬ್ಬಳು ಕನ್ನಡಿಯ ಮುಂದೆ ನಿಂತು ಅಲಂಕರಿಸಿಕೊಳ್ಳುತ್ತಿದ್ದಾಳೆ. ಮತ್ತೊಂದರಲ್ಲಿ ಯುವತಿಯೊಬ್ಬಳು ಗಿಳಿಯೊಡನೆ ಸಂಭಾಷಣೆ ನಡೆಸುತ್ತಿದ್ದಾಳೆ. ತಾಯಿ-ಮಗುವಿನ ಶಿಲ್ಪ ತುಂಬ ಚೆನ್ನಾಗಿದೆ. ಮತ್ತೊಂದರಲ್ಲಿ ಯುವತಿಯೊಬ್ಬಳು ವೀಣೆಯನ್ನು ನುಡಿಸುತ್ತಿದ್ದಾಳೆ. ಈ ರೀತಿ ಇಲ್ಲಿನ ಮದನಿಕೆ ಶಿಲ್ಪಗಳು ತುಂಬ ಸುಂದರವಾಗಿದ್ದು, ಬೇಲೂರು ಮತ್ತು ಹಳೇಬೀಡುಗಳ ಮದನಿಕೆ ಶಿಲ್ಪಗಳಿಗಿಂತ ಪ್ರಾಚೀನವಾದವುಗಳಾಗಿವೆ. ಈ ದೃಷ್ಟಿಯಿಂದ ಜಲಸಂಗ್ವಿಯ ಮದನಿಕೆ ಶಿಲ್ಪಗಳು ಹೊಯ್ಸಳ ಶಿಲ್ಪಗಳಿಗೆ ಮಾದರಿಯನ್ನು ಒದಗಿಸಿದ್ದವು ಎಂದು ಹೇಳಬೇಕಾಗುತ್ತದೆ. ಈ ರೀತಿ ಜಲಸಂಗ್ವಿಯ ದೇವಾಲಯ ಕಲ್ಯಾಣ ಚಾಳುಕ್ಯ ಶಿಲ್ಪಗಳ ಆಗರವಾಗಿದೆ.

## ಕೈಟಭೇಶ್ವರ ದೇವಾಲಯ, ಕುಬಟೂರು

ಶಿವಮೊಗ್ಗ ಜಿಲ್ಲೆಯಲ್ಲಿರುವ ಕುಬಟೂರು ಅಥವಾ ಕುಪ್ಪತ್ತೂರು ಪ್ರಾಚೀನ ಅಗ್ರಹಾರವಾಗಿದ್ದು, ಖ್ಯಾತ ಶಿಕ್ಷಣ ಕೇಂದ್ರವೂ ಆಗಿತ್ತು. ಈ ಖ್ಯಾತ ವಿದ್ಯಾಕೇಂದ್ರದಲ್ಲಿ ಪಾರಂಪರಿಕ ವಿಷಯಗಳಾದ ವೇದ-ವೇದಾಂಗಗಳು ಅನುಭವಿ ಉಪಾಧ್ಯಾಯರಿಂದ ಬೋಧಿಸಲ್ಪಡುತ್ತಿದ್ದವು. ವಾಸ್ತವವಾಗಿ ವಾತ್ಸಾಯನ ಮುನಿಯ ಕಾಮಸೂತ್ರ, ಮತ್ತು ಇತರ ವಿಷಯಗಳ ಶಿಕ್ಷಣಕ್ಕೆ ಹೆಸರುವಾಸಿಯಾಗಿತ್ತು. ಚಾಳುಕ್ಯ ದೊರೆಗಳು ಈ ಅಗ್ರಹಾರದ ವಿಶೇಷ ಪೋಷಕರಾಗಿದ್ದು, ಇಲ್ಲಿ ಅನೇಕ ಮಠಗಳನ್ನು ಮತ್ತು ದೇವಾಲಯಗಳನ್ನು ನಿರ್ಮಿಸಿದರು. ಪೌರಾಣಿಕವಾಗಿ ಇದು ಚಂದ್ರಹಾಸನ ರಾಜಧಾನಿಯಾಗಿತ್ತೆಂದು ತಿಳಿದು ಬರುತ್ತದೆ. ಕುಬಟೂರು, ಕಲ್ಯಾಣ ಚಾಳುಕ್ಯರು ನಿರ್ಮಿಸಿದ ಕೈಟಭೇಶ್ವರ ದೇವಾಲಯಕ್ಕೆ ಹೆಚ್ಚು ಪ್ರಸಿದ್ಧಿಯಾಗಿದೆ. ಇದು ಆರಂಭ ಕಾಲದ ಹೊಯ್ಸಳ ದೇವಾಲಯಗಳನ್ನು ಅನೇಕ ವಿಷಯಗಳಲ್ಲಿ ಹೋಲುತ್ತದೆ. ಈ ದೇವಾಲಯ ಸುಮಾರು ಕ್ರಿ.ಶ. 1100ರಲ್ಲಿ ನಿರ್ಮಿತವಾಯಿತೆಂದು ಭಾವಿಸಲಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ತೆರೆದ ನಕ್ಷತ್ರಾಕಾರದ ಚೌಕಾಕಾರದ ಮಂಡಪಗಳಿವೆ. ಇದರಲ್ಲಿ ಪ್ರದಕ್ಷಿಣ ಪಥವಿಲ್ಲ. ಅಧಿಷ್ಠಾನದ ಅಡ್ಡ ದಿಂಡುಗಳು ದೇವಾಲಯದ ಸುತ್ತಲೂ ಇವೆ. ಇವುಗಳ ಮೇಲೆ ಅರೆಗಂಬಗಳು ಮತ್ತು ಸಮಾನಾಂತರದಲ್ಲಿ ಗೂಡುಗಳು, ಸಣ್ಣ ಪ್ರಮಾಣದ ಶಿಖರಗಳು ಕಾಣಬರುತ್ತವೆ. ಚಾವಣಿಯ ಹಂತದಲ್ಲಿ ಮುಂಚಾಚಿರುವ ಮುಂಜೂರು ಇದೆ. ಮುಖಮಂಡಪದ ಮುಂಜೂರು ಹೆಚ್ಚು ಅಗಲವಾಗಿದೆ. ಈ ದೇವಾಲಯದಲ್ಲಿ ನಾಲ್ಕು ಹಂತಗಳ ಕಲ್ಯಾಣ ಚಾಳುಕ್ಯ ಶೈಲಿಯ ಶಿಖರವಿದ್ದು, ಪೂರ್ವದಲ್ಲಿ ಸುಕನಾಸಿಯ ಮುಂಚಾಚು ಕಂಡುಬರುತ್ತದೆ. ಇದು ಅಲಂಕೃತವಾಗಿದ್ದು ದೇವಾಲಯದ ಅಂದವನ್ನು ಹೆಚ್ಚಿಸಿದೆ. ಮಂಡಪದ ಅಧಿಷ್ಠಾನದಲ್ಲಿ ಪುಷ್ಪಾಲಂಕಾರ, ಸಿಂಹಮುಖಗಳ ತಗ್ಗುಶಿಲ್ಪಗಳ ಅಲಂಕಾರಗಳಿವೆ. ಮಂಡಪದಲ್ಲಿ ಮಹಿಷಾಸುರಮರ್ದಿನಿ, ಸಪ್ತಮಾತೃಕೆಯರು, ಗಣೇಶ, ನಾರಾಯಣ, ಶಿವ, ಪಾರ್ವತಿ ಮತ್ತು ಸೂರ್ಯ ಶಿಲ್ಪಗಳಿವೆ.

ಮಂಡಪದಲ್ಲಿ ಹನ್ನೊಂದು ಅಡಿ ಎತ್ತರದ ನೀಳವಾದ ಕಂಬಗಳಿವೆ. ಅವು ಚರಕಿ ಯಂತ್ರದಿಂದ ತಯಾರಿಸಲ್ಪಟ್ಟು, ವೃತ್ತಾಕಾರದಲ್ಲಿದ್ದು ವಿಶೇಷ ಹೊಳಪನ್ನು ಹೊಂದಿವೆ. ಕಕ್ಷಾಸನದ ಜಾಗದಲ್ಲಿ ಸ್ವಲ್ಪ ಕಡಿಮೆ ಪ್ರಮಾಣದ ಹದಿನಾರು ಕೋನಗಳ ಸ್ತಂಭಗಳಿವೆ. ಇಲ್ಲಿರುವ ಕೇಂದ್ರ, ಭುವನೇಶ್ವರಿಯಲ್ಲಿ ಆಳವಾದ ಮತ್ತು ಸುಂದರವಾದ ಅಷ್ಟದಿಕ್ಪಾಲಕರ ಹಾಗೂ ನೃತ್ಯಗಾರರ ವಿನ್ಯಾಸಗಳಿವೆ. ಮಂಡಪದ ಸುತ್ತಲೂ ಇರುವ ಕೈಪಿಡಿಯ ಕೀರ್ತಿಮುಖಗಳ ಕೆಳಗೆ ದಿಕ್ಪಾಲರು, ತಾಂಡವೇಶ್ವರ, ಭೈರವ, ಹರಿಹರ, ಬ್ರಹ್ಮ ಪಾರ್ವತಿ, ಕೇಶವ, ನರಸಿಂಹ ಮುಂತಾದ ಶಿಲ್ಪಗಳಿವೆ.

ಸುಕನಾಸಿಯ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಚಾವಣಿಯಲ್ಲಿ ಹೆಚ್ಚಿನ ಸಂಖ್ಯೆಯ ಕುಸುಮಗಳಿರುವ ಕಮಲಪುಷ್ಪ ವಿನ್ಯಾಸವಿದೆ. ಗರ್ಭಗೃಹದ ದ್ವಾರಬಂಧದ ಮೇಲೂ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ಶಿವಲಿಂಗವಿದೆ. ಇದನ್ನು ಕೈಟಭೇಶ್ವರ ಎಂದು ಕರೆಯಲಾಗುತ್ತಿದ್ದರೂ, ವಿನಯಾದಿತ್ಯನ ಶಾಸನದಲ್ಲಿ ಇದನ್ನು ಕೋಟೀಶ್ವರ ಎಂದು ಕರೆಯಲಾಗಿದೆ. ಬಹುಶಃ ಈ ದೇವಾಲಯದ ಮೂಲ ಹೆಸರು ಕೋಟೀಶ್ವರವೆಂದಿದ್ದಿರಬಹುದು. ಒಟ್ಟಿನಲ್ಲಿ ಕೈಟಭೇಶ್ವರ ದೇವಾಲಯ ಶಿವಮೊಗ್ಗ ಜಿಲ್ಲೆಯಲ್ಲಿ ಚೆನ್ನಾಗಿ ರಕ್ಷಿಸಲ್ಪಟ್ಟ ಸುಂದರ ಕಲ್ಯಾಣ ಚಾಳುಕ್ಯ ದೇವಾಲಯ.

## ಮಹಾದೇವ ದೇವಾಲಯ, ಇಟ್ಟಗಿ

ಇಟ್ಟಗಿ ಗ್ರಾಮದಲ್ಲಿರುವ ಮಹಾದೇವ ದೇವಾಲಯವು ಕಲ್ಯಾಣದ ಚಾಳುಕ್ಯರ ಸುಂದರ ವಾಸ್ತುಕೃತಿಗಳಲ್ಲಿ ಮುಖ್ಯವಾದುದು. ಇದರ ಜೊತೆಗೆ ಇದು ಕಲ್ಯಾಣ ಚಾಳುಕ್ಯ ವಾಸ್ತುಶಿಲ್ಪದ ವಿಕಾಸದ ಕೊನೆಯ ಹಂತವನ್ನೂ ಸೂಚಿಸುತ್ತದೆ. ವಾಸ್ತವವಾಗಿ ವಾಸ್ತು ಮತ್ತು ಶಿಲ್ಪಗಳು ಯಾವ ರೀತಿ ಈ ಶೈಲಿಯಲ್ಲಿ ಪರಿಷ್ಕೃತಗೊಂಡವು ಎಂಬುದನ್ನು ಈ ದೇವಾಲಯ ತೋರಿಸುತ್ತದೆ. ಈ ಕಾರಣಗಳಿಂದಾಗಿ ಇಟ್ಟಗಿಯ ಈ ದೇವಾಲಯ ವಿಶೇಷ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ದೊರಕಿರುವ ಶಾಸನದ ಆಧಾರದ ಮೇಲೆ ಹೇಳುವುದಾದರೆ, ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅವನ ದಂಡನಾಯಕನಾಗಿದ್ದ ಮಹಾದೇವನು ಕ್ರಿ.ಶ. 1112ರಲ್ಲಿ ಈ ದೇಗುಲವನ್ನು ನಿರ್ಮಿಸಿದನು. 'ದೇವಾಲಯಗಳ ಚಕ್ರವರ್ತಿ' ಎಂದು ಈ ಶಾಸನ ಈ ದೇವಾಲಯವನ್ನು ಬಣ್ಣಿಸುತ್ತದೆ. ಈ ದೇವಾಲಯವನ್ನು ಸಂದರ್ಶಿಸಿದರೆ ಶಾಸನದ ಈ ಅಭಿಪ್ರಾಯವು ಸತ್ಯವಾದುದು ಎನ್ನುವುದು ಖಚಿತಪಡುತ್ತದೆ.

ಇದು 122 ಅಡಿ ಉದ್ದ 66 ಅಡಿ ಅಗಲವಿದ್ದು, ಚಾಳುಕ್ಯರು ನಿರ್ಮಿಸಿದ ದೊಡ್ಡದಾದ ದೇವಾಲಯಗಳಲ್ಲಿ ಒಂದು. ದೇವಾಲಯವು ಪೂರ್ವಾಭಿಮುಖವಾಗಿದ್ದು, ಇದರಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮುಖಮಂಡಪಗಳಿವೆ. ನವರಂಗಕ್ಕೆ ನಾಲ್ಕು ಬಾಗಿಲುಗಳಿದ್ದು ಪಶ್ಚಿಮ ದ್ವಾರವು ಅಂತರಾಳ ಮತ್ತು ಗರ್ಭಗೃಹಗಳಿಗೆ, ಪೂರ್ವದ್ವಾರವು ತೆರೆದ ಮುಖಮಂಡಪಕ್ಕೆ, ದಕ್ಷಿಣ ಮತ್ತು ಉತ್ತರದ ದ್ವಾರಗಳು ಹೊರಭಾಗಕ್ಕೆ ಪ್ರವೇಶವನ್ನು ಕಲ್ಪಿಸಿಕೊಡುತ್ತವೆ. ಅಧಿಷ್ಠಾನದಲ್ಲಿ ಅಡ್ಡ ಪಟ್ಟಿಕೆಗಳಿದ್ದು ಅವುಗಳ ಮೇಲೆ ಲಂಬರೀತಿಯ ಅಲಂಕಾರಗಳಿವೆ. ದೇವಾಲಯದ ಗೋಡೆಯಲ್ಲಿ ಅರೆಗಂಬಗಳ ಸಾಲು ಮತ್ತು ಅವುಗಳ ಮಧ್ಯೆ ವಿಶೇಷವಾಗಿ ಅಲಂಕೃತ ಗೂಡುಗಳು ಇವೆ. ಕೆಲವು ಅರೆಗಂಬಗಳ ಮೇಲೆ ನಾಗರ ರೀತಿಯ ಸೂಕ್ಷ್ಮ ಶಿಖರಗಳಿದ್ದು ದೇವಾಲಯದ ಅಂದವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಇವುಗಳ ಮೇಲೆ ಅಲಂಕೃತ ಮುಂಜೂರು ಇದೆ. ಶಿಲ್ಪಗಳಿಗೆ ಆಸರೆಯಾಗಿ ಅಲ್ಲಲ್ಲಿ ನಾಜೂಕಾದ ಕೆತ್ತನೆಯ ವಿತಾನಗಳನ್ನು ಅಳವಡಿಸಲಾಗಿದೆ. ಗರ್ಭಗೃಹದ ಮೇಲಿರುವ ವೇಸರ ಮಾದರಿಯನ್ನು ಹೋಲುವ ಹಿಂಚಾಚು ತಲಗಳನ್ನು ಹೊಂದಿದ ಶಿಖರವು ತುಂಬ ಆಕರ್ಷಕವಾಗಿದೆ. ಶಿಖರದಲ್ಲಿರುವ ಅಲಂಕೃತ ಅಂಶಗಳು ಹಾಗೂ ನಾಜೂಕಿನ ಶಿಲ್ಪಗಳು ವಿಶೇಷವಾಗಿ ಗಮನವನ್ನು ಸೆಳೆಯುತ್ತವೆ. ಈ ಸೂಕ್ಷ್ಮ ಕೆತ್ತನೆಗಳು ನಮಗೆ ಹೊಯ್ಸಳ ದೇವಾಲಯಗಳನ್ನು ನೆನಪಿಗೆ ತರುತ್ತವೆ.

ಈ ದೇವಾಲಯದ ಬಾಗಿಲುವಾಡಗಳಲ್ಲಿ ಸೂಕ್ಷ್ಮ ಕೆತ್ತನೆಗಳಿದ್ದು ಹೆಚ್ಚು ಆಕರ್ಷಕವಾಗಿವೆ. ಇಲ್ಲಿನ ಭುವನೇಶ್ವರಿಗೂ ಮತ್ತೊಂದು ಆಕರ್ಷಣೆ. ಇವು ಗಾಢವಾಗಿ ಶಿಲ್ಪಿತವಾಗಿದ್ದು, ವಿವಿಧ ವಿನ್ಯಾಸಗಳನ್ನು ಹೊಂದಿವೆ. ತೆರೆದ ಮಂಡಪದಲ್ಲಿ ಕುಳಿತುಕೊಳ್ಳಲು ಅನುಕೂಲವಾಗುವ ಕಕ್ಷಾಸನಗಳಿವೆ. ಈ ದೇವಾಲಯದ ಕಂಬಗಳು ವೈವಿಧ್ಯಪೂರ್ಣವಾಗಿವೆ. ಅದರಲ್ಲಿಯೂ ವಿಶೇಷವಾಗಿ ಮಂಡಪದಲ್ಲಿರುವ ನಾಲ್ಕು ಕಂಬಗಳು ಲತಾ ವಿನ್ಯಾಸಗಳು ಮತ್ತು ಇತರ ಅಲಂಕಾರಗಳಿಂದ ಅಂದವಾಗಿ ಕಾಣಬರುತ್ತವೆ. ಗರ್ಭಗೃಹದಲ್ಲಿ ಈ ದೇವಾಲಯದ ನಿರ್ಮಾತನ ಹೆಸರನ್ನೇ ಆಧರಿಸಿದ ಮಹಾದೇವ ಶಿವಲಿಂಗವಿದೆ. ಖ್ಯಾತ ವಿದ್ವಾಂಸ ಹೆನ್ರಿ ಕಸಿನ್ಸ್ ಹೇಳುವಂತೆ ವಾಸ್ತುಶಿಲ್ಪ ಸೌಂದರ್ಯದ ಹೆಚ್ಚಳದಿಂದ ಬೇಲೂರು, ಹಳೇಬೀಡುಗಳ ದೇವಾಲಯಗಳ ನಂತರದ ಸಾಲಿನಲ್ಲಿ ಈ ದೇವಾಲಯ ನಿಲ್ಲುತ್ತದೆ.

## ದೊಡ್ಡಬಸಪ್ಪ ದೇವಾಲಯ, ಡಂಬಳ

ಗದಗಿಗೆ ಸಮೀಪದಲ್ಲಿರುವ ಡಂಬಳ, ವಿಶೇಷವಾಗಿ ಕಲ್ಯಾಣದ ಚಾಲುಕ್ಯರ (ಕ್ರಿ.ಶ. 10-12ನೆಯ ಶತಮಾನ) ಕಾಲದಲ್ಲಿ, ಖ್ಯಾತ ಪ್ರಾಚೀನ ನಗರವಾಗಿತ್ತು. ಅದರ ಪ್ರಾಚೀನ ಹೆಸರು ಧರ್ಮಪುರ ಅಥವಾ ಧರ್ಮವೊಲ್. ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿಯು ಈ ಪ್ರಾದೇಶಿಕ ರಾಜಧಾನಿಯಿಂದ ಆಳ್ವಿಕೆ ನಡೆಸುತ್ತಿದ್ದಳು. ಅಷ್ಟೇ ಅಲ್ಲದೆ, ಡಂಬಳವು ಬೌದ್ಧ ಧರ್ಮ ಮತ್ತು ತಾರಾಭಗವತಿ ಆರಾಧನೆಗೂ ಪ್ರಸಿದ್ಧಿಯಾಗಿತ್ತು ಎಂಬ ಪ್ರಮುಖ ವಿಷಯ ಇಲ್ಲಿ ದೊರಕಿರುವ ಶಾಸನದಿಂದ ನಮಗೆ ವಿದಿತವಾಗುತ್ತದೆ.

ಡಂಬಳವು ಈಗ ದೊಡ್ಡಬಸಪ್ಪ ದೇವಾಲಯಕ್ಕೆ ಹೆಸರುವಾಸಿಯಾಗಿದೆ. ವಾಸ್ತವವಾಗಿ ಈ ದೇವಾಲಯವನ್ನು ಅಜ್ಜಮನಾಯಕನು ಕ್ರಿ.ಶ. 1124-25ರಲ್ಲಿ ನಿರ್ಮಿಸಿದನು. ಆದಕ್ಕೆ ಇದನ್ನು ಅಜ್ಜಮೇಶ್ವರ ದೇವಾಲಯ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಆಯತಾಕಾರದಲ್ಲಿರುತ್ತವೆ. ಆದರೆ ಡಂಬಳದ ದೇವಾಲಯವು ನಕ್ಷತ್ರಾಕಾರದಲ್ಲಿದ್ದು, ಚಾಲುಕ್ಯ ದೇವಾಲಯಗಳ ಶೈಲಿಗಿಂತ ಭಿನ್ನವಾಗಿದೆ. ಹೊಯ್ಸಳ ದೇವಾಲಯಗಳು ಸಾಮಾನ್ಯವಾಗಿ ನಕ್ಷತ್ರಾಕಾರದಲ್ಲಿರುತ್ತವೆ. ಆದರೆ ಚಾಲುಕ್ಯ ಕಾಲದ ದೊಡ್ಡ ಬಸಪ್ಪ ದೇವಾಲಯವು ಹೊಯ್ಸಳ ಶೈಲಿಯಲ್ಲಿಯ ನಕ್ಷತ್ರಾಕಾರದಲ್ಲಿರುವುದು ಆಸಕ್ತಿಕರವಾದುದು. ಇದೇ ಈ ದೇವಾಲಯದ ವೈಶಿಷ್ಟ್ಯ.

ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಪೂರ್ವ ಮತ್ತು ಪಶ್ಚಿಮಾಭಿಮುಖದ ಎರಡು ಮುಖಮಂಡಪಗಳಿವೆ. ಗರ್ಭಗೃಹ, ಅಂತರಾಳ ಮತ್ತು ನವರಂಗಗಳು ಕೆಳಗಿನಿಂದಲೇ ನಕ್ಷತ್ರಾಕಾರದಲ್ಲಿವೆ. ಈ ಭಾಗದ ಅಧಿಷ್ಠಾನದಲ್ಲಿ ಸಮಾನಾಂತರದ ದಿಂಡುಗಳಿವೆ. ನಕ್ಷತ್ರಾಕಾರದ ರೀತಿಯಲ್ಲೇ ಗೋಡೆಗಳು, ಅದರ ಮೇಲಿನ ಮುಂಚೂರುಗಳೂ ಇವೆ. ಗೋಡೆಯು ಮೇಲಿರುವ ಅರೆಗಂಬಗಳು, ಸೂಕ್ಷ್ಮ ಶಿಖರಗಳಿಂದ ಆಲಂಕೃತವಾಗಿದೆ. ಕೆಳಭಾಗದಲ್ಲಿರುವ ಅಡ್ಡ ಪಟ್ಟಿಕೆಗಳು, ಮತ್ತು ಅವುಗಳ ಮೇಲಿನ ಲಂಬ ರೀತಿಯ ಅಲಂಕಾರಗಳ ಈ ಜೋಡಣೆಯು ದೇವಾಲಯವನ್ನು ಸುಂದರವನ್ನಾಗಿ ಮಾಡಿದೆ. ಆದಕ್ಕಾಗಿ ಈ ದೇವಾಲಯ ಪ್ರಸಿದ್ಧವಾಗಿದೆ. ಇದರ ಜೊತೆಗೆ ನಕ್ಷತ್ರಾಕಾರವು ಶಿಖರದ ತುದಿಯವರೆಗೆ ಮೂಡಿ ಬಂದಿದೆ. ಲಂಬಮಾನದ ಶಿಲ್ಪಾಲಂಕಾರಗಳು ದೇವಾಲಯಕ್ಕೆ ಸತ್ವವನ್ನು ಒದಗಿಸಿದರೆ, ಇದನ್ನು ಸಂಧಿಸುವ ಅಡ್ಡಪಟ್ಟಿಕೆಗಳು, ಇತರ ಚಾಲುಕ್ಯ ದೇವಾಲಯಗಳಲ್ಲಿ ಕಾಣಬರುವಂತಹ ಲಾವಣ್ಯವನ್ನು ತೋರಿಸುತ್ತವೆ. ಈ ರೀತಿ ಅಲಂಕಾರವುಳ್ಳ ಅಡ್ಡಪಟ್ಟಿಕೆಗಳು ಮತ್ತು ಅವುಗಳ ಮೇಲಿರುವ ಲಂಬಮಾನದ ಅಲಂಕಾರದ ಅರೆಗಂಬಗಳು ಮತ್ತು ಇತರ ಕೆತ್ತನೆಗಳು ಹಾಗೂ ಅವುಗಳ ಮೇಲಿರುವ ನಕ್ಷತ್ರಾಕಾರದ ಶಿಖರ ಈ ಎಲ್ಲ ಅಂಗಗಳ ಸುಮಧುರ ಜೋಡಣೆ ಈ ದೇವಾಲಯವನ್ನು ಸುಂದರ ಕಟ್ಟಡವನ್ನಾಗಿ ಮಾಡಿದೆ. ನವರಂಗಳ ಮತ್ತು ಮುಖಮಂಡಪಗಳಲ್ಲಿ ಸುಂದರ ಕಂಬಗಳಿದ್ದು ಅವುಗಳ ಮೇಲೆ ದೇವದೇವಿಯರ ತಗ್ಗು ಉಬ್ಬಿನ ಶಿಲ್ಪಗಳಿವೆ. ಈ ದೇವಾಲಯದ ನಂದಿಮಂಡಪದಲ್ಲಿ ದೊಡ್ಡದಾದ ನಂದಿ ಅಥವಾ ಬಸವನ ಶಿಲ್ಪವಿದೆ. ಆದುದರಿಂದ ಈ ದೇವಾಲಯಕ್ಕೆ ದೊಡ್ಡ ಬಸಪ್ಪ ದೇವಾಲಯ ಎಂಬ ಹೆಸರು ಬಂದಿದೆ. ಭಿನ್ನ ರೀತಿಯ ವಿನ್ಯಾಸದಿಂದ ಈ ದೇವಾಲಯ ಕಲಾ ಇತಿಹಾಸಕಾರರಿಗೆ ಪ್ರಮುಖವೆನಿಸಿದರೆ, ಸುತ್ತಮುತ್ತಲಿನ ಜನಗಳಿಗೆ ಪವಿತ್ರ ಶೈವಕ್ಷೇತ್ರವೆನಿಸಿದೆ.

ನನ್ನೇಶ್ವರ ದೇವಾಲಯ, ಲಕ್ಕುಂಡಿ

ಲೊಕ್ಕಿಗುಂಡಿ ಎಂದು ಹಿಂದೆ ಪ್ರಸಿದ್ಧವಾಗಿದ್ದ ಇಂದಿನ ಲಕ್ಕುಂಡಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಒಂದು ಪ್ರಾಂತದ ರಾಜಧಾನಿಯಾಗಿತ್ತು. ಇದು ಚಾಳುಕ್ಯರು ಹೊಯ್ಸಳರ ಮತ್ತು ಸೇವುಣರ ವಿರುದ್ಧ ಯುದ್ಧಗಳನ್ನು ಮಾಡಿದ ನೆಲೆಯೂ ಆಗಿದ್ದಿತು. ಇಲ್ಲಿದ್ದ ಟಂಕಶಾಲೆಯೂ ಪ್ರಖ್ಯಾತವಾಗಿದ್ದು ಇಲ್ಲಿ ಅಚ್ಚುಮಾಡಲಾಗುತ್ತಿದ್ದ ಚಿನ್ನದ ನಾಣ್ಯಗಳನ್ನು ಲೊಕ್ಕಿಗುಂಡಿ ಗದ್ಯಾಣ ಎಂದು ಗುರುತಿಸುತ್ತಿದ್ದರು. ಈ ಪ್ರಾಚೀನ ನಗರದ ಪ್ರಾಮುಖ್ಯತೆ ಇಲ್ಲಿ ದೊರಕಿರುವ ಶಾಸನಗಳು, ದೇವಾಲಯಗಳು ಮತ್ತು ನಾಣ್ಯಗಳಿಂದ ದೃಢಪಡುತ್ತದೆ. ಖ್ಯಾತ ಮಹಿಳೆ ಅತ್ತಿಮಬ್ಬೆಯೊಡನೆಯೂ ಈ ಊರಿಗೆ ಸಂಬಂಧವಿತ್ತು. ಲಕ್ಕುಂಡಿ ಕಲ್ಯಾಣ ಚಾಳುಕ್ಯರ ದೇವಾಲಯಗಳಿಗೆ ಪ್ರಸಿದ್ಧವಾದ ಸ್ಥಳ. ಈ ರೀತಿಯ ದೇವಾಲಯಗಳಲ್ಲಿ ನನ್ನೇಶ್ವರ ದೇಗುಲ ಪ್ರಮುಖವಾಗಿದ್ದು ಕಲ್ಯಾಣ ಚಾಳುಕ್ಯ ವಾಸ್ತುಶೈಲಿಯನ್ನು ಎತ್ತಿ ತೋರಿಸುತ್ತದೆ.

ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಡಪಗಳು ಪೂರ್ವಾಭಿಮುಖವಾಗಿವೆ. ಮೇಲಿನ ಮೂರು ಮುಚ್ಚಿಗೆಯ ಭಾಗಗಳಾಗಿದ್ದರೆ ಕೊನೆಯದು ತೆರೆದ ಮಂಡಪವಾಗಿದೆ. ಆದುದರಿಂದ ಇದು ಆನಂತರದ ಭಾಗವೆನಿಸುತ್ತದೆ. ಆದರೆ ಈ ಎರಡೂ ಲಕ್ಷಣಗಳು ಸಾಮರಸ್ಯದಿಂದ ಮಿಳಿತವಾಗಿದ್ದು ದೇವಾಲಯದ ಅಂದವನ್ನು ಹೆಚ್ಚಿಸಲು ಸಹಾಯಕವಾಗಿವೆ. ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ಇಡೀ ದೇಗುಲ ನಿರ್ಮಾಣಗೊಂಡಿದೆ. ದೇವಾಲಯದ ಹಿಂಭಾಗಕ್ಕೆ ಸಂಬಂಧಿಸಿದಂತೆ ಇರುವ ಜಗತಿಯ ಭಾಗಗಳಲ್ಲಿ ಅಲಂಕೃತ ದಿಂಡುಗಳಿವೆ. ಇದರ ಮೇಲೆ ದೇವಾಲಯದ ಭಿತ್ತಿಯು (ಗೋಡೆ) ಮೇಲೇಳುತ್ತದೆ. ಭಿತ್ತಿಯಲ್ಲಿ ಕೋಷ್ಠಗಳು, ಅರೆಗಂಬಗಳೂ ಅದರ ಮೇಲ್ಭಾಗದಲ್ಲಿ ಅಲಂಕೃತ ಲೋವೆಕಲ್ಲು ಇದೆ. ಗರ್ಭಗೃಹದ ಮೇಲಿರುವ ಶಿಖರವು ಮೂರು ಹಂತಗಳಲ್ಲಿದ್ದು ಅದರ ತುದಿಯಲ್ಲಿ ಕಲಶವಿದೆ. ಇದೊಂದು ಸುಂದರ ವಿನ್ಯಾಸದ ಶಿಖರ.

ಚೌಕಪೀಠ ಮತ್ತು ವರ್ತುಲಾಕಾರದ ಮೇಲ್ಭಾಗವನ್ನುಳ್ಳ ಹದಿನಾರು ಕಂಬಗಳು ಮುಖಮಂಡಪದಲ್ಲಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ಈ ಮೇಲಿನ ರೀತಿಯ ಕಂಬಗಳೇ ಆಗಿವೆ. ಈ ಕಂಬಗಳ ಚೌಕಪೀಠಗಳ ಮೇಲೆ ಉಬ್ಬು ಶಿಲ್ಪಗಳ ಅಲಂಕಾರ ಕಂಡುಬರುತ್ತದೆ. ಮೇಲಿನ ಚಾವಣಿಯಲ್ಲಿ ಕಮಲಪುಷ್ಪದ ವಿನ್ಯಾಸವಿರುವ ಭುವನೇಶ್ವರಿ ಇದೆ. ಇಲ್ಲಿ ಎರಡು ಶಾಸನಗಳಿವೆ. ಒಂದರ ಕಾಲ ಕ್ರಿ.ಶ. 1180. ಆದುದರಿಂದ ಈ ದೇವಾಲಯ ಕ್ರಿ.ಶ. ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾಗಿರಬೇಕೆಂದು ಭಾವಿಸಬಹುದು.

ಚೌಕ ಗರ್ಭಗೃಹದ ದ್ವಾರಬಂಧವು ಲತೆಗಳು ಮತ್ತು ಪುಷ್ಪಾಲಂಕಾರಗಳಿಂದ ಕೂಡಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದ ಮೇಲೆ ಇರುವ ಪೀಠದಲ್ಲಿ ನನ್ನೇಶ್ವರ ಎಂಬ ಶಿವಲಿಂಗವಿದೆ. ಗರ್ಭಗೃಹದ ಚಾವಣಿಯಲ್ಲಿ ಕಮಲಪುಷ್ಪವಿನ್ಯಾಸದ ಭುವನೇಶ್ವರಿ ಇದೆ. ಇದೊಂದು ಸಣ್ಣ ದೇವಾಲಯ. ಇದರಲ್ಲಿ ಇತರ ಚಾಳುಕ್ಯ ದೇವಾಲಯಗಳಲ್ಲಿರುವಂತೆ ಹೆಚ್ಚಿನ ಸಂಖ್ಯೆಯ ಶಿಲ್ಪಗಳು ಕಂಡುಬರದಿದ್ದರೂ ಇದರ ಸರಳತೆಯು ನೋಡುಗರಿಗೆ ಪ್ರಿಯವೆನಿಸುತ್ತದೆ. ಈ ದೃಷ್ಟಿಯಿಂದ ಇದು ಲಕ್ಕುಂಡಿಯಲ್ಲಿರುವ ಕಲ್ಯಾಣ ಚಾಳುಕ್ಯ ಶೈಲಿಯ ಸುಂದರ ದೇಗುಲಗಳಲ್ಲಿ ಗಮನಾರ್ಹವಾದುದು.

## ಕೋಟೆ, ಬಸವಕಲ್ಯಾಣ

ಕಲ್ಯಾಣ ಅಥವಾ ಕಲ್ಯಾಣಿ ಎಂಬ ಹೆಸರಿನಿಂದ, ಆನಂತರದ ಪಶ್ಚಿಮ ಚಾಳುಕ್ಯರ ಕಾಲದಿಂದಲೂ ಖ್ಯಾತವಾಗಿದ್ದ ನಗರವೇ ಬಸವಕಲ್ಯಾಣ. ವೀರಶೈವ ಧರ್ಮದ ಬಸವಣ್ಣನವರು ಹಾಗೂ ಅವರ ಧಾರ್ಮಿಕ ಅನುಯಾಯಿಗಳಿಂದಾಗಿ ಈ ನಗರ ವಿಶೇಷ ಪ್ರಖ್ಯಾತಿಗಳಿಸಿತ್ತು. ಕಾಲಕ್ರಮದಲ್ಲಿ ಈ ಸ್ಥಳ ಬೃಹತ್ತಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಯಾಗಿ ಅಭಿವೃದ್ಧಿಗೊಂಡು, ದೇಶೀಯ ಮತ್ತು ವಿದೇಶೀಯ ಜನಗಳನ್ನು ಆಕರ್ಷಿಸುತ್ತಿದೆ.

ಬಸವಕಲ್ಯಾಣದಲ್ಲಿರುವ ಕೋಟೆಯು ಪ್ರಾಚೀನವಾಗಿದ್ದು, ವಿಶಾಲವಾಗಿಯೂ ಶಕ್ತಿಯುತವಾಗಿಯೂ ಇದ್ದು ಅನೇಕ ವಿಶೇಷ ಲಕ್ಷಣಗಳಿಂದ ಕಂಗೊಳಿಸುತ್ತಿದೆ. ಇದು ಸಣ್ಣ ಬೆಟ್ಟದ ಮೇಲೆ ನಿರ್ಮಿತವಾಗಿದೆ. ಮೂಲದಲ್ಲಿ ಇದನ್ನು ಹನ್ನೆರಡನೆಯ ಶತಮಾನದಲ್ಲಿ ಚಾಳುಕ್ಯರು ನಿರ್ಮಿಸಿದರು. ಆದರೆ ಅವಶ್ಯಕತೆ ತಲೆದೋರಿದಂತೆ ಆಗಿಂದಾಗ್ಗೆ ಈ ಕೋಟೆಯನ್ನು ಪುನರ್ನಿರ್ಮಾಣ ಮಾಡಲಾಯಿತು. ಈಗಲೂ ಕೆಲವು ದ್ವಾರಗಳು ಪ್ರಾಚೀನ ಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಲಕ್ಷ್ಮಿ ಅಥವಾ ಕಲ್ಯಾಣ ಲಕ್ಷ್ಮಿಗಾಗಿ ನಿರ್ಮಿಸಲಾದ ಪ್ರಾಚೀನ ದೇವಾಲಯ ಇಲ್ಲಿದೆ. ಇದರ ಗುಡಿ ಹಾಗೂ ಚಾವಣಿಯು ಸುಸ್ಥಿತಿಯಲ್ಲಿದೆ. ಬಹುಶಃ ಕಳಚುರಿ ದೊರೆ ಬಿಜ್ಜಳನ ಅರಮನೆ ಇದ್ದಿರಬಹುದಾದ ಸ್ಥಳದ ಪಕ್ಕದಲ್ಲೇ ಈ ದೇವಾಲಯ ಇದೆ. ಲಲಾಟ ಬಿಂಬದಲ್ಲಿ ಗಣಪತಿಯ ಕೆತ್ತನೆಯಿದೆ.

ಹಿಂದೂ ರಾಜರುಗಳ ಪತನಾನಂತರ ಈ ನಗರವನ್ನು ಬಹಮನಿ ದೊರೆಗಳು ತಮ್ಮದನ್ನಾಗಿ ಮಾಡಿಕೊಂಡು, ಇಲ್ಲಿನ ಕೋಟೆಗೆ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿ ಇದನ್ನು ಉಪಯೋಗಿಸಲು ಆರಂಭಿಸಿದರು. ಇದರಲ್ಲಿರುವ ಮರದ ಜಗಲಿಯ ಮೇಲೆ ಬಹಮನಿ ದೊರೆಗಳು ನ್ಯಾಯತೀರ್ಮಾನವನ್ನು ಮಾಡುತ್ತಿದ್ದರೆಂದು ಪ್ರತೀತಿ. ಇಲ್ಲಿನ ಅನೇಕ ಸ್ಥಳಗಲ್ಲಿ ಫಿರಂಗಿಗಳಿವೆ. ಅದರಲ್ಲಿ ಒಂದು ಫಿರಂಗಿಯು ಇಪ್ಪತ್ತು ಅಡಿಗಳಿಗೂ ಹೆಚ್ಚು ಉದ್ದವಾಗಿದ್ದು 'ನವ್‌ಗಜ್' ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ಕೋಟೆಗೆ ಒಂದೇ ಒಂದು ದ್ವಾರವಿದ್ದು, ಅದು ದಕ್ಷಿಣದಲ್ಲಿದೆ. ಎಷ್ಟೇ ಸುಶಿಕ್ಷಿತ ಸೈನಿಕರಾದರೂ ಕೋಟೆಯೊಳಗೆ ಸುಲಭವಾಗಿ ನುಗ್ಗದಂತೆ, ವಿವಿಧ ಭಾಗಗಳನ್ನು ಅಳವಡಿಸಲಾಗಿದೆ. ಈ ಕೋಟೆಯ ನೆಲವನ್ನು ವಿವಿಧ ಸ್ತರಗಳಲ್ಲಿ ಅಳವಡಿಸಿರುವುದರಿಂದ ಸೈನ್ಯವು ಸುಲಭವಾಗಿ ಒಳಗೆ ನುಗ್ಗದಂತೆ ಮಾಡಿರುವುದು ಈ ಕೋಟೆಯ ಇನ್ನೊಂದು ಗುಣ. ಇಲ್ಲಿ ಕಾಣಬರುವ ಹೆಚ್ಚಿನ ಸಂಖ್ಯೆಯ ಬುರುಜುಗಳು ವೃತ್ತಾಕಾರದಲ್ಲಿದ್ದರೂ, ಕೆಲವು ಚೌಕಾಕಾರದಲ್ಲಿಯೂ, ಅಷ್ಟಕೋನಾಕೃತಿಯಲ್ಲಿಯೂ ಇವೆ. ತುರ್ತು ಪರಿಸ್ಥಿತಿಯಲ್ಲಿ ನೀರಿನ ಸರಬರಾಜಿಗೋಸ್ಕರ ಬಾವಿಯಿಂದ ಚಕ್ರದ ವಿತದ ಮೂಲಕ ನೀರನ್ನು ಮೇಲೆತ್ತುವ ವ್ಯವಸ್ಥೆಯೂ ಇಲ್ಲಿದೆ. ಅಲ್ಲಲ್ಲಿ ಕಲ್ಯಾಣ ಚಾಳುಕ್ಯ ಕಾಲದ ದೇವದೇವತೆಗಳ ಶಿಲ್ಪಗಳು ಕಾಣಬರುತ್ತವೆ. ಈ ರೀತಿ ಬಸವಕಲ್ಯಾಣದ ಕೋಟೆಯು, ಕಲ್ಯಾಣ ಚಾಳುಕ್ಯರು ಮತು ಆನಂತರ ಅಲ್ಲಿ ಆಳಿದ ವಿವಿಧ ರಾಜಮನೆತನಗಳ ಕಾಲದಲ್ಲಿ ಶತ್ರುಗಳಿಂದ ರಕ್ಷಣೆ ಒದಗಿಸಿ, ಅವರ ಸಂಪತ್ತನ್ನು ಲೂಟಿಮಾಡದಂತೆ ರಕ್ಷಣಾ ವ್ಯವಸ್ಥೆಯಾಗಿ ಪ್ರಖ್ಯಾತಿ ಪಡೆದಿತ್ತು. ಭಾರತೀಯರು ಕೋಟೆಗಳಿಗೆ ವಿಶೇಷ ಮಹತ್ವವನ್ನು ಕೊಟ್ಟಿದ್ದರೆಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ಹೇಳಬಹುದು. ಯಾವ ಪ್ರವಾಸಿಗರೂ ಬಸವಕಲ್ಯಾಣದಲ್ಲಿರುವಂತಹ ಶಕ್ತಿಯುತವಾದ ಹಾಗೂ ಪ್ರಾಚೀನವಾದ ಉತ್ತಮ ಕೋಟೆಯನ್ನು ನೋಡಲು ಮರೆಯಬಾರದು.

ಲಕ್ಷ್ಮೀದೇವಿ ದೇವಾಲಯ, ದೊಡ್ಡಗದ್ದವಳ್ಳಿ

ಬೇಲೂರಿಗೆ ಸಮೀಪದಲ್ಲಿರುವ ದೊಡ್ಡಗದ್ದವಳ್ಳಿಯು ಹೊಯ್ಸಳರ ಕಾಲದಲ್ಲಿ ಖ್ಯಾತ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿ ದೊರಕಿರುವ ಶಾಸನದ ಪ್ರಕಾರ ಕುಲ್ಲಹಣ ರಾಹುತ ಎಂಬ ಧನಿಕ ವ್ಯಾಪಾರಿ ಮತ್ತು ಅವನ ಹೆಂಡತಿ ಸಹಜಾದೇವಿ, ಗೊಡ್ಡುಂಬಳ್ಳಿ ಎನ್ನುವ ಗ್ರಾಮವನ್ನು ಅಭಿನವ ಕೊಲ್ಹಾಪುರವೆಂಬ ಹೊಸ ಹೆಸರಿನ ಅಗ್ರಹಾರವನ್ನಾಗಿ ಪರಿವರ್ತಿಸಿ, ಕ್ರಿ.ಶ. 1113ರಲ್ಲಿ ಲಕ್ಷ್ಮೀದೇವಿಯ ದೇವಾಲಯವನ್ನು ನಿರ್ಮಿಸಿದರು. ಆ ಸಮಯದಲ್ಲಿ ವಿಷ್ಣುವರ್ಧನನು ಹೊಯ್ಸಳ ದೊರೆಯಾಗಿದ್ದನು.

ಅನೇಕ ವಿಧಗಳಲ್ಲಿ ಇದೊಂದು ವೈಶಿಷ್ಟ್ಯಪೂರ್ಣ ಹಾಗೂ ಅಪರೂಪದ ಹೊಯ್ಸಳ ದೇವಾಲಯ. ಇದು ಬೇಲೂರಿನ ಚೆನ್ನಕೇಶವ ದೇವಾಲಯಕ್ಕಿಂತ ಪ್ರಾಚೀನವಾಗಿದ್ದು, ವಿಷ್ಣುವರ್ಧನನು ನಿರ್ಮಿಸಿದ ಪ್ರಾಚೀನತಮ ದೇವಾಲಯವೆಂದೂ ಕೆಲವರಿಂದ ಪರಿಗಣಿತವಾಗಿದೆ. ಇದನ್ನು ಬಳಪದಕಲ್ಲಿನಿಂದ ನಿರ್ಮಿಸಿದ್ದರಾದರೂ, ಹೊಯ್ಸಳ ದೇಗುಲಗಳ ಮುಖ್ಯ ಲಕ್ಷಣವಾದ ಜಗತಿ ಈ ದೇವಾಲಯದಲ್ಲಿ ಇಲ್ಲ. ಇದು ನಾಲ್ಕು ಗರ್ಭಗೃಹಗಳಿರುವ ಚತುಷ್ಕೂಟ ದೇವಾಲಯ. ಈ ರೀತಿಯ ದೇವಾಲಯಗಳು ಬಹಳ ವಿರಳ. ಇದನ್ನು ಸರ್ವತೋಭದ್ರ ಎಂದೂ ಕರೆಯಲಾಗುತ್ತದೆ. ನಾಲ್ಕು ಗರ್ಭಗೃಹಗಳ ಮೇಲೆ ನಾಲ್ಕು ಶಿಖರಗಳೂ ಮತ್ತು ಇತರ ಕಡೆಗಳಲ್ಲಿ ಐದು ಶಿಖರಗಳೂ ಇದ್ದು ಒಟ್ಟು ಒಂಬತ್ತು ಶಿಖರಗಳ ಸಮೂಹವೆನಿಸಿದೆ. ಈ ಶಿಖರಗಳು ಕದಂಬನಾಗರ ಶೈಲಿಗೆ ಸೇರಿದವುಗಳಾಗಿವೆ. ಪಿರಮಿಡ್ಡಿನಂತೆ ಮೇಲೆ ಹೋಗುತ್ತ ಕಿರಿದಾಗುವ ದಿಂಡುಗಳನ್ನು ಈ ಶಿಖರ ಹೊಂದಿವೆ. ಪ್ರತ್ಯೇಕವಾಗಿ ಲಕ್ಷ್ಮೀದೇವಿಗಾಗಿ ನಿರ್ಮಿಸಲಾದ ದೇವಾಲಯಗಳು ತುಂಬ ವಿರಳ. ಈ ದೃಷ್ಟಿಯಿಂದಲೂ ಇದೊಂದು ವಿಶಿಷ್ಟ ದೇವಾಲಯ. ಕೊಲ್ಹಾಪುರದ ಲಕ್ಷ್ಮೀದೇವಿ ದೇವಾಲಯವು ಈ ಆಲಯವನ್ನು ನಿರ್ಮಿಸಿದ ಹೊಯ್ಸಳ ಶಿಲ್ಪಿಗಳಿಗೆ ಸ್ಫೂರ್ತಿಯನ್ನು ಒದಗಿಸಿರಬೇಕು.

ಈ ದೇವಾಲಯದ ನಾಲ್ಕು ಗರ್ಭಗೃಹಗಳು, ನಾಲ್ಕು ದಿಕ್ಕುಗಳಲ್ಲಿ ಇದ್ದು, ಸುಕನಾಸಿ ಮತ್ತು ನವರಂಗವಿದೆ. ನವರಂಗವನ್ನು ಪ್ರವೇಶಿಸಲು ಪೂರ್ವ ಮತ್ತು ಪಶ್ಚಿಮದಲ್ಲಿ ಮೆಟ್ಟಿಲುಗಳಿವೆ. ನವರಂಗದಲ್ಲಿರುವ ಎರಡು ಭೇತಾಳ ಶಿಲ್ಪಗಳು ಗಮನಾರ್ಹವಾದವು.

ದೇವಾಲಯವು ಲಕ್ಷ್ಮಿಯ ಹೆಸರಿನಲ್ಲಿದ್ದರೂ ಪ್ರಧಾನ ಗರ್ಭಗುಡಿಯಲ್ಲಿರುವುದು ಕಾಳಿದೇವಿಯ ವಿಗ್ರಹ. ಕಾಳಿದೇವಿಯು ಸುಖಾಸನದಲ್ಲಿ ಕುಳಿತಿದ್ದು, ತನ್ನ ಎಂಟು ಕೈಗಳಲ್ಲಿ ಕತ್ತಿ, ಗದೆ, ಬಿಲ್ಲು, ಬಾಣ, ಡಮರು, ಪಾಶ, ತ್ರಿಶೂಲ ಮತ್ತು ಪಾತ್ರೆಗಳನ್ನು ಹಿಡಿದಿದ್ದಾಳೆ. ಇನ್ನೊಂದು ಗರ್ಭಗುಡಿಯಲ್ಲಿ ನಿಂತಿರುವ ಮೂರು ಅಡಿ ಎತ್ತರದ, ಕೈಗಳಲ್ಲಿ ಶಂಖ, ಚಕ್ರ, ಅಕ್ಷಮಾಲ ಮತ್ತು ಫಲಗಳನ್ನು ಹಿಡಿದಿರುವ ಲಕ್ಷ್ಮಿಯ ವಿಗ್ರಹವಿದೆ. ದಕ್ಷಿಣ ಗರ್ಭಗುಡಿಯಲ್ಲಿ ಗರುಡ ಪೀಠದ ಮೇಲಿರುವ ವಿಷ್ಣುವಿನ ವಿಗ್ರಹವಿದೆ. ಇನ್ನೊಂದು ಗರ್ಭಗುಡಿಯಲ್ಲಿ ಭೂತನಾಥ ಎಂದು ಕರೆಯಲಾದ ಶಿವಲಿಂಗವಿದೆ. ಆದರೆ ಈ ಶಿವಲಿಂಗವನ್ನು ಈಗ ವಿರೂಪಾಕ್ಷಲಿಂಗವೆಂದು ಕರೆಯಲಾಗುತ್ತಿದೆ. ಇವೆಲ್ಲವೂ ಏಳು ಅಡಿ ಎತ್ತರದ ಪ್ರಾಕಾರದ ಗೋಡೆಯ ಒಳಗೆ ಇವೆ. ಮೂಲೆಯಲ್ಲಿರುವ ದೇವಾಲಯಗಳ ದ್ವಾರಬಂಧಗಳ ಲಲಾಟದಲ್ಲಿ ಲಕ್ಷ್ಮಿಯ ಶಿಲ್ಪವಿದೆ. ಹೊಯ್ಸಳ ಶೈಲಿಯ ಆರಂಭದ ಹಂತಕ್ಕೆ ತಕ್ಕಂತೆ ಇದು ಕಡಿಮೆ ಅಲಂಕಾರಗಳಿರುವ ದೇವಾಲಯ. ಈ ದೃಷ್ಟಿಯಿಂದ ಈ ದೇವಾಲಯ ಹೊಯ್ಸಳ ವಾಸ್ತುಶಿಲ್ಪದ ವಿಕಾಸದಲ್ಲಿ ಒಂದು ಮುಖ್ಯ ಹಂತವನ್ನು ಸೂಚಿಸುತ್ತದೆ.

## ಚೆನ್ನಕೇಶವ ದೇವಾಲಯ, ಬೇಲೂರು

ಬೇಲೂರಿನ ಚೆನ್ನಕೇಶವ ದೇವಾಲಯ ಹೊಯ್ಸಳ ವಾಸ್ತುಶಿಲ್ಪದಲ್ಲಿ ಬಹುಶಃ ಅತ್ಯುತ್ತಮ ರಚನೆ. ಪ್ರಾಚೀನ ಕಾಲದಲ್ಲಿ ಈ ಊರು ವೇಲಾಪುರಿ ಅಥವಾ ವೇಲಾಪುರ ಎಂಬ ಹೆಸರಿನಿಂದ ಪ್ರಖ್ಯಾತವಾಗಿತ್ತು. ಹೊಯ್ಸಳ ದೊರೆ ವಿಷ್ಣುವರ್ಧನನು ತಲಕಾಡಿನಲ್ಲಿ ಚೋಳರನ್ನು ಸೋಲಿಸಿದುದರ ಜ್ಞಾಪಕಾರ್ಥವಾಗಿ ಕ್ರಿ.ಶ. 1117ರಲ್ಲಿ ಕೆಲವು ದೇವಾಲಯಗನ್ನು ನಿರ್ಮಿಸಿದನು. ಇವುಗಳಲ್ಲಿ ಬೇಲೂರಿನ ಚೆನ್ನಕೇಶವ ದೇವಾಲಯ ತುಂಬ ಪ್ರಧಾನವಾದುದು ಹಾಗೂ ಸುಂದರವಾದುದು.

ಇಡೀ ದೇವಾಲಯವು ಬಳಪದಕಲ್ಲಿನಲ್ಲಿ ನಿರ್ಮಾಣಗೊಂಡು ಮೂವತ್ತೆರಡು ಕೋನಗಳ ನಕ್ಷತ್ರಾಕಾರದ ಜಗತಿಯ ಮೇಲಿದೆ. ದೇವಾಲಯದ ಹೊರಗೋಡೆಯಲ್ಲಿ ಕೆಳಗಿನಿಂದ ಮೇಲಕ್ಕೆ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಕಿರಿದಾದ ಪಟ್ಟಿಕೆಗಳಿವೆ. ಅವುಗಳಲ್ಲಿ ಕ್ರಮವಾಗಿ ಆನೆಗಳ ಸಾಲು, ಸಿಂಹಮುಖಿಗಳು, ಲತಾವಿನ್ಯಾಸಗಳು, ಸಣ್ಣಗೂಡುಗಳಲ್ಲಿ ನೃತ್ಯಗಾರರು, ಅರೆಗಂಬಗಳ ಮಧ್ಯೆ ಇರುವ ಸ್ತ್ರೀ ಶಿಲ್ಪಗಳು ಹಾಗೂ ರಾಮಾಯಣ, ಮಹಾಭಾರತ ಕಥಾಭಾಗಗಳು ಕಾಣಬರುತ್ತವೆ. ಈ ಪಟ್ಟಿಕೆಗಳ ಮೇಲ್ಭಾಗದಲ್ಲಿ ವಿವಿಧ ಭಂಗಿಯಲ್ಲಿರುವ ಮತ್ತು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ವಿಮಾನಗಳ ಕೆಳಗಿರುವ ದೇವದೇವತೆಗಳ ಶಿಲ್ಪಗಳಿವೆ. ಈ ಶಿಲ್ಪಗಳು ಉತ್ತಮ ಕೆತ್ತನೆಯಿಂದ ಕೂಡಿದ್ದು ಮತ್ತು ವೈವಿಧ್ಯಪೂರ್ಣವಾಗಿದ್ದು, ಇದೊಂದು ಬಯಲು ಶಿಲ್ಪಸಂಗ್ರಹಾಲಯದಂತೆ ಕಾಣಬರುತ್ತದೆ. ಆನಂತರ ಸೇರಿಸಲಾದ ಜಾಲಂಧ್ರಗಳು ದೇವಾಲಯದ ಒಳಕ್ಕೆ ಸಾಕಷ್ಟು ಗಾಳಿ, ಬೆಳಕು ಬರಲು ಸಹಾಯಕವಾಗಿವೆ. ಶಿಲ್ಪಗಳ ಮೇಲ್ಭಾಗದಲ್ಲಿ ಚಾವಣಿಯ ಹಂತದಲ್ಲಿ ಶಿಲಾಬಾಲಿಕೆ ಅಥವಾ ಮದನಿಕೆ ಎಂದು ಪ್ರಸಿದ್ಧಿಯಾಗಿರುವ ಸುಂದರ ಶಿಲ್ಪಗಳಿವೆ. ಇವು ಸ್ತ್ರೀ ಸಹಜವಾದ ಲಾಲಿತ್ಯ ಮತ್ತು ಸೊಬಗಿನ ಖನಿಗಳಾಗಿದ್ದು ಬಹುಶಃ ಬೇಲೂರಿನ ಈ ದೇವಾಲಯದಲ್ಲಿ ಅತ್ಯಂತ ಶ್ರೇಷ್ಠಮಟ್ಟದ ಹೊಯ್ಸಳ ಶಿಲ್ಪಗಳಾಗಿವೆ. ವಿಷ್ಣುವರ್ಧನನ ರಾಣಿ ಶಾಂತಲದೇವಿಯು ಈ ಶಿಲ್ಪಗಳ ನಿರ್ಮಾಣಕಾರ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದ್ದಳೆಂದು ಭಾವಿಸಲಾಗಿದೆ.

ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮಂಡಪಗಳಿದ್ದು ಚರಕಿಯಂತ್ರದಿಂದ ತಯಾರಾದ ವಿವಿಧ ವಿನ್ಯಾಸಗಳನ್ನು ಹೊಂದಿದ ಕಂಬಗಳಿಂದಾಗಿ ನಮ್ಮನ್ನು ಶಿಲ್ಪಕಲೆಯ ಹೊಸ ಪ್ರಪಂಚಕ್ಕೆ ಕೊಂಡೊಯ್ಯುತ್ತವೆ. ನರಸಿಂಹ ಕಂಬ ಎಂದು ಪ್ರಖ್ಯಾತವಾಗಿರುವ ಸ್ತಂಭವನ್ನು ಅದರ ಅಕ್ಷದ ಮೇಲೆ ತಿರುಗಿಸಬಹುದು. ಇಲ್ಲಿ ಹತ್ತಾರು ಸುಂದರ ಭುವನೇಶ್ವರಿಗಳಿದ್ದು ಈ ರೀತಿಯ ಕಲೆಯಲ್ಲೇ ಉತ್ತಮವಾದುದಾಗಿವೆ. ಗರ್ಭಗೃಹದ ಬಾಗಿಲುವಾಡವು ಸೂಕ್ಷ್ಮ ಕೆತ್ತನೆಯುಳ್ಳದ್ದಾಗಿದ್ದು ಇದನ್ನು ಮೀರಿಸುವಂತಹ ಶಿಲ್ಪ ರಚನೆಯಾಗಿಲ್ಲವೆಂದು ಭಾವಿಸಲಾಗಿದೆ. ಗರ್ಭಗೃಹದ ಒಳಗೆ ಒಂಬತ್ತು ಅಡಿ ಎತ್ತರದ ಹಾಗೂ ಶಂಖ, ಚಕ್ರ, ಗದಾ, ಪದ್ಮಗಳನ್ನು ಕೈಗಳಲ್ಲಿ ಹಿಡಿದಿರುವ ಶಿರದಲ್ಲಿ ಕರಂಡ ಮುಕುಟವಿರುವ ಚೆನ್ನಕೇಶವ ಅಥವಾ ವಿಜಯನಾರಾಯಣನ ಸುಂದರ ಶಿಲ್ಪವಿದೆ. ಎರಡು ಕಡೆಗಳ ಕೆಳಭಾಗದಲ್ಲಿ ನಿಂತಿರುವ ಶ್ರೀದೇವಿ ಮತ್ತು ಭೂದೇವಿಯರ ಶಿಲ್ಪಗಳಿವೆ. ಖ್ಯಾತ ಶಿಲ್ಪಿಗಳಾದ ದಾಸೋಜ, ಅವನ ಮಗ ಚಾವಣ, ನಾಗೋಜ ಮತ್ತಿತರ ಹೊಯ್ಸಳ ಶಿಲ್ಪಿಗಳು ಈ ಸುಂದರ ದೇವಾಲಯವು ಕರ್ನಾಟಕದ ಹೆಮ್ಮೆಯಾಗುವಂತೆ ಮಾಡಿದ್ದಾರೆ. ಈ ದೇವಾಲಯದ ಪ್ರಾಕಾರದಲ್ಲಿ ಇನ್ನೂ ಕೆಲವು ದೇವಾಲಯಗಳಿದ್ದು, ಅವುಗಳಲ್ಲಿ ಕಪ್ಪೆ ಚೆನ್ನಿಗರಾಯ ಮತ್ತು ದೇವಿಯ ಆಲಯಗಳು ಮುಖ್ಯವಾದವು. ಈ ದೇವಾಲಯವನ್ನು ಪ್ರವೇಶಿಸಲು ಭವ್ಯವಾದ ಮಹಾದ್ವಾರವೂ, ಅದರ ಮೇಲೆ ಎತ್ತರವಾದ ಗೋಪುರವೂ ಇದೆ. ಒಟ್ಟಿನಲ್ಲಿ ಇದೊಂದು ಕರ್ನಾಟಕದ ಹೆಮ್ಮೆಯ ದೇವಾಲಯ.

ಕೀರ್ತಿನಾರಾಯಣ ದೇವಾಲಯ, ತಲಕಾಡು

ತಲಕಾಡು ಆರಂಭದಲ್ಲಿ ಪಶ್ಚಿಮೀ ಗಂಗ ದೊರೆಗಳ ರಾಜಧಾನಿಯಾಗಿತ್ತು. ಆನಂತರ ಅದನ್ನು ಚೋಳರು ಆಕ್ರಮಿಸಿಕೊಂಡರು. ಇದಾದ ನಂತರ ಹೊಯ್ಸಳ ದೊರೆ ವಿಷ್ಣುವರ್ಧನನು ಚೋಳರನ್ನು ತಲಕಾಡಿನ ಯುದ್ಧದಲ್ಲಿ ಸೋಲಿಸಿ, ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಚೋಳರ ಮೇಲಿನ ಈ ಅದ್ಭುತ ವಿಜಯದ ಜ್ಞಾಪಕಾರ್ಥವಾಗಿ, ಕ್ರಿ.ಶ. 1117ರಲ್ಲಿ ಹೊಯ್ಸಳ ವಿಷ್ಣುವರ್ಧನ ಮಹಾರಾಜನು ಕೀರ್ತಿನಾರಾಯಣ ಎಂಬ ವೈಷ್ಣವ ದೇವಾಲಯವನ್ನು ನಿರ್ಮಿಸಿದನೆಂದು, ಇದೇ ತೇದಿಯ ಶಾಸನ ವಿವರವಾಗಿ ತಿಳಿಸುತ್ತದೆ.

ಹೊಯ್ಸಳರಿಂದ ನಿರ್ಮಿತವಾಗಿದ್ದರೂ, ಈ ದೇಗುಲವನ್ನು ಬಳಪದಕಲ್ಲಿನಿಂದ ಕಟ್ಟದೆ ಕಗ್ಗಲ್ಲಿನಿಂದ ಕಟ್ಟಲಾಗಿದೆ. ಇದೊಂದು ಇದರ ವೈಶಿಷ್ಟ್ಯ. ನವರಂಗದ ಕಂಬಗಳು ಹಾಗೂ ಗರ್ಭಗುಡಿಯಲ್ಲಿರುವ ಪ್ರಧಾನ ದೇವತೆಯ ಶಿಲ್ಪವನ್ನು ಮಾತ್ರ ಬಳಪದಕಲ್ಲಿನಲ್ಲಿ ಕಡೆಯಲಾಗಿದೆ. ಸ್ವಲ್ಪ ಕಾಲದ ನಂತರ ತಲಕಾಡಿನಲ್ಲಿರುವ ಎತ್ತರವಾದ ಮರಳು ರಾಶಿಯಲ್ಲಿ ಈ ದೇವಾಲಯ ಹೂತುಹೋಗಿತ್ತು. ಸುಮಾರು ನೂರು ವರ್ಷಗಳ ಹಿಂದೆ ಮರಳನ್ನು ಹೊರಹಾಕಿ ಹೂತು ಹೋಗಿದ್ದ ಈ ದೇವಾಲಯವನ್ನು ಕಾಣುವಂತೆ ಮಾಡಲಾಯಿತು.

ಕೀರ್ತಿನಾರಾಯಣ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ನವರಂಗಕ್ಕೆ ಉತ್ತರ, ದಕ್ಷಿಣ ಮತ್ತು ಪೂರ್ವಗಳಲ್ಲಿ ಪ್ರವೇಶದ್ವಾರಗಳಿವೆ. ಇಡೀ ದೇವಾಲಯವು ನಕ್ಷತ್ರಾಕಾರದ ಜಗತಿಯ ಮೇಲಿದ್ದು, ಮೇಲಿನ ಭಾಗಗಳು, ನಕ್ಷತ್ರಾಕಾರದ ವಿನ್ಯಾಸವನ್ನೇ ಅನುಸರಿಸಿವೆ. ಹೊರಗೋಡೆಯಲ್ಲಿ ಕೇವಲ ಅರೆಗಂಬಗಳು ಮತ್ತು ಸೂಕ್ಷ್ಮ ಶಿಖರಗಳಿವೆ; ಮೂರ್ತಿಶಿಲ್ಪಗಳಿಲ್ಲ. ಗರ್ಭಗೃಹದ ಮೇಲೆ ಗಾರೆಯ ಶಿಖರವಿದೆ. ಇದು ಬಹುಶಃ ಮೂಲದಲ್ಲಿ ನಿರ್ಮಿತವಾಗಿದ್ದಾಗಿರಬಹುದು. ಆದರೆ ಖಚಿತವಾಗಿ ತಿಳಿದು ಬಂದಿಲ್ಲ. ನವರಂಗದಲ್ಲಿ ಕಕ್ಷಾಸನವಿದೆ. ನವರಂಗದ ದಕ್ಷಿಣ ಪಾರ್ಶ್ವವನ್ನು ಆನಂತರದ ಕಾಲದಲ್ಲಿ ಲಕ್ಷ್ಮೀದೇವಿಯ ಗುಡಿಯಾಗಿ ಪರಿವರ್ತನೆ ಮಾಡಲಾಗಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ಚರಕಿಯಂತ್ರದಿಂದ ಕಡೆದವುಗಳಾಗಿದ್ದು, ಪ್ರಮಾಣಬದ್ಧವಾಗಿವೆ. ಭುವನೇಶ್ವರಿಗಳು ಮಟ್ಟಸವಾಗಿದ್ದು, ಜ್ಯಾಮಿತಿಯ ವಿವಿಧ ಚಿಹ್ನೆಗಳು ಮಾತ್ರ ಇವೆ.

ಗರ್ಭಗೃಹದಲ್ಲಿರುವ ಪ್ರಧಾನ ದೇವತೆಯ ವಿಗ್ರಹ ಬಳಪದಕಲ್ಲಿನಿಂದ ರಚಿತವಾದ ಶಿಲ್ಪ. ಹತ್ತು ಅಡಿ ಎತ್ತರವಿರುವ, ಕೀರ್ತಿನಾರಾಯಣ ಎಂದು ಕರೆಯಲಾಗಿರುವ ಈ ಶಿಲ್ಪ ಭವ್ಯವಾಗಿದೆ. ದೇವತೆಯು ಸಮಭಂಗದಲ್ಲಿ ನಿಂತಿದ್ದು ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಹಿಡಿದಿದ್ದಾನೆ. ಹಿಂಭಾಗದಲ್ಲಿರುವ ಪ್ರಭಾವಳಿಯು ವಿಷ್ಣುವಿನ ದಶಾವತಾರಗಳೂ ಸೇರಿದಂತೆ, ಸೂಕ್ಷ್ಮ ಕೆತ್ತನೆಯ ವಿನ್ಯಾಸಗಳನ್ನು ಹೊಂದಿದೆ. ಮರಳಿನಲ್ಲಿ ಹೂತು ಹೋಗಿದ್ದ ಕಲ್ಲಿನ ಮಹಾದ್ವಾರವನ್ನು ಇತ್ತೀಚೆಗೆ ಬಿಡಿಸಲಾಯಿತು. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಈ ದೇವಾಲಯವನ್ನು ಅದು ತಲಕಾಡಿನಲ್ಲಿ ಇದ್ದ ಮೂಲಜಾಗದಲ್ಲಿ ಪುನಃ ಸ್ಥಾಪಿಸುವ ಕಾರ್ಯದಲ್ಲಿ ನಿರತವಾಗಿದೆ. ಈ ರೀತಿ ಕೀರ್ತಿನಾರಾಯಣ ದೇವಾಲಯವು ಹೊಯ್ಸಳರು ಚೋಳರ ಮೇಲೆ ಸಾಧಿಸಿದ ವಿಜಯವನ್ನು ನೆನಪಿಗೆ ತರುತ್ತದೆ.

## ಜೈನ ದೇವಾಲಯ ಸಮೂಹ, ಹಳೇಬೀಡು

ಹಳೇಬೀಡು ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಾಲಯಗಳಿಗೆ ಪ್ರಸಿದ್ಧಿ ಪಡೆದಿದ್ದರೂ, ಹೊಯ್ಸಳೇಶ್ವರ ದೇವಾಲಯಕ್ಕೆ ಅರ್ಧ ಕಿಲೋಮೀಟರ್ ದೂರದಲ್ಲಿ ಒಂದೇ ಸಾಲಿನಲ್ಲಿರುವ ಮೂರು ಜೈನ ದೇವಾಲಯಗಳನ್ನು ಹೊಂದಿದೆ. ಶೈವ, ವೈಷ್ಣವ ಮತ್ತು ಜೈನ ಧರ್ಮಗಳನ್ನು ಸಮಾನ ರೀತಿಯಲ್ಲಿ ಹೊಯ್ಸಳರು ಪೋಷಿಸಿದರು ಎಂಬ ವಿಷಯವನ್ನು ಇದು ಪ್ರತಿಬಿಂಬಿಸುತ್ತದೆ. ಒಂದೇ ಸಾಲಿನಲ್ಲಿರುವ ಈ ದೇವಾಲಯಗಳು ಪಾರ್ಶ್ವನಾಥ (ಪಶ್ಚಿಮ), ಆದಿನಾಥ (ಮಧ್ಯ) ಮತ್ತು ಶಾಂತಿನಾಥ (ಪೂರ್ವ) ತೀರ್ಥಂಕರರಿಗಾಗಿ ನಿರ್ಮಿಸಿದವುಗಳು.

ಪಶ್ಚಿಮ ಭಾಗದಲ್ಲಿರುವ ಮೊದಲನೆಯ ಆಲಯವೇ ಪಾರ್ಶ್ವನಾಥ ಬಸದಿ. ವಿಷ್ಣುವರ್ಧನನ ಮಂತ್ರಿಯಾಗಿದ್ದ ಗಂಗರಾಜನ ಮಗ ಬೊಪ್ಪಣನು ಈ ದೇವಾಲಯವನ್ನು ಕ್ರಿ.ಶ. 1133ರಲ್ಲಿ ತನ್ನ ತಂದೆಯ ಜ್ಞಾಪಕಾರ್ಥವಾಗಿ ನಿರ್ಮಿಸಿದನು. ಇದೇ ಸಮಯದಲ್ಲಿ ವಿಷ್ಣುವರ್ಧನನಿಗೆ ಬಂಕಾಪುರ ರಾಜ್ಯದ ಮೇಲೆ ವಿಜಯ ದೊರಕಿತು. ಆದುದರಿಂದ ಈ ಬಸದಿಯ ದೇವತೆಯನ್ನು ವಿಜಯ ಪಾರ್ಶ್ವದೇವ ಎಂದು ಪ್ರತಿಷ್ಠಾಪಿಸಿದನು. ಈ ಬಸದಿಯನ್ನು ಬಳಪದಕಲ್ಲಿನಿಂದ ನಿರ್ಮಿಸಲಾಗಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಪ್ರತ್ಯೇಕವಾದ ಮುಖಮಂಡಪಗಳಿವೆ. ಗರ್ಭಗೃಹವು ಚೌಕವಾಗಿದೆ. ನವರಂಗದ ಗೋಡೆಗಳಲ್ಲಿ ಕೇವಲ ಅರೆಗಂಬಗಳ ಅಲಂಕಾರವಿದೆ. ಕೆಳಗಡೆ ಕೆಲವು ಶಿಲ್ಪಗಳಿವೆ. ಈ ದೇವಾಲಯದ ಪ್ರಮುಖ ಆಕರ್ಷಣೆ ಎಂದರೆ ಸುಮಾರು ಹದಿನಾಲ್ಕು ಅಡಿ ಎತ್ತರದ ಭವ್ಯವಾದ ವಿಜಯ ಪಾರ್ಶ್ವದೇವನ ವಿಗ್ರಹ. ಇದರ ಮೇಲ್ಗಡೆ ಏಳು ಹೆಡೆಗಳ ಸರ್ಪವಿದೆ. ಯೋಗಭಂಗಿಯಲ್ಲಿ ನಿಂತಿರುವ ಈ ದೇವತೆಯ ಸೌಮ್ಯಭಾವ ಹಾಗೂ ಕರುಣಾಪೂರಿತ ಕಿರುನಗೆ ಗಮನಾರ್ಹವಾದುದು. ನವರಂಗದಲ್ಲಿ ಚರಕಿಯಂತ್ರದಿಂದ ತಯಾರಾದ ಕನ್ನಡಿಯಂತೆ ಪ್ರತಿಬಿಂಬಿಸುವ ಹೊಳಪುಳ್ಳ ಹನ್ನೆರಡು ಸುಂದರ ಕಂಬಗಳಿವೆ.

ಶಾಂತಿನಾಥ ಬಸದಿಯು ಮೇಲಿನ ದೇವಾಲಯದ ಮಾದರಿಯಲ್ಲಿರುವ, ಆದರೆ ಸ್ವಲ್ಪ ಸಣ್ಣದಾದ ದೇವಾಲಯ. ಹೊಯ್ಸಳ ಇಮ್ಮಡಿ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1192ರಲ್ಲಿ ಈ ಬಸದಿಯನ್ನು ನಿರ್ಮಿಸಲಾಯಿತು. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖ ಮಂಡಪಗಳಿವೆ. ಮೊದಲಿನ ಮೂರು ಭಾಗಗಳು ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಮುಖಮಂಡಪವು ಮಾತ್ರ ವಿಜಯನಗರ ಕಾಲದ ಸೇರ್ಪಡೆ. ಗರ್ಭಗೃಹದಲ್ಲಿ ಹದಿನಾಲ್ಕು ಅಡಿ ಎತ್ತರದ ನಿಂತಿರುವ ಶಾಂತಿನಾಥ ವಿಗ್ರಹವಿದೆ. ನವರಂಗದಲ್ಲಿರುವ ಕಂಬಗಳೂ ಪಾರ್ಶ್ವನಾಥ ಬಸದಿಯ ಕಂಬಗಳಂತೇ ಇದ್ದರೂ, ಅವುಗಳ ಮೇಲೆ ಹೊಳಪಿಲ್ಲ. ಮುಖಮಂಡಪದಲ್ಲಿ ವಿಜಯನಗರ ಕಾಲದ ಎತ್ತರವಾದ ಕಂಬಗಳಿವೆ. ಇದರ ಮುಂಭಾಗದಲ್ಲಿ ಮಾನಸ್ತಂಭವಿದೆ.

ಈ ಎರಡು ಬಸದಿಗಳ ಮಧ್ಯದಲ್ಲಿ ಈಗ ಆದಿನಾಥ ಬಸದಿ ಎಂದು ಕರೆಯಲಾಗುವ ದೇವಾಲಯವಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ಮಂತ್ರಿ ಮಲ್ಲಯ್ಯನು ಕ್ರಿ.ಶ. 1138ರಲ್ಲಿ ಇದನ್ನು ನಿರ್ಮಾಣ ಮಾಡಿದನು. ಇಲ್ಲಿರುವ ಶಾಸನದ ಪ್ರಕಾರ ಇದು ಮಲ್ಲಿನಾಥನ ಜಿನಾಲಯ. ಈ ರೀತಿ ಈ ಮೂರು ಜೈನ ದೇವಾಲಯಗಳು ಹಳೇಬೀಡಿನ ವಾಸ್ತುಶಿಲ್ಪಕೃತಿಗಳಿಗೆ ವೈವಿಧ್ಯತೆಯನ್ನು ಒದಗಿಸುತ್ತವೆ.

## ಭೂವರಾಹ ದೇವಾಲಯ, ಹಲಸಿ

ಬೆಳಗಾಂ ಜಿಲ್ಲೆಯಲ್ಲಿರುವ ಇಂದಿನ ಹಲಸಿ, ಪ್ರಾಚೀನ ಕಾಲದಲ್ಲಿ ಪಲಾಸಿಕ ನಗರವೆಂಬ ಹೆಸರಿನಿಂದ ಖ್ಯಾತವಾಗಿತ್ತು. ಕ್ರಿ.ಶ. 980 ರಿಂದ 1250 ರವರೆಗೆ ರಾಜ್ಯವಾಳಿದ ಗೋವ ಕದಂಬರ ಉಪರಾಜಧಾನಿಯಾಗಿ ಇದು ಪ್ರಖ್ಯಾತವಾಗಿತ್ತು. ವಾಸ್ತವವಾಗಿ ಇದು ಪ್ರಾಚೀನ ಹಲಸಿಗೆ ಪ್ರಾಂತದ ರಾಜಧಾನಿಯಾಗಿತ್ತು. ಈ ನಗರ ಶೈವ, ವೈಷ್ಣವ ಮತ್ತು ಜೈನ ದೇವಾಲಯಗಳಿಗೆ ಪ್ರಸಿದ್ಧಿ ಪಡೆದಿದೆ. ಈ ದೇವಾಲಯಗಳಲ್ಲಿ ಭೂವರಾಹ ದೇವಾಲಯವು ದೊಡ್ಡದಾದ ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ಮುಖ್ಯವಾದ ದೇವಾಲಯ.

ಭೂವರಾಹ ದೇವಾಲಯ ನರಸಿಂಹ ದೇವತೆಗಾಗಿ ಕಲ್ಯಾಣದ ಚಾಳುಕ್ಯರ ಸ್ಥಳೀಯ ಸಾಮಂತರಿಂದ ಕಟ್ಟಲಾದ ದೇಗುಲ. ಇಲ್ಲೇ ದೊರಕಿರುವ ಶಾಸನದಿಂದ, ಈ ದೇವಾಲಯವನ್ನು ಕ್ರಿ.ಶ. 1169ರಲ್ಲಿ ಕದಂಬ ದೊರೆ ಶಿವಚಿತ್ತನು ನಿರ್ಮಿಸಿದನು. ಅನಂತ ವೀರವಿಕ್ರಮ ನರಸಿಂಹ ದೇವರ ವಿಗ್ರಹವನ್ನು ಗರ್ಭಗೃಹದಲ್ಲಿ ಪ್ರತಿಷ್ಠೆ ಮಾಡಲಾಯಿತು. ಶಿವಚಿತ್ತನ ತಾಯಿಯ ಅಪೇಕ್ಷೆಯಂತೆ ಈ ದೇವಾಲಯವನ್ನು ನಿರ್ಮಿಸಲಾಯಿತು.

ಈ ದೇವಾಲಯದಲ್ಲಿ ಪರಸ್ಪರ ಎದುರಿಗಿರುವ ಎರಡು ಗರ್ಭಗೃಹಗಳು, ಸುಕನಾಸಿ ಮತ್ತು ನವರಂಗಗಳಿವೆ. ಈ ದೇವಾಲಯವನ್ನು ಕಟ್ಟಿದ ಸಮಯದಲ್ಲಿ, ಪ್ರಧಾನ ಗರ್ಭಗೃಹದಲ್ಲಿ ಎರಡು ಕೈಗಳ ನರಸಿಂಹನ ವಿಗ್ರಹವನ್ನು ಪ್ರತಿಷ್ಠಿಸಲಾಗಿತ್ತು. ಈಗ ಈ ವಿಗ್ರಹವನ್ನು ಎಡಭಾಗಕ್ಕೆ ಸರಿಸಿ, ಕುಳಿತಿರುವ ನರಸಿಂಹನ ವಿಗ್ರಹವನ್ನು ಇಲ್ಲಿ ಸ್ಥಾಪಿಸಲಾಗಿದೆ. ಮತ್ತೊಂದು ಗರ್ಭಗೃಹದಲ್ಲಿ ನಿಂತಿರುವ ವರಾಹ ವಿಗ್ರಹವಿದೆ. ಇದನ್ನು ದೊರೆ ಮುಮ್ಮಡಿ ವಿಜಯಾದಿತ್ಯನು ಸ್ಥಾಪಿಸಿದನು. ಈಗ ಈ ಗರ್ಭಗೃಹದಲ್ಲಿ ಸುಂದರವಾದ ಸೂರ್ಯನ ವಿಗ್ರಹವೂ ಇದೆ. ಒಂದು ಗರ್ಭಗೃಹದ ಮೇಲೆ ಮಾತ್ರ ಕದಂಬ ನಾಗರ ರೀತಿಯ ಏಳುತಲಗಳನ್ನುಳ್ಳ ಮತ್ತು ಸುಕನಾಸಿ ಮುಂಚಾಚು ಹೊಂದಿರುವ ಶಿಖರವಿದೆ. ಇದರ ಪ್ರತಿಯೊಂದು ತಲದಲ್ಲಿಯೂ ದಂತುರ ರೀತಿಯ ಅಲಂಕಾರಗಳಿವೆ. ಇದರಿಂದಾಗಿ ಈ ಶಿಖರ ಸುಂದರವಾಗಿ ಕಾಣುತ್ತದೆ.

ನವರಂಗದ ಗೋಡೆಯಲ್ಲಿ ಅರೆಗಂಬಗಳೂ ಅವುಗಳ ಮೇಲೆ ಮುಂಜೂರು; ಅದರ ಮೇಲೆ ಅಲಂಕೃತ ಕೈಪಿಡಿ ಗೋಡೆ ಇದೆ. ಒಳಗಡೆ ಸುದೃಢವಾದ ಅಷ್ಟಕೋನಾಕಾರದ ಕಂಬಗಳು ಹಾಗೂ ವೃತ್ತಾಕಾರದ ನೃತ್ಯಾಂಕಣವೂ ಇವೆ. ಇಡೀ ದೇವಾಲಯವು ಒಂದು ಅಗಲವಾದ ಅಧಿಷ್ಠಾನದ ಮೇಲೆ ಇದ್ದು ಹೊರಗಿನ ಪ್ರದಕ್ಷಿಣ ಪಥಕ್ಕೆ ಅವಕಾಶಮಾಡಿಕೊಟ್ಟಿದೆ. ಹೊರ ಗೋಡೆಯ ಮೇಲೆ ಅಡ್ಡ ಪಟ್ಟಿಕೆಗಳನ್ನು ಬಿಟ್ಟು ಯಾವ ವಿಶೇಷ ಅಲಂಕಾರವೂ ಇಲ್ಲ. ಅಧಿಷ್ಠಾನವು ನವಿರಾದ ನಕ್ಷತ್ರಾಕಾರದಲ್ಲಿದೆ. ಅಲಂಕಾರರಹಿತವಾಗಿದ್ದರೂ ಈ ಸಣ್ಣ ದೇವಾಲಯ ಪ್ರಾಚೀನ ಹಲಸಿಯಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ಸುಂದರ ದೇವಾಲಯ. ಈ ದೇವಾಲಯ ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿಯೂ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂಬುದು ಇಲ್ಲಿ ದೊರಕಿರುವ, ನರಸಿಂಹ ದೇವರಿಗೆ ಭೂದಾನವನ್ನು ನೀಡಿದ ವಿಷಯವನ್ನು ತಿಳಿಸುವ ಆ ಶತಮಾನದ ಶಾಸನದಿಂದ ದೃಢಪಡುತ್ತದೆ. ಹೀಗೆ ಭೂವರಾಹ ದೇವಾಲಯವು ಹಲಸಿಯಲ್ಲಿರುವ ಕಲ್ಯಾಣ ಚಾಳುಕ್ಯ ಶೈಲಿಯ ಸುಂದರ ದೇವಾಲಯವಾಗಿದೆ.

## ಪಂಚಲಿಂಗೇಶ್ವರ ದೇವಾಲಯ, ಹೂಲಿ

ಈಗಿನ ಹೂಲಿ, ಪ್ರಾಚೀನ ಹೂವಳ್ಳಿ, ಬೆಳಗಾಂ ಜಿಲ್ಲೆಯ ಪ್ರಾಚೀನ ನಗರ. ಇದರ ಪ್ರಾಚೀನತೆಯು ಬಾದಾಮಿ ಚಾಳುಕ್ಯ ಶಾಸನಗಳಿಂದಾಗಿ ಏಳನೆಯ ಶತಮಾನಕ್ಕೆ ಸೇರುತ್ತದೆ. ಇದೊಂದು ಪ್ರಾಚೀನ ಅಗ್ರಹಾರವಾಗಿದ್ದು, ಇಲ್ಲಿನ ಶಿಕ್ಷಣ ಕೇಂದ್ರದಲ್ಲಿ ಪ್ರಖ್ಯಾತ ವಿದ್ವಾಂಸರಿಂದ ವಿವಿಧ ವಿಷಯಗಳ ಬೋಧನೆಯು ನಡೆಯುತ್ತಿದ್ದಿತು. ಇಲ್ಲಿ ಅನೇಕ ಕೇರಿಗಳು ಮತ್ತು ರಸ್ತೆಗಳು ಇದ್ದು ವಿದ್ವಾಂಸರೂ ಸೇರಿದಂತೆ ವಿವಿಧ ವರ್ಗಗಳ ಜನಗಳು ವಾಸಮಾಡುವಷ್ಟು ಈ ಕೇಂದ್ರ ದೊಡ್ಡದಾಗಿತ್ತು. ಇದು ಕಾಳಾಮುಖರ ಕೇಂದ್ರವಾಗಿದ್ದು, ಅನೇಕ ಕಾಳಾಮುಖ ಗುರುಗಳು ಸಮಾಜೋ-ಧಾರ್ಮಿಕ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು.

ಪಂಚಲಿಂಗ ದೇವಾಲಯ ಈ ಊರಿನ ಪ್ರಮುಖ ಆಕರ್ಷಣೆ. ಇದರ ಹೆಸರೇ ಸೂಚಿಸುವಂತೆ ಇದು ಐದು ಶಿವಲಿಂಗಗಳ ತಾಣವಾಗಿದ್ದು, ಐದು ಗರ್ಭಗೃಹಗಳ ದೇವಾಲಯ. ವಾಸ್ತವವಾಗಿ ಕರ್ನಾಟಕದಲ್ಲಿ ಪಂಚಲಿಂಗ ದೇವಾಲಯಗಳು ವಿರಳ. ಈ ದೇವಾಲಯದಲ್ಲಿ ಐದು ಗರ್ಭಗೃಹಗಳು, ಸುಕನಾಸಿ, ನವರಂಗ ಮತ್ತು ತೆರೆದ ಮುಖಮಂಡಪಗಳಿವೆ. ಮೂರು ಗರ್ಭಗೃಹಗಳು ಒಂದೇ ಸಾಲಿನಲ್ಲಿಯೂ, ಎರಡು ಪಕ್ಕಗಳಲ್ಲಿ ಒಂದೊಂದು ಗರ್ಭಗೃಹವೂ ಇದ್ದು, ಒಟ್ಟು ಐದು ಗರ್ಭಗೃಹಗಳು ಇಲ್ಲಿವೆ. ಇದೇ ಈ ದೇವಾಲಯದ ವೈಶಿಷ್ಟ್ಯ. ಮಧ್ಯದ ಗರ್ಭಗೃಹದ ಬಲ ಭಾಗದಲ್ಲಿ ಗಣಪತಿ ಮತ್ತು ವಿಷ್ಣುವಿನ ವಿಗ್ರಹಗಳಿವೆ. ಈ ಐದು ಗರ್ಭಗೃಹಗಳ ಮೇಲೆ ಕದಂಬ ನಾಗರ ರೀತಿಯ ಸಣ್ಣಪ್ರಮಾಣದ ಶಿಖರಗಳಿವೆ.

ಗರ್ಭಗೃಹಗಳ ಹೊರಗೋಡೆಗಳು ಹಿಂಬಣೆ  ಮುಂಬಣೆಗಳಿಂದ ಕೂಡಿದ್ದು ಅಲಂಕಾರ ರಹಿತವಾಗಿವೆ. ಆದರೆ ಈ ವಿನ್ಯಾಸವೇ ಅಂದವಾಗಿ ಕಾಣುತ್ತದೆ. ಕೆಳಭಾಗದ ಅಧಿಷ್ಠಾನದಲ್ಲಿ ದಂತುರ ಅಲಂಕಾರದ ದಿಂಡುಗಳಿವೆ. ಮೇಲಿನ ಭಾಗದಲ್ಲಿ ಎರಡು ಅಲಂಕಾರಿಕ ದಿಂಡುಗಳಿದ್ದು, ಅವುಗಳ ಮೇಲೆ ಶಿಖರವು ಮೂಡಿಬಂದಿದೆ. ತೆರೆದ ಮುಖಮಂಡಪವು ಸುಂದರವಾಗಿದ್ದು ಒಳಗೆ ಕಕ್ಷಾಸನಗಳಿವೆ. ಚೌಕ ಪೀಠದ ಹಾಗೂ ಅಷ್ಟಕೋನಾಕಾರದ ಕಂಬಗಳು ಈ ದೇವಾಲಯದ ಮುಖ್ಯ ಆಕರ್ಷಣೆ. ಹೊರಗಿನ ಕಂಬಗಳು ಕಕ್ಷಾಸನದ ಕೈಪಿಡಿಯ ಮೇಲಿವೆ. ಅವುಗಳಲ್ಲಿ ತಗ್ಗು ಉಬ್ಬಿನ ಅಲಂಕಾರಗಳಿವೆ. ಕಲ್ಲಿನ ಫಲಕಗಳನ್ನು ಇಳಿಜಾರಾಗಿ ಸೇರಿಸಿ ಅಳವಡಿಸಿದ ಅಗಲವಾದ ಮುಂಜೂರು ಗಮನಾರ್ಹವಾದುದು. ಇದರ ಮೇಲೆ ಅರ್ಧವೃತ್ತಾಕಾರದ ದಿಂಡು ಮತ್ತು ಮಟ್ಟಸವಾದ ಚಾವಣಿಯಿದೆ. ನವರಂಗದಲ್ಲಿ ಸಪ್ತಮಾತೃಕೆಯರು, ವಿಷ್ಣು, ಭೈರವ, ರಂಗನಾಥ, ವರಾಹ, ಶಿವ ಮುಂತಾದ ಶಿಲ್ಪಗಳಿವೆ.

ಈ ದೇವಾಲಯದಲ್ಲಿ ಅನೇಕ ಶಾಸನಗಳಿವೆ. ಇವುಗಳಿಂದ ಈ ದೇವಾಲಯದ ಇತಿಹಾಸವನ್ನು ತಿಳಿಯಬಹುದು. ಕಳಚುರಿ ದೊರೆ ಬಿಜ್ಜಳನ ಮಗನಾದ ಆಹವಮಲ್ಲನ ಕಾಲದ ಕ್ರಿ.ಶ. 1101ರ ಶಾಸನವು ನವರಂಗದಲ್ಲಿದೆ. ಇದು ಈ ದೇವಾಲಯಕ್ಕೆ ಅರವಟ್ಟಿಗೆಯನ್ನು ದಾನಮಾಡಿದ ವಿಷಯವನ್ನು ತಿಳಿಸುತ್ತದೆ. ಆದುದರಿಂದ ಈ ದೇವಾಲಯದ ನಿರ್ಮಾಣ ಈ ತೇದಿಗೆ ಮುಂಚೆ ಆಗಿರಬೇಕೆಂದು ತಿಳಿಯಬಹುದು. ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನವೂ ಇಲ್ಲಿ ದೊರಕಿದೆ. ಹೂಲಿಯಲ್ಲಿ ಇದೊಂದು ಸುಂದರ ಕಲ್ಯಾಣ ಚಾಳುಕ್ಯ ಶೈಲಿಯ ದೇವಾಲಯ.

## ಕಮಲ ಬಸದಿ, ಬೆಳಗಾಂ

ಬೆಳಗಾಂ ನಗರವು, ಬೆಳಗಾಂ ಜಿಲ್ಲೆಯ ಮುಖ್ಯ ಪಟ್ಟಣವಾಗಿದ್ದು ಪ್ರಾಚೀನ ಕಾಲದಲ್ಲಿ ವೇಣುಗ್ರಾಮವೆಂದು ಪ್ರಖ್ಯಾತವಾಗಿತ್ತು. ಬೆಳಗಾಂನಲ್ಲಿ ದೊಡ್ಡದಾದ ಪ್ರಾಚೀನ ಕೋಟೆಯಿದೆ. ಇಲ್ಲಿ ಅನೇಕ ದೇವಾಲಯಗಳಿವೆ. ಇವುಗಳಲ್ಲಿ ಕಮಲ ಬಸದಿಯು ಪ್ರಮುಖವಾದುದು. ಹೆಸರೇ ಸೂಚಿಸುವಂತೆ ಇದೊಂದು ಜೈನ ದೇವಾಲಯವಾಗಿದ್ದು ಶಿಖರವು ಕಮಲಪುಷ್ಪದ ರೀತಿಯಲ್ಲಿರುವುದರಿಂದ ಸ್ಥಳೀಯವಾಗಿ ಕಮಲಬಸದಿ ಎಂದು ಪ್ರಖ್ಯಾತವಾಗಿದೆ. ರಟ್ಟ ವಂಶದ ದೊರೆ ನಾಲ್ಕನೆಯ ಕಾರ್ತವೀರ್ಯನ ಮಂತ್ರಿಯಾಗಿದ್ದ ಬೀಚಿರಾಜನು ಕ್ರಿ.ಶ. 1204ರಲ್ಲಿ ಈ ದೇವಾಲಯವನ್ನು ನಿರ್ಮಿಸಿದನು. ರಟ್ಟವಂಶದ ದೊರೆಗಳು ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದು ಬೆಳಗಾಂಗೆ ಸಮೀಪದಲ್ಲಿರುವ ಸೌಂದತ್ತಿಯಿಂದ ರಾಜ್ಯವಾಳುತ್ತಿದ್ದರು. ಅನಂತರ ಇವರು ವೇಣುಗ್ರಾಮದಿಂದ ರಾಜ್ಯವಾಳಲು ಆರಂಭಿಸಿದರು. ಈ ರಾಜವಂಶದ ದೊರೆಗಳು ಕ್ರಿ.ಶ. 1013ನೆಯ ಶತಮಾನಗಳಲ್ಲಿ ಸಾಮಂತರಾಗಿದ್ದು ಸಮಕಾಲೀನ ರಾಜಕೀಯದಲ್ಲಿ ವಿಶೇಷ ಪಾತ್ರ ವಹಿಸಿದ್ದು ಖ್ಯಾತರಾಗಿದ್ದರು.

ಕಮಲಬಸದಿಯನ್ನು ರಟ್ಟ ಜಿನಾಲಯವೆಂದೂ ಕರೆಯಲಾಗಿದೆ. ಈ ಜೈನ ದೇವಾಲಯದಲ್ಲಿ ನಕ್ಷತ್ರಾಕಾರದ ಗರ್ಭಗುಡಿ, ಅರ್ಧಮಂಡಪ ಮತ್ತು ಮುಖಮಂಡಪಗಳಿವೆ. ಶಾಸನಗಳಲ್ಲಿ ಇದನ್ನು ಶಾಂತಿನಾಥ ಬಸದಿ ಎಂದು ಕರೆದಿದ್ದರೂ, ಈಗ ಗರ್ಭಗೃಹದಲ್ಲಿ ಕರಿಶಿಲೆಯ ನೇಮಿನಾಥನ ಶಿಲ್ಪವಿದೆ. ಈ ವಿಗ್ರಹದ ಪ್ರಭಾವಳಿಯು ನವಿರಾದ ಶಿಲ್ಪಗಳಿಂದ ಕೂಡಿದ್ದು ಮಕರತೋರಣ ಮತ್ತು ಲತಾ ವಿನ್ಯಾಸಗಳನ್ನು ಹೊಂದಿದೆ. ಈ ದೇವಾಲಯದ ಮುಖ್ಯ ಆಕರ್ಷಕ ಭಾಗವೆಂದರೆ ಗರ್ಭಗೃಹದ ಮೇಲಿರುವ ಸುಕನಾಸಿ ಮುಂಚಾಚನ್ನು ಹೊಂದಿರುವ ಕದಂಬ ನಾಗರ ಶಿಖರ. ಅರ್ಧಮಂಡಪದಲ್ಲಿ ಸುಂದರ ಭುವನೇಶ್ವರಿಗಳು ಮತ್ತು ಜಾಲಂಧ್ರಗಳು ಇವೆ.

ನವರಂಗದ ಗೋಡೆಯಲ್ಲಿ ಗೂಡುಗಳಿದ್ದು, ಅವುಗಳಲ್ಲಿ ಶಾಂತಿನಾಥ ಮತ್ತು ಪದ್ಮಾವತಿಯ ಶಿಲ್ಪಗಳಿವೆ. ಇಲ್ಲಿ ನೃತ್ಯಗಾರರು, ಢಕ್ಕೆ ಬಾರಿಸುವವರು ಮತ್ತು ಸಂಗೀತಗಾರರ ನಾಜೂಕಾದ ಶಿಲ್ಪಗಳಿವೆ. ಅರ್ಧಮಂಡಪದಲ್ಲಿ ಮಹಾವೀರ ಮತ್ತು ಪಾರ್ಶ್ವನಾಥರ ಶಿಲ್ಪಗಳಿವೆ. ಈ ದೇವಾಲಯದ ಮುಖಮಂಡಪವು ಚೆನ್ನಾಗಿ ವಿನ್ಯಾಸಗೊಂಡಿದೆ. ಇದು ಆರು ಭುಜಗಳ ತಲವಿನ್ಯಾಸವನ್ನು ಹೊಂದಿದ್ದು, ಇದರಲ್ಲಿ ಕಕ್ಷಾಸನಗಳಿವೆ. ಇದಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣಗಳಲ್ಲಿ ಮೂರು ಪ್ರವೇಶ ದ್ವಾರಗಳಿವೆ. ಮುಖಮಂಡಪದಲ್ಲಿ ಆಳವಾದ ಭುವನೇಶ್ವರಿಯಿದೆ. ಇದರಲ್ಲಿ ಅಷ್ಟದಿಕ್ಪಾಲಕರು ಹಾಗೂ ಮಧ್ಯದಲ್ಲಿ ಕೆಳಕ್ಕೆ ಬಾಗಿರುವ ಕಮಲ ಪುಷ್ಪ ವಿನ್ಯಾಸವಿದೆ. ಚಾವಣಿಯ ಹಂತದಲ್ಲಿ ಸ್ವಲ್ಪ ಅಗಲವಾದ ಮುಂಜೂರು ಇದೆ. ಈ ಹಂತದಲ್ಲಿ ಗರ್ಭಗುಡಿಯ ಮೇಲೆ ಆರು ಕೋನಗಳ ವಿನ್ಯಾಸದ ಶಿಖರವಿದೆ. ಇದರಲ್ಲಿ ಆರು ತಲಗಳಿದ್ದು, ಪ್ರತಿಯೊಂದರಲ್ಲಿಯೂ ದಂತವಿನ್ಯಾಸದ ಅಲಂಕಾರಗಳಿವೆ. ಇದರಿಂದ ಈ ಶಿಖರವು ಅತ್ಯಂತ ಸುಂದರವಾಗಿ ಕಾಣಬರುತ್ತದೆ. ಇದರ ಮೇಲೆ ಚೌಕ ಕಲಶವಿದೆ. ಈ ಶಿಖರವು ಸ್ವಲ್ಪ ಕುಳ್ಳಾಗಿ ಕಂಡರೂ, ಅದಕ್ಕೆ ತನ್ನದೇ ಆದ ಭವ್ಯತೆಯಿದೆ. ಅಧಿಷ್ಠಾನದಲ್ಲಿ ಅಲಂಕೃತ ಹಾಗೂ ದಂತ ವಿನ್ಯಾಸದ ದಿಂಡುಗಳಿವೆ. ಕಕ್ಷಾಸನದ ಹೊರಭಾಗದಲ್ಲಿ ತಗ್ಗು ಉಬ್ಬಿನ ಶಿಲ್ಪಗಳಿವೆ. ಹೀಗೆ ಕಮಲ ಬಸದಿಯು ರಟ್ಟರಾಜರಿಂದ ಬೆಳಗಾಂ ಅಥವಾ ವೇಣುಗ್ರಾಮದಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ನಿರ್ಮಿಸಲಾದ ಜೈನ ದೇವಾಲಯ.

ವೀರನಾರಾಯಣ ದೇವಾಲಯ, ಬೆಳವಾಡಿ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂದು ಸಣ್ಣ ಗ್ರಾಮವಾಗಿರುವ ಬೆಳವಾಡಿಯು ಹೊಯ್ಸಳ ಕಾಲದ ವೀರನಾರಾಯಣ ಸ್ವಾಮಿಯ ದೇವಾಲಯಕ್ಕೆ ಪ್ರಸಿದ್ಧಿಯಾಗಿದೆ. ಈ ದೇವಾಲಯದ ನಿರ್ಮಾಣದ ಕಾಲದ ಬಗೆಗೆ ಖಚಿತವಾಗಿ ತಿಳಿಯದಿದ್ದರೂ, ಈ ದೇವಾಲಯಕ್ಕೆ ನೀಡಿದ ಕೆಲವು ದಾನಗಳನ್ನು ಉಲ್ಲೇಖಿಸುವ ಕ್ರಿ.ಶ. 1206ರ ಹೊಯ್ಸಳ ಶಾಸನ ಇಲ್ಲಿದೆ. ಆದುದರಿಂದ ಈ ದೇವಾಲಯ ಕ್ರಿ.ಶ. 1206ಕ್ಕೆ ಮುಂಚೆ ನಿರ್ಮಾಣಗೊಂಡಿರಬೇಕೆಂಬುದು ಖಚಿತವಾಗುತ್ತದೆ.

ಇದು ಬಳಪದ ಕಲ್ಲಿನಲ್ಲಿ ಕಟ್ಟಲಾದ ತ್ರಿಕೂಟಾಚಲವಾದುದರಿಂದ ಇದರಲ್ಲಿ ಮೂರು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಡಪಗಳಿವೆ ಪೂರ್ವದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ಸಭಾಮಂಡಪಗಳಿವೆ. ಉತ್ತರ, ದಕ್ಷಿಣಗಳಲ್ಲಿ ಗರ್ಭಗೃಹ ಮತ್ತು ಸುಕನಾಸಿಗಳಿವೆ. ಇಲ್ಲಿನ ಗರ್ಭಗೃಹಗಳಲ್ಲಿ ಏಳು ಅಡಿ ಎತ್ತರದ ವೇಣುಗೋಪಾಲ ಮತ್ತು ಯೋಗಾನರಸಿಂಹ ವಿಗ್ರಹಗಳೂ, ಮೂರನೆಯದರಲ್ಲಿ ಆರೂವರೆ ಅಡಿ ಎತ್ತರದ ಭವ್ಯವಾದ ವೀರನಾರಾಯಣನ ವಿಗ್ರಹವಿದೆ. ಅವನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳಿವೆ. ಹೊರಗೋಡೆಯ ಭಿತ್ತಿಯ ಕೆಳಭಾಗದಲ್ಲಿ ಅಲಂಕೃತ ದಿಂಡುಗಳು, ಅದರ ಮೇಲಿನ ಆರು ಶಿಲ್ಪ ಪಟ್ಟಿಕೆಗಳು, ಅದರ ಮೇಲೆ ದೇವ ಗರ್ಭಗೃಹ ಮತ್ತು ಸುಕನಾಸಿಗಳಿಗೆ ಮಾತ್ರ ಸೇರಿದಂತೆ ಮುಂಜೂರು ಇದೆ. ಮುಂಭಾಗದಲ್ಲಿ ತೆರೆದ ಕಕ್ಷಾಸನವಿದೆ. ಮೇಲೆ ಕಲಶವಿರುವ ಹೊಯ್ಸಳ ಶೈಲಿಯ ಮೂರು ತಲಗಳ ಶಿಖರವಿದೆ.

ಪಶ್ಚಿಮ ಗೋಡೆಯಲ್ಲಿ ಯೋಗಾನರಸಿಂಹ, ಹಲಾಯುಧ, ಗರುಡ, ಪ್ರದ್ಯುಮ್ನ, ಶ್ರೀರಾಮ, ಕೃಷ್ಣ ಹಾಗೂ ದೇವಿಯರ ನಾಜೂಕಾದ ಸುಂದರ ಶಿಲ್ಪಗಳಿವೆ. ಉತ್ತರದ ಗೋಡೆಯಲ್ಲಿ ಕೇಶವ, ಲಕ್ಷ್ಮೀ, ಪ್ರದ್ಯುಮ್ನ, ನರಸಿಂಹ ಮತ್ತು ಮೋಹಿನಿಯರ ಶಿಲ್ಪಗಳಿವೆ. ದಕ್ಷಿಣದ ಗೋಡೆಯಲ್ಲಿ ವಿಷ್ಣು, ಪರಶುರಾಮ, ಕಲ್ಕಿ, ಗರುಡ, ವರಾಹಿ, ಕಾಳಿಂಗಮರ್ದನ ಮತ್ತು ಸಂಗೀತಗಾರರು ಮತ್ತು ನೃತ್ಯಗಾರರ ಶಿಲ್ಪಗಳಿವೆ. ಈ ಎಲ್ಲ ಶಿಲ್ಪಗಳೂ ನಾಜೂಕಾಗಿದ್ದು ಹೊಯ್ಸಳ ಶೈಲಿಗೆ ಸೇರಿದವುಗಳು. ಸಭಾಮಂಡಪ ವಿಶಾಲವಾಗಿದ್ದು, ಇದರಲ್ಲಿ ಚರಕಿಯಂತ್ರದಿಂದ ತಯಾರಾದ ನಲವತ್ತಾರು ಕಂಬಗಳಿವೆ. ಈ ಕಂಬಗಳು ವೈವಿಧ್ಯಪೂರ್ಣವಾದ ವಿನ್ಯಾಸಗಳಿಂದ ಕೂಡಿದ್ದು ಹೊಯ್ಸಳ ಶಿಲ್ಪಗಳ ಉತ್ತಮ ಕೆತ್ತನೆಗೆ ಪ್ರಸಿದ್ಧವಾಗಿವೆ. ಒಳಭಾಗದ ಚಾವಣಿಯಲ್ಲಿ ಮಟ್ಟಸವಾದ ಹಾಗೂ ಆಳವಾದ ವೈವಿಧ್ಯಮಯ ಭುವನೇಶ್ವರಿ ಶಿಲ್ಪಗಳಿವೆ. ದಕ್ಷಿಣ ಗರ್ಭಗೃಹದಲ್ಲಿರುವ ವೇಣುಗೋಪಾಲ ವಿಗ್ರಹ, ತ್ರಿಭಂಗದಲ್ಲಿದ್ದು, ಕೊಳಲನ್ನು ಊದುತ್ತಿರುವಂತೆ ಶಿಲ್ಪಿತವಾಗಿದೆ. ಇತರ ಹೊಯ್ಸಳ ದೇವಾಲಯಗಳಲ್ಲಿ ಕಂಡುಬರುವ ಕೃಷ್ಣನ ವಿಗ್ರಹಗಳಿಗಿಂತ ಈ ವೇಣುಗೋಪಾಲ ವಿಗ್ರಹ ಹೆಚ್ಚು ಸುಂದರವಾಗಿದೆ. ಉತ್ತರ ಗರ್ಭಗೃಹದಲ್ಲಿ ಯೋಗಪಟ್ಟದಲ್ಲಿರುವ ಹಾಗೂ ಶಂಖ ಚಕ್ರಗಳನ್ನು ಹಿಡಿದಿರುವ ಯೋಗಾನರಸಿಂಹಸ್ವಾಮಿಯ ಶಿಲ್ಪವಿದೆ. ಪ್ರಧಾನ ಗರ್ಭಗೃಹದಲ್ಲಿ ವೀರನಾರಾಯಣನ ವಿಗ್ರಹವಿದೆ. ಹೀಗೆ ಇದು ಹೊಯ್ಸಳರಿಂದ ನಿರ್ಮಿತವಾದ ವಿಶಾಲವಾದ ತ್ರಿಕೂಟಾಚಲಗಳಲ್ಲಿ ಮುಖ್ಯವಾದ ದೇವಾಲಯ.

ಕೇದಾರೇಶ್ವರ ದೇವಾಲಯ, ಹಳೇಬೀಡು

ಹೊಯ್ಸಳ ದೊರೆಗಳ ಸ್ವಲ್ಪ ಕಾಲದ ರಾಜಧಾನಿಯಾಗಿದ್ದ ದ್ವಾರಸಮುದ್ರ ಅಥವಾ ಹಳೇಬೀಡಿನಲ್ಲಿ ಕೇದಾರೇಶ್ವರ ದೇವಾಲಯವಿದೆ. ಶಾಸನಗಳ ಪ್ರಕಾರ ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳ ಮತ್ತು ಅವನ ರಾಣಿ ಅಭಿನವ ಕೇತಲದೇವಿಯಿಂದ ಈ ದೇವಾಲಯ ಕ್ರಿ.ಶ. 1219ರಲ್ಲಿ ನಿರ್ಮಿಸಲ್ಪಟ್ಟಿತು. ಈ ದೇವಾಲಯದ ಕೆಲವು ಭಾಗಗಳು ಹಾಳಾಗಿದ್ದು, ಇದರ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಆದರೂ ಕೂಡ ಈ ದೇವಾಲಯ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡ ಹೊಯ್ಸಳ ಶೈಲಿಯ ಉತ್ತಮ ದೇವಾಲಯವೆನಿಸಿಕೊಂಡಿದೆ.

ಈ ದೇವಾಲಯವನ್ನು ಬಳಪದಕಲ್ಲಿನಿಂದ ಕಟ್ಟಲಾಗಿದೆ. ಇದನ್ನು ಹದಿನಾರು ಕೋನಗಳುಳ್ಳ ನಕ್ಷತ್ರಾಕಾರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಮೇಲಿನ ಕಟ್ಟಡವು ಜಗತಿಯನ್ನನುಸರಿಸಿ ನಕ್ಷತ್ರಾಕಾರದಲ್ಲೇ ನಿರ್ಮಿತವಾಗಿದೆ. ಮೂಲದಲ್ಲಿ ಇದು ತ್ರಿಕೂಟಾಚಲವಾಗಿತ್ತು. ಆದರೆ ಈಗ ಮೂರು ಗರ್ಭಗೃಹಗಳಲ್ಲಿಯೂ ವಿಗ್ರಹಗಳಿಲ್ಲ. ಎಲ್ಲ ಹೊಯ್ಸಳ ದೇವಾಲಯಗಳಲ್ಲಿಯೂ ಕಾಣಬರುವಂತೆ ಕೆಳಗೆ ಅಷ್ಟ ಪಟ್ಟಿಕೆಗಳಿವೆ.

ಈ ಶಿಲ್ಪಪಟ್ಟಿಕೆಗಳಲ್ಲಿ ಮುಖ್ಯವಾದುದು ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಗೆ ಸಂಬಂಧಿಸಿದ ಕಥಾನಕ ಶಿಲ್ಪಗಳು. ರಾಮಾಯಣದ ಕಥೆಯು ವಿಶದವಾಗಿದ್ದು, ರಾವಣನ ವಧೆ, ವಿಭೀಷಣನ ಪಟ್ಟಾಭಿಷೇಕಗಳನ್ನು ಒಳಗೊಂಡಿದೆ. ಮಹಾಭಾರತದ ಕಥೆಯು ಗೋಗ್ರಹಣದಿಂದ ಆರಂಭವಾಗಿ ಭೀಮ ದುರ್ಯೋಧನರ ಯುದ್ಧದೊಡನೆ ಕೊನೆಗೊಳ್ಳುತ್ತದೆ. ಭಾಗವತದ ಕಥೆಯು ಶ್ರೀಕೃಷ್ಣನ ಕಥೆಯಿಂದ ಆರಂಭವಾಗುತ್ತದೆ. ಇನ್ನೊಂದು ಅರ್ಧಪಟ್ಟಿಕೆಯಲ್ಲಿ ದೊರೆ ಇಮ್ಮಡಿ ಬಲ್ಲಾಳನ ರಾಜಸಭೆಯು ಶಿಲ್ಪಿತವಾಗಿದೆ.

ಈ ಪಟ್ಟಿಕೆಗಳ ಮೇಲೆ ದೇವ ದೇವಿಯರ ಶಿಲ್ಪಗಳಿವೆ. ಇವು ವಿವಿಧ ಭಂಗಿಗಳಲ್ಲಿ ಸೂಕ್ಷ್ಮ ಕೆತ್ತನೆಯ ವಿತಾನಗಳ ಕೆಳಗೆ ಇವೆ. ಇವುಗಳಲ್ಲಿ ವಿಷ್ಣುವಿನ ಅವತಾರಗಳಾದ ವರಾಹ, ವಾಮನ ಮುಂತಾದವುಗಳಿವೆ. ಒಂದಕ್ಕಿಂತಲೂ ಹೆಚ್ಚು ಸಾರಿ ಕಾಣಬರುವ ಶಿಲ್ಪಗಳೆಂದರೆ ನರಸಿಂಹ, ವಿಷ್ಣು, ಲಕ್ಷ್ಮಿ, ದಕ್ಷಿಣಾಮೂರ್ತಿ, ಗಜಸಂಹಾರಮೂರ್ತಿ, ಕಾಳಿಂಗಮರ್ದನ, ವೇಣುಗೋಪಾಲ, ತಾಂಡವೇಶ್ವರ, ಮೋಹಿನಿ, ಮನ್ಮಥ, ಕೈಲಾಸವನ್ನು ಮೇಲೆತ್ತುತ್ತಿರುವ ರಾವಣ, ಸೂರ್ಯ ಮತ್ತು ಬ್ರಹ್ಮ. ಇವೆಲ್ಲವೂ ಹೊಯ್ಸಳ ಶೈಲಿಯ ಕುಸುರಿ ಕೆಲಸವನ್ನು ಹೊಂದಿದ್ದು ಮನಮೋಹಕವಾಗಿವೆ.

ಒಳಭಾಗದಲ್ಲಿ ಚರಕಿಯಂತ್ರದಿಂದ ತಯಾರಾದ ಸುಂದರ ಕಂಬಗಳೂ, ಸೂಕ್ಷ್ಮ ಕೆತ್ತನೆಯ ಕಮಲದ ಮೊಗ್ಗುಗಳೂ, ಕೆಳಕ್ಕೆ ಇಳಿಬಿದ್ದಿರುವಂತೆ ಕೆತ್ತಿರುವ ಭುವನೇಶ್ವರಿಗಳೂ ಇವೆ. ದಕ್ಷಿಣ ಗರ್ಭಗೃಹದ ಮೇಲೆ ಹಿಂದೆ ಇದ್ದ ಶಿಖರ ಈಗ ಇಲ್ಲ. ಇದೊಂದು ಅತ್ಯುತ್ತಮ ಹೊಯ್ಸಳ ಮಾದರಿಯ ದೇವಾಲಯವೆಂದು ಖ್ಯಾತ ವಿದ್ವಾಂಸ ಹೆನ್ರಿ ಕಸಿನ್ಸ್ ವರ್ಣಿಸಿದ್ದಾನೆ.

ಹೊಯ್ಸಳೇಶ್ವರ ದೇವಾಲಯ, ಹಳೇಬೀಡು

ದ್ವಾರಸಮುದ್ರವೆಂದು ಪ್ರಸಿದ್ಧವಾಗಿದ್ದ ಈ ನಗರವು ಹೊಯ್ಸಳರ ರಾಜಧಾನಿಯಾಗಿದ್ದುದರಿಂದ, ಇಲ್ಲಿ ಅವರು ತುಂಬ ವಿಶಾಲವಾದ ಹಾಗೂ ಸುಂದರವಾದ ಹೊಯ್ಸಳೇಶ್ವರ ದೇವಾಲಯವನ್ನು ನಿರ್ಮಿಸಿದರು. ಕ್ರಿ.ಶ. 1211 ಅಥವಾ ಆದಕ್ಕೆ ಸ್ವಲ್ಪ ಮುಂಚೆ ವಿಷ್ಣುವರ್ಧನನ ಮಂತ್ರಿ ಕೇತಮಲ್ಲನು ಈ ದೇವಾಲಯವನ್ನು ಕಟ್ಟಿಸಿದನು. ಆನಂತರ ಆಳಿದ ಮೊದಲನೆಯ ನರಸಿಂಹ ಮತ್ತು ಇಮ್ಮಡಿ ಬಲ್ಲಾಳ ದೊರೆಗಳ ಕಾಲದಲ್ಲಿ ಹೊಸ ಭಾಗಗಳು ಸೇರಿಸಲ್ಪಟ್ಟವು.

ಇಡೀ ದೇವಾಲಯವನ್ನು ಬಳಪದಕಲ್ಲಿನಲ್ಲಿ ಕಟ್ಟಲಾಗಿದೆ. ಇದೊಂದು ದ್ವಿಕೂಟವಾಗಿದ್ದು ಎರಡು ಗರ್ಭಗೃಹಗಳು ಮತ್ತು ಒಂದು ನವರಂಗವಿದೆ. ದೇವಾಲಯವು ನಕ್ಷತ್ರಾಕಾರದ ಜಗತಿಯ ಮೇಲಿದೆ. ಪ್ರತಿ ದೇವಾಲಯದಲ್ಲೂ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಪ್ರತ್ಯೇಕ ನಂದಿಮಂಟಪವಿದೆ. ಜಗತಿಯ ಮೇಲೆ ನಿಂತು ಕೆಳಭಾಗದ ಸೂಕ್ಷ್ಮಕೆತ್ತನೆಯ ಅಡ್ಡಪಟ್ಟಿಕೆಗಳ ಮೇಲಿರುವ ಆನೆಗಳ ಸಾಲು, ಸಿಂಹಗಳ ಸಾಲು, ಲತಾಲಂಕಾರ, ಕುದುರೆಗಳು, ಪೌರಾಣಿಕ ಕಥಾನಕ ಶಿಲ್ಪಗಳು, ಯಾಳಿಗಳ ಸಾಲು ಮತ್ತು ಹಂಸಗಳ ಸಾಲುಗಳನ್ನು ವಿವರವಾಗಿ ನೋಡಬಹುದು. ಪಟ್ಟಿಕೆಯ ಮೇಲಿರುವ ರಾಮಾಯಣ, ಮಹಾಭಾರತ, ಭಾಗವತ ಮತ್ತು ಶಿವಪುರಾಣಗಳ ಕಥೆಗಳು ನಮ್ಮನ್ನು ಆಕರ್ಷಿಸುತ್ತವೆ. ಈ ಪಟ್ಟಿಕೆಗಳ ಮೇಲ್ಭಾಗದಲ್ಲಿ, ಸೂಕ್ಷ್ಮ ಕೆತ್ತನೆಯ ವಿತಾನ ಅಥವಾ ವೃಕ್ಷಗಳ ಕೆಳಗೆ ಕುಳಿತಿರುವ ಅಥವಾ ನಿಂತಿರುವ ನೂರಾರು ಶೈವ, ವೈಷ್ಣವ ದೇವ, ದೇವಿಯರ ಶಿಲ್ಪಗಳಿವೆ. ಶಿವಪಾರ್ವತಿ, ಗಜಾಸುರ ಸಂಹಾರಮೂರ್ತಿ, ಗಜೇಂದ್ರಮೋಕ್ಷ, ಕೈಲಾಸವನ್ನು ಮೇಲೆತ್ತುತ್ತಿರುವ ರಾವಣ, ಬ್ರಹ್ಮಸರಸ್ವತಿ, ವಿಷ್ಣುಲಕ್ಷ್ಮಿ, ನರಸಿಂಹ ಮುಂತಾದ ಶಿಲ್ಪಗಳು ಹೊಯ್ಸಳ ಶೈಲಿಯ ಉತ್ತಮ ಕೃತಿಗಳು. ಈ ಶಿಲ್ಪಗಳ ಮೇಲೆ ಅಲಂಕೃತ ಮುಂಚೂರು ಇದ್ದು ಇಡೀ ಕಟ್ಟಡಕ್ಕೆ ಭವ್ಯತೆಯನ್ನು ಒದಗಿಸುವುದಲ್ಲದೆ, ಗೋಡೆಯ ಏಕತಾನತೆಯನ್ನು ನಿವಾರಿಸುತ್ತದೆ. ಹಿಂದೆ ಇದ್ದ ಎರಡು ಶಿಖರಗಳು ಈಗ ಇಲ್ಲ. ಜಾಲಂಧ್ರಗಳಿಂದ ಒಳಭಾಗಕ್ಕೆ ಸಾಕಷ್ಟು ಗಾಳಿ, ಬೆಳಕು ಬರುತ್ತದೆ. ಪ್ರತ್ಯೇಕವಾದ ನಂದಿಮಂಡಪಗಳಲ್ಲಿ ದೊಡ್ಡ ಪ್ರಮಾಣದ ನಂದಿಯ ವಿಗ್ರಹಗಳಿವೆ.

ಒಳಗಿರುವ ಕಂಬಗಳು ಚರಕಿಯಂತ್ರದಿಂದ ತಯಾರಿಸಲ್ಪಟ್ಟು ನಯವಾಗಿದ್ದು ವಿಶೇಷ ಹೊಳಪನ್ನು ಹೊಂದಿವೆ. ಈ ಕಂಬಗಳು ವೈವಿಧ್ಯಮಯವಾಗಿದ್ದು ಹೊಯ್ಸಳ ಶೈಲಿಯ ಉತ್ತಮ ಕೃತಿಗಳು. ಮೂಲದಲ್ಲಿ ಮುಖ್ಯ ಕಂಬಗಳ ಮೇಲೆ ಮದನಿಕ ಶಿಲ್ಪಗಳಿದ್ದವು. ಈಗ ಅವುಗಳಲ್ಲಿ ಕೆಲವು ಕಾಣಬರುವುದಿಲ್ಲ. ಮೊದಲನೆಯ ಗರ್ಭಗೃಹದಲ್ಲಿ ಹೊಯ್ಸಳೇಶ್ವರ ಹಾಗೂ ಎರಡನೆಯ ಗರ್ಭಗೃಹದಲ್ಲಿ ಶಾಂತಲೇಶ್ವರ ಲಿಂಗಗಳೂ ಇವೆ. ಇವೆರಡೂ ಹೊಯ್ಸಳ ರಾಜರಾಣಿಯರ ಹೆಸರಿನಲ್ಲಿ ಸ್ಥಾಪಿಸಲಾದ ಶಿವಲಿಂಗಗಳು. ಈ ದೇವಾಲಯವು ಬೇಲೂರು ಚೆನ್ನಕೇಶವ ದೇವಾಲಯವನ್ನು ನಿರ್ಮಿಸಿದ ಸಮಯ ಇಲ್ಲವೇ ಸ್ವಲ್ಪ ಸಮಯದ ನಂತರ ಕಟ್ಟಲ್ಪಟ್ಟದ್ದಾದರೂ, ಹೊಯ್ಸಳೇಶ್ವರ ದೇವಾಲಯದ ಶಿಲ್ಪಗಳು ಹೆಚ್ಚು ಸೌಂದರ್ಯಯುತವಾಗಿಯೂ, ಶ್ರೇಷ್ಠವಾಗಿಯೂ ಇವೆ.

ಈ ಶ್ರೇಷ್ಠ ದೇವಾಲಯವನ್ನು ನಿರ್ಮಿಸಿದವರು ಕಾಳಿದಾಸ, ದಾಮೋಜ, ಕೇತನ, ಬಲ್ಲಣ, ರೇವೋಜ, ಹರೀಶ ಮುಂತಾದ ಶಿಲ್ಪಿಗಳು. ಹೊಯ್ಸಳರ ರಾಜಧಾನಿಯಾಗಿದ್ದ ಹಳೇಬೀಡಿನ ಮೇಲೆ ಕ್ರಿ.ಶ. 1310ರಲ್ಲಿ ಮಲ್ಲಿಕ್ ಕಾಫರ್ ದಂಡಯಾತ್ರೆ ನಡೆಸಿದನು.

ಈಶ್ವರ ದೇವಾಲಯ, ಅರಸಿಕೆರೆ

ಇಂದು ಅರಸಿಕೆರೆ ಪ್ರಮುಖವಾದ ವಾಣಿಜ್ಯ ಪಟ್ಟಣವಾಗಿದೆ. ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲಗಳಲ್ಲಿ ಅದೊಂದು ಪ್ರಾಚೀನ ಅಗ್ರಹಾರ ಮತ್ತು ವಾಣಿಜ್ಯ ನಗರಿಯಾಗಿತ್ತು. ಹೊಯ್ಸಳ ದೊರೆ ಎರೆಯಂಗನ ಅರಸಿ ಮಹಾದೇವಿಯು ಅಲ್ಲಿ ಒಂದು ಕೆರೆಯನ್ನು ನಿರ್ಮಿಸಿದಳು. ಆದುದರಿಂದ ಈ ಸ್ಥಳಕ್ಕೆ ಅರಸಿಕೆರೆ ಎನ್ನುವ ಹೆಸರು ಬಂದಿತು. ಹೊಯ್ಸಳ ಇಮ್ಮಡಿ ಬಲ್ಲಾಳನ ರಾಣಿ ಉಮಾದೇವಿಯ ಹುಟ್ಟೂರು ಇದಾದುದರಿಂದ, ಹೊಯ್ಸಳರ ಕಾಲದಲ್ಲಿ ಇದನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸಲಾಯಿತು. ಅವಳು ಇದರ ಅಭಿವೃದ್ಧಿಯಲ್ಲಿ ವಿಶೇಷ ಪಾತ್ರ ವಹಿಸಿದ್ದಳೆಂದು ಭಾವಿಸಬಹುದು. ಇಲ್ಲಿ ಅನೇಕ ಶಾಸನಗಳು ದೊರಕಿದ್ದು, ಉಮಾದೇವಿಯ ಆಳ್ವಿಕೆಗೆ ಈ ಸ್ಥಳದ ಸುತ್ತಮುತ್ತಲ ಪ್ರದೇಶಗಳು ಸೇರಿದ್ದವೆಂದು ಗೊತ್ತಾಗುತ್ತದೆ. ಕೆಲವು ಶಾಸನಗಳು ಈ ಊರನ್ನು ಜಯಗೊಂಡ ಬಲ್ಲಾಪುರ ಮತ್ತು ವೀರವಿಜಯ ಬಲ್ಲಾಪುರ ಎಂದೂ ಹೆಸರಿಸಿವೆ.

ಇಲ್ಲಿ ಅನೇಕ ದೇವಾಲಯಗಳಿದ್ದು, ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಈಶ್ವರ ದೇವಾಲಯ. ಈ ದೇವಾಲಯ ನಿರ್ಮಾಣಗೊಂಡ ಖಚಿತವಾದ ಕಾಲವು ತಿಳಿದಿಲ್ಲವಾದರೂ, ಇಮ್ಮಡಿ ಬಲ್ಲಾಳನ ಕಾಲದಲ್ಲಿ (ಕ್ರಿ.ಶ. 1173-1220), ಅವನ ರಾಣಿ ಉಮಾದೇವಿಯ ಕೋರಿಕೆಯ ಮೇಲೆ ನಿರ್ಮಾಣವಾಯಿತೆಂದು ಭಾವಿಸಲಾಗಿದೆ.

ಇದೊಂದು ಸಣ್ಣದಾದ ಹಾಗೂ ಸುಂದರವಾದ ಹೊಯ್ಸಳ ದೇವಾಲಯ. ಇದು ಒಂದು ಗರ್ಭಗೃಹವಿರುವ ಏಕಕೂಟಾಚಲ. ಇದು ಪೂರ್ಣವಾಗಿ ಬಳಪದಕಲ್ಲಿನಿಂದ ಹೊಯ್ಸಳ ಶೈಲಿಯಲ್ಲಿ ನಿರ್ಮಿತವಾಗಿದೆ. ಇದರಲ್ಲಿ ಒಂದು ಸಣ್ಣ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ವಿಶಿಷ್ಟ ರೀತಿಯ ಮುಖಮಂಡಪಗಳಿವೆ. ಉತ್ತರ ಮತ್ತು ದಕ್ಷಿಣಗಳಲ್ಲಿ ಎರಡು ಪ್ರವೇಶದ್ವಾರಗಳಿವೆ. ಈ ದೇಗುಲವು ಮೂರು ಅಡಿ ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಇದರಲ್ಲಿ ಜ್ಯಾಮಿತಿಯ ವಿನ್ಯಾಸಗಳನ್ನೊಳಗೊಂಡ ದಿಂಡುಗಳಿವೆ. ಇವುಗಳ ಮೇಲೆ ಇನ್ನೂ ಕೆಲವು ಅಲಂಕೃತ ದಿಂಡುಗಳಿದ್ದು, ಅವುಗಳ ಮೇಲ್ಭಾಗದಲ್ಲಿ ಮೇಲೆ ಲಕ್ಷ್ಮಿ, ಸಪ್ತಮಾತೃಕೆಯರು, ಕೇಶವ, ಶಿವ, ತ್ರಿವಿಕ್ರಮ, ಹೃಷೀಕೇಶ, ಪ್ರದ್ಯುಮ್ನ, ಪುರುಷೋತ್ತಮ ಮುಂತಾದ ವಿಷ್ಣುವಿನ ರೂಪಗಳ ಶಿಲ್ಪಗಳಿವೆ. ಐದು ಅಂತಸ್ತುಗಳ ಹದಿನಾರು ಕೋನಗಳ ನಕ್ಷತ್ರಾಕೃತಿಯ ಶಿಖರ ಮತ್ತು ಅದರ ಮೇಲಿನ ಕಲ್ಲಿನ ಕಲಶ ತುಂಬ ಅಂದವಾಗಿವೆ.

ಗರ್ಭಗೃಹದಲ್ಲಿ ಒಂದು ಸಣ್ಣ ಶಿವಲಿಂಗವಿದೆ. ನವರಂಗದಲ್ಲಿ ಚೆಲುವಾದ ಭುವನೇಶ್ವರಿಗಳು ಮತ್ತು ಚರಕಿಯಂತ್ರದಿಂದ ತಯಾರಿಸಿದ ಹೊಯ್ಸಳ ಶೈಲಿಯ ಕಂಬಗಳೂ ಇವೆ. ಈ ವಿಶಿಷ್ಟ ರೀತಿಯ ಮುಖಮಂಡಪಕ್ಕೆ ಅಕ್ಕಪಕ್ಕಗಳಲ್ಲಿ ಪ್ರವೇಶದ್ವಾರಗಳಿವೆ. ಮುಖಮಂಡಪವನ್ನು ಹದಿನಾರು ಕೋನದ ಹಾಗೂ ಇಪ್ಪತ್ತೈದು ಅಡಿ ವ್ಯಾಸದ ನಕ್ಷತ್ರಾಕಾರದಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ಮುಖಮಂಡಪದ ಕಂಬಗಳಲ್ಲಿಯೂ ವೈವಿಧ್ಯತೆ ಇದೆ. ಹೀಗೆ ಅರಸಿಕೆರೆಯ ಈಶ್ವರ ದೇವಾಲಯವು, ಇತರ ದೇವಾಲಯಗಳಲ್ಲಿ ಕಾಣಬರದ ಕೆಲವು ಲಕ್ಷಣಗಳನ್ನು ಹೊಂದಿದ್ದು, ಹೊಯ್ಸಳ ವಾಸ್ತುಶಿಲ್ಪ ಇತಿಹಾಸದಲ್ಲಿ ಪ್ರಮುಖ ಸ್ಥಾನ ಹೊಂದಿದೆ.

ಮಲ್ಲಿಕಾರ್ಜುನ ದೇವಾಲಯ, ಬಸರಾಳು

ಬಸರಾಳು ಮಂಡ್ಯ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಆದರ ಪ್ರಾಚೀನ ಹೆಸರು ಬಸುರಿವಾಳ. ಅದೊಂದು ಪ್ರಾಚೀನ ಅಗ್ರಹಾರವಾಗಿತ್ತು. ಹೊಯ್ಸಳ ದೊರೆ ಇಮ್ಮಡಿ ನರಸಿಂಹನ ಮಂತ್ರಿಯಾಗಿದ್ದ ಹರಿಹರ ದಂಡನಾಯಕನು ಯಾದವರನ್ನು ಗೆದ್ದು ತನ್ನ ತಾಯಿಯ ಹೆಸರಿನಲ್ಲಿ ಕೆರೆಯನ್ನೂ, ತನ್ನ ತಂದೆಯ ಹೆಸರಿನಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನೂ ಕ್ರಿ.ಶ. 1234ರಲ್ಲಿ ನಿರ್ಮಿಸಿದನು.

ಮಲ್ಲಿಕಾರ್ಜುನ ದೇವಾಲಯವು ತ್ರಿಕೂಟಾಚಲ. ಇದರಲ್ಲಿ ಮೂರು ಗರ್ಭಗೃಹಗಳು, ಒಂದು ನವರಂಗ, ಮುಖಮಂಡಪ, ನಂದಿಮಂಡಪ ಮತ್ತು ದ್ವಾರಮಂಡಪಗಳಿವೆ. ಉತ್ತರ ಮತ್ತು ದಕ್ಷಿಣಗಳಲ್ಲಿ ಪ್ರವೇಶದ್ವಾರಗಳಿವೆ. ಇಡೀ ದೇವಾಲಯವು ಬಳಪದ ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಕೆತ್ತನೆಯ ದಿಂಡುಗಳನ್ನುಳ್ಳ ಎತ್ತರವಾದ ಜಗತಿಯ ಮೇಲೆ ದೇವಾಲಯ ನಿರ್ಮಾಣಗೊಂಡಿದೆ. ಹೊರಗೋಡೆಯು ಹೊಯ್ಸಳ ಮಾದರಿಯಲ್ಲಿದ್ದು, ಏಳು ಅಂಗುಲ ಅಗಲದ ಆರು ಅಡ್ಡ ಶಿಲ್ಪ ಪಟ್ಟಿಕೆಗಳಿವೆ. ಇವುಗಳ ಮೇಲೆ ಸೂಕ್ಷ್ಮ ಕೆತ್ತನೆಯ ವಿತಾನಗಳ ಕೆಳಗೆ ವಿವಿಧ ಭಂಗಿಯಲ್ಲಿರುವ ಪ್ರಧಾನ ದೇವದೇವಿಯರ ಶಿಲ್ಪಗಳಿವೆ. ಇವುಗಳಲ್ಲಿ ಗಮನಾರ್ಹವಾದವು, ನರಸಿಂಹ, ಶಿವ, ಶಿವಪಾರ್ವತಿ, ಗಣೇಶ, ಲಕ್ಷ್ಮೀನಾರಾಯಣ, ಚತುರ್ಮುಖ ಬ್ರಹ್ಮ, ಸರಸ್ವತಿ, ಭೈರವ ಮುಂತಾದವು. ಇಲ್ಲಿ ಎರಡು ಮುಂಚೂರುಗಳಿವೆ; ಮೊದಲನೆಯದು ಶಿಲ್ಪಗಳ ಮೇಲ್ಭಾಗದಲ್ಲಿದ್ದರೆ ಎರಡನೆಯದು ಛಾವಣಿಯ ಹಂತದಲ್ಲಿದೆ. ಇವುಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸುತ್ತವೆ. ದೇವಾಲಯದ ಪೂರ್ವದಲ್ಲಿ ಸುಮಾರು ಹನ್ನೆರಡು ಅಡಿ ಎತ್ತರದ ದೀಪಸ್ತಂಭವಿದೆ.

ಪಶ್ಚಿಮದ ಪ್ರಧಾನ ಗರ್ಭಗೃಹದಲ್ಲಿ ಮಲ್ಲಿಕಾರ್ಜುನ ಶಿವಲಿಂಗವಿದೆ. ದಕ್ಷಿಣ ಮತ್ತು ಉತ್ತರ ಗರ್ಭಗೃಹಗಳಲ್ಲಿ ಮೂಲದಲ್ಲಿದ್ದ ವಿಗ್ರಹಗಳು ಈಗಿಲ್ಲ, ಅವುಗಳ ಬದಲು ಈಗ ಅಲ್ಲಿ ಸೂರ್ಯ ಹಾಗೂ ನಾಗನಾಗಿನಿಯರ ಶಿಲ್ಪಗಳನ್ನು ಇಟ್ಟಿದ್ದಾರೆ. ಗರ್ಭಗೃಹದ ದ್ವಾರಬಂಧವು ನಾಜೂಕಾದ ವೈವಿಧ್ಯಮಯ ವಿನ್ಯಾಸಗಳ ಶಿಲ್ಪಗಳನ್ನು ಒಳಗೊಂಡಿದೆ. ದೇವಾಲಯದ ಒಳಭಾಗದ ಮುಖ್ಯ ಆಕರ್ಷಣೆ ಎಂದರೆ ಚರಕಿಯಂತ್ರದಿಂದ ತಯಾರಾದ ಬಳಪದಕಲ್ಲಿನ ಕಂಬಗಳು. ದಿಂಡುಳ್ಳ ಚೌಕ ಪೀಠ, ವರ್ತುಲಕಾಂಡ ಮತ್ತು ಬೋದಿಗೆಗಳಿಂದ ಕೂಡಿದ ಕಂಬಗಳು, ಚೆನ್ನಾಗಿ ಕಡೆಯಲಾಗಿದ್ದು ವಿಶೇಷ ಹೊಳಪುಳ್ಳವುಗಳಾಗಿವೆ. ಕಾಂಡಗಳಲ್ಲಿ ವರ್ತುಲಾಕಾರದ, ಹೊರಬಾಗುಳ್ಳ ಮತ್ತು ಒಳಬಾಗುಳ್ಳ ವಿನ್ಯಾಸಗಳನ್ನು ಕಡೆಯಲಾಗಿರುವುದರಿಂದ ಇಡೀ ಕಂಬವು ಅಲಂಕಾರಯುತವಾಗಿ ತೋರಿಬರುತ್ತದೆ. ಇದು ಇಲ್ಲಿನ ವಿಶೇಷವೆಂದೇ ಹೇಳಬೇಕು. ಛಾವಣಿಯಲ್ಲಿ ಅನೇಕ ಸುಂದರ ಭುವನೇಶ್ವರಿಗಳಿದ್ದು, ಅವುಗಳ ವೈವಿಧ್ಯತೆಯು ನೋಡುಗರನ್ನು ಬೆರಗುಗೊಳಿಸುತ್ತವೆ. ನವರಂಗದಲ್ಲಿ ಅನೇಕ ಗೂಡುಗಳಿದ್ದು ಅವುಗಳಲ್ಲಿ ನಾಜೂಕು ಕೆತ್ತನೆಯ ಮಹಿಷಾಸುರ ಮರ್ದಿನಿ, ಗಣೇಶ ಮತ್ತು ಸರಸ್ವತಿ ಹಾಗೂ ಸಪ್ತಮಾತೃಕೆಯರ ಶಿಲ್ಪಗಳಿವೆ . ಮುಖಮಂಡಪವು ನಂದಿಮಂಡಪಕ್ಕೆ ಸೇರಿಕೊಂಡಂತಿವೆ. ಇದರಲ್ಲಿ ಸರಪಳಿ ಚಿಕ್ಕ ಗಂಟೆಗಳ ಸಾಲು, ಪದಕಗಳು ಮುಂತಾದವುಗಳಿಂದ ಅಲಂಕಾರಗೊಂಡ ನಂದಿ ಇದೆ. ಈ ರೀತಿಯ ನಂದಿ ವಿಗ್ರಹಗಳು ಹೊಯ್ಸಳ ಶಿಲ್ಪದಲ್ಲಿ ವಿರಳ. ಈ ಮಂಡಪದಲ್ಲಿ ಕಕ್ಷಾಸನಗಳಿವೆ. ಈ ಎಲ್ಲ ಲಕ್ಷಣಗಳಿಂದ ಇದೊಂದು, ಮಂಡ್ಯ ಜಿಲ್ಲೆಯಲ್ಲಿರುವ, ಸುಂದರ ಹೊಯ್ಸಳ ದೇವಾಲಯವೆನಿಸಿದೆ.

ಕೇಶವ ದೇವಾಲಯ, ಸೋಮನಾಥಪುರ

ಮೈಸೂರಿಗೆ ಸುಮಾರು ನಲವತ್ತು ಕಿಲೋಮೀಟರ್ ದೂರದ ಸೋಮನಾಥಪುರದಲ್ಲಿರುವ ದೇವಾಲಯ ಅತ್ಯಂತ ಸುಂದರ ಹೊಯ್ಸಳ ದೇವಾಲಯಗಳಲ್ಲೊಂದು ಎಂದು ಪರಿಗಣಿಸಲಾಗಿದೆ. ಹೊಯ್ಸಳ ದೊರೆ ಮುಮ್ಮಡಿ ನರಸಿಂಹನ ಕಾಲದಲ್ಲಿ, ಮಂತ್ರಿಯಾಗಿದ್ದ ಸೋಮನಾಥ ದಂಡನಾಯಕನು ಸ್ಥಾಪಿಸಿದ ಪ್ರಾಚೀನ ಅಗ್ರಹಾರ ಇದಾಗಿತ್ತು. ಇಲ್ಲಿನ ಕೇಶವ ದೇವಾಲಯವನ್ನು ಮಂತ್ರಿಯಾಗಿದ್ದ ಸೋಮನಾಥನು ಕ್ರಿ.ಶ. 1250 ರಲ್ಲಿ ನಿರ್ಮಿಸಿದನು.

ಇದೊಂದು ತ್ರಿಕೂಟಾಚಲ. ಇದರಲ್ಲಿ ಮೂರು ಗರ್ಭಗೃಹಗಳಿದ್ದು, ಅದೃಷ್ಟವಶಾತ್ ಇದರ ಮೂರು ಶಿಖರಗಳೂ ಚೆನ್ನಾಗಿ ಉಳಿದುಬಂದಿದ್ದು, ಈ ದೇವಾಲಯದ ಅಂದವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಆನೆಗಳು, ದೇವಾಲಯದ ಭಾರಹೊತ್ತಿರುವಂತೆ ವಿನ್ಯಾಸ ಗೊಳಿಸಿರುವ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಜಗತಿ, ಗೋಡೆಗಳು ಮತ್ತು ಶಿಖರಗಳು, ಎಲ್ಲವೂ ನಕ್ಷತ್ರಾಕಾರದಲ್ಲಿವೆ. ಅಡ್ಡ ಪಟ್ಟಿಕೆಗಳಲ್ಲಿ, ಕೆಳಗಿನಿಂದ ಮೇಲಕ್ಕೆ, ಆನೆಗಳು, ಕುದುರೆಗಳು, ಲತಾಲಂಕಾರ, ರಾಮಾಯಣ, ಮಹಾಭಾರತ, ಭಾಗವತಗಳ ಕಥೆಗಳು, ಮಕರಗಳು ಮತ್ತು ಕೊನೆಯದಾಗಿ ಹಂಸಗಳ ಸಾಲುಗಳಿವೆ. ಈ ಪಟ್ಟಿಕೆಗಳ ಮೇಲೆ ನಾಜೂಕಾಗಿ ಕೆತ್ತಿರುವ ವಿತಾನಗಳ ಕೆಳಗಿರುವ 194 ವಿವಿಧ ಭಂಗಿಯಲ್ಲಿರುವ ದೇವದೇವಿಯರ ಶಿಲ್ಪಗಳಿವೆ. ಇವುಗಳ ಮೇಲೆ ಹದಿನಾರು ಕೋನಗಳ ವಿನ್ಯಾಸದ ನಕ್ಷತ್ರಾಕಾರದ ನಾಲ್ಕು ತಲಗಳ ಶಿಖರಗಳಿವೆ. ಅವುಗಳ ಮೇಲೆ ಕಲಶಗಳಿವೆ. ಪ್ರಧಾನ ಶಿಖರವು ಪಶ್ಚಿಮದಲ್ಲಿದ್ದು ಮಿಕ್ಕ ಎರಡು ಉತ್ತರ ಮತ್ತು ದಕ್ಷಿಣಗಳಲ್ಲಿವೆ.

ದೇವಾಲಯದ ಒಳಭಾಗವೂ ತುಂಬ ಅಂದವಾಗಿದೆ. ಸುಕನಾಸಿಯನ್ನು ಹೊಂದಿರುವ ಮೂರು ಗರ್ಭಗೃಹಗಳು ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿವೆ. ಇವುಗಳಿಗೆ ಸೇರಿದಂತೆ ಒಂದು ನವರಂಗವಿದೆ. ಗರ್ಭಗೃಹ ಮತ್ತು ಸುಕನಾಸಿಯ ದ್ವಾರಬಂಧಗಳು ನಾಜೂಕಾದ ಕೆತ್ತನೆಗಳಿಂದ ಕೂಡಿವೆ. ನವರಂಗದಲ್ಲಿ ಚರಕಿಯಂತ್ರದಿಂದ ತಯಾರಿಸಿದ ವಿವಿಧ ವಿನ್ಯಾಸಗಳ ಸುಂದರವಾದ ಕಂಬಗಳಿವೆ. ಈ ದೇವಾಲಯವು ಸುಂದರವಾದ ಭುವನೇಶ್ವರಿಗೂ ಪ್ರಸಿದ್ಧವಾಗಿದೆ. ಚಿಪ್ಪೆಗಳು, ವೃತ್ತ ವಿನ್ಯಾಸ, ಶ್ರೀಚಕ್ರ, ಕಮಲದ ಮೊಗ್ಗು ಇರುವ ಹಾಗೂ ಅವು ಇಲ್ಲದಿರುವ ಮರದ ಜಂತಿಯ ಚಿಪ್ಪೆಗಳು, ಮುಂತಾದವು ಗಮನಾರ್ಹವಾದವು. ಗರ್ಭಗೃಹಗಳಲ್ಲಿ (ಪಶ್ಚಿಮ) ಕೇಶವ, ಜನಾರ್ದನ (ಉತ್ತರ) ಮತ್ತು ವೇಣುಗೋಪಾಲ (ದಕ್ಷಿಣ) ವಿಗ್ರಹಗಳಿದ್ದವು. ಆದರೆ ಈಗ ಕೇಶವ ವಿಗ್ರಹವಿಲ್ಲ. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಕಕ್ಷಾಸನಗಳು ಮತ್ತು ಜಾಲಂಧ್ರಗಳಿವೆ. ದೇವಾಲಯದ ಸುತ್ತಲೂ ಸಣ್ಣ ಗುಡಿಗಳಿರುವ ಪ್ರಾಕಾರವಿದೆ. ಈ ಗುಡಿಗಳಲ್ಲಿ ಅರವತ್ತ ನಾಲ್ಕು ವಿವಿಧ ವಿಗ್ರಹಗಳಿವೆ. ಪ್ರಾಕಾರವನ್ನು ಪ್ರವೇಶಿಸಲು ಒಂದು ಸಣ್ಣ ಮಂಡಪವಿದೆ. ಇದರ ಮೇಲೆ ಶಿಖರವಿಲ್ಲ.

ಉತ್ತಮ ಶಿಲ್ಪಗಳಿರುವ ಸೋಮನಾಥಪುರದ ಕೇಶವ ದೇವಾಲಯ ಹೊಯ್ಸಳ ಕಲೆಯ ಉತ್ತಮ ಉದಾಹರಣೆಯೆಂದು ಪರಿಗಣಿತವಾಗಿದೆ. ಇದನ್ನು ನೋಡಲು ನೂರಾರು ಯಾತ್ರಿಕರು ಪ್ರತಿದಿನವೂ ಬರುತ್ತಾರೆ. ಮಲ್ಲಿತಮ್ಮ, ಮಸಣಿತಮ್ಮ, ಮಾರಣ, ಚೌಡಯ್ಯ, ಬಾಲಯ್ಯ, ಲೋಹಿತ, ಎಳೆಮಸಯ್ಯ ಮುಂತಾದವರು ಈ ದೇವಾಲಯದ ಶಿಲ್ಪಿಗಳು.

## ಲಕ್ಷ್ಮೀನರಸಿಂಹ ದೇವಾಲಯ, ಜಾವಗಲ್

ಅರಸಿಕೆರೆಯ ಸಮೀಪದಲ್ಲಿರುವ ಜಾವಗಲ್‌ನಲ್ಲಿ ಅನೇಕ ಹೊಯ್ಸಳ ದೇವಾಲಯಗಳಿದ್ದು ಅವುಗಳಲ್ಲಿ ಲಕ್ಷ್ಮೀನರಸಿಂಹ ದೇವಾಲಯ ತುಂಬ ಸುಂದರವಾಗಿದೆ. ವಾಸ್ತವವಾಗಿ ಇದು ಸಣ್ಣ ಪ್ರಮಾಣದ ಸುಂದರ ದೇವಾಲಯಕ್ಕೆ ಉತ್ತಮ ಉದಾಹರಣೆ. ವಾಸ್ತುಶಿಲ್ಪ ಶೈಲಿಯ ಆಧಾರದ ಮೇಲೆ, ಹಾಗೂ ಸೋಮನಾಥಪುರ, ಹಾರನಹಳ್ಳಿ ಮತ್ತು ನುಗ್ಗೆಹಳ್ಳಿಯ ದೇವಾಲಯಗಳನ್ನು ನಿರ್ಮಿಸಿದ ಮಲ್ಲಿತಮ್ಮನು ಈ ದೇವಾಲಯದಲ್ಲಿಯೂ ಶಿಲ್ಪಗಳನ್ನು ಕಡೆದಿರುವುದರಿಂದ, ಜಾವಗಲ್ಲಿನ ಈ ದೇವಾಲಯದ ರಚನೆ ಸುಮಾರು ಕ್ರಿ.ಶ. 1250ರಲ್ಲಿ ಆಗಿರಬೇಕೆಂದು ಭಾವಿಸಲಾಗಿದೆ.

ಇದೊಂದು ತ್ರಿಕೂಟಾಚಲ. ಆದರೆ ಪಶ್ಚಿಮಭಾಗದ ಒಂದು ಶಿಖರ ಮಾತ್ರ, ಉಳಿದು ಬಂದಿದೆ. ಲಕ್ಷ್ಮೀ ದೇವಾಲಯ, ಮುಖಮಂಡಪ ಮತ್ತು ಗೋಪುರಗಳನ್ನು ಆನಂತರ ಸೇರಿಸಲಾಯಿತು. ಇಡೀ ದೇವಾಲಯವನ್ನು ಜಗತಿಯ ಮೇಲೆ ನಿರ್ಮಿಸಲಾಗಿದ್ದು, ಬಳಪದಕಲ್ಲಿನಿಂದ ಕಟ್ಟಲಾಗಿದೆ. ಜಗತಿಯು ನಕ್ಷತ್ರಾಕಾರದಲ್ಲಿದ್ದು ದಿಂಡುಗಳಿಂದ ಕೂಡಿದೆ. ರೂಢಿಯಂತೆ ಇದರಲ್ಲಿ ಆರು ಅಡ್ಡ ಪಟ್ಟಿಕೆಗಳಿವೆ. ಒಂದು ಪಟ್ಟಿಕೆಯಲ್ಲಿ ರಾಮಾಯಣ ಮತ್ತು ಭಾಗವತಗಳ ಕಥೆಯು ಶಿಲ್ಪಿತವಾಗಿದೆ. ರಾಮಾಯಣ ಕಥೆಯು ಬಹಳ ವಿಶದವಾಗಿ ಕೆತ್ತಲ್ಪಟ್ಟಿದೆ. ಇಂತಹ ಒಂದು ಶಿಲ್ಪಫಲಕದಲ್ಲಿ ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಿರುವ ಹನುಮಂತನು ದುರ್ಬೀನಿನ ಮೂಲಕ ನೋಡುತ್ತಿರುವಂತೆ ಶಿಲ್ಪಿಸಲಾಗಿದೆ. ಇದೊಂದು ವಿರಳ ಶಿಲ್ಪ. ಈ ಪಟ್ಟಿಕೆಗಳ ಮೇಲ್ಭಾಗದಲ್ಲಿ, ನಾಜೂಕಾಗಿ ಕೆತ್ತಿರುವ ವಿತಾನಗಳ ಕೆಳಗಿರುವ ನೂರಾರು ದೇವದೇವಿಯರ ಸುಂದರ ವಿಗ್ರಹಗಳಿವೆ. ಇವುಗಳಲ್ಲಿ ಗಮನಾರ್ಹವಾದವು ಕೇಶವ, ಪರಶುರಾಮ, ಕಾಳಿಂಗಮರ್ದನ, ಹರಿಹರ, ತ್ರಿವಿಕ್ರಮ, ನಾಟ್ಯ ಸರಸ್ವತಿ, ಲಕ್ಷ್ಮೀನಾರಾಯಣ, ಮೋಹಿನಿ, ಮುಂತಾದವುಗಳು. ಈ ಅನೇಕ ವಿಗ್ರಹಗಳ ಕೆಳಗೆ ಪ್ರಖ್ಯಾತ ಶಿಲ್ಪಿ ಮಲ್ಲಿತಮ್ಮನ ಹೆಸರನ್ನು ನೋಡಬಹುದು. ಈ ದೇವಾಲಯದ ಇತರ ಶಿಲ್ಪಿಗಳೆಂದರೆ ಸಣ್ಣ ಮಾದ, ಮಲ್ಲಯ್ಯ ಮತ್ತು ಚಿಕ್ಕ ಮಲ್ಲಿತಮ್ಮ. ಈ ಶಿಲ್ಪಿಗಳು ವೈವಿಧ್ಯಮಯವಾದ ನೂರಾರು ಶಿಲ್ಪಗಳನ್ನು ಕಡೆದಿದ್ದಾರೆ. ಈ ಸುಂದರ ಶಿಲ್ಪಗಳಿಂದ ಇಡೀ ದೇವಾಲಯವು ಅನೇಕ ಇತರ ಹೊಯ್ಸಳ ದೇವಾಲಯಗಳಿಗಿಂತ ಭಿನ್ನವೆನಿಸುತ್ತದೆ. ಇದೇ ಇದರ ವೈಶಿಷ್ಟ್ಯ.

ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಸುಕನಾಸಿ ಮತ್ತು ಒಂದು ನವರಂಗವಿದೆ. ನವರಂಗದಲ್ಲಿ ನಾಲ್ಕು ಸುಂದರ ಕಂಬಗಳಿವೆ. ಇವು ಘಂಟಾಕೃತಿಯಲ್ಲಿದ್ದು 16 ಮತ್ತು 32 ಕೋನದ ನಕ್ಷತ್ರಗಳನ್ನು ಹೊಂದಿದೆ. ದ್ವಾರಬಂಧಗಳು, ಸ್ತಂಭಗಳು ಮತ್ತು ಭುವನೇಶ್ವರಿಗಳು ಹೊಯ್ಸಳ ಶೈಲಿಯಲ್ಲಿವೆ. ಅಷ್ಟದಿಕ್ಪಾಲಕರು ಮತ್ತು ಕಮಲಪುಷ್ಪ ವಿನ್ಯಾಸ ಹೊಂದಿರುವ ಭುವನೇಶ್ವರಿಯು ತುಂಬ ಅಂದವಾಗಿದೆ. ಉತ್ತರ, ಪಶ್ಚಿಮ ಮತ್ತು ದಕ್ಷಿಣ ಗರ್ಭಗೃಹಗಳಲ್ಲಿ ಕ್ರಮವಾಗಿ ಲಕ್ಷ್ಮೀನರಸಿಂಹ, ಶ್ರೀಧರ ಮತ್ತು ವೇಣುಗೋಪಾಲರ ಸುಂದರ ಶಿಲ್ಪಗಳಿವೆ. ಶ್ರೀಧರನು ಗರುಡ ಪೀಠದ ಮೇಲೆ ನಿಂತಿದ್ದು, ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಹಿಡಿದಿದ್ದಾನೆ. ಹೀಗೆ ಮುಖ್ಯ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವಿಲ್ಲದೇ ಇದ್ದರೂ, ಇದು ಅದೇ ಹೆಸರಿನಿಂದ ಕರೆಯಲ್ಪಟ್ಟಿದೆ. ಸುಮಾರು ಕ್ರಿ.ಶ. 1515ರಲ್ಲಿ ವಿಜಯನಗರ ಕಾಲದಲ್ಲಿ ಒಂದು ಮಹಾದ್ವಾರ ಮತ್ತು ಗೋಪುರವನ್ನು ಈ ದೇವಾಲಯಕ್ಕೆ ಸೇರಿಸಲಾಯಿತು. ದಕ್ಷಿಣದಲ್ಲಿ ವಿಜಯನಗರ ಕಾಲದ ಲಕ್ಷ್ಮೀ ಗುಡಿಯಿದೆ. ಹೀಗೆ ಲಕ್ಷ್ಮೀನರಸಿಂಹ ದೇವಾಲಯವು ಜಾವಗಲ್ಲಿನ ಸುಂದರ ದೇವಾಲಯ.

## ಲಕ್ಷ್ಮೀನಾರಾಯಣ ದೇವಾಲಯ, ಹೊಸಹೊಳಲು

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಗೆ ಸೇರಿದ ಹೊಸಹೊಳಲು ಗ್ರಾಮದಲ್ಲಿ ಹೊಯ್ಸಳ ಕಾಲದ ಲಕ್ಷ್ಮೀನಾರಾಯಣ ದೇವಾಲಯವಿದೆ. ಇದೊಂದು ಹೊಯ್ಸಳ ಶೈಲಿಯ ದೇವಾಲಯ. ಇದು ನಕ್ಷತ್ರಾಕಾರದ ಜಗತಿಯ ಮೇಲಿದ್ದು, ದೇವಾಲಯವೂ ಇದೇ ಮಾದರಿಯಲ್ಲೇ ರಚಿತವಾಗಿದೆ. ಜಗತಿಗೆ ಆಸರೆಯಾಗಿರುವ ಐದು ಆನೆಯ ಶಿಲ್ಪಗಳು ಮಾತ್ರ ಈಗ ಕಾಣುತ್ತವೆ. ಕೆಳಗಿನಿಂದ ಮೇಲಕ್ಕೆ, ಗೋಡೆಯ ಕೆಳಭಾಗವು ಅನೇಕ ಪಟ್ಟಿಕೆಗಳಾಗಿ ವಿಭಾಗಿತವಾಗಿದ್ದು, ಅವುಗಳಲ್ಲಿ ಆನೆಗಳು, ಯಕ್ಷರು, ಕುದುರೆಗಳು, ಲತೆಗಳು, ರಾಮಾಯಣ, ಮಹಾಭಾರತ ಮತ್ತು ಭಾಗವತದ ಕಥೆಗಳು ಶಿಲ್ಪಿತವಾಗಿವೆ. ಈ ಪಟ್ಟಿಕೆಗಳ ಮೇಲ್ಭಾಗದಲ್ಲಿ ಪ್ರತ್ಯೇಕವಾಗಿರುವ ಅನೇಕ ದೇವದೇವಿಯರ ಶಿಲ್ಪಗಳಿವೆ. ವಾಸ್ತವವಾಗಿ ಶೈವ ಮತ್ತು ವೈಷ್ಣವ ಪಂಥದ, ಕುಳಿತಿರುವ, ನಿಂತಿರುವ, ನೃತ್ಯ ಮಾಡುತ್ತಿರುವ ಹಾಗೂ ನಾಜೂಕಾದ ಕೆತ್ತನೆಯುಳ್ಳ ವಿತಾನಗಳ ಕೆಳಗಿರುವ ಅನೇಕ ದೇವದೇವಿಯರ ಶಿಲ್ಪಗಳು ಈ ದೇವಾಲಯದ ಮುಖ್ಯ ಆಕರ್ಷಣೆ. ಅವುಗಳಲ್ಲಿ ಗಮನಾರ್ಹವಾದವು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ನರಸಿಂಹ, ಅಮೃತಮಂಥನ, ಗರುಡ, ವಿಶ್ವರೂಪ ವಿಷ್ಣು, ಗಜಾಸುರಮರ್ದನ, ರಾಕ್ಷಸರನ್ನು ಸೋಲಿಸುತ್ತಿರುವ ಶಿವಗಣಗಳು, ಕಾರ್ತಿಕೇಯ ಮುಂತಾದವು. ಇದರಲ್ಲಿ ರಾಮಾಯಣ ಕಥೆಯು ವಿಶದವಾಗಿದ್ದು ಪುತ್ರಕಾಮೇಷ್ಟಿಯಾಗದಿಂದ ಆರಂಭವಾಗಿ ರಾಮನ ಪಟ್ಟಾಭಿಷೇಕದವರೆಗೆ ಶಿಲ್ಪಿತವಾಗಿದೆ. ಇದೇ ರೀತಿಯಲ್ಲಿ ಮಹಾಭಾರತ ಹಾಗೂ ಭಾಗವತದ ಕಥೆಗಳನ್ನು ಬಹಳ ವಿವರವಾಗಿ ಹಾಗೂ ನಾಜೂಕಾಗಿ ಕೆತ್ತಲಾಗಿದೆ.

ಈ ದೇವಾಲಯವು ತ್ರಿಕೂಟಾಚಲವಾಗಿದ್ದು, ಇದರಲ್ಲಿ ಮೂರು ಗರ್ಭಗೃಹಗಳಿವೆ. ಪ್ರಧಾನ ಪಶ್ಚಿಮ ಗರ್ಭಗುಡಿಯಲ್ಲಿ ನಾಲ್ಕೂವರೆ ಅಡಿ ಎತ್ತರದ ಶಂಖ, ಚಕ್ರ, ಗದಾ, ಪದ್ಮಗಳನ್ನು ಹಿಡಿದು ಗರುಡ ಪೀಠದ ಮೇಲೆ ನಿಂತಿರುವ ನಾರಾಯಣನ ವಿಗ್ರಹವಿದೆ. ಉತ್ತರದ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವಿದೆ. ದಕ್ಷಿಣದ ಗರ್ಭಗುಡಿಯಲ್ಲಿ ಮೂಲದಲ್ಲಿ ವೇಣುಗೋಪಾಲನ ವಿಗ್ರಹವಿತ್ತು. ಈಗ ಅದು ಇಲ್ಲ. ಈ ವಿಗ್ರಹವನ್ನು ಕನ್ನಂಬಾಡಿ (ಕೃಷ್ಣರಾಜಸಾಗರ)ಯ ದೇವಾಲಯಕ್ಕೆ ಕೊಂಡೊಯ್ಯಲಾಯಿತೆಂದು ಪ್ರತೀತಿ. ದೇವಾಲಯದ ಒಳಭಾಗದಲ್ಲಿ ಹೊಯ್ಸಳ ಶೈಲಿಯ ಬಳಪದಕಲ್ಲಿನ ಕಂಬಗಳಿವೆ. ಮೂರೂ ಗರ್ಭಗೃಹಗಳಿಂದ ಅದರ ಮುಂದಿನ ನವರಂಗವನ್ನು ಪ್ರವೇಶಿಸಬಹುದು. ಇದರಲ್ಲಿ ಸುಂದರವಾದ ಭುವನೇಶ್ವರಿಗಳಿವೆ. ಕೃಷ್ಣನು ಕಾಳಿಂಗ ಸರ್ಪವನ್ನು ತುಳಿಯುತ್ತಿರುವ ಶಿಲ್ಪ ಬಲು ಚೆಲುವಾಗಿದೆ. ಪಶ್ಚಿಮ ಗರ್ಭಗುಡಿಯ ಮೇಲೆ ಮಾತ್ರ ಶಿಖರವಿದೆ. ಇದು ಐದು ತಲಗಳಿಂದ ಕೂಡಿದ್ದು ಇದರ ಮೇಲೆ ಕಮಲಪುಷ್ಪಾಕಾರದ ಸ್ತೂಪಿಯಿದೆ.

ಈ ದೇವಾಲಯದ ನಿರ್ಮಾಣದ ಕಾಲವನ್ನು ತಿಳಿಸುವ ಯಾವ ಶಾಸನವೂ ದೊರಕಿಲ್ಲ. ಆದರೆ ಈ ದೇವಾಲಯವು ಸೋಮನಾಥಪುರದ ಕೇಶವ ದೇವಾಲಯ, ನುಗ್ಗೆಹಳ್ಳಿ ಮತ್ತು ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯಗಳನ್ನು ವಿಶೇಷವಾಗಿ ಹೋಲುತ್ತದೆ. ವಾಸ್ತುಶಿಲ್ಪದ ಶೈಲಿಯನ್ನು ಆಧರಿಸಿ, ಹೊಸಹೊಳಲಿನ ಈ ದೇವಾಲಯ ಕ್ರಿ.ಶ. ಹದಿಮೂರನೆಯ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಿತವಾಗಿರಬೇಕೆಂದು ಭಾವಿಸಲಾಗಿದೆ. ಇತ್ತೀಚೆಗೆ ಕಗ್ಗಲ್ಲಿನ ಒಂದು ಮಂಡಪವನ್ನು ಈ ದೇವಾಲಯಕ್ಕೆ ಸೇರಿಸಲಾಗಿದೆ. ಹೊಸಹೊಳಲುವಿನಲ್ಲಿ ಒಂದು ಜೈನಬಸದಿಯೂ ಮತ್ತು ಹರಿಹರೇಶ್ವರ ದೇವಾಲಯವೂ ಇವೆ.

ಲಕ್ಷ್ಮೀನರಸಿಂಹ ದೇವಾಲಯ, ಹೊಳೆನರಸಿಪುರ

ಹಾಸನ ಜಿಲ್ಲೆಗೆ ಸೇರಿದ ಹೊಳೆನರಸಿಪುರದ ಪ್ರಾಚೀನತೆ ಗಂಗರ ಕಾಲದವರೆಗೆ ಹೋಗುತ್ತದೆ. ಇದು ಹೇಮಾವತಿ ನದಿಗೆ ಸಮೀಪದಲ್ಲಿದ್ದು ಶ್ರೀರಾಮದೇವರ ಕಟ್ಟೆ ಎನ್ನುವ ಅಣೆಕಟ್ಟು ಇದೆ. ಇತ್ತೀಚಿನ ವರ್ಷಗಳಲ್ಲಿ ಹೊಳೆನರಸಿಪುರ ಎಲ್ಲ ವಿಧಗಳಲ್ಲಿಯೂ ವಿಕಾಸದ ಹಂತವನ್ನು ತೋರುತ್ತಿದೆ.

ಹೊಳೆನರಸಿಪುರ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಪ್ರಖ್ಯಾತವಾಗಿದೆ. ಲಕ್ಷ್ಮೀನರಸಿಂಹ ಸುತ್ತಮುತ್ತಲಿನ ಬಹಳ ಜನಗಳ ಮನೆದೇವರಾಗಿರುವುದರಿಂದ, ಸಾಕಷ್ಟು ಸಂಖ್ಯೆಯಲ್ಲಿ ಜನಗಳು ಈ ದೇವಾಲಯಕ್ಕೆ ಬರುತ್ತಾರೆ. ಈ ದೇವಾಲಯದ ನಿರ್ಮಾಣ ಕಾರ್ಯ ವಿವಿಧ ಕಾಲಗಳಲ್ಲಿ ಆಯಿತು. ಈ ದೇವಾಲಯದ ಮೂಲ ಹಾಗೂ ಪ್ರಾಯಶಃ ಅತ್ಯಂತ ಪ್ರಾಚೀನ ಭಾಗ ಹೊಯ್ಸಳರ ಕಾಲದ್ದು. ಇದು ತ್ರಿಕೂಟಾಚಲವಾಗಿದ್ದು ಇದರಲ್ಲಿ ಮೂರು ಗರ್ಭಗೃಹಗಳು, ಸುಕನಾಸಿಯ ಭಾಗ ಮತ್ತು ಒಂದು ನವರಂಗವಿದೆ. ಬಳಪದಕಲ್ಲನ್ನು ಉಪಯೋಗಿಸದೆ ಇದನ್ನು ಕಗ್ಗಲ್ಲಿನಿಂದ ನಿರ್ಮಿಸಲಾಗಿರುವುದು ಈ ದೇವಾಲಯದ ವೈಶಿಷ್ಟ್ಯ. ಆದುದರಿಂದ ಇದು ಹೊಯ್ಸಳ ಆಳ್ವಿಕೆಯ ಕೊನೆಯ ಭಾಗದಲ್ಲಿ, ಅಂದರೆ ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಕಟ್ಟಿರಬಹುದಾದ ದೇವಾಲಯವೆಂದು ಭಾವಿಸಲಾಗಿದೆ.

ಇಲ್ಲಿನ ಮೂರು ಗರ್ಭಗೃಹಗಳು ಪಶ್ಚಿಮ (ಪ್ರಧಾನ), ಉತ್ತರ ಮತ್ತು ದಕ್ಷಿಣಗಳಲ್ಲಿವೆ. ಇವುಗಳಿಂದ ಸುಕನಾಸಿಯ ಜಾಗದ ಮೂಲಕ ನವರಂಗಕ್ಕೆ ಪ್ರವೇಶವಿದೆ. ಪಶ್ಚಿಮದ ಅಥವಾ ಪ್ರಧಾನವಾದ ಗರ್ಭಗೃಹದಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಹಿಡಿದುಕೊಂಡಿರುವ ನಾರಾಯಣನ ವಿಗ್ರಹವಿದೆ. ದಕ್ಷಿಣ ಗರ್ಭಗೃಹದಲ್ಲಿ ಹೊಯ್ಸಳ ಶೈಲಿಯ ಹಾಗೂ ಪ್ರಭಾವಳಿಯಿಂದ ಅಲಂಕೃತವಾದ ವೇಣುಗೋಪಾಲನ ವಿಗ್ರಹವಿದೆ. ಉತ್ತರದ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವಿದೆ. ಈ ದೇವರ ಹೆಸರಿನಿಂದಲೇ ಈ ದೇವಾಲಯ ಪ್ರಸಿದ್ಧಿಯಾಗಿದೆ. ಈ ಮೂರೂ ವಿಗ್ರಹಗಳು ಬಳಪದಕಲ್ಲಿನಿಂದ ತಯಾರಿಸಲ್ಪಟ್ಟ ನಾಜೂಕು ಕೆತ್ತನೆಯ ಶಿಲ್ಪಗಳು. ದ್ವಾರಬಂಧಗಳು ಸಣ್ಣ ಪ್ರಮಾಣದಲ್ಲಿದ್ದು, ಜಾಲಂಧ್ರಗಳಿವೆ. ನವರಂಗದಲ್ಲಿ ನಾಲ್ಕು ಹೊಯ್ಸಳ ಶೈಲಿಯ ಕಂಬಗಳಿವೆ. ಹೊರಮಂಡಪದಲ್ಲಿ ಘನಾಕೃತಿಯ ಹೊಯ್ಸಳ ಶೈಲಿಯ ಕಂಬಗಳು ಮತ್ತು ಅರೆಗಂಬಗಳಿವೆ. ದ್ವಾರಪಾಲ ಶಿಲ್ಪಗಳು ವಿಜಯನಗರ ಕಾಲದವು. ನವರಂಗದ ಕಂಬಗಳು ಹೊಸ ರೀತಿಯಲ್ಲಿದ್ದು ಪುಷ್ಪಾಲಂಕಾರವು ಅಷ್ಟಕೋನಾಕಾರದ ಕಾಂಡ, ವೃತ್ತಾಕಾರದ ವಿನ್ಯಾಸಗಳನ್ನು ಹೊಂದಿದ ದಿಂಡು ಮತ್ತು ಬೋದಿಗೆಗಳಿವೆ. ಇವು ಗಂಗರ ಕಾಲದ ಕಂಬಗಳ ಅನುಕರಣೆಯಂತೆ ಕಾಣುತ್ತವೆ.

ನವರಂಗದಲ್ಲಿ ಗಣೇಶ, ದುರ್ಗ, ವಿಷ್ವಕ್ಸೇನ ವಿಗ್ರಹಗಳ ಜೊತೆಗೆ ವೆಂಕಟಪ್ಪ ನಾಯಕನ ಶಿಲ್ಪವೂ ಇದೆ. ಇಡೀ ದೇವಾಲಯವನ್ನು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಬಲಭಾಗದ ತುದಿಯಲ್ಲಿ ದೇವಿ (ಆಂಡಾಳ್)ಯ ಗುಡಿಯಿದೆ. ರಾಮಾನುಜ ಮತ್ತು ಸುಬ್ರಹ್ಮಣ್ಯರಿಗಾಗಿ ಪ್ರತ್ಯೇಕ ಗುಡಿಗಳನ್ನು ಕಟ್ಟಲಾಗಿದೆ. ಇವೆಲ್ಲವನ್ನೂ ಒಂದು ಪ್ರಾಕಾರದಲ್ಲಿ ಕಟ್ಟಲಾಗಿದ್ದು ಅದಕ್ಕೆ ಒಂದು ಮಹಾದ್ವಾರ ಮತ್ತು ಗೋಪುರಗಳಿವೆ. ಇವು ವೆಂಕಟಪ್ಪನ ಕಾಲದ ರಚನೆಗಳು. ಇಲ್ಲಿರುವ ಸುಂದರವಾದ ಉತ್ಸವ ಮೂರ್ತಿಗಳು ಗಮನಾರ್ಹವಾದವು. ವಿಶಾಲವಾದ ಪ್ರಾಕಾರ ಮತ್ತು ಗೋಪುರದಿಂದಾಗಿ ಈ ದೇವಾಲಯ ಭವ್ಯವಾಗಿ ಕಾಣಬರುತ್ತದೆ. ಇಲ್ಲಿ ಪ್ರತಿ ವರ್ಷವೂ ನಡೆಯುವ ರಥೋತ್ಸವ ವೈಭವಯುತವಾಗಿದ್ದು, ಸುತ್ತಮುತ್ತಲಿನ ಜನಗಳನ್ನು ಆಕರ್ಷಿಸುತ್ತದೆ.

ಸೋಮೇಶ್ವರ ದೇವಾಲಯ, ಕೋಲಾರ

ಕೋಲಾರದಲ್ಲಿರುವ ಸೋಮೇಶ್ವರ ದೇವಾಲಯ ಸುಂದರ ದ್ರಾವಿಡ ಶೈಲಿಯ ಉತ್ತಮ ವಾಸ್ತುಶಿಲ್ಪ ಕೃತಿ. ದೇವಾಲಯದಲ್ಲಿ ಗರ್ಭಗೃಹ, ಅದರ ಮೇಲಿನ ಇಟ್ಟಿಗೆ ಗಾರೆಗಳ ವಿಮಾನ, ಸುಕನಾಸಿ, ನಾಲ್ಕು ಕಂಬಗಳ ನವರಂಗ ಮತ್ತು ಅರವತ್ತನಾಲ್ಕು ಕಂಬಗಳ ವಿಶಾಲ ಮುಖಮಂಡಪ ಮತ್ತು ಕಲ್ಯಾಣ ಮಂಡಪಗಳಿವೆ. ಪ್ರಾಕಾರದ ಒಳಗೆ ಅನೇಕ ಸಣ್ಣ ಗುಡಿಗಳಿವೆ ಹಾಗೂ ಮಹಾದ್ವಾರವಿದೆ. ಈ ದೇವಾಲಯದ ಕಾಲವನ್ನು ತಿಳಿಯುವ ಶಾಸನಗಳು ದೊರಕಿಲ್ಲವಾದುದರಿಂದ ಶೈಲಿಯ ಆಧಾರದ ಮೇಲೆ ಈ ದೇವಾಲಯವನ್ನು ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ನಿರ್ಮಿಸಲಾಯಿತೆಂದು ಹೇಳಬಹುದು. ಎರಡು ಮಂಡಪಗಳನ್ನು ವಿಜಯನಗರ ಕಾಲದಲ್ಲಿ, ಹದಿನೈದನೆಯ ಶತಮಾನದಲ್ಲಿ ಸೇರಿಸಲಾಯಿತು.

ಮಂಡಪದ ಜಗತಿಯಲ್ಲಿ ಮುಂಚಾಚಿದ ದಿಂಡುಗಳಿದ್ದು, ಅವುಗಳ ಮೇಲೆ ಆನೆಗಳು, ಸಿಂಹಗಳು ಮತ್ತು ಹಂಸಗಳನ್ನು ಕೆತ್ತಲಾಗಿದೆ. ಗೋಡೆಗಳ ಮೇಲೆ ಅರೆಗಂಬಗಳ ಸಾಲು, ವಿತಾನವನ್ನು ಹೊಂದಿದ ಸೂಕ್ಷ್ಮ ಶಿಖರಗಳು, ಇವುಗಳ ಮೇಲೆ ಅಲಂಕೃತ ಮುಂಜೂರು ಅದರ ಮೇಲೆ ಇಟ್ಟಿಗೆಯ ಶಿಖರ ಮತ್ತು ಕಳಶಗಳಿವೆ. ಗರ್ಭಗೃಹದಲ್ಲಿ ಸೋಮೇಶ್ವರ ಲಿಂಗವಿದೆ. ಸುಕನಾಸಿಯ ಲಲಾಟದಲ್ಲಿ ಲಿಂಗ ಮತ್ತು ನಂದಿಗಳಿವೆ; ಜೊತೆಗೆ ಜಾಲಂಧ್ರಗಳೂ ಇವೆ. ನವರಂಗದ ಮಧ್ಯದಲ್ಲಿ ಹದಿನಾರು ಕೋನಗಳ ಕಾಂಡ ಮತ್ತು ಘನಾಕೃತಿಯ ದಿಂಡುಗಳಿರುವ ಕಂಬಗಳಿವೆ. ಕಂಬಗಳ ಮೇಲೆ ವೀರಭದ್ರ, ಮಾರ್ಕಂಡೇಯ, ಕೋದಂಡರಾಮ, ಗಣೇಶ, ಸೂರ್ಯನಾರಾಯಣ ಮುಂತಾದ ಉಬ್ಬು ಶಿಲ್ಪಗಳಿವೆ. ನವರಂಗದ ಮಧ್ಯದ ಭುವನೇಶ್ವರಿಯಲ್ಲಿ ದಿಕ್ಪಾಲರ ಜೊತೆ ಇರುವ ಶಿವಪಾರ್ವತಿಯರ ಶಿಲ್ಪಗಳಿವೆ. ನವರಂಗದ ದ್ವಾರಬಂಧದಲ್ಲಿ ಲತೆಗಳ ಅಲಂಕಾರ, ಹಾಗೂ ಶೈವ ದ್ವಾರಪಾಲರ ಎತ್ತರವಾದ ಭವ್ಯ ಪ್ರಮಾಣದ ಶಿಲ್ಪಗಳಿವೆ. ಲಲಾಟದಲ್ಲಿ ಸುಂದರವಾದ ಗಜಲಕ್ಷ್ಮಿಯ ಶಿಲ್ಪವಿದೆ.

ಮುಖಮಂಡಪವು ವಿಶಾಲವಾಗಿದ್ದು ಅದರಲ್ಲಿ ವೈವಿಧ್ಯಮಯ ವಿನ್ಯಾಸದ ಕಂಬಗಳಿವೆ. ಅವುಗಳ ಮೇಲೆ ಬೋದಿಗೆಗಳಿದ್ದು ಅವುಗಳಿಂದ ನಿಳವಾದ ಮೊಗ್ಗುಗಳು ಇಳಿಬಿದ್ದಿರುವ ರೀತಿಯಲ್ಲಿ ಕೆತ್ತಲ್ಪಟ್ಟಿವೆ. ಮಂಡಪದ ಮಧ್ಯಭಾಗವು ಭವ್ಯವಾಗಿದ್ದು ಅದರಲ್ಲಿ ಅಲಂಕೃತ ನಂದಿಯ ಶಿಲ್ಪವಿದೆ. ಹೊರಗಿನ ಗೋಡೆಯ ಅಗಲವಾದ ಮುಂಜೂರು ದಪ್ಪವಾಗಿದ್ದರೂ ಸಹ ಅಂದವಾಗಿದೆ.

ನೈರುತ್ಯದಲ್ಲಿರುವ ಕಲ್ಯಾಣ ಮಂಡಪವು ವಿಶಾಲವಾಗಿದ್ದು ಕಂಬಗಳಿಂದ ಕೂಡಿದೆ. ಇವು ಸಂಕೀರ್ಣ ರೀತಿಯ ಕಂಬಗಳಾಗಿದ್ದು, ಪ್ರಧಾನ ಕಂಬದ ಸುತ್ತಲೂ ಸಣ್ಣ ತೆಳು ಕಂಬಗಳು ಇದ್ದು ನಿಂತಿರುವ ದೇವ ದೇವಿಯರ ಶಿಲ್ಪಗಳಿವೆ. ಹೊರಮುಖದಲ್ಲಿ ಉಬ್ಬುಶಿಲ್ಪದ ಪುಷ್ಪ ವಿನ್ಯಾಸಗಳು ಮತ್ತು ಗಿಣಿಯ ವಿನ್ಯಾಸವುಳ್ಳ ಬೋದಿಗೆಗಳಿವೆ. ಇಲ್ಲಿರುವ ರಾಮ, ವೇಣುಗೋಪಾಲ, ಯೋಗಾನರಸಿಂಹ, ಭೈರವ, ಗಣಪತಿ ಮುಂತಾದ ಶಿಲ್ಪಗಳು ಸುಂದರವಾಗಿವೆ. ಈ ಎಲ್ಲ ಗುಣಗಳಿಂದ ಸೋಮೇಶ್ವರ ದೇವಾಲಯವು ಕೋಲಾರದಲ್ಲಿ ದ್ರಾವಿಡ ರೀತಿಯ ಒಂದು ಭವ್ಯ ವಾಸ್ತುಕೃತಿಯೆನಿಸಿದೆ.

## ಭೀಮೇಶ್ವರ ದೇವಾಲಯ, ಕೈವಾರ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕೈವಾರವು ಮಹಾಭಾರತದ ಖ್ಯಾತಿಯ ಏಕಚಕ್ರಪುರವೆಂದು ಪ್ರಸಿದ್ಧವಾಗಿದೆ. ಲಾಕ್ಷಾಗೃಹವು ಸುಟ್ಟುಹೋದ ನಂತರ, ಪಾಂಡವರು ಇಲ್ಲಿಗೆ ಬಂದು ಸ್ವಲ್ಪ ಕಾಲ ಇಲ್ಲಿ ನೆಲಸಿದ್ದರೆಂದು ನಂಬಲಾಗಿದೆ. ಇದರ ಸಮೀಪದಲ್ಲೇ ಇರುವ ಬೆಟ್ಟವನ್ನು ಚಿದಂಬರಗಿರಿ ಎಂದು ಕರೆಯಲಾಗುತ್ತದೆ. ಇಲ್ಲಿ ಬಲಶಾಲಿಯಾದ ರಾಕ್ಷಸ ಬಕಾಸುರನು ವಾಸವಾಗಿದ್ದನು. ಭೀಮನು ಇವನನ್ನು ಕೊಂದು, ಅವನ ಶರೀರವನ್ನು ಈ ಬೆಟ್ಟದ ಮೇಲಿನ ಗುಹೆಯೊಂದರಲ್ಲಿ ಬಚ್ಚಿಟ್ಟನು. ಈ ರೀತಿ ಈ ಸ್ಥಳವು ಪುರಾಣದೊಂದಿಗೆ ಸಂಬಂಧವನ್ನು ಹೊಂದಿದೆ.

ಮಹಾಭಾರತದ ವೀರರ ಹೆಸರಿನಲ್ಲಿ ಸ್ಥಾಪಿಸಲಾದ ದೇವಾಲಯಗಳು ಕೈವಾರದಲ್ಲಿವೆ. ಅವುಗಳೇ ಭೀಮೇಶ್ವರ, ನಕುಲೇಶ್ವರ ಮತ್ತು ಸಹದೇವೇಶ್ವರ ದೇವಾಲಯಗಳು. ಕ್ರಿ.ಶ. 1283ರ ಶಾಸನ ಒಂದರಲ್ಲಿ ಈ ದೇವಾಲಯದ ಉಲ್ಲೇಖ ಕಾಣಬರುವುದರಿಂದ, ಈ ದೇವಾಲಯಗಳು ಕ್ರಿ.ಶ. 1280ರ ಸಮಯದಲ್ಲಿ ನಿರ್ಮಾಣಗೊಂಡವೆಂದು ತಿಳಿಯಬಹುದು.

ಭೀಮೇಶ್ವರ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ರಂಗಮಂಡಪ ಮತ್ತು ನಾಲ್ಕು ಕಂಬಗಳ ಮಂಡಪಗಳಿವೆ. ಹೊರಗೋಡೆಗಳ ಮೇಲೆ ಅಲಂಕಾರಗಳಿಲ್ಲ; ತಮಿಳು ಶಾಸನಗಳನ್ನು ಇಲ್ಲಿ ಕೆತ್ತಲಾಗಿದೆ. ಕಂಬಗಳಲ್ಲಿ ಚೌಕಾಕಾರದ ಪೀಠ, ಹದಿನಾರು ಕೋನಗಳ ಕಾಂಡ ಮತ್ತು ಸರಪಳಿಯ ಅಲಂಕಾರಗಳಿವೆ. ಬೋದಿಗೆಗಳಲ್ಲಿ ಕೆಳಕ್ಕೆ ಇಳಿಬಿದ್ದಿರುವ ಮೊಗ್ಗುಗಳ ವಿನ್ಯಾಸಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ದಿಕ್ಪಾಲರು ಮತ್ತು ಉಮಾಮಹೇಶ್ವರ ಶಿಲ್ಪಗಳಿವೆ. ನವರಂಗದ ಕಂಬಗಳು ಹೊಯ್ಸಳ ಶೈಲಿಯ ಅಂತ್ಯ ಅಥವಾ ಆರಂಭದ ವಿಜಯನಗರ ಶೈಲಿಯಲ್ಲಿವೆ. ಇದರಿಂದ ಹೊಯ್ಸಳ ದೇವಾಲಯವನ್ನು ವಿಜಯನಗರ ಕಾಲದಲ್ಲಿ ವಿಶಾಲವಾಗಿ ಮಾಡಲಾಯಿತು ಎಂದು ತಿಳಿದು ಬರುತ್ತದೆ. ಇದು ಕ್ರಿ.ಶ. 1300ರಲ್ಲಿ ನಡೆದಿರಬೇಕು. ಅಧಿಷ್ಠಾನದ ದಿಂಡುಗಳು ಅಲಂಕಾರ ರಹಿತವಾಗಿವೆ. ಮೇಲಿನ ಮುಂಜೂರು ಕೂಡ ಅಲಂಕಾರ ರಹಿತವಾಗಿದೆ. ವಿವಿಧ ಸ್ಥಳಗಳಲ್ಲಿ ಗಾರೆಯಿಂದ ತಯಾರಿಸಿದ ಇತ್ತೀಚಿನ ನಂದಿ ವಿಗ್ರಹಗಳಿವೆ.

ಇದರಲ್ಲಿ ಎರಡು ತಲಗಳ ಶಿಖರವಿದ್ದು, ವಿತಾನಗಳ ಕೆಳಗಿರುವ ಗಾರೆಯ ಶಿಲ್ಪಗಳು ಮತ್ತು ಅಲಂಕಾರಗಳಿಂದ ಕೂಡಿದೆ. ಇದರ ತುದಿಯಲ್ಲಿ ದಂತ ವಿನ್ಯಾಸದ ಸ್ತೂಪಿಯಿದೆ. ಇದರ ಮೇಲೆ ಹೆಡೆಯಿರುವ ಸರ್ಪದ ಆಲಂಕಾರವಿದೆ. ಹೀಗೆ ಶಿಖರವು ಅಂದವಾಗಿ ಕಾಣಬರುತ್ತದೆ.

ಇದರ ಉತ್ತರ ಮತ್ತು ವಾಯವ್ಯಗಳಲ್ಲಿ ಎರಡು ಸಣ್ಣ ಗುಡಿಗಳಿವೆ. ಅವುಗಳನ್ನು ನಕುಲೇಶ್ವರ ಮತ್ತು ಸಹದೇವೇಶ್ವರ ಎಂದು ಕರೆಯಲಾಗಿದೆ. ಇವುಗಳ ಪಕ್ಕದಲ್ಲಿ ಆರಂಭದಲ್ಲಿ ಕಟ್ಟಲಾದ ಧರ್ಮೇಶ್ವರ ಮತ್ತು ಅರ್ಜುನೇಶ್ವರ ದೇವಾಲಯಗಳಿವೆ. ಒಟ್ಟಿನಲ್ಲಿ ಈ ಸಮುಚ್ಚಯದಲ್ಲಿ ಮಹಾಭಾರತದ ವೀರರ ಹೆಸರಿನಲ್ಲಿ ಸ್ಥಾಪಿಸಲಾದ ಲಿಂಗಗಳನ್ನು ಕಾಣುತ್ತೇವೆ. ಕೈವಾರವು ಯೋಗಿ ನಾರೇಯಣ ದೇವಾಲಯಕ್ಕೂ ಪ್ರಸಿದ್ಧಿಯಾಗಿದೆ.

## ವಿದ್ಯಾಶಂಕರ ದೇವಾಲಯ, ಶೃಂಗೇರಿ

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶೃಂಗೇರಿ, ಕರ್ನಾಟಕದಲ್ಲಿ ವಿಶೇಷವಾಗಿ ಪ್ರಸಿದ್ಧವಾದ ಧಾರ್ಮಿಕ ಕೇಂದ್ರ. ಆದಿ ಶಂಕರಾಚಾರ್ಯರು ಇಲ್ಲಿ ದಕ್ಷಿಣ ಭಾರತದ ಅದ್ವೈತ ಮಠವನ್ನು ಸ್ಥಾಪಿಸಿದರು. ಇತರ ಮಠಗಳು ಪುರಿ, ದ್ವಾರಕಾ ಮತ್ತು ಬದರಿಯಲ್ಲಿವೆ. ಆಚಾರ್ಯ ಶಂಕರರಿಂದ ಆರಂಭವಾಗಿ ಮೂವತ್ತನಾಲ್ಕು ಪೀಠಾಧಿಪತಿಗು ಈ ಅದ್ವೈತ ಮಠಕ್ಕೆ ಸೇವೆ ಸಲ್ಲಿಸಿದ್ದಾರೆ. ಶ್ರೀ ವಿದ್ಯಾಶಂಕರರು (ಕ್ರಿ.ಶ. 1228-1333) ಶಾರದಾಪೀಠದ ಹತ್ತನೆಯ ಪೀಠಾಧಿಪತಿಗಳಾಗಿದ್ದರು. ಅವರು ಕ್ರಿ.ಶ. 1333ರಲ್ಲಿ ಮುಕ್ತಿ ಹೊಂದಿದರು. ಸಮಕಾಲೀನ ದೊರೆಯು ಇವರ ಗೌರವಾರ್ಥವಾಗಿ ಕ್ರಿ.ಶ. 1356ರಲ್ಲಿ ಸಮಾಧಿ ದೇವಾಲಯವನ್ನು ನಿರ್ಮಿಸಿದನು. ಸಂಪ್ರದಾಯ ಅಭಿಪ್ರಾಯದ ಪ್ರಕಾರ ಇದನ್ನು ಕ್ರಿ.ಶ. 1338ರಲ್ಲಿ ಸ್ಥಾಪಿಸಲಾಯಿತು.

ಇದೊಂದು ಆಕರ್ಷಕ ದೇವಾಲಯವಾಗಿದ್ದು, ಇದರಲ್ಲಿ ಹೊಯ್ಸಳ ಮತ್ತು ವಿಜಯನಗರ ಲಕ್ಷಣಗಳು ಸುಮಧುರವಾಗಿ ಮಿಳಿತಗೊಂಡಿವೆ. ವಾಸ್ತವವಾಗಿ ಇದು ಎರಡು ಕಡೆಗಳಲ್ಲಿಯೂ ಲಾಳಾಕಾರದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು, ಉತ್ತರ, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಪ್ರವೇಶದ್ವಾರಗಳಿವೆ. ಇಡೀ ದೇವಾಲಯವು ಜಗತಿಯ ಮೇಲೆ ಮರಳುಗಲ್ಲಿನಿಂದ ನಿರ್ಮಾಣಗೊಂಡಿದೆ. ಜಗತಿಯ ದಿಂಡುಗಳು ಅಲಂಕೃತ ತಲಗಳನ್ನು ಹೊಂದಿವೆ. ಅವುಗಳ ಮೇಲೆ ನಿಂತಿರುವ ದೇವ ದೇವಿಯರ ಶಿಲ್ಪಗಳಿವೆ. ಇವುಗಲ್ಲಿ ಮುಖ್ಯವಾದುವು, ಆಚಾರ್ಯ ಶಂಕರರು ಎತ್ತರದ ಪೀಠದ ಮೇಲೆ ಆಸನಸ್ಥರಾಗಿದ್ದು ಅವರ ಪಕ್ಕದಲ್ಲಿ ನಾಲ್ಕು ಜನ ಶಿಷ್ಯರಿದ್ದಾರೆ. ಈ ಶಿಷ್ಯರನ್ನು ಸುರೇಶ್ವರಾಚಾರ್ಯ, ಹಸ್ತಾಮಲಕ, ಪದ್ಮಪಾದ ಮತ್ತು ತೋಟಕಾಚಾರ್ಯರೆಂದು ಗುರುತಿಸಲಾಗಿದೆ. ಶೈವ ಮತ್ತು ವೈಷ್ಣವ ಶಿಲ್ಪಗಳು ಹೊಯ್ಸಳ ಮಾದರಿಯಲ್ಲಿದ್ದು, ಉತ್ತಮವಾದ ಹಾಗೂ ನಾಜೂಕಾದ ಅಲಂಕಾರಗಳನ್ನು ಹೊಂದಿವೆ. ಈ ಎಲ್ಲ ಶಿಲ್ಪಗಳೂ ಸುತ್ತಲೂ ಇರುವ ಅಲಂಕೃತ ಮುಂಚೂರಿನಿಂದ ಕೂಡಿವೆ. ಶ್ರೀರಾಮ, ವ್ಯಾಸ, ಬ್ರಹ್ಮ, ದುರ್ಗಾ, ಶಿವ, ಐದು ಮುಖಗಳ ಗಾಯತ್ರೀ, ವೇಣುಗೋಪಾಲ, ಬಲರಾಮ, ಉಗ್ರನರಸಿಂಹ, ಲಕ್ಷ್ಮಿ ಮತ್ತು ನೃತ್ಯ ಸರಸ್ವತಿ ಮುಂತಾದವು ಗಮನಾರ್ಹವಾದ ಶಿಲ್ಪಗಳು.

ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ನವರಂಗದಲ್ಲಿ ಹೊಯ್ಸಳ ಶೈಲಿಯ ಉತ್ತಮ ಕಂಬಗಳು ಇವೆ. ಈ ದೇವಾಲಯದ ಇನ್ನೊಂದು ಮುಖ್ಯ ಆಕರ್ಷಣೆ ಎಂದರೆ ಪ್ರತಿಯೊಂದು ಕಂಬದ ಮೇಲೂ ರಾಶಿಗ್ರಹದ ಚಿಹ್ನೆಗಳನ್ನು ಕೆತ್ತಲಾಗಿದೆ. ಇವನ್ನು ಎಷ್ಟೊಂದು ವೈಜ್ಞಾನಿಕವಾಗಿ ಅಳವಡಿಸಲಾಗಿದೆಯೆಂದರೆ, ಒಂದೊಂದು ತಿಂಗಳಲ್ಲಿ ಸೂರ್ಯನ ಕಿರಣಗಳು ಒಂದೊಂದು ಕಂಬದ ಮೇಲೆ ಬೀಳುತ್ತವೆ. ಆಗಿನ ಕಾಲದ ಹೊಯ್ಸಳ ಶಿಲ್ಪಿಗಳಿಗೆ ಇದ್ದ ಖಗೋಳ ಶಾಸ್ತ್ರದ ಜ್ಞಾನವನ್ನು ಇದು ಪ್ರತಿಬಿಂಬಿಸುತ್ತದೆ. ಪ್ರಧಾನ ಗರ್ಭಗೃಹದಲ್ಲಿ ಶ್ರೀ ವಿದ್ಯಾಶಂಕರರ ಸಮಾಧಿಯಿದ್ದು, ಅದರ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಶಿಖರ ಮತ್ತು ಸುಕನಾಸಿಯ ಮುಂಚಾಚು ತುಂಬ ಸುಂದರವಾಗಿವೆ. ಈ ರೀತಿ ಅಪರೂಪವಾಗಿದ್ದು ಹೊಯ್ಸಳ ಮತ್ತು ವಿಜಯನಗರ ವಾಸ್ತುಶಿಲ್ಪ ಲಕ್ಷಣಗಳಿಗೆ ಕೊಡುಗೆಯಾಗಿದೆ. ಇದೇ ಈ ದೇವಾಲಯದ ವೈಶಿಷ್ಟ್ಯ.

ವೈದ್ಯೇಶ್ವರ ದೇವಾಲಯ, ತಲಕಾಡು

ಕಾವೇರಿ ತೀರದಲ್ಲಿರುವ ತಲಕಾಡು ಪ್ರಾಚೀನ ಗಂಗರ ರಾಜಧಾನಿಯಾಗಿತ್ತು. ಈಗ ಅದು ಸಮೃದ್ಧ ಮರಳುರಾಶಿಗೆ ಹೆಸರುವಾಸಿಯಾಗಿದೆ. ಹೊಯ್ಸಳ ವಿಷ್ಣುವರ್ಧನನು ಚೋಳರನ್ನು, ತಲಕಾಡಿನಲ್ಲಿ ನಡೆದ ಯುದ್ಧದಲ್ಲಿ ಸೋಲಿಸಿ, ಅವರನ್ನು ಕರ್ನಾಟಕದ ನೆಲದಿಂದ ಹೊರಕ್ಕೆ ಅಟ್ಟಿದನು. ಅಂದಿನಿಂದ ತಲಕಾಡು ಹೊಯ್ಸಳರ ಅಧೀನಕ್ಕೆ ಬಂದಿತು. ಹೊಯ್ಸಳ ಪತನಾನಂತರ, ಇದು ವಿಜಯನಗರದ ಪ್ರಾದೇಶಿಕ ರಾಜಧಾನಿಯ ನಗರವಾಗಿತ್ತು. ಕೊನೆಗೆ ಇದು ಮೈಸೂರು ಒಡೆಯರ ರಾಜ್ಯಕ್ಕೆ ಸೇರಿತು.

ತಲಕಾಡು ದೇವಾಲಯಗಳ ನಗರ. ಅವುಗಳಲ್ಲಿ ವೈದ್ಯೇಶ್ವರ ಬಹುಶಃ ಅತ್ಯಂತ ದೊಡ್ಡದಾದದ್ದು. ಇದು ಆರಂಭ ವಿಜಯನಗರ ಶೈಲಿಯ ದೇವಾಲಯವಾಗಿದ್ದು, ಕ್ರಿ.ಶ. 1360ರಲ್ಲಿ ತಲಕಾಡಿನಲ್ಲಿ ಹುಟ್ಟಿದ ಮಾಧವ ಮಂತ್ರಿ ಇದನ್ನು ನಿರ್ಮಿಸಿದನು. ಇದು ವಿಜಯನಗರ ಕಾಲದ ದೇವಾಲಯವಾಗಿದ್ದರೂ, ಇದರಲ್ಲಿ ಹೊಯ್ಸಳ ಶೈಲಿಯ ಲಕ್ಷಣಗಳು ಕಾಣಬರುತ್ತವೆ.

ವೈದ್ಯೇಶ್ವರ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ಚೌಕ ನವರಂಗಗಳಿವೆ. ಇಡೀ ದೇವಾಲಯವು ಕಗ್ಗಲ್ಲಿನಿಂದ ನಿರ್ಮಿತವಾಗಿದ್ದು, ಜಗತಿಯ ಮೇಲೆ ನಕ್ಷತ್ರಾಕಾರದಲ್ಲಿದೆ. ಹೊರಗೋಡೆಯ ಮೇಲೆ ಅಡ್ಡಪಟ್ಟಿಕೆಗಳೂ, ಅವುಗಳ ಮೇಲೆ ಅರೆಗಂಬಗಳೂ, ದೇವದೇವಿಯರ ಶಿಲ್ಪಗಳೂ ಇವೆ. ಚಾವಣಿಯ ಹಂತದಲ್ಲಿ ದೇವಾಲಯದ ಸುತ್ತಲೂ ದಪ್ಪನಾದ ಮುಂಚೂರು ಇದೆ. ಗಾರೆ ಇಟ್ಟಿಗೆಗಳಿಂದ ನಿರ್ಮಾಣಗೊಂಡ ದ್ರಾವಿಡ ರೀತಿಯ ಶಿಖರವಿದೆ. ಬಹುಶಃ ಇದನ್ನು ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಸೇರಿಸಲಾಯಿತು. ದೇವಾಲಯವನ್ನು ಪ್ರವೇಶಿಸಲು ಮುಖಮಂಡಪವಿದೆ. ಅದಕ್ಕೆ ಪೂರ್ವ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಮುಖಮಂಡಪದಲ್ಲಿ ವಿಜಯನಗರ ಕಾಲದ ಎತ್ತರವಾದ ಸ್ತಂಭಗಳಿವೆ. ಇದರಲ್ಲಿ ಹತ್ತು ಅಡಿಗಳಿಗೂ ಮೀರಿದ ದ್ವಾರಪಾಲ ವಿಗ್ರಹಗಳಿವೆ. ಇವು ಕರ್ನಾಟಕದಲ್ಲೇ ಅತ್ಯಂತ ಎತ್ತರದ ದ್ವಾರಪಾಲ ಶಿಲ್ಪಗಳೆಂದು ಭಾವಿಸಲಾಗಿದೆ.

ಹೊರಗೋಡೆಗಳ ಮೇಲೆ ಸೂರ್ಯ, ಲಕ್ಷ್ಮಿ, ವೀರಭದ್ರ, ಬ್ರಹ್ಮ ಮುಂತಾದ ದೇವದೇವಿಯರ ಶಿಲ್ಪಗಳಿವೆ. ನವರಂಗದಲ್ಲಿ ಹೊಯ್ಸಳ ಶೈಲಿಯ ಕಂಬಗಳು ಮತ್ತು ಭುವನೇಶ್ವರಿಗಳೂ ಇವೆ. ಬೇಡರ ಕಣ್ಣಪ್ಪ, ಆದಿಶಂಕರಾಚಾರ್ಯರ ಕಾಲನ್ನು ಹಿಡಿದಿರುವ ಮೊಸಳೆಯ ಶಿಲ್ಪಫಲಕ ವಿರಳವಾದ ಸುಂದರ ಶಿಲ್ಪಗಳು. ಗರ್ಭಗೃಹದಲ್ಲಿ ವೈದ್ಯೇಶ್ವರ ಶಿವಲಿಂಗವಿದೆ. ಎಡಭಾಗದಲ್ಲಿ ವೈದ್ಯೇಶ್ವರನ ಪತ್ನಿ ಮನೋನ್ಮಣಿ ದೇವಿಯ ಸುಂದರ ಗುಡಿಯಿದೆ. ಇವೆಲ್ಲವೂ ವಿಶಾಲವಾದ ಪ್ರಾಕಾರದಲ್ಲಿವೆ.

ಈ ದೇವಾಲಯಕ್ಕೆ ಮೈಸೂರು ಒಡೆಯರಿಗೆ ಸಂಬಂಧಿಸಿದ ಒಂದು ಐತಿಹ್ಯವಿದೆ. ಮೈಸೂರಿನ ರಾಜ ಒಡೆಯರ್ ಈ ದೇವಾಲಯಕ್ಕೆ ಬಂದಿದ್ದ ವಿಜಯನಗರದ ರಾಜ್ಯಪಾಲ ಶ್ರೀರಂಗರಾಯನ ಪತ್ನಿ ಅಲಮೇಲಮ್ಮನೊಡನೆ ಅಸಭ್ಯ ರೀತಿಯಿಂದ ವರ್ತಿಸಿದರೆಂದೂ, ಇದರಿಂದ ಕೋಪಗೊಂಡ ಅಲಮೇಲಮ್ಮ ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ ಮತ್ತು ಮೈಸೂರು ದೊರೆಗಳಿಗೆ ಮಕ್ಕಳು ಇಲ್ಲದೇ ಹೋಗಲಿ ಎಂದು ಶಪಿಸಿ, ತಲಕಾಡಿನ ಪಕ್ಕದಲ್ಲೇ ಇದ್ದ ಮಾಲಂಗಿಯ ಮಡುವಿನಲ್ಲಿ ಧುಮುಕಿದಳೆಂಬುದು ಇಲ್ಲಿನ ಜನಜನಿತ ಐತಿಹ್ಯ.

## ಹೇಮಕೂಟ ಬೆಟ್ಟದ ದೇವಾಲಯಗಳು, ಹಂಪಿ

ಚಿನ್ನದ ಬೆಟ್ಟ ಎಂದು ಕರೆಯಲಾದ ಹೇಮಕೂಟ ಹಂಪಿಯಲ್ಲೇ ಸುಂದರವಾದ ಬೆಟ್ಟ. ಇದರ ಮೇಲೆ ವಿವಿಧ ಗಾತ್ರದ ದೇವಾಲಯಗಳು, ಮಂಡಪಗಳು, ತೋರಣಗಳು ಮುಂತಾದ ಐವತ್ತಕ್ಕೂ ಹೆಚ್ಚಿನ ಕಟ್ಟಡಗಳು ಕಾಣಬರುತ್ತವೆ. ಇಡೀ ಹಂಪಿಯನ್ನು ಬಂಡೆಗಳ ಉದ್ಯಾನವೆಂದು ಕರೆಯಲಾದರೂ, ಈ ಮೆಚ್ಚಿಗೆಯಲ್ಲಿ ಹೇಮಕೂಟ ಬೆಟ್ಟಕ್ಕೆ ಹೆಚ್ಚಿನ ಪಾಲು ಸಲ್ಲುತ್ತದೆ. ಇಲ್ಲಿರುವ ಪ್ರತಿಯೊಂದು ಬಂಡೆಯೂ ಪೌರಾಣಿಕ ಹಾಗೂ ಜಾನಪದ ಕಥೆಗಳನ್ನು ಹೇಳುತ್ತವೆ. ಇವುಗಳು ಸಂದರ್ಶಕರನ್ನು ಧಾರ್ಮಿಕ ಹಾಗೂ ಸಾಹಸ ಪ್ರಪಂಚಕ್ಕೆ ಕೊಂಡೊಯ್ಯುತ್ತವೆ. ಇಲ್ಲಿ ಶಿವಪಾರ್ವತಿಯರು ಹೆಚ್ಚು ಹತ್ತಿರವಾಗುತ್ತಾರೆ. ಮತ್ತು ಇದರಿಂದ ಒಂದು ದಿವ್ಯ ಆನುಭವ ಉಂಟಾಗುತ್ತದೆ. ಇದು ಕೋಟೆಯುಳ್ಳ ಸ್ಥಳವಾಗಿದ್ದು ಪೂರ್ವ, ಉತ್ತರ ಮತ್ತು ದಕ್ಷಿಣದಿಂದ ಇದಕ್ಕೆ ಪ್ರವೇಶ. ಇಲ್ಲಿರುವ ದೇವಾಲಯಗಳೆಲ್ಲವೂ ಜೈನ ಬಸದಿಗಳೆಂದು ಹಿಂದೆ ಭಾವಿಸಲಾಗಿತ್ತು. ಆದರೆ ಈಗ ಇವೆಲ್ಲ ಶೈವ ದೇವಾಲಯಗಳೆಂದು ಖಚಿತವಾಗಿ ತಿಳಿದುಬಂದಿದೆ. ವಾಸ್ತವವಾಗಿ ಇಲ್ಲಿರುವ ದೇಗುಲಗಳೆಲ್ಲ ಶೈವ ಧರ್ಮಕ್ಕೆ ಸಂಬಂಧಿಸಿದ್ದವುಗಳಾಗಿವೆ. ಇನ್ನೊಂದು ಆಸಕ್ತಿಕರ ಸಂಗತಿ ಎಂದರೆ ಈ ಎಲ್ಲ ದೇವಾಲಯಗಳೂ ಆರಂಭಿಕ ವಿಜಯನಗರ ಕಾಲಕ್ಕೆ ಸೇರಿದ್ದು, ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ನಿರ್ಮಿತವಾದವುಗಳು.

ಅತ್ಯಂತ ಎತ್ತರದ ಗೋಪುರವನ್ನು (52 ಮೀ.) ಹೊಂದಿರುವ ಖ್ಯಾತ ವಿರೂಪಾಕ್ಷ ದೇವಾಲಯದ ದಕ್ಷಿಣ ಭಾಗದಲ್ಲಿ ಆನೇಕ ಸಣ್ಣ ಸಣ್ಣ ದೇವಾಲಯಗಳು ಹೇಮಕೂಟದಲ್ಲಿ ಕಟ್ಟಲ್ಪಟ್ಟಿದ್ದು, ಈ ಎರಡರಲ್ಲಿ ಸುಲಭವಾಗಿ ವೈರುಧ್ಯವನ್ನು ಗಮನಿಸಬಹುದು. ಈ ರೀತಿ ಬೃಹತ್ತು ಮತ್ತು ಸೌಂದರ್ಯಗಳೆರಡೂ ಅಕ್ಕಪಕ್ಕದಲ್ಲೇ ಇಲ್ಲಿ ಕಾಣುತ್ತವೆ.

ಏಕಕೂಟ, ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳು ಅಕ್ಕಪಕ್ಕದಲ್ಲಿರುವುದು ಇಲ್ಲಿನ ಇನ್ನೊಂದು ಆಸಕ್ತಿಕರ ಸಂಗತಿ. ಈ ದೇವಾಲಯಗಳು ಸಣ್ಣ ಪ್ರಮಾಣದವುಗಳಾಗಿದ್ದರೂ, ಗುಂಪು ಗುಂಪಾಗಿರುವ ಅವುಗಳ ಮೇಲಿರುವ ಔತ್ತರೇಯ ರೀತಿಯ ನಾಗರ ಶಿಖರಗಳಿಂದ ನಮ್ಮ ಗಮನವನ್ನು ಸೆಳೆಯುತ್ತವೆ. ಏಕಕೂಟ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ನವರಂಗದ ಮೂರು ಕಡೆ ಕಕ್ಷಾಸನವಿದೆ. ದ್ವಿಕೂಟ ದೇವಾಲಯದಲ್ಲಿ ಎರಡು ಗರ್ಭಗೃಹಗಳು, ಎರಡು ಅಂತರಾಳಗಳು ಮತ್ತು ಎರಡು ದ್ವಾರಗಳ ಎರಡು ನವರಂಗಗಳಿವೆ. ಇದರ ಶಿಖರ ಕಳಿಂಗನಾಗರ ಶೈಲಿಗೆ ಸೇರಿದೆ. ಕುಮ್ಮಟ ದುರ್ಗದ ಕಂಪಿಲರಾಯನು ಈ ದೇವಾಲಯವನ್ನು ನಿರ್ಮಿಸಿದನು. ಮೂರನೆಯ ದೇವಾಲಯವು ಒಂದು ತ್ರಿಕೂಟ. ಮುಮ್ಮಡಿ ಸಿಂಗೇಯ ನಾಯಕನ ಮಗನಾದ ಕಂಪಿಲರಾಯನು ಇದನ್ನು ಕಟ್ಟಿಸಿದನು. ಇದರಲ್ಲಿ ಮೂರು ದಿಕ್ಕಿನಲ್ಲಿ ಮೂರು ಗರ್ಭಗೃಹಗಳು, ಒಂದು ನವರಂಗ ಮತ್ತು ಒಂದು ಮಂಡಪ ಇದೆ. ಇದರ ಸಮೀಪದಲ್ಲೇ ಕಂಪಿಲರಾಯನು ನಿರ್ಮಿಸಿದ ಇನ್ನೊಂದು ತ್ರಿಕೂಟಾಚಲವಿದೆ. ಎಲ್ಲ ಗರ್ಭಗೃಹಗಳಲ್ಲಿಯೂ ಶಿವ ಲಿಂಗಗಳಿವೆ. ಈ ರೀತಿ ಹೇಮಕೂಟ ಬೆಟ್ಟವು ಶೈವ ವಾಸ್ತುಶಿಲ್ಪ ಶೈಲಿಯ ವಿಹಂಗಮ ನೋಟವನ್ನು ಪ್ರದರ್ಶಿಸುತ್ತದೆ.

ಗೌರೀಶ್ವರ ದೇವಾಲಯ, ಯಳಂದೂರು

ಯಳಂದೂರಿನ ಗೌರೀಶ್ವರ ದೇವಾಲಯವು ವಿಶೇಷವಾಗಿ ಹಾಳಾಗಿದ್ದಿತು. 1900ರ ಆರಂಭದಲ್ಲಿ, ಇಲ್ಲಿಗೆ ಐದು ಕಿಲೋಮೀಟರ್ ದೂರದಲ್ಲಿರುವ ಮೂಲಸ್ಥಾನೇಶ್ವರ ದೇವಾಲಯದಿಂದ ಕಂಬಗಳು, ಬಿಡಿ ಶಿಲ್ಪಗಳು ಮುಂತಾದವುಗಳನ್ನು ತಂದು, ಗೌರೀಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಯಿತು. ಹೀಗಾಗಿ ಇದರ ಮೂಲ ಲಕ್ಷಣಗಳು ಬಹಳಷ್ಟು ಕಾಣದಾಗಿವೆ. ಆದರೆ ಈ ದೇವಾಲಯದ ಅತಿ ಮುಖ್ಯ ಹಾಗೂ ಆಸಕ್ತಿಕರ ಭಾಗವೆಂದರೆ ಕಲ್ಲಿನಿಂದ ನಿರ್ಮಿಸಲಾದ ಮಹಾದ್ವಾರ. ಇದರ ಮೇಲಿರುವ ಶಿಲ್ಪಾಲಂಕಾರಗಳಿಂದ ಸೌಂದರ್ಯವನ್ನು ಹೊರಸೂಸುವ ಮತ್ತು ಸಮ ಪ್ರಮಾಣದ ವಾಸ್ತುಶಿಲ್ಪಗಳಿಂದ ಈ ಮಹಾದ್ವಾರ ಮಹತ್ವದ್ದೆನಿಸಿದೆ. ಯಳಂದೂರು ಮೈಸೂರು ಒಡೆಯರ ಮೂಲಪ್ರಾಂತವಾದ ಹದಿನಾಡಿನ ರಾಜಧಾನಿಯಾಗಿತ್ತು ಮತ್ತು ವಿಜಯನಗರ ಕಾಲದಲ್ಲಿ ಇದೊಂದು ಸಂಪದ್ಭರಿತ ನಗರವಾಗಿತ್ತು. ಈಗ ಚಾಮರಾಜನಗರ ಜಿಲ್ಲೆಯಲ್ಲಿರುವ ಯಳಂದೂರನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ದಿವಾನ್ ಪೂರ್ಣಯ್ಯನವರಿಗೆ ಜಹಗೀರಿಯಾಗಿ ಕೊಟ್ಟರು. ಈ ದೇವಾಲಯದಲ್ಲಿರುವ ಶಾಸನದ ಪ್ರಕಾರ ಹದಿನಾಡುವಿನ ನಾಯಕನಾದ ಸಿಂಗಿದೇವನು ಈ ದೇವಾಲಯವನ್ನು ಕ್ರಿ.ಶ. 1450ರಲ್ಲಿ ನಿರ್ಮಿಸಿದನು. ಆದುದರಿಂದ ಈ ದೇವಾಲಯ ವಾಸ್ತುಶಿಲ್ಪ ವಿನ್ಯಾಸದಲ್ಲಿ ವಿಜಯನಗರ ಶೈಲಿಗೆ ಸೇರಿದೆ.

ಕಲ್ಲಿನಿಂದ ನಿರ್ಮಾಣಗೊಂಡ ಹನ್ನೆರಡು ಅಡಿ ಎತ್ತರದ ಭವ್ಯವಾದ ಮಹಾದ್ವಾರದಿಂದಾಗಿ ಗೌರೀಶ್ವರ ದೇವಾಲಯ ಪ್ರಖ್ಯಾತವಾಗಿದೆ. ಮಹಾದ್ವಾರದ ಕಟ್ಟಡದಲ್ಲಿ ವಿಶಾಲವಾದ ಪ್ರವೇಶದ್ವಾರವಿದೆ. ಅವುಗಳ ಮೇಲೆ ವೈವಿಧ್ಯಮಯ ಉಬ್ಬುಶಿಲ್ಪಗಳಿವೆ. ಪೂರ್ವದ ಮಹಾದ್ವಾರದಲ್ಲಿ ಸಂಗೀತಗಾರರು, ನೃತ್ಯಗಾರರು ಹಾಗೂ ದೇವದೇವಿಯರ ಸೂಕ್ಷ್ಮ ಕೆತ್ತನೆಗಳಿವೆ. ಲಲಾಟದಲ್ಲಿ ಉಮಾಮಹೇಶ್ವರ ಶಿಲ್ಪವಿದೆ.

ಹೊರಗೋಡೆಯಲ್ಲಿ ಅಲಂಕೃತ ಅಡ್ಡದಿಂಡುಗಳಿವೆ. ಆದರ ಮೇಲೆ ಮುಂಚಾಚಿದ ಮೂರು ಪಟ್ಟಿಕೆಗಳಿವೆ. ಇವುಗಳ ಮೇಲೆ ಅರೆಗಂಬಗಳು, ಸೂಕ್ಷ್ಮ ಶಿಖರಗಳು, ನಾಜೂಕಾದ ದೇವ, ದೇವಿಯರ ಶಿಲ್ಪಗಳಿವೆ. ಆಗ್ನೇಯದಲ್ಲಿ ಭೈರವನ ಶಿಲ್ಪವಿದೆ. ದಕ್ಷಿಣದಲ್ಲಿ ಮುನಿಗಳು ಹಾಗೂ ಗಣಗಳಿಂದ ಕೂಡಿದ ನಿಂತಿರುವ ಶಿವನ ಶಿಲ್ಪ ಮತ್ತು ನಂದೀಶ್ವರ ಶಿಲ್ಪಗಳು, ಅರೆಗಂಬಗಳ ಮಧ್ಯದಲ್ಲಿರುವ ದ್ರಾವಿಡ ರೀತಿಯ ಸೂಕ್ಷ್ಮ ಕೆತ್ತನೆಯ ಕೆಳಗೆ ಕಾಣಬರುತ್ತವೆ. ಇಲ್ಲಿರುವ ಇನ್ನಿತರ ಶಿಲ್ಪಗಳೆಂದರೆ, ವೀರಭದ್ರ, ಅರ್ಧನಾರೀಶ್ವರ, ರತಿ-ಮನ್ಮಥ, ಗೋಪಿಕೆಯರೊಡನೆ ಇರುವ ವೇಣುಗೋಪಾಲ, ನಾಟ್ಯಗಣೇಶನೊಡನಿರುವ ಶಿವ, ಗೋಪೀ ವಸ್ತ್ರಾಪಹರಣ ಮುಂತಾದವು. ಈಶಾನ್ಯದಲ್ಲಿ ಶ್ರೀರಾಮ, ಸೀತೆ ಮತ್ತಿತರ ಶಿಲ್ಪಗಳಿವೆ.

ಮಹಾದ್ವಾರದ ಸುತ್ತಲೂ ಇರುವ ಮುಂಜೂರಿನಲ್ಲಿ ಕೀರ್ತಿಮುಖಗಳ ಕೆಳಗೆ ಇರುವ ನರ್ತನ ದೇವತೆಗಳ ಸೂಕ್ಷ್ಮ ಶಿಲ್ಪಗಳಿವೆ. ಇಲ್ಲಿನ ಇನ್ನೊಂದು ಪ್ರಮುಖ ಆಕರ್ಷಣೆ ಎಂದರೆ ಒಂದೇ ಕಲ್ಲಿನಲ್ಲಿ ಕಡೆದ ಕಲ್ಲಿನ ಸರಪಳಿಗಳು. ಈ ಎಲ್ಲ ಅಲಂಕಾರ ಮತ್ತು ಶಿಲ್ಪಗಳಿಂದ ಯಳಂದೂರಿನ ದೇವಾಲಯದ ಮಹಾದ್ವಾರವು ವೈಶಿಷ್ಟ್ಯಪೂರ್ಣವಾಗಿದ್ದು ಉತ್ತಮ ಕಲಾ ಕೃತಿಯೆನಿಸಿದೆ.

## ಮೆಟ್ಟಿಲುಗಳ ಕೊಳ, ಹಂಪಿ

ಭಾರತ ಸರ್ಕಾರದ ಪುರಾತತ್ವ ಸರ್ವೇಕ್ಷಣ ಮತ್ತು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗಳು ಹತ್ತಾರು ವರ್ಷಗಳಿಂದ ಹಂಪಿಯಲ್ಲಿ ಉತ್ಖನನಗಳನ್ನು ಮಾಡುತ್ತಲಿದ್ದು, ಇದುವರೆಗೆ ತಿಳಿಯದೇ ಇದ್ದ ಅನೇಕ ಹೊಸ ಕಟ್ಟಡಗಳು ಮತ್ತು ಅವಶೇಷಗಳನ್ನು ಬೆಳಕಿಗೆ ತರಲು ಸಫಲವಾಗಿವೆ. ಈ ರೀತಿಯ 1984-85ರ ಉತ್ಖನನದಲ್ಲಿ ಪುರಾತತ್ವ ಸರ್ವೇಕ್ಷಣದ ಅಧಿಕಾರಿಗಳು, ನೆಲದ ಕೆಳಗೆ ಪೂರ್ಣವಾಗಿ ಹೂತು ಹೋಗಿದ್ದು, ಮೇಲಿಂದ ಏನೂ ಕಾಣದೇ ಇದ್ದ ನೆಲೆಯಲ್ಲಿದ್ದ ಸುಂದರ ಕೊಳವನ್ನು ಬೆಳಕಿಗೆ ತಂದರು. ಇದುವರೆಗೆ ಹಂಪಿಯಲ್ಲಿ ಬೆಳಕಿಗೆ ಬಂದಿರುವ ಮೆಟ್ಟಿಲುಗಳಿರುವ ಕೊಳಗಳಲ್ಲಿ ಇದು ಅತ್ಯಂತ ಸುಂದರವಾದುದು. ಇದು ಕ್ರಿ.ಶ. ಹದಿನೈದನೆಯ ಶತಮಾನದ ರಚನೆ.

ಚೌಕವಾಗಿರುವ ಈ ಕೊಳವನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಇದಕ್ಕೆ ಐದು ಹಂತಗಳಿವೆ. ಕೆಳಗೆ ಹೋಗುತ್ತಿದ್ದಂತೆ ಹಂತಗಳ ಉದ್ದ ಕಡಿಮೆಯಾಗುತ್ತ ಹೋಗುತ್ತದೆ. ಅದರಿಂದ ಮೇಲಿನದು ತೀರ ದೊಡ್ಡದಾಗಿಯೂ ಕೊನೆಯದು ತೀರ ಸಣ್ಣದಾಗಿಯೂ ಇವೆ. ಮೇಲಿಂದ ಗಮನಿಸಿದರೆ ಈ ಹಂತಗಳ ಉದ್ದ ಕ್ರಮವಾಗಿ 20.7, 16.10, 9.2 ಮತ್ತು 6.9 ಮೀಟರುಗಳು. ಪ್ರತಿ ಹಂತದಲ್ಲಿಯೂ ಪಿರಮಿಡ್ಡಿನಾಕಾರದ ಮೆಟ್ಟಿಲುಗಳ ಸಾಲುಗಳಿವೆ. ಒಂದೊಂದು ಹಂತದಲ್ಲಿ 9, 7, 5, 3 ಮತ್ತು 1 ಮೆಟ್ಟಿಲುಗಳಿದ್ದು, ಇಡೀ ಕೊಳದಲ್ಲಿ ಒಟ್ಟು ನೂರು ಮೆಟ್ಟಿಲುಗಳಿವೆ. ಪ್ರತಿ ಹಂತವೂ 1.05 ಮೀಟರ್ ಆಗಿದ್ದು, ಎಲ್ಲ ಹಂತಗಳೂ ಸೇರಿದರೆ 6.65 ಮೀಟರ್‌ಗಳಾಗುತ್ತವೆ. ಕೊಳದ ತಳದಲ್ಲಿ ಕಲ್ಲಿನ ಚಪ್ಪಡಿಗಳಿವೆ. ಇದರ ಕೆಳಭಾಗದಲ್ಲಿ ನೀರನ್ನು ಶುದ್ಧೀಕರಿಸಲು ಮರಳು ಇದೆ. ಈ ತ್ರಿಕೋನಾಕಾರದ ಮೆಟ್ಟಿಲುಗಳ ವಿನ್ಯಾಸ ಈ ಕೊಳದ ಸೌಂದರ್ಯವನ್ನು ಹೆಚ್ಚಿಸಲು ಸಹಾಯಕವಾಗಿದೆ. ಈ ಕೊಳದ ರಚನೆಯಾದ ನಂತರ, ಹಂಪಿಯಲ್ಲಿ ಕೆಲಸ ನಡೆಸುತ್ತಿದ್ದ ಅಭಿಯಂತರು, ಈ ಕೊಳಕ್ಕೆ ಒಳ್ಳೆಯ ಹೊಸನೀರು ಬರುವಂತೆ ತಾಂತ್ರಿಕ ಏರ್ಪಾಡು ಮಾಡಿದ್ದಾರೆ. ವಿಜಯನಗರ ಕಾಲದಲ್ಲಿ ನೀರನ್ನು ಸರಬರಾಜು ಮಾಡುತ್ತಿದ್ದ ತಾಂತ್ರಿಕತೆಗೆ ಇದೊಂದು ಉದಾಹರಣೆ. ತೆಪ್ಪೋತ್ಸವವೂ ಸೇರಿದಂತೆ ದೇವಾಲಯದ ಅನೇಕ ಧಾರ್ಮಿಕ ಕೈಂಕರ್ಯಗಳು ಈ ಕೊಳದಲ್ಲಿ ನಡೆಯುತ್ತಿದ್ದವು.

ಈ ಕೊಳದ ಇನ್ನೊಂದು ವೈಶಿಷ್ಟ್ಯವೆಂದರೆ, ಇದರ ನಿರ್ಮಾಣದ ತಾಂತ್ರಿಕತೆ. ನಿರ್ಮಾಣಕ್ಕೆ ಉಪಯೋಗಿಸಲಾದ ಪ್ರತಿಯೊಂದು ಕಲ್ಲಿನ ಮೇಲೂ ಒಂದು ಸಂಖ್ಯೆ, ಸಂಕೇತ ಅಥವಾ ಕನ್ನಡ ಅಕ್ಷರಗಳಿವೆ. ಉದಾಹರಣೆಗೆ ಇಲ್ಲಿ ಕಾಣಬರುವ ಉ, ದ, ತೂ, ಪ ಎಂಬ ಅಕ್ಷರಗಳು ಕ್ರಮವಾಗಿ ಉತ್ತರ, ದಕ್ಷಿಣ, ತೂರ್ಪು (ಪೂರ್ವ) ಮತ್ತು ಪಶ್ಚಿಮಗಳನ್ನು ಸೂಚಿಸುತ್ತವೆ. ಹೀಗೆ ಐದು ಹಂತಗಳಲ್ಲಿ 36 ಮೆಟ್ಟಿಲುಗಳಿದ್ದು, ಪ್ರತಿಯೊಂದಕ್ಕೂ, ಠ ಇಂದ ಆರಂಭವಾಗಿ ಜ್ಞ ವರೆಗೆ ಮತ್ತು ತಿ ಎನ್ನುವ ಕನ್ನಡದ ಅಕ್ಷರಗಳನ್ನು ನೀಡಲಾಗಿದೆ. ಇವುಗಳ ಜೊತೆಗೆ ಕೆಲವು ಸಂಕೇತಗಳನ್ನು ಬಳಸಲಾಗಿದೆ. ಇನ್ನೊಂದು ಆಸಕ್ತಿಕರ ಸಂಗತಿ ಎಂದರೆ ಇವುಗಳ ಅಳತೆಯನ್ನು ಅಕ್ಷರ ಮೂಲಕ ಸೂಚಿಸಲಾಗಿದೆ. ಇದರಿಂದ ಈ ಕಲ್ಲುಗಳನ್ನು ಬೇರೆಡೆ ವಿನ್ಯಾಸಗೊಳಿಸಿ, ಈಗ ಈ ಕೊಳವಿರುವ ಸ್ಥಳಕ್ಕೆ ತರುತ್ತಿದ್ದರೆಂಬ ತಾಂತ್ರಿಕ ಸಂಗತಿಯೂ ಈ ಸುಂದರ ಕೊಳದಿಂದ ತಿಳಿದುಬರುತ್ತದೆ.

## ವಿರೂಪಾಕ್ಷ (ಪಂಪಾಪತಿ) ದೇವಾಲಯ, ಹಂಪಿ

ಶ್ರೀ ವಿರೂಪಾಕ್ಷ ಅಥವಾ ಪಂಪಾಪತಿ ವಿಜಯನಗರ ದೊರೆಗಳ ಮನೆದೇವರು. ಆದುದರಿಂದ ಶ್ರೀ ವಿರೂಪಾಕ್ಷ ಅನ್ನುವುದನ್ನು ಅವರ ತಾಮ್ರಶಾಸನಗಳ ಕೊನೆಯಲ್ಲಿ ಸಹಿಯ ಸಂಕೇತವಾಗಿಯೂ ಬಳಸುತ್ತಿದ್ದರು. ತುಂಗಭದ್ರಾ ನದಿಯ ದಕ್ಷಿಣ ದಂಡೆಯಲ್ಲಿರುವ ವಿರೂಪಾಕ್ಷ ಶಿವಲಿಂಗವನ್ನು ಮೂಲತಃ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ವಿಜಯನಗರ ಸ್ಥಾಪನೆಯ ನಂತರ ಹೊಸ ಸೇರ್ಪಡೆಗಳನ್ನು ಮಾಡಲಾಯಿತು. ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ದೊರೆ ಮಲ್ಲಿಕಾರ್ಜುನನ ಕಾಲದಲ್ಲಿ ಸಭಾಮಂಡಪವನ್ನು ಮೊದಲಿಗೆ ಸೇರಿಸಲಾಯಿತು. ಕ್ರಿ.ಶ. 1510ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಆವನ ಪಟ್ಟಾಭಿಷೇಕದ ಜ್ಞಾಪಕಾರ್ಥವಾಗಿ ಎರಡನೆಯದಾಗಿ ಮಹಾರಂಗಮಂಟಪವನ್ನು ಸೇರಿಸಲಾಯಿತು.

ಈ ದೇವಾಲಯದಲ್ಲಿ ಒಂದು ಗರ್ಭಗೃಹ, ಅಂತರಾಳ, ಸಭಾಮಂಡಪ ಮತ್ತು ಮಹಾರಂಗಮಂಡಪಗಳಿವೆ. ಚೌಕಾಕಾರದ ಗರ್ಭಗೃಹದಲ್ಲಿ ವಿರೂಪಾಕ್ಷ ಶಿವಲಿಂಗವಿದೆ. ಇದರಲ್ಲಿ ಕಲಶವನ್ನು ಹೊಂದಿರುವ ದ್ರಾವಿಡ ರೀತಿಯ ವಿಮಾನವಿದೆ. ಸಭಾಮಂಡಪವು ಚೌಕಾಕಾರದಲ್ಲಿದ್ದು ಅದರಲ್ಲಿ ನಾಲ್ಕು ಕಂಬಗಳಿವೆ. ಬೇಡರ ಕಣ್ಣಪ್ಪ, ಕಿರಾತಾರ್ಜುನೀಯ, ಭೈರವ ಮೊದಲಾದ ಮುಖ್ಯ ಶಿಲ್ಪಗಳಿವೆ. ಉತ್ತರ ಮತ್ತು ದಕ್ಷಿಣಗಳಲ್ಲಿ ಪ್ರವೇಶದ್ವಾರಗಳಿವೆ.

ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲಾದ ಮಹಾರಂಗಮಂಡಪದಲ್ಲಿ 38 ಕಂಬಗಳಿವೆ. ಇದಕ್ಕೆ ಮೂರು ದಿಕ್ಕುಗಳಲ್ಲಿಯೂ ಮೆಟ್ಟಿಲುಗಳ ಪ್ರವೇಶದ್ವಾರಗಳಿವೆ. ಇದರ ತಾಳ್ವಾರಗಳಲ್ಲಿ ಆನೆಗಳ ಶಿಲ್ಪಗಳಿವೆ. ಕಂಬಗಳ ಮೇಲೆ ಉಬ್ಬುಶಿಲ್ಪದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಕಥೆಯನ್ನು ಕೆತ್ತಲಾಗಿದೆ. ಚಾವಣಿಯಲ್ಲಿ ತ್ರಿಪುರಾಂತಕ, ಪಾರ್ವತಿ ಕಲ್ಯಾಣ, ವಿದ್ಯಾರಣ್ಯರ ಮೆರವಣಿಗೆ ಮುಂತಾದ ವರ್ಣಚಿತ್ರಗಳಿವೆ. ಜೊತೆಗೆ ಪಾರ್ವತಿ ಕಲ್ಯಾಣ, ಕಾಲಾರಿಮೂರ್ತಿ, ಮಹಿಷಾಸುರಮರ್ದಿನಿ ಮುಂತಾದ ಗಾರೆಯ ಶಿಲ್ಪಗಳಿವೆ.

ಈ ದೇವಾಲಯದ ಮುಖ್ಯ ಆಕರ್ಷಣೆ ಎಂದರೆ ಭವ್ಯವಾದ ಗೋಪುರ. ಕೃಷ್ಣದೇವರಾಯನು 52 ಮೀಟರ್ ಎತ್ತರದ ಈ ಗೋಪುರವನ್ನು ಜೀರ್ಣೋದ್ಧಾರ ಮಾಡಿದನು. ಇದು ತುಂಬ ಎತ್ತರವಾಗಿದ್ದು ಸುತ್ತಮುತ್ತಲಲ್ಲೇ ಎದ್ದು ಕಾಣುತ್ತದೆ. ಮಹಾದ್ವಾರದ ಮೇಲಿನ ದ್ರಾವಿಡ ರೀತಿಯ ಗೋಪುರವು ಹತ್ತು ತಲಗಳಲ್ಲಿದ್ದು, ಹಿರಿಯ ಗೋಪುರ ಎಂಬ ಖ್ಯಾತಿಗೆ ಪಾತ್ರವಾಗಿದೆ. ಈ ಗೋಪುರದಲ್ಲಿ ದೇವ ದೇವಿಯರ ಅನೇಕ ಗಾರೆಯ ಶಿಲ್ಪಗಳು ಮತ್ತು ಆಲಂಕಾರಿಕ ವಿನ್ಯಾಸಗಳೂ ಇವೆ. ಭುವನೇಶ್ವರಿ ಗುಡಿಯು ಕಲ್ಯಾಣ ಚಾಳುಕ್ಯರ ಹನ್ನೆರಡನೆಯ ಶತಮಾನದ ದೇವಾಲಯವಾಗಿದ್ದು, ಅದರ ದ್ವಾರಬಂಧವು ತುಂಬ ನಾಜೂಕಾದ ಶಿಲ್ಪಗಳನ್ನು ಒಳಗೊಂಡಿದೆ. ಈ ದೇವಾಲಯದಲ್ಲಿ ಇಂದಿಗೂ ಪೂಜಾ ಕೈಂಕರ್ಯಗಳು ನಡೆಯುವುದರಿಂದ, ಭಕ್ತರು ಈ ದೇವಾಲಯದ ವಿರೂಪಾಕ್ಷ ಲಿಂಗಕ್ಕೆ ಪೂಜೆ ಸಲ್ಲಿಸಲು ಮತ್ತು ವಿಜಯನಗರದ ವಾಸ್ತು ವೈಭವವನ್ನು ನೋಡಲು ಈ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಒಟ್ಟಿನಲ್ಲಿ ವಿರೂಪಾಕ್ಷ ದೇವಾಲಯ ಹಂಪಿಯಲ್ಲೇ ಪ್ರಸಿದ್ಧವಾದುದಾಗಿದೆ.

ಕೃಷ್ಣ ದೇವಾಲಯ, ಹಂಪಿ

ವಿಜಯನಗರ ರಾಜವಂಶದಲ್ಲೇ ಅತ್ಯಂತ ಶ್ರೇಷ್ಠ ದೊರೆ ಎಂದು ಖ್ಯಾತನಾಗಿರುವ ಕೃಷ್ಣದೇವರಾಯನು ಕ್ರಿ.ಶ. 1513ರಲ್ಲಿ ಒರಿಸ್ಸದ ಉದಯಗಿರಿ ರಾಜ್ಯದ ಮೇಲೆ ದಂಡಯಾತ್ರೆ ನಡೆಸಿ ಗಜಪತಿ ದೊರೆಯನ್ನು ಸೋಲಿಸಿ, ಅಲ್ಲಿಂದ ಕೃಷ್ಣನ ಶಿಲ್ಪವನ್ನು ವಿಜಯೋತ್ಸವ ಸ್ಮಾರಕವಾಗಿ ತಂದನು. ಇದಕ್ಕಾಗಿ ಹಂಪಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದನು. ಅದೇ ಪ್ರಖ್ಯಾತವಾಗಿರುವ ಕೃಷ್ಣದೇವಾಲಯ. ಇದರ ಸ್ಮಾರಕಾರ್ಥವಾಗಿ ಬಾಲಕೃಷ್ಣನ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇಡೀ ದೇವಾಲಯವನ್ನು 88 ಮೀಟರ್ ಉದ್ದ ಮತ್ತು 60 ಮೀಟರ್ ಅಗಲದ ವಿಶಾಲವಾದ ಪ್ರಾಂಗಣದ ಮಧ್ಯದಲ್ಲಿ ನಿರ್ಮಿಸಲಾಗಿದೆ. ಇದರ ಸುತ್ತಲೂ ಎತ್ತರವಾದ ಪ್ರಾಕಾರದ ಗೋಡೆಯಿದ್ದು ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ.

ಕಗ್ಗಲ್ಲಿನಲ್ಲಿ ಕಟ್ಟಲಾದ ಕೃಷ್ಣ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಡಪ, ಸಭಾಮಂಡಪ ಮತ್ತು ಮಹಾ ಮಂಡಪಗಳಿವೆ. ಇವುಗಳ ಸುತ್ತಲೂ ಪ್ರಾಕಾರವಿದೆ. ಅದರಲ್ಲಿ ಮಹಾದ್ವಾರ ಮತ್ತು ಅದರ ಮೇಲೆ ಇಟ್ಟಿಗೆ ಹಾಗೂ ಗಾರೆಯಿಂದ ರಚಿತವಾದ ಗೋಪುರಗಳಿವೆ. ಕೃಷ್ಣನಿಗೆ ಸಂಬಂಧಿಸಿದ ಗಾರೆಯ ಶಿಲ್ಪಗಳನ್ನುಳ್ಳ ಈ ಗೋಪುರ ಸ್ವಲ್ಪಮಟ್ಟಿಗೆ ಹಾಳಾಗಿದೆ.

ಮೂಲದ ಗರ್ಭಗೃಹದಲ್ಲಿ ಅಲ್ಲಿ ಹಿಂದೆ ಇದ್ದ ಕೃಷ್ಣನ ವಿಗ್ರಹ ಈಗ ಇಲ್ಲ. ಅದು ಹಸಿರು ಛಾಯೆಯ ಕಪ್ಪು ಶಿಲೆಯ ಪೀಠದ ಮೇಲೆ ಕುಳಿತಿರುವ ಬಾಲಕೃಷ್ಣನ ವಿಗ್ರಹವಾಗಿತ್ತು. ಇದರ ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲರ ವಿಗ್ರಹಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಸಭಾಮಂಡಪದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳ ಮೇಲೆ ಉಬ್ಬು ಶಿಲ್ಪದ ಗರುಡ, ಹನುಮಾನ್, ಕಾಳಿಂಗಮರ್ದನ ಮುಂತಾದ ಕೆತ್ತನೆಗಳಿವೆ.

ಉತ್ತರ, ದಕ್ಷಿಣ ಹಾಗೂ ಪೂರ್ವದಲ್ಲಿ ಪ್ರವೇಶದ್ವಾರಗಳಿರುವ ಸುಂದರವಾದ ಮಹಾಮಂಡಪದಲ್ಲಿ ಮೂವತ್ತೆರಡು ಕಂಬಗಳಿವೆ. ನೀಳವಾದ ಹಾಗೂ ಎತ್ತರವಾದ ಈ ಕಂಬಗಳ ಮೇಲೆ ವೈಷ್ಣವ ಪಂಥದ ಶಿಲ್ಪಗಳಿವೆ. ಅಲ್ಲಿ ದ್ರಾವಿಡ ರೀತಿಯ ಗರುಡ ಮಂಡಪ, ಮತ್ತು ಅದರ ಮುಂದೆ ದೀಪಸ್ತಂಭವಿದೆ. ಕುದುರೆ ಮತ್ತು ಯಾಳಿಗಳ (ಸೊಂಡಲಿರುವ ಸಿಂಹಾಕಾರದ ಪ್ರಾಣಿ) ಶಿಲ್ಪಗಳನ್ನು ಹೊಂದಿರುವ ಸಂಕೀರ್ಣ ಸ್ತಂಭಗಳು ದೇವಾಲಯಕ್ಕೆ ಭವ್ಯತೆಯನ್ನು ತಂದುಕೊಡುತ್ತವೆ.

ಈ ದೇವಾಲಯವು ಉತ್ತರ, ದಕ್ಷಿಣ ಮತ್ತು ಪೂರ್ವಗಳಲ್ಲಿರುವ ಮಹಾದ್ವಾರಗಳಿಗೆ ಪ್ರಸಿದ್ಧವಾಗಿದೆ. ಪೂರ್ವದ ಮಹಾದ್ವಾರವು ಘನವಾಗಿಯೂ ಸುಂದರವಾಗಿಯೂ ಇದ್ದು, ಹಂಪಿಯಲ್ಲೇ ಭವ್ಯವಾದ ವಾಸ್ತುರಚನೆಯೆನಿಸಿದೆ. ಹೀಗೆ ಹಂಪಿಯ ಕೃಷ್ಣದೇವಾಲಯವು, ವಿಜಯನಗರ ರಾಜವಂಶದ ಅತ್ಯಂತ ಖ್ಯಾತದೊರೆ ಕೃಷ್ಣದೇವರಾಯನಿಂದ ನಿರ್ಮಿತವಾಗಿದ್ದು ಉತ್ಕೃಷ್ಟ ಕೃಷ್ಣ ದೇವಾಲಯವಾಗಿದೆ.

ವಿಠಲ ದೇವಾಲಯ, ಹಂಪಿ

ಹಂಪಿಯಲ್ಲಿ ವಿಠಲ ದೇವಾಲಯವು ಮುಖ್ಯವಾದ ದೇಗುಲಗಳಲ್ಲಿ ಒಂದು. ಕ್ರಿ.ಶ. 1513ರಲ್ಲಿ, ಕೃಷ್ಣದೇವರಾಯನ ಕಾಲದಲ್ಲಿ ಇದರ ನಿರ್ಮಾಣ ಪ್ರಾರಂಭಿಸಲ್ಪಟ್ಟು, ಅವನ ಉತ್ತರಾಧಿಕಾರಿ ಅಚ್ಯುತರಾಯನ (ಕ್ರಿ.ಶ. 1529-42) ಕಾಲದಲ್ಲಿ ಮುಂದುವರಿಯಿತು. ಬಹುಶಃ ಕೃಷ್ಣದೇವರಾಯನು ಅಪೇಕ್ಷಿಸಿದ ಮಹಾಕೃತಿಯ ರೂಪದಲ್ಲಿ ಇದು ಪೂರ್ಣಗೊಳ್ಳಲೇ ಇಲ್ಲವೆಂದು ತೋರುತ್ತದೆ.

ದೇವಾಲಯವು ಪೂರ್ವಾಭಿಮುಖವಾಗಿದ್ದು, 500 ಅಡಿ ಉದ್ದ ಮತ್ತು 310 ಅಡಿ ಅಗಲದ ವಿಶಾಲವಾದ ಪ್ರಾಂಗಣದ ಮಧ್ಯದಲ್ಲಿದೆ. ಇದಕ್ಕೆ ಮೂರು ಗೋಪುರದ್ವಾರಗಳು ಪೂರ್ವ, ಉತ್ತರ ಮತ್ತು ದಕ್ಷಿಣಗಳಲ್ಲಿದ್ದವು. ಈ ದೇವಾಲಯ ಸಂಕೀರ್ಣವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಅವುಗಳೇ ಹೊರಗಿನ ಮುಖಮಂಡಪ, ಮಧ್ಯದ ರಂಗಮಂಡಪ ಮತ್ತು ಒಳಗಿನ ಸುಕನಾಸಿ ಸಮೇತ ಗರ್ಭಗೃಹ. ಹೊರಗಿನ ಮುಖಮಂಡಪವು ಐದು ಅಡಿ ಎತ್ತರದ ಜಗತಿಯ ಮೇಲಿದ್ದು, ಮೂರು ದ್ವಾರಗಳಿವೆ. ಇಡೀ ಮಂಡಪದಲ್ಲಿ ವಿಜಯನಗರ ಶೈಲಿಯ ಐವತ್ತಾರು ಸಂಕೀರ್ಣ ಕಂಬಗಳಿದ್ದು, ಪ್ರತಿ ಕಂಬವೂ ಒಂದು ಸ್ವತಂತ್ರ ಭಾಗದಂತೆ ಭಾಸವಾಗುತ್ತದೆ.

ಈ ಮುಖಮಂಡಪದ ಮೂಲಕ ಈ ದೇವಾಲಯದ ಅತ್ಯಂತ ಸುಂದರ ಭಾಗವಾದ ರಂಗಮಂಡಪವನ್ನು ಪ್ರವೇಶಿಸುತ್ತೇವೆ. ಕಂಬಗಳು, ಅರೆಗಂಬಗಳು ಮತ್ತು ಗೂಡುಗಳು ದ್ರಾವಿಡ ಶೈಲಿಯನ್ನು ಸೂಚಿಸುತ್ತವೆ. ತಮ್ಮ ಆಲಂಕಾರಿಕ ವಿನ್ಯಾಸ ಹಾಗೂ ನೀಳವಾದ ದೇವದೇವತೆಗಳ ಶಿಲ್ಪಗಳಿಂದ ಹಾಗೂ ಲತಾವಿನ್ಯಾಸಗಳಿಂದ, ಈ ಸಂಕೀರ್ಣ ಕಂಬಗಳು ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯುತ್ತವೆ. ಮಧ್ಯಭಾಗದಲ್ಲಿ ಎತ್ತರವಾದ ಹದಿನಾರು ಸುಂದರ ಕಂಬಗಳುಳ್ಳ ಅಂಕಣವಿದೆ. ಇದರ ಪಶ್ಚಿಮ ಭಾಗದಲ್ಲಿ ಸುಕನಾಸಿ ಮತ್ತು ಗರ್ಭಗೃಹಗಳಿಗೆ ಹೋಗಲು ದ್ವಾರವಿದೆ. ಇದರಲ್ಲಿ ಪ್ರದಕ್ಷಿಣ ಪಥವಿದ್ದು, ಅದರ ಗೋಡೆಗಳಲ್ಲಿ ಸಾಕಷ್ಟು ಗಾಳಿ ಮತ್ತು ಬೆಳಕು ಒಳಕ್ಕೆ ಬರುವಂತೆ ಜಾಲಂಧ್ರಗಳನ್ನು ಅಳವಡಿಸಲಾಗಿದೆ. ಶಾಸನಗಳ ಪ್ರಕಾರ ಕೃಷ್ಣದೇವರಾಯನು ಫಲಪೂಜಾಮಂಡಪ ಮತ್ತು ಕಲ್ಯಾಣ ಮಂಡಪಗಳನ್ನು ಈ ದೇವಾಲಯ ಸಮುಚ್ಚಯಕ್ಕೆ ಸೇರಿಸಿದನು. ಬಹುಶಃ ಗರ್ಭಗೃಹದಲ್ಲಿ ವಿಠಲ ರೂಪದ ವಿಷ್ಣುವಿನ ವಿಗ್ರಹವಿದ್ದು ಅದಕ್ಕೆ ಪೂಜಾದಿ ಕೈಂಕರ್ಯಗಳು ನೆರವೇರುತ್ತಿದ್ದವು.

ಈ ದೇವಾಲಯದ ಇನ್ನೊಂದು ಮುಖ್ಯ ಆಕರ್ಷಣೆ ಎಂದರೆ, ರಂಗಮಂಡಪದ ಎದುರಿಗಿರುವ ಕಲ್ಲಿನ ರಥ. ಈ ರಥವು ಸಣ್ಣ ಪ್ರಮಾಣದ ದ್ರಾವಿಡ ದೇವಾಲಯದಂತೆ ಕಾಣಬರುತ್ತದೆ. ಬಹುಶಃ ಇದಕ್ಕೆ ಒಂದು ಗಾರೆಯ ಶಿಖರವಿದ್ದಿತೆಂದು ತೋರುತ್ತದೆ. ಇಕ್ಕೆಲಗಳಲ್ಲಿ ಎರಡರಂತೆ ಈ ರಥಕ್ಕೆ ನಾಲ್ಕು ಚಕ್ರಗಳಿವೆ. ಈ ಚಕ್ರಗಳು ತನ್ನ ಅಕ್ಷದ ಮೇಲೆ ತಿರುಗುತ್ತಿದ್ದುವೆಂದು ಹೇಳಲಾಗಿದೆ. ಇದು ವೈಷ್ಣವ ದೇವಾಲಯವಾದುದರಿಂದ ಇದರಲ್ಲಿ ಗರುಡನ ವಿಗ್ರಹವಿದ್ದಿತು. ಈ ರಥ ವಿಜಯನಗರ ಶೈಲಿಯನ್ನು ಪೂರ್ಣವಾಗಿ ಪ್ರತಿಬಿಂಬಿಸುವುದರಿಂದ, ಈ ಶೈಲಿಯ ಸಂಕೇತವಾಗಿ ಈ ರಥವನ್ನು ಬಳಸುವುದು ಪದ್ಧತಿಯಾಗಿದೆ. ಒಟ್ಟಿನಲ್ಲಿ ವಿಜಯನಗರದ ವಾಸ್ತುಶಿಲ್ಪಗಳು ದೇಶಾದ್ಯಂತ ಪ್ರಖ್ಯಾತವಾಗಿದ್ದು ವಾಸ್ತು ಮತ್ತು ಶಿಲ್ಪಗಳ ಹಿತಮಿತ ಪ್ರಮಾಣದ ಮಿಳಿತಕ್ಕೆ ಈ ದೇವಾಲಯ ಪ್ರಸಿದ್ಧಿ ಪಡೆದಿದೆ.

## ಹಜಾರರಾಮ ದೇವಾಲಯ, ಹಂಪಿ

ಹಜಾರರಾಮ ದೇವಾಲಯ ಹಂಪಿಯ ಅಂದವಾದ ದೇವಾಲಯಗಳಲ್ಲಿ ಒಂದು. ಕೃಷ್ಣದೇವರಾಯನ ಅಪ್ಪಣೆ ಮೇರೆಗೆ ಈ ದೇವಾಲಯದ ರಚನೆ ಕ್ರಿ.ಶ. 1513ರಲ್ಲಿ ಆರಂಭಗೊಂಡು, ಅವನ ಆಳ್ವಿಕೆಯ ಅಂತ್ಯಕ್ಕೆ ಮುಂಚೆ ಪೂರ್ಣಗೊಂಡಿತು. ವಾಸ್ತವವಾಗಿ ಇದು ಅರಮನೆಯ ಖಾಸಗಿ ದೇವಾಲಯವಾಗಿದ್ದು, ರಾಜಮನೆತನದವರ ಉಪಯೋಗಕ್ಕಾಗಿ ನಿರ್ಮಿಸಲಾದ ದೇವಾಲಯ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಒಳ್ಳೆಯ ಪ್ರಮಾಣದ ಕಂಬಗಳುಳ್ಳ ಮಟ್ಟಸ ಚಾವಣಿಯ ದ್ವಾರಮಂಡಪವಿದೆ. ಇದರಿಂದ ಒಳಕ್ಕೆ ಹೋದರೆ ಕರಿಯಕಲ್ಲಿನ ಎತ್ತರವಾದ ಕಂಬಗಳನ್ನುಳ್ಳ ಚೌಕಾಕಾರದ ರಂಗಮಂಡಪ ಸಿಗುತ್ತದೆ. ಈ ಕಂಬಗಳು ತುಂಬ ಅಂದವಾಗಿದ್ದು ಅವುಗಳ ಮೇಲೆ ಗಣೇಶ, ಮಹಿಷಾಸುರ ಮರ್ದಿನಿ, ಹನುಮಾನ್, ವಿವಿಧ ರೂಪಗಳ ವಿಷ್ಣು ಮುಂತಾದ ದೇವದೇವಿಯರ ಶಿಲ್ಪಗಳಿವೆ. ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಕತ್ತಿ ಮತ್ತು ಗುರಾಣಿಗನ್ನು ಹಿಡಿದು ಕುದುರೆಯ ಮೇಲೆ ಕುಳಿತಿರುವ ಕಲ್ಕಿಯ ಶಿಲ್ಪವು ಗಮನಾರ್ಹವಾದುದು. ರಂಗಮಂಡಪದಲ್ಲಿ ದಕ್ಷಿಣ, ಉತ್ತರಗಳಲ್ಲಿ ದ್ವಾರಗಳಿದ್ದು ಪಶ್ಚಿಮ ದ್ವಾರವು ಗರ್ಭಗೃಹಕ್ಕೆ ದಾರಿಮಾಡಿಕೊಡುತ್ತದೆ. ಈ ಎಲ್ಲ ಶಿಲ್ಪ ಫಲಕಗಳಲ್ಲಿ ಅದರಲ್ಲಿಯೂ ಕೃಷ್ಣಲೀಲೆಗೆಳ ಸಂಬಂಧಿಸಿದ ಶಿಲ್ಪ ಫಲಕಗಳಲ್ಲಿ, ಕಥೆಯನ್ನು ಶಿಲ್ಪದ ಮೂಲಕ ಹೇಳುವ ಉತ್ತಮ ಕಲೆಗಾರಿಕೆ ಕಂಡುಬರುತ್ತದೆ. ಪ್ರತ್ಯೇಕ ಶಿಲ್ಪಗಳೂ ಕೂಡ ಅಲಂಕಾರ ಮತ್ತು ಅಂಗಸೌಷ್ಠವದಿಂದ ನಮ್ಮ ಗಮನವನ್ನು ಸೆಳೆಯುತ್ತವೆ.

ಪ್ರಾಕಾರದ ಹೊರಗೋಡೆಯೂ ಈ ದೇವಾಲಯದಲ್ಲಿ ಆಕರ್ಷಕವಾಗಿದ್ದು ಅವುಗಳನ್ನು ಐದು ಅಡ್ಡ ಪಟ್ಟಿಕೆಗಳಾಗಿ ವಿಭಾಗಿಸಲಾಗಿದೆ. ಕೆಳಗಿನಿಂದ ಮೇಲಕ್ಕೆ ಈ ಪ್ರತಿಯೊಂದು ಪಟ್ಟಿಕೆಯಲ್ಲಿಯೂ ಆನೆಗಳ ಸಾಲು, ಕುದುರೆಗಳ ಸಾಲು, ಕೃಷ್ಣಲೀಲೆಗೆ ಸಂಬಂಧಿಸಿದ ಕಥೆಗಳು ಶಿಲ್ಪಿತವಾಗಿವೆ. ಇವುಗಳ ಜೊತೆಗೆ ಸುಬ್ರಹ್ಮಣ್ಯ, ಗಣೇಶ, ಋಷ್ಯಶೃಂಗನ ಕಥೆ, ಪುತ್ರಕಾಮೇಷ್ಟಿಯಾಗ, ಶಿವಧನುಸ್ಸನ್ನು ಒಯ್ಯುತ್ತಿರುವ ಸೀತಾಸ್ವಯಂವರ ಮುಂತಾದ ಶಿಲ್ಪಗಳು ಆಸಕ್ತಿಕರವಾಗಿವೆ. ಈ ದೇವಾಲಯದ ವಿವಿಧ ಭಾಗಗಳು, ಅದರಲ್ಲಿಯೂ ಮಂಡಪಗಳು ವಿಜಯನಗರದ ಬೃಹತ್ತು ಮತ್ತು ಭವ್ಯತೆ, ಎರಡನ್ನೂ ಮೈಗೂಡಿಸಿಕೊಂಡಿವೆ.

ಪ್ರಧಾನ ಗರ್ಭಗೃಹದ ಉತ್ತರ ಭಾಗದಲ್ಲಿ ದೇವಿಯ ಗುಡಿಯಿದೆ. ಇದು ಸಣ್ಣದಾಗಿದ್ದರೂ ಅಲಂಕಾರದ ದೃಷ್ಟಿಯಿಂದ ಹೆಚ್ಚು ಆಕರ್ಷಕವಾಗಿದೆ. ಅಂತರಾಳದ ಪೂರ್ವದ ಗೋಡೆಯಲ್ಲಿ ನರಸಿಂಹನ ತಗ್ಗುಉಬ್ಬಿನ ಶಿಲ್ಪವಿದೆ. ಅದರ ದ್ವಾರಬಂಧದಲ್ಲಿ ಒಬ್ಬ ಮುನಿಯು ದೊರೆಗೆ ಏನನ್ನೋ ಕೊಡುತ್ತಿರುವ ಶಿಲ್ಪವಿದೆ. ಇದು ವ್ಯಾಸರಾಯರ ಹಾಗೂ ಕೃಷ್ಣದೇವರಾಯನ ಶಿಲ್ಪವಿರಬೇಕೆಂದು ಕೆಲವರು ಊಹಿಸಿದ್ದಾರೆ. ಈಶಾನ್ಯದಲ್ಲಿರುವ ಕಲ್ಯಾಣ ಮಂಡಪವನ್ನು ಕ್ರಿ.ಶ. 1521ರಲ್ಲಿ ಅರಮನೆಯ ಆವರಣದಲ್ಲಿ ನಿರ್ಮಿಸಲಾಯಿತು. ಇದು ಅರಮನೆಯ ಆವರಣದಲ್ಲಿ ನಿರ್ಮಿಸಲಾದ ದೇವಾಲಯ ಎಂಬುದನ್ನು ಗಮನಿಸಿದರೆ ಇದಕ್ಕೆ ಒಂದು ವಿಶೇಷ ಸ್ಥಾನವಿದ್ದಿತೆಂದು ಭಾವಿಸಲು ಅವಕಾಶವಿದೆ. ಆದುದರಿಂದ ಇದನ್ನು ರಾಜಮನೆತನದ ಖಾಸಗಿ ಉಪಯೋಗಕ್ಕಾಗಿ ನಿರ್ಮಿಸಲಾಯಿತೆಂದು ಭಾವಿಸಬಹುದು. ಇದು ಅಲಂಕಾರ ಮತ್ತು ವಿಶೇಷ ವಿನ್ಯಾಸಗಳಿಂದ ಕೂಡಿದ್ದು ವಿಜಯನಗರ ಸಾಮ್ರಾಜ್ಯದ ಪರಿಣಿತ ವಾಸ್ತುಶಿಲ್ಪಿಗಳಿಂದ ನಿರ್ಮಿಸಲಾದ ದೇವಾಲಯವೂ ಆಗಿದೆ.

ಅನಂತಶಯನ ದೇವಾಲಯ, ಅನಂತಶಯನಗುಡಿ

ಅನಂತಶಯನಗುಡಿಯು ಒಂದು ಸಣ್ಣಗ್ರಾಮವಾಗಿದ್ದು ಹೊಸಪೇಟೆಯಿಂದ ಐದು ಕಿಲೋಮೀಟರ್ ದೂರದಲ್ಲಿದ್ದು ಹಂಪೆಗೆ ಹೋಗುವ ಮಾರ್ಗದಲ್ಲಿದೆ. ವಿಜಯನಗರದ ಉತ್ತಮ ದಿನಗಳಲ್ಲಿ ಅದು ಹಂಪಿಯ ಭಾಗವಾಗಿದ್ದು ಸಂಪದ್ಭರಿತ ನಗರವಾಗಿತ್ತು. ಈಗ ಇದೊಂದು ಸಣ್ಣ ಹಳ್ಳಿ. ಇದು ಅನಂತಶಯನ ದೇವಾಲಯದಿಂದಾಗಿ ಪ್ರಖ್ಯಾತಿಯನ್ನು ಪಡೆದಿದೆ. ಅನಂತನಾಗನ ಮೇಲೆ ಮಲಗಿರುವ ವಿಷ್ಣುವಿನ ದೇವಾಲಯ ಇದಾದರೂ, ಈಗ ಆ ವಿಗ್ರಹ ಈ ದೇಗುಲದಲ್ಲಿಲ್ಲ. ಈ ದೇವಾಲಯವನ್ನು ಕ್ರಿ.ಶ. 1524ರಲ್ಲಿ ಕೃಷ್ಣದೇವರಾಯನು ನಿರ್ಮಿಸಿದನು.

ಉತ್ತರ, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಮಹಾದ್ವಾರಗಳಿರುವ ಪ್ರಾಕಾರದಲ್ಲಿ ಈ ದೇವಾಲಯ ನಿರ್ಮಾಣಗೊಂಡಿದೆ. ಪ್ರಧಾನ ದೇವಾಲಯವು ಈ ಪ್ರಾಂಗಣದ ಮಧ್ಯದಲ್ಲಿದೆ. ಪ್ರಧಾನ ಗರ್ಭಗೃಹವು ಆಯತಾಕಾರದಲ್ಲಿದ್ದು ಅದರ ಮುಂದೆ ಅಂತರಾಳವಿದೆ. ಇದರ ಮುಂಭಾಗದಲ್ಲಿ ಉತ್ತರ, ದಕ್ಷಿಣಗಲ್ಲಿ ಮುಚ್ಚಲಾದ ಹಾಗೂ ಪೂರ್ವದಲ್ಲಿ ಪ್ರವೇಶದ್ವಾರವಿರುವ ರಂಗಮಂಡಪವಿದೆ. ದೇವಾಲಯದ ಹೊರ ಗೋಡೆಯಲ್ಲಿ ಅನೇಕ ಫಲಕಗಳಿದ್ದು, ಅವುಗಳ ಮೇಲೆ ಅಗಲವಾದ ಮುಂಜೂರು ಮತ್ತು ಗೂಡುಗಳಿವೆ. ಹೊರವಲಯದ ಕಂಬಗಳು ಸಂಕೀರ್ಣ ರೀತಿಯದಾಗಿದ್ದು, ಕೆಲವು ಕಂಬಗಳ ಮೇಲೆ ಬಾಯಿತೆರೆದಿರುವ ಯಾಳಿಗಳ ಶಿಲ್ಪಗಳಿವೆ.

ಗರ್ಭಗೃಹದ ಚಾವಣಿಯು ಭಿನ್ನರೀತಿಯದಾಗಿದ್ದು ವಿಶಿಷ್ಟವೆನಿಸಿದೆ. ಇದು ಅಗಲವಾಗಿದ್ದು ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತವಾದ ಎತ್ತರದ ಕಮಾನು ಚಾವಣಿ ಹೊಂದಿದೆ. ಅಂತರಾಳದಲ್ಲಿ ರಂಗಮಂಡಪವನ್ನು ಪ್ರವೇಶಿಸುವ ಮೂರು ದ್ವಾರಬಂಧಗಳಿವೆ. ರಂಗಮಂಡಪದಲ್ಲಿ ಅನೇಕ ಕಂಬಗಳಿದ್ದು ಅವುಗಳ ಮೇಲೆ ವೈಷ್ಣವ ಚಿಹ್ನೆಗಳು, ಸೂರ್ಯ, ಚಂದ್ರ, ಗಂಧರ್ವರು ಮುಂತಾದ ತಗ್ಗು ಉಬ್ಬಿನ ಶಿಲ್ಪಗಳಿವೆ. ಕಂಬಗಳ ಮೇಲಿನ ಬೋದಿಗೆಗಳಲ್ಲಿ (ಕಂಬದ ಮೇಲೆ ತೊಲೆಯನ್ನು ಕೂರಿಸಲು ಮಾಡಿರುವ ಸಾಧನ) ಇಳಿಬಿದ್ದಿರುವ ಕಮಲದ ಮೊಗ್ಗಿನ ವಿನ್ಯಾಸಗಳಿವೆ. ಚಾವಣಿಯಲ್ಲಿ ಕಲ್ಲಿನ ಫಲಕಗಳಿದ್ದು, ಯಾವ ಅಲಂಕಾರಗಳೂ ಇಲ್ಲ.

ಪ್ರಧಾನ ಗುಡಿಯ ಆಗ್ನೇಯದಲ್ಲಿ ದೇವಿಯ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಮತ್ತು ರಂಗಮಂಡಪವಿದೆ. ಗರ್ಭಗೃಹದ ಮೂರು ಕಡೆಗಳಲ್ಲಿ ಕೀರ್ತಿಮುಖ ತೋರಣಗಳಿದ್ದು, ಒಂದರಲ್ಲಿ ಪದ್ಮಾಸನದಲ್ಲಿರುವ ಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವಿದ್ದು, ಅದರ ರಂಗಮಂಡಪವು ತುಂಬ ಹಾಳಾಗಿದೆ. ದ್ವಾರಬಂಧದಲ್ಲಿ ವೈಷ್ಣವ ದ್ವಾರಪಾಲಕರು, ಕಮಲ ಪುಷ್ಪದ ಹಾಗೂ ಲತಾ ವಿನ್ಯಾಸಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಚಾವಣಿಯ ಮಧ್ಯದಲ್ಲಿ ಕಮಲಪುಷ್ಪವಿರುವ ಭುವನೇಶ್ವರಿ ಇದೆ. ಪ್ರಧಾನ ಮಹಾದ್ವಾರದ ಮೇಲ್ಭಾಗಗಳು ಹೆಚ್ಚಾಗಿ ಹಾಳಾಗಿದ್ದು, ಕೆಳಭಾಗಗಳು ಮಾತ್ರ ಉಳಿದು ಬಂದಿವೆ. ಹಾಳಾಗಿದ್ದರೂ ಗರ್ಭಗೃಹದ ಮೇಲಿರುವ ಕಮಾನು ಚಾವಣಿಯ ಶಿಖರದಿಂದಾಗಿ ಇದೊಂದು ಪ್ರಮುಖವಾದ ಹಾಗೂ ಆಸಕ್ತಿಕರವಾದ ದೇವಾಲಯವೆಂದು ಪರಿಗಣಿತವಾಗಿದೆ. ಈ ರೀತಿಯ ವಿನ್ಯಾಸವುಳ್ಳ ದೇವಾಲಯಗಳು ದಕ್ಷಿಣ ಭಾರತೀಯ ವಾಸ್ತುಶಿಲ್ಪ ಇತಿಹಾಸದಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಆದುದರಿಂದ ಅನಂತಶಯನ ಗುಡಿಯು ವಾಸ್ತುಶಿಲ್ಪ ಇತಿಹಾಸದಲ್ಲಿ ವಿಶಿಷ್ಟವೆನಿಸಿದೆ.

## ಅಚ್ಯುತರಾಯ ದೇವಾಲಯ, ಹಂಪಿ

ಅಚ್ಯುತರಾಯ (ಕ್ರಿ.ಶ. 1530-42) ದೇಗುಲವು ಹಂಪಿಯಲ್ಲಿ ಭವ್ಯ ದೇವಾಲಯ ಸಂಕೀರ್ಣ. ಇದೊಂದು ಸುಂದರವಾದ ದೇವಾಲಯಗಳ ಸಮೂಹ. ಇದನ್ನು ಅಚ್ಯುತರಾಯ ದೇವಾಲಯವೆಂದು ಕರೆಯಲಾದರೂ ಕಾಲದ ಶಾಸನ ಇದನ್ನು ತಿರುವೇಂಗಳನಾಥ ಅಥವಾ ವೆಂಕಟೇಶ ದೇವಾಲಯವೆಂದು ಹೆಸರಿಸುತ್ತದೆ. ವಿಜಯನಗರ ದೊರೆ ಅಚ್ಯುತರಾಯನು ಕ್ರಿ.ಶ. 1539ರಲ್ಲಿ ಈ ದೇವಾಲಯವನ್ನು ನಿರ್ಮಿಸಿದನು.

ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣ ಪಥ, ಸಭಾಮಂಡಪ, ಮಹಾಸಭಾಮಂಡಪ, ಕಲ್ಯಾಣ ಮಂಡಪ, ದೇವಿಯ ದೇಗುಲ ಮುಂತಾದವುಗಳಿವೆ. ಇವೆಲ್ಲವೂ ಒಂದರೊಳಗೆ ಇನ್ನೊಂದರಂತೆ ಇರುವ ಎರಡು ಪ್ರಾಕಾರಗಲ್ಲಿ ನಿರ್ಮಾಣಗೊಂಡಿವೆ. ಹೊರಪ್ರಾಕಾರದಲ್ಲಿ ಉತ್ತರ ಮತ್ತು ಪಶ್ಚಿಮಗಳಲ್ಲಿ ಮಹಾದ್ವಾರಗಳಿವೆ; ಆದರೆ ಒಳಗಿನ ಪ್ರಾಕಾರದಲ್ಲಿ ಉತ್ತರ, ಪೂರ್ವ ಮತ್ತು ಪಶ್ಚಿಮಗಳಲ್ಲಿ ಮಹಾದ್ವಾರಗಳಿವೆ. ಈ ಎಲ್ಲ ಮಹಾದ್ವಾರಗಳ ಮೇಲೂ ಗೋಪುರಗಳಿದ್ದವು. ಈಗ ಅವು ಹಾಳಾಗಿರುವ ಸ್ಥಿತಿಯಲ್ಲಿವೆ.

ಚೌಕಾಕಾರದ ಗರ್ಭಗೃಹದಲ್ಲಿ ಮೂಲತಃ ಇದ್ದ ವೆಂಕಟೇಶನ ವಿಗ್ರಹ ಈಗ ಇಲ್ಲ. ಅದರ ದ್ವಾರಬಂಧದ ಮೇಲೆ ವೈಷ್ಣವ ದ್ವಾರಪಾಲರುಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದ ಮೇಲೆ ದ್ರಾವಿಡ ರೀತಿಯ ಶಿಖರವಿದೆ. ಚೌಕಾಕಾರದ ಸಭಾಮಂಡಪದ ಮಧ್ಯಭಾಗದಲ್ಲಿ ಸ್ವಲ್ಪ ಎತ್ತರವಾಗಿರುವ ಸ್ಥಳದಲ್ಲಿ ನಾಲ್ಕು ಕಂಬಗಳಿವೆ. ಮಹಾಸಭಾಮಂಡಪದಲ್ಲಿ ಐದು ಸಾಲುಗಳಲ್ಲಿ ಮೂವತ್ತು ಕಂಬಗಳಿವೆ. ಈ ಕಂಬಗಳು ವಿಜಯನಗರ ಶೈಲಿಯಲ್ಲಿವೆ. ನೈರುತ್ಯದಲ್ಲಿ ದೇವಿ ಗುಡಿಯಿದೆ. ಅದರ ಗರ್ಭಗೃಹದಲ್ಲಿ ಈಗ ಯಾವ ವಿಗ್ರಹವೂ ಇಲ್ಲ. ಅದರ ಸಭಾಮಂಡಪದಲ್ಲಿರುವ ಶಿಲ್ಪವೊಂದನ್ನು ಈ ದೇವಾಲಯದ ನಿರ್ಮಾತ ಅಚ್ಯುತರಾಯನದ್ದೆಂದು ಗುರುತಿಸಲಾಗಿದೆ. ಈ ಗುಡಿಯ ಶಿಲ್ಪಗಳು ಉತ್ತಮ ಹಸ್ತಕೌಶಲವನ್ನು ವ್ಯಕ್ತಪಡಿಸುತ್ತವೆ. ತಗ್ಗುಉಬ್ಬಿನ ನಂದಿ ಮತ್ತು ಆನೆಗಳ ಸಂಯುಕ್ತ ಶಿಲ್ಪಗಳು ನಮ್ಮ ಗಮನವನ್ನು ಸೆಳೆಯುತ್ತವೆ. ನಾಜೂಕಾಗಿ ಶಿಲ್ಪಿತವಾದ ದೇವ, ದೇವಿಯರ ಶಿಲ್ಪಗಳನ್ನು ಹೊಂದಿರುವ ಕಂಬಗಳು ತುಂಬ ಅಂದವಾಗಿವೆ.

ಪಶ್ಚಿಮ ಭಾಗದಲ್ಲಿ ಆಯತಾಕಾರದ ಕಲ್ಯಾಣಮಂಡಪವಿದೆ. ಇದರಲ್ಲಿ ನೂರಕ್ಕೂ ಹೆಚ್ಚು ಕಂಬಗಳಿವೆ. ಇವುಗಳ ಮೇಲೆ ಗರುಡ, ಹನುಮಾನ್, ವಿಷ್ಣು ಮುಂತಾದ ಶಿಲ್ಪಗಳಿವೆ.

ಈ ದೇವಾಲಯ ಸಂಕೀರ್ಣದ ಮುಂದೆ ಸಣ್ಣ ಕಂಬಗಳನ್ನು ಹೊಂದಿರುವ ಮಂಡಪಗಳಿವೆ. ಇವುಗಳಲ್ಲಿ ವ್ಯಾಪಾರಿಗಳು ಮುತ್ತು ಮತ್ತು ಇತರ ಪ್ರಶಸ್ತ ಶಿಲೆಗಳನ್ನು ಸಂಗ್ರಹಿಸಿಟ್ಟುಕೊಂಡು ಮಾರುತ್ತಿದ್ದರೆಂಬುದು ತಿಳಿದಿರುವ ವಿಷಯವೇ ಆಗಿದೆ. ಅನೇಕ ವಿದೇಶೀಯ ಯಾತ್ರಿಕರು ಮುತ್ತಿನ ಈ ಮಾರುಕಟ್ಟೆಯನ್ನು ಶ್ಲಾಘಿಸಿದ್ದಾರೆ. ಈ ರೀತಿಯ ಮಾರುಕಟ್ಟೆ, ಹಂಪಿಯನ್ನು ಬಿಟ್ಟು ಪ್ರಪಂಚದ ಇನ್ನಾವ ಭಾಗದಲ್ಲೂ ಇರಲಿಲ್ಲವೆಂದು ಇವರು ಹಂಪಿಯ ಮಾರುಕಟ್ಟೆಯನ್ನು ಹೊಗಳಿದ್ದಾರೆ. ಇದೇ ವಿಜಯನಗರದ ಹೆಚ್ಚಳ.

## ಗಜಶಾಲೆ, ಹಂಪಿ

ವಿಜಯನಗರ ರಾಜಧಾನಿಯಾದ ಹಂಪಿಯಲ್ಲಿ ವಿಶಾಲವಾದ ಬಯಲಿನಲ್ಲಿ ಭವ್ಯವಾಗಿರುವ ಗಜಶಾಲೆಯ ಕಟ್ಟಡವಿದೆ. ಹೆಸರಿಗೆ ತಕ್ಕ ರೀತಿಯಲ್ಲಿ ಆನೆಯಂತೆ ಪ್ರತಿಭಾಗವೂ ಬೃಹತ್ ಪ್ರಮಾಣದಲ್ಲಿದೆ. ವಾಸ್ತವವಾಗಿ ಇದೊಂದು ದೀರ್ಘ ಚತುರಸ್ರಾಕಾರದ ಕಟ್ಟಡ. ಇದು ದಕ್ಷಿಣದಿಂದ ಉತ್ತರಕ್ಕೆ 85 ಮೀಟರ್ ಉದ್ದವಾಗಿದ್ದು, ಇದರ ಅಗಲ 9 ಮೀಟರ್. ಇದರಲ್ಲಿ ಇಕ್ಕೆಲಗಳಲ್ಲಿ ಐದರಂತೆ, ಮಧ್ಯದಲ್ಲಿ ಒಂದು ಕೋಣೆ, ಒಟ್ಟು ಹನ್ನೊಂದು ಕೋಣೆಗಳಿವೆ. ಪ್ರತಿಕೋಣೆಯ ಅಳತೆಯೂ ಸಮನಾಗಿದ್ದು ಪ್ರತಿಬಾಹುವು ಆರು ಮೀಟರ್ ಉದ್ದವಾಗಿದೆ. ಮಧ್ಯದ ಕೋಣೆಯಲ್ಲಿ ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ವಿವಿಧ ರೀತಿಯ ಗುಮ್ಮಟಗಳಿವೆ. ಮಧ್ಯದ ಕೋಣೆಯು ಎರಡು ಮಹಡಿಗಳ ಕಂಬಗಳ ಮಂಡಪವಾಗಿದ್ದು ಈಗ ಭಾಗಶಃ ಹಾಳಾಗಿದೆ. ಮೇಲಿನ ಗುಮ್ಮಟಗಳು ಇಸ್ಲಾಮಿಕ್ ವಾಸ್ತುಶೈಲಿಯಲ್ಲಿವೆ. ಇದರಿಂದ ಈ ಕಟ್ಟಡದ ಬೃಹತ್ತು ಮತ್ತು ಮಹತ್ತು ಎರಡೂ ಹೆಚ್ಚಾಗಿವೆ. ಈ ಗುಮ್ಮಟಗಳಲ್ಲಿ ವೈವಿಧ್ಯತೆಯಿದೆ. ಕೆಲವು ಗೋಲಾಕಾರದವು; ಮತ್ತೆ ಕೆಲವು ಹನ್ನೆರಡು ಕೋನಾಕೃತಿಯನ್ನು ಹೊಂದಿವೆ; ಇನ್ನೂ ಕೆಲವು ಅರವತ್ತೆರಡು ಕೊಳಲಿನ ವಿನ್ಯಾಸವನ್ನು ಹೊಂದಿವೆ.

ಎಲ್ಲ ಕೋಣೆಗಳಿಗೂ ಪಶ್ಚಿಮದಲ್ಲಿ ಎತ್ತರವಾದ ಕಮಾನುಗಳ ದ್ವಾರಗಳಿವೆ. ಪೂರ್ವದಲ್ಲಿ ಸಣ್ಣ ಬಾಗಿಲಿದೆ. ಕೆಲವು ಕೋಣೆಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಇವುಗಳಿಗೆ ದಪ್ಪನಾದ ಹಾಗೂ ಗಟ್ಟಿಯಾದ ಗೋಡೆಗಳಿವೆ. ಚಾವಣಿಯ ಹಂತದಲ್ಲಿ ಗೋಡೆಗಳಿಗೆ ಮರದ ದಿಮ್ಮಿಗಳನ್ನು ಸೇರಿಸಿದ್ದಾರೆ. ಇದರಲ್ಲಿ ಕಬ್ಬಿಣದ ಬಳೆಗಳಿದ್ದವು. ಇದರಿಂದ ಆನೆಗಳನ್ನು ಸರಪಳಿಯಿಂದ ಕಟ್ಟಿಹಾಕಲು ಅನುಕೂಲವಾಗುತ್ತಿತ್ತು. ಕಮಾನುಗಳ ದ್ವಾರ ಮತ್ತು ಮಟ್ಟಸವಾದ ಚಾವಣಿ ಬಹಮನಿ ಶೈಲಿಯಲ್ಲಿವೆ. ಆದರೆ ವಿಜಯನಗರದ ವಾಸ್ತುಶಿಲ್ಪಿಗಳು ಈ ರೀತಿಯ ಇಸ್ಲಾಮಿಕ್ ಶೈಲಿಯನ್ನು ಈ ಕಟ್ಟಡದಲ್ಲಿ ಏಕೆ ಬಳಸಿದರು ಎಂದು ಹೇಳುವುದು ಕಷ್ಟ.

ಐತಿಹ್ಯಗಳ ಪ್ರಕಾರ ಇದು ಗಜಶಾಲೆ ಎಂದು ಭಾವಿಸಲ್ಪಟ್ಟಿದ್ದರೂ, ಈ ಕಟ್ಟಡದ ನಿಜವಾದ ಉಪಯೋಗ ಏನಾಗಿತ್ತು ಎಂಬುದರಲ್ಲಿ ಸಂದೇಹವನ್ನು ಕೆಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ವಿಜಯನಗರ ಸೇನೆಯಲ್ಲಿ ನೂರಾರು ಆನೆಗಳಿದ್ದವು. ಆದರೆ ಈ ಕಟ್ಟಡದಲ್ಲಿ ಕೇವಲ ಹನ್ನೊಂದು ಆನೆಗಳಿಗೆ ಅವಕಾಶವಿದೆ. ಬಹುಶಃ ಇದು ರಾಜನ ಖಾಸಗಿ ಆನೆಗಳ ಶಾಲೆಯಾಗಿದ್ದಿರಬೇಕು. ಇಮ್ಮಡಿ ದೇವರಾಯನಿಗೆ ಆನೆಗಳನ್ನು ಕಂಡರೆ ವಿಶೇಷ ಅಕ್ಕರೆಯಿತ್ತು. ಆದುದರಿಂದ ಇವನ ಕಾಲದಲ್ಲಿ ಈ ಗಜಶಾಲೆಯ ಕಟ್ಟಡವನ್ನು ನಿರ್ಮಿಸಿರಬೇಕು. ಅನೇಕ ವಿದೇಶೀಯ ಯಾತ್ರಿಕರು ವಿಜಯನಗರದ ಕಾಲದಲ್ಲಿದ್ದ ಆನೆಗಳ ಬಗೆಗೆ ಹೆಚ್ಚಿನ ಮೆಚ್ಚಿಗೆಯ ಮಾತುಗಳನ್ನು ದಾಖಲಿಸಿದ್ದಾರೆ. ಅಬ್ದುಲ್ ರಜಾಕ್ ಎಂಬುವವನು, ಇಮ್ಮಡಿ ದೇವರಾಯನ ಸೈನ್ಯದಲ್ಲಿ ಬೆಟ್ಟದಂತೆ ಎತ್ತರವಾದ ರಾಕ್ಷಸರಂತೆ ಬೃಹತ್ತಾದ ಸಾವಿರಾರು ಆನೆಗಳಿದ್ದವೆಂದು ಹೇಳಿದ್ದಾನೆ. ದೇವರಾಯನು ಆನೆಗಳಿಗೆ ಸಂಬಂಧಿಸಿದ ಬಿರುದುಗಳನ್ನು ಹೊಂದಿದ್ದು ಮಾತ್ರವಲ್ಲದೆ ಆನೆಯ ಚಿತ್ರವಿರುವ ನಾಣ್ಯಗಳನ್ನು ಟಂಕಿಸಿದ್ದನು. ಆದುದರಿಂದ ಈ ಎಲ್ಲ ಮಾಹಿತಿಗಳ ಆಧಾರದ ಮೇಲೆ ವಿಜಯನಗರ ಕಾಲದಲ್ಲಿ ಯುದ್ಧದಲ್ಲಿ ಮಾತ್ರವಲ್ಲದೆ, ಮೆರವಣಿಗೆ ಮತ್ತು ದಸರದಂತಹ ಧಾರ್ಮಿಕ ಉತ್ಸವಗಳಲ್ಲಿಯೂ ಆನೆಯ ಪಾತ್ರ ಮಹತ್ವದ್ದಾಗಿತ್ತು ಎಂದು ಗೊತ್ತಾಗುತ್ತದೆ. ಒಟ್ಟಿನಲ್ಲಿ ಈ ಗಜಶಾಲೆಯು ವಿಜಯನಗರ ಸಾಮ್ರಾಜ್ಯದ ಸೈನಿಕ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಕಮಲ ಮಹಲ್, ಹಂಪಿ

ಕಮಲ ಮಹಲ್ ಹಂಪಿಯಲ್ಲಿರುವ ಗಾರೆಯ ಅತ್ಯಂತ ಸುಂದರ ಮಂಡಪ. ಜೊತೆಗೆ ಭಾರತೀಯ ಹಾಗೂ ಇಸ್ಲಾಮಿಕ್ ವಾಸ್ತುಶೈಲಿಗಳ ಸುಮಧುರ ಮಿಳಿತಕ್ಕೆ ಇದೊಂದು ಉತ್ತಮ ಉದಾಹರಣೆ.

ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಲಾದ ಈ ಕಟ್ಟಡ ನಯವಾದ ಹಾಗೂ ವಿಶೇಷ ಹೊಳಪಿನ ಗೋಡೆಗಳಿಂದ ಕೂಡಿದೆ. ಆದರೆ ಈ ಕಟ್ಟಡದ ಜಗತಿಯ ಭಾಗ ಮಾತ್ರ ಕಲ್ಲಿನಿಂದ ನಿರ್ಮಿತವಾಗಿದೆ. ಇದು ನಕ್ಷತ್ರಾಕಾರದ ಸುತ್ತುಗೆರೆ ಹೊಂದಿದ್ದು ಕೆಳಗೆ ಎಲ್ಲ ಕಡೆಗಳಲ್ಲಿಯೂ ಅಲಂಕೃತ ದಿಂಡುಗಳಿವೆ. ಇದು ಎರಡು ಅಂತಸ್ತಿನ ಕಟ್ಟಡ. ನೆಲ ಅಂತಸ್ತು ಎಲ್ಲ ಕಡೆಯಿಂದಲೂ ತೆರೆದ ಮಂಡಪ. ಇದರಲ್ಲಿ ಅಲಂಕೃತ ಶೃಂಗಾಗ್ರವುಳ್ಳ ಕಮಾನುಗಳಿವೆ. ಅವುಗಳ ಮೇಲ್ಭಾಗದಲ್ಲಿ ಕಟ್ಟಡದ ಸುತ್ತಲೂ ಇಳಿಜಾರಾಗಿರುವ ಮುಂಜೂರು ಇದೆ. ಕೆಳಗಿನ ಹಂತದ ಮಂಡಪವನ್ನು ರಾಜಮನೆತನದವರು ಪರಸ್ಪರ ಭೇಟಿಯ ಹಾಗೂ ವಿಹಾರ ಸ್ಥಳವಾಗಿ ಬಳಸುತ್ತಿದ್ದರೆಂದು ತೋರುತ್ತದೆ. ಈ ಕಟ್ಟಡದ ಕಲ್ಲಿನ ಜಗತಿಯು ಎರಡು ರೀತಿಯ ಮುಂಚಾಚಿದ ಕೋನಗಳನ್ನು ಹೊಂದಿದ, ವಿಭಿನ್ನವಾದ ತಲ ವಿನ್ಯಾಸವನ್ನು ಹೊಂದಿರುವುದರಿಂದ ಇದು ಕಲಾ ವಿಮರ್ಶಕರ ಶ್ಲಾಘನೆಗೆ ಪಾತ್ರವಾಗಿದೆ.

ಮೇಲಿನ ಅಂತಸ್ತಿಗೆ ಹೋಗಲು ಮಹಡಿಯ ಮೆಟ್ಟಿಲುಗಳಿವೆ. ಮೇಲಿನ ಅಂತಸ್ತು ಮುಚ್ಚಿದ ಮಂಡಪವಾಗಿದ್ದು, ಅದರಲ್ಲಿ ಆಯತಾಕಾರದ ಕಿಟಕಿಗಳಿವೆ. ಇವುಗಳಿಗೆ ಪ್ರತ್ಯೇಕವಾದ ಕಮಾನುಗಳಿವೆ. ಪ್ರತಿಯೊಂದೂ ಕಿಟಕಿಗೂ ಬಾಗಿಲುಗಳಿದ್ದವು. ಇದು ಈ ಸುಂದರ ಕಟ್ಟಡದ ವೈಶಿಷ್ಟ್ಯಗಳಲ್ಲಿ ಗಮನಾರ್ಹವಾದುದು. ಬಹುಶಃ ಈ ಕಟ್ಟಡವನ್ನು ಅರಮನೆಯ ಸ್ತ್ರೀಯರು ಬಳಸುತ್ತಿದ್ದರು. ಮೇಲಿನ ಅಂತಸ್ತಿನಲ್ಲಿಯೂ ಇಳಿಜಾರಾದ ಮುಂಜೂರು ಇದೆ. ಹಿಂದೂ ದೇವಾಲಯಗಳ ಶಿಖರಗಳಂತೆ ಕಾಣುವ ಶಿಖರಗಳು ಚಾವಣಿಯ ಹಂತದಲ್ಲಿವೆ. ಮೇಲಿನ ಅಂತಸ್ತಿನ ಕಟ್ಟಡದ ಒಳಭಾಗದಲ್ಲಿ ನಕ್ಷತ್ರಾಕಾರದ, ಮಧ್ಯದಲ್ಲಿ ನಾಲ್ಕು ಕಂಬಗಳಿರುವ ಹಾಗೂ ಗೂಡುಗಳಿರುವ ಮಂಡಪವಿದೆ. ಒಳಗೋಡೆಯಲ್ಲಿ ಪುಷ್ಪ ವಿನ್ಯಾಸದ ಸುಂದರ ಅಲಂಕಾರಗಳಿವೆ. ಇಲ್ಲಿನ ಕಂಬಗಳು ಮತ್ತು ಕಮಾನುಗಳು ಇಸ್ಲಾಮಿಕ್ ಶೈಲಿಯನ್ನು ಪ್ರದರ್ಶಿಸಿದರೆ, ಜಗತಿ, ಚಾವಣಿಯ ಶಿಖರಗಳು, ಕಾರ್ನಿಸುಗಳು ಮತ್ತು ಗಾರೆಯ ಅಲಂಕಾರಗಳು ಹಿಂದೂ ಲಕ್ಷಣಗಳನ್ನು ಪ್ರದರ್ಶಿಸುತ್ತವೆ. ಈ ಲಕ್ಷಣಗಳ ಹಿತಮಿತ ಮಿಳಿತವೇ ಈ ಕಟ್ಟಡವನ್ನು ಹಂಪಿಯಲ್ಲಿ ವೈಶಿಷ್ಟ್ಯಪೂರ್ಣ ಕಟ್ಟಡವೆಂದು ಪರಿಗಣಿಸಲು ಅವಕಾಶ ಕಲ್ಪಿಸಿದೆ. ವಾಸ್ತವವಾಗಿ ಇದು ಆ ಕಾಲದ ಎರಡು ವಿವಿಧ ವಾಸ್ತುಶೈಲಿಗಳ ಆಸಕ್ತಿಕರ ಹಾಗೂ ಅಪೇಕ್ಷಣೀಯ ಲಕ್ಷಣಗಳನ್ನು ಹೊಂದಿದ ಸೌಧವೆನಿಸಿದೆ.

ಈ ಕಟ್ಟಡವನ್ನು ರಾಜಮನೆತನದವರು ವಿಹಾರಕ್ಕಾಗಿ ಬಳಸುತ್ತಿದ್ದರೆಂದು ತೋರುತ್ತದೆ. ಏಕೆಂದರೆ ಕೆಳಗೆ ಮುಕ್ತವಾದ ಜಾಗವೂ, ಮೇಲ್ಭಾಗದಲ್ಲಿ ಖಾಸಗಿ ಕೆಲಸಗಳಿಗೂ ಅವಕಾಶವಿದ್ದಿತು. ಈ ರೀತಿ ಕಮಲ ಮಹಲ್ ಎನ್ನುವ ಹೆಸರು ಈ ಸುಂದರ ಕಟ್ಟಡಕ್ಕೆ ಅರ್ಥಪೂರ್ಣವಾಗಿದೆ.

## ರಾಣಿಯರ ಸ್ನಾನಗೃಹ, ಹಂಪಿ

ಹಂಪಿಯ ಇನ್ನೊಂದು ಆಕರ್ಷಕ ಕಟ್ಟಡವೆಂದರೆ ರಾಣಿಯರ ಸ್ನಾನಗೃಹ. ಈ ಕಟ್ಟಡವನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದ್ದರೆಂಬುದಕ್ಕೆ ಐತಿಹಾಸಿಕ ಆಧಾರಗಳು ಇಲ್ಲದೇ ಇದ್ದರೂ, ಸ್ಥಳೀಯ ಐತಿಹ್ಯಗಳು ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಅದೇ ರೀತಿಯಲ್ಲಿ ಈ ಕಟ್ಟಡದ ವಾಸ್ತುಲಕ್ಷಣಗಳು ಈ ಅಭಿಪ್ರಾಯವನ್ನು ದೃಢಪಡಿಸುತ್ತವೆ. ಈ ಕಟ್ಟಡವನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದ್ದು, ನುಣುಪಾದ ಗಾರೆಯ ಹೊರಮೈ ಗಮನಾರ್ಹವಾಗಿದೆ. ಇದು ಇಂಡೋಸಾರ್ಸೆನಿಕ್ ಶೈಲಿಯಲ್ಲಿ ಕಟ್ಟಲಾದ ಚೌಕಾಕಾರದ ಕಟ್ಟಡ. ಚೌಕಾಕಾರದ ಕಟ್ಟಡದಲ್ಲಿ ಸುತ್ತಲೂ ಕಂಬಗಳಿಂದ ಕೂಡಿದ ಮೊಗಸಾಲೆ ಹಾಗೂ ಕಮಾನು ಪ್ರವೇಶ ದ್ವಾರಗಳಿವೆ. ಮಧ್ಯದಲ್ಲಿ ಈಜು ಕೊಳವಿದ್ದು, ನೀರಿಗಿಳಿಯಲು ಮೆಟ್ಟಿಲುಗಳಿವೆ. ಎರಡು ಕಡೆಗಳಲ್ಲಿಯೂ ಕಮಾನಿನ ದ್ವಾರಗಳಿವೆ. ಕಮಾನುಗಳ ಮೇಲೆ ಗೋಡೆ, ಅದರ ತುದಿಯಲ್ಲಿ ಸಣ್ಣ ಕಮಾನುಗಳ ಅಲಂಕಾರ ಹೊಂದಿರುವ ಕೈಪಿಡಿಯಿದೆ. ಇವು ಅಂದವಾಗಿದ್ದು, ಕಟ್ಟಡಕ್ಕೆ ಮೆರುಗನ್ನು ನೀಡುತ್ತವೆ. ಹಂಪಿಯಲ್ಲೇ ಇರುವ ಕಮಲ ಮಹಲಿನಲ್ಲಿ ಕಂಡುಬರುವ ಕಲಾಕೌಶಲ, ಈ ಕಟ್ಟಡದ ಗೋಡೆ ಮತ್ತು ಕಮಾನುಗಳಲ್ಲಿ ಮತ್ತು ಗಾರೆಯ ಅಲಂಕಾರಗಳಲ್ಲಿಯೂ ಕಾಣಬರುತ್ತದೆ. ಆದುದರಿಂದ ಈ ಎರಡು ಕಟ್ಟಡಗಳೂ ಒಂದೇ ಸಮಯದಲ್ಲಿ, ಈ ರೀತಿಯ ತಾಂತ್ರಿಕತೆಯಲ್ಲಿ ಪರಿಣಿತರಾಗಿದ್ದ ಕುಶಲಕರ್ಮಿಗಳಿಂದ ನಿರ್ಮಿತವಾದವು ಎಂದು ಭಾಸವಾಗುತ್ತದೆ.

ಪ್ರಧಾನ ಪ್ರವೇಶದ್ವಾರದ ಎರಡೂ ಕಡೆಗಳಲ್ಲಿರುವ ಮುಂಚಾಚಿದ ಬಾಲ್ಕನಿಗಳು ಇಲ್ಲಿನ ಇನ್ನೊಂದು ಆಕರ್ಷಣೆ. ಇವುಗಳಲ್ಲಿ ಮೂರು ಕಮಾನುಗಳು ಮತ್ತು ಅವುಗಳ ಮೇಲೆ ಆಯತಾಕಾರದ ಗವಾಕ್ಷಗಳು ಮತ್ತು ಅವುಗಳ ಮೇಲೆ ಇಳಿಜಾರಾದ ಮುಂಜೂರುಗಳು ಇವೆ. ಈ ರೀತಿಯ ಗಾರೆಯ ಬಾಲ್ಕನಿಗಳು ಹಂಪಿಯ ಅನೇಕ ಕಡೆಗಳಲ್ಲಿ ಇದ್ದಿರಬೇಕು. ಈ ಕಟ್ಟಡದಲ್ಲಿ ಇವು ರಾಜಮನೆತನದವರ ಘನತೆಗೆ ತಕ್ಕಂತೆ ಅಂದವಾಗಿವೆ. ಗೋಡೆ ಹಾಗೂ ಕಮಾನುಗಳಲ್ಲಿನ ಗಾರೆಯ ಅಲಂಕಾರ, ಈ ಕಟ್ಟಡದ ಒಳಭಾಗವನ್ನು ಸೌಂದರ್ಯಯುತವಾಗಿ ಮಾಡಿವೆ.

ಈ ಕಟ್ಟಡದ ಮಧ್ಯದಲ್ಲಿರುವ ಕೊಳ ಐವತ್ತು ಅಡಿಗಳ ಚೌಕಾಕಾರದಲ್ಲಿದೆ. ಈ ಕೊಳಕ್ಕೆ ವ್ಯವಸ್ಥಿತವಾಗಿ ಸದಾ ನೀರು ಸರಬರಾಜು ಆಗುವಂತೆ ಮಾಡಿರುವುದು ಈ ಕಟ್ಟಡದ ಮುಖ್ಯ ಲಕ್ಷಣ. ಇದರಿಂದ, ಈ ಕಟ್ಟಡ ಜಲಕ್ರೀಡೆಗೆ ಸಂಬಂಧಿಸಿದ್ದೆಂದು ತಿಳಿದು ಬರುತ್ತದೆ. ವಿಜಯನಗರದ ರಾಜಮನೆತನದವರು ಜಲಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರೆಂದು ಇತರ ಆಕರಗಳಿಂದ ತಿಳಿದು ಬಂದಿರುವುದು ಇದನ್ನು ದೃಢಪಡಿಸುತ್ತದೆ. ದುರದೃಷ್ಟವೆಂದರೆ, ಈ ಕಟ್ಟಡದ ಕೆಲವು ಭಾಗಗಳು ಹಾಳಾಗಿವೆ. ರಾಜಮನೆತನದವರು ಇದನ್ನು ಜಲಕ್ರೀಡೆಗೆ ಬಳಸುತ್ತಿದ್ದ ಸಮಯದಲ್ಲಿ, ಹಂಪಿಯಲ್ಲೇ ಇದೊಂದು ಅಂದದ ಕಟ್ಟಡವಾಗಿದ್ದಿತೆಂದು ಭಾವಿಸಬಹುದು. ಈ ರೀತಿಯ ಕಟ್ಟಡಗಳು ಮಧ್ಯಕಾಲೀನ ವಾಸ್ತು ಇತಿಹಾಸದಲ್ಲಿ ವಿರಳ.

ವಿಜಯನಗರದ ವಾಸ್ತುಶಿಲ್ಪಿಗಳು ಕಲ್ಲಿನಲ್ಲಿ ಮಾತ್ರವಲ್ಲದೆ, ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಡಗಳನ್ನು ಕಟ್ಟುವ ಕಲೆಯಲ್ಲಿಯೂ ನಿಷ್ಣಾತರಾಗಿದ್ದರೆನ್ನುವುದು, ರಾಣಿಯರ ಸ್ನಾನಗೃಹ ಮತ್ತು ಇದೇ ರೀತಿಯ ಇತರ ಕಟ್ಟಡಗಳಿಂದ ಖಚಿತಗೊಳ್ಳುತ್ತದೆ.

# ಕೋಟೆ, ಚಿತ್ರದುರ್ಗ

ಚಿತ್ರದುರ್ಗ ನಗರವು, ಅಲ್ಲಿರುವ ಬೆಟ್ಟದ ಮೇಲೆ ನಿರ್ಮಿಸಲಾಗಿರುವ ಬೃಹತ್ತಾದ ಹಾಗೂ ಮಹತ್ತಾದ ಮತ್ತು ಸುಂದರವಾದ ಕೋಟೆಯಿಂದ ಕರ್ನಾಟಕದಲ್ಲೇ ಹೆಸರುವಾಸಿಯಾಗಿದೆ. ಈ ಬೃಹತ್ತಾದ ಕೋಟೆಯು ದೂರದಿಂದಲೇ ಸಂದರ್ಶಕರನ್ನು ಕೈ ಬೀಸಿ ಕರೆಯುತ್ತದೆ : ಹೀಗಾಗಿ ಇದೊಂದು ಉತ್ತಮವಾದ ಪ್ರವಾಸಿ ತಾಣವಾಗಿದೆ. ಚಿತ್ರದುರ್ಗವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದಿದ್ದರೂ, ಇಲ್ಲಿರುವ ಕೋಟೆಯು ಮಧ್ಯಕಾಲೀನ ಸಮಯಕ್ಕೆ ಸೇರುತ್ತದೆ. ದಪ್ಪ ಕಲ್ಲುಗಳಿಂದ ಎತ್ತರದವರೆಗೆ ಕಟ್ಟಲಾದ ಈ ನಿರ್ಮಿತಿಯು ಶ್ರೇಷ್ಠವಾಗಿದ್ದು, ಇದನ್ನು ಭೇದಿಸುವುದು ಕಷ್ಟಸಾಧ್ಯವಾದ ಕೆಲಸವೇ ಆಗಿತ್ತು. ಸಾಮಾನ್ಯವಾಗಿ ಈ ಕಲ್ಲಿನ ಗೋಡೆಗಳ ಎತ್ತರ 15 ರಿಂದ 40 ಅಡಿಗಳವರೆಗೆ ಇದೆ. ಈ ಬೃಹತ್ ಕೋಟೆಯ ನಿರ್ಮಾಣಕ್ಕೆ ಕಾರಣರಾದವರು ಚಿತ್ರದುರ್ಗದ ಪಾಳೆಯಗಾರರು. ಹೈದರ್ ಮತ್ತು ಟಿಪ್ಪು ಸುಲ್ತಾನ್ ಅವರ ಸಮಯದಲ್ಲಿ ಬುರುಜುಗಳು, ಕಂಡಿಗಳುಳ್ಳ ಗೋಡೆಯ ಕೈಪಿಡಿಗಳು ಮತ್ತು ನೀರಿನ ಕಂದಕಗಳೂ ಸೇರಿಸಲ್ಪಟ್ಟವು. ಈ ಕಂದಕಗಳನ್ನು ದಾಟಲು ಅಸಾಧ್ಯವಾಗುವಂತೆ ಮಾಡಲು ಇದರಲ್ಲಿ ಮೊಸಳೆಗಳನ್ನು ಬಿಟ್ಟಿದ್ದರು.

ಈ ಕೋಟೆಗೆ ಐದು ಹೆಬ್ಬಾಗಿಲುಗಳಿವೆ. ಇವುಗಳಿಗೆ ಸೇರಿದ ಗೋಡೆಗಳು ಅಲಂಕೃತವಾಗಿದ್ದು ಶಿಲ್ಪಗಳಿವೆ. ಕೋಟೆಯು ಉಪಯೋಗದಲ್ಲಿದ್ದ ಸಮಯದಲ್ಲಿ, ಇದರಲ್ಲಿ 19 ಹೆಬ್ಬಾಗಿಲುಗಳು, 39 ದಿಡ್ಡಿ ಬಾಗಿಲುಗಳು ಮತ್ತು 35 ಗುಪ್ತ ಮಾರ್ಗಗಳೂ ಇದ್ದವು. ಈಗ ಅವುಗಳಲ್ಲಿ ಬಹಳಷ್ಟು ಹಾಳಾಗಿವೆ. ಬೆಟ್ಟದ ಮೇಲೆ ಹೈದರನು ಕಟ್ಟಿದ ಅರಮನೆಯ ನೆಲಗಟ್ಟಿದೆ. ಕಲ್ಲಿನಿಂದ ನಿರ್ಮಿತವಾದ ಎಣ್ಣೆ ಕೊಳ, ತುಪ್ಪದ ಕೊಳ ಎಂದು ಸ್ಥಳೀಯವಾಗಿ ಪ್ರಸಿದ್ಧವಾಗಿರುವ ನಿರ್ಮಿತಿಗಳು ಹಾಗೂ ಐದು ಅಡಿ ವ್ಯಾಸದ ಬೀಸುವ ಕಲ್ಲುಗಳೂ ಇಲ್ಲಿನ ಹೆಚ್ಚಿನ ಆಕರ್ಷಣೆಗಳು. ಸಿಡಿಮದ್ದಿನ ಕಾರ್ಖಾನೆ, ಜಟ್ಟಿಮನೆಗಳು ಇಲ್ಲಿನ ಇತರ ಪ್ರಸಿದ್ಧ ಕಟ್ಟಡಗಳು. ಸಿದ್ಧೇಶ್ವರ, ಹಿಡಿಂಬೇಶ್ವರ, ಏಕನಾಥೇಶ್ವರ ಮುಂತಾದ ದೇವಾಲಯಗಳೂ ಬೆಟ್ಟದ ಮೇಲಿವೆ. ಎತ್ತರದ ಉಯ್ಯಾಲೆ ಮಂಟಪವೂ ಇದೆ. ಇಲ್ಲಿನ ಮರದ ಹೆಬ್ಬಾಗಿಲುಗಳಿಗೆ ಲೋಹದ ತಗಡುಗಳನ್ನು ಹೊದ್ದಿಸಿ ಅವುಗಳಿಗೆ ಚೂಪಾದ ಮೊಳೆಗಳನ್ನು ಹೊಡೆಯಲಾಗಿತ್ತು. ಈ ರೀತಿಯ ಚಿತ್ರದುರ್ಗ ಕೋಟೆಯು ಕೇವಲ ಕೋಟೆಯಾಗಿರದೆ ಎಲ್ಲ ಸೌಕರ್ಯಗಳನ್ನೂ ಒಳಗೊಂಡ ಕೋಟೆಯ ನಗರವಾಗಿತ್ತು. ಅದೇ ಇದರ ವೈಶಿಷ್ಟ್ಯ.

ಈ ಕೋಟೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಮಯದಲ್ಲಿ ಇದೊಂದು ಭೇದಿಸಲಾಗದ ಕೋಟೆ ಎನ್ನುವ ಖ್ಯಾತಿಯನ್ನು ಪಡೆದು ದಂತಕತೆಯಾಗಿತ್ತು. ಈ ಕೋಟೆಗೆ ಸಂಬಂಧಿಸಿದ ವೀರರ ಶೌರ್ಯ ಪರಾಕ್ರಮವನ್ನು ವರ್ಣಿಸುವ ಜಾನಪದ ಲಾವಣಿಗಳು ಮತ್ತು ಕಥೆಗಳನ್ನು ಹೇಳುತ್ತಿದ್ದರು ಮತ್ತು ಜನಗಳು ಆಸಕ್ತಿಯಿಂದ ಕೇಳುತ್ತಿದ್ದರು. ಈ ಪ್ರವೃತ್ತಿಯನ್ನು ಇಂದಿಗೂ ಗಮನಿಸಬಹುದು. ಹೈದರನ ಸೈನಿಕರನ್ನು ಸದೆಬಡಿದ ಒನಕೆ ಓಬವ್ವನ ಲಾವಣಿಯು ಜನಜನಿತವಾಗಿದ್ದು, ಇಂದಿಗೂ ಶಾಲಾಮಕ್ಕಳು ಗುನುಗುತ್ತಿರುತ್ತಾರೆ. ಇಲ್ಲಿರುವ ಬೃಹತ್ತಾದ ಶಿಲೆಗಳ ಸೌಂದರ್ಯ ಮತ್ತು ವಿನ್ಯಾಸಗಳಿಂದ ಈ ಕೋಟೆ ಇಂದಿಗೂ ಚಿತ್ರೀಕರಣ ಮಾಡುವವರನ್ನು ಆಕರ್ಷಿಸುತ್ತಿದೆ. ಒಟ್ಟಿನಲ್ಲಿ ಚಿತ್ರದುರ್ಗದ ಕೋಟೆಯು ಕೆಚ್ಚೆದೆಯ ಕನ್ನಡಿಗರ ಪರಾಕ್ರಮ ಪೌರುಷಗಳಿಗೆ ಸಂಕೇತವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಕರ್ನಾಟಕದ ನಿರ್ಮಿತಿಗಾರರ ತಾಂತ್ರಿಕ ಹಾಗೂ ರಕ್ಷಣಾ ವಾಸ್ತುಶಿಲ್ಪ ಕೌಶಲಕ್ಕೆ ಚಿತ್ರದುರ್ಗದ ಕೋಟೆಯು ಉತ್ತಮ ಉದಾಹರಣೆಯಾಗಿದೆ.

ಅಘೋರೇಶ್ವರ ದೇವಾಲಯ, ಇಕ್ಕೇರಿ

ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ಕೆಳದಿಯ ನಾಯಕರು ಕ್ರಿ.ಶ. ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿ ಸ್ವತಂತ್ರರಾಗಿ, ಕ್ರಿ.ಶ. ಹದಿನೆಂಟನೆಯ ಶತಮಾನದ ಅಂತ್ಯದವರೆಗೆ ಮಲೆನಾಡಿನ ಮತ್ತು ಕರಾವಳಿಯ ಭಾಗಗಲ್ಲಿ ರಾಜ್ಯವಾಳಿದರು. ಇಕ್ಕೇರಿ ಸ್ವಲ್ಪ ಕಾಲದವರೆಗೆ ಅವರ ರಾಜಧಾನಿಯಾಗಿತ್ತು. ಇಲ್ಲಿ ಅವರು ಅಘೋರೇಶ್ವರ ದೇವಾಲಯವನ್ನು ನಿರ್ಮಿಸಿದರು. ಹೊಯ್ಸಳ, ವಿಜಯನಗರ ಮತ್ತು ಇಸ್ಲಾಮಿಕ್ ವಾಸ್ತುಲಕ್ಷಣಗಳನ್ನು ಸಂಯೋಜಿಸಿ ತಮ್ಮದೇ ಆದ ಕೆಳದಿ ಶೈಲಿಯನ್ನು ಇವರು ಆರಂಭಿಸಿದರು. ಇದು ಇಕ್ಕೇರಿ ಶೈಲಿ ಎಂದೂ ಪ್ರಸಿದ್ಧವಾಗಿದೆ. ಅಘೋರೇಶ್ವರ ದೇವಾಲಯ ಈ ವಾಸ್ತುಶೈಲಿಗೆ ಉತ್ತಮ ಉದಾಹರಣೆ. ಇಂದು ಸಣ್ಣ ಗ್ರಾಮವಾದ ಇಕ್ಕೇರಿಯಲ್ಲಿ ಹಾಳಾದ ಕಟ್ಟಡಗಳು, ಕೋಟೆಗಳು, ದೇವಾಲಯಗಳು ಮತ್ತು ಅರಮನೆಗಳು ಕಾಣಬರುತ್ತವೆ. ಇಕ್ಕೇರಿ ನಾಯಕರ ಆಳ್ವಿಕೆಯ ಸಮಯದಲ್ಲಿ ಅದು ಸಂಪದ್ಭರಿತ ನಗರವಾಗಿತ್ತು.

ಅಘೋರೇಶ್ವರ ದೇವಾಲಯ ಕಲ್ಲಿನಿಂದ ನಿರ್ಮಿತವಾದ ಆಯತಾಕಾರದ ಕಟ್ಟಡ. ಇಡೀ ದೇವಾಲಯವನ್ನು ಎತ್ತರವಾದ ಜಗತಿಯ ಮೇಲೆ ಕಟ್ಟಲಾಗಿದೆ. ದೇವಾಲಯದಲ್ಲಿ ಗರ್ಭಗೃಹ, ತೆರೆದ ಸುಕನಾಸಿ ಮತ್ತು ಮಂಡಪಗಳಿವೆ. ಜಗತಿಯು ಆರು ಅಡಿ ಎತ್ತರವಾಗಿದ್ದು ಇದರಲ್ಲಿ ಐದು ವಿವಿಧ ರೀತಿಯ ದಿಂಡುಗಳಿವೆ. ಇದು ನಕ್ಷತ್ರಾಕಾರದಲ್ಲಿದ್ದು ಅಲ್ಲಲ್ಲಿ ಮುಂಚಾಚು, ಹಿಂಚಾಚುಗಳಿವೆ. ದಿಂಡುಗಳಲ್ಲಿ ಕೀರ್ತಿಮುಖ ಮತ್ತು ಸಿಂಹಮುಖಗಳಿವೆ. ಇವು ನಾಜೂಕಾದ ಕೆತ್ತನೆಗಳನ್ನು ಹೊಂದಿರುವುದರಿಂದ ನಮಗೆ ಹೊಯ್ಸಳ ಶೈಲಿಯನ್ನು ನೆನಪಿಸುತ್ತವೆ. ಇದರ ಮೇಲೆ ದೇವಾಲಯದ ಗೋಡೆಯಿದ್ದು, ಅದರಲ್ಲಿ ದೇವ ದೇವಿಯರ ಶಿಲ್ಪಗಳನ್ನುಳ್ಳ ದೇವಕೋಷ್ಠಗಳಿವೆ. ಇಲ್ಲಿರುವ ಅರೆಗಂಬಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಚಾವಣಿಯ ಹಂತದಲ್ಲಿ ಅಲಂಕೃತ ಮುಂಚೂರು ಇದೆ. ಗರ್ಭಗೃಹದ ಮೇಲೆ, ಅಲಂಕೃತ ತಲಗಳುಳ್ಳ ನೀಳವಾದ ಶಿಖರವಿದೆ.

ಮಂಡಪದ ಗೋಡೆಯ ಮೇಲೂ ಅಲಂಕೃತ ಪಟ್ಟಿಕೆಗಳಿದ್ದು, ಅವುಗಳಲ್ಲಿ ವಾನರರು, ಹಂಸಗಳು, ಮಿಥುನ ಶಿಲ್ಪಗಳು, ಸೂಕ್ಷ್ಮ ಪ್ರಮಾಣದ ಗೋಪುರಗಳ ಸಾಲು ಇವೆ. ಗೋಡೆಯ ಮೇಲ್ಭಾಗದಲ್ಲಿರುವ ಹೆಚ್ಚು ಆಳವಿಲ್ಲದ ಗೂಡುಗಳು, ಅದರ ಆಕರ್ಷಣೆಯನ್ನು ಹೆಚ್ಚಿಸಿವೆ. ಗೂಡುಗಳಲ್ಲಿ ದಿಕ್ಪಾಲರು, ವಿಷ್ಣು, ಭೈರವ ಮುಂತಾದ ದೇವತೆಗಳ ಶಿಲ್ಪಗಳಿವೆ. ದ್ವಾರಬಂಧಗಳೂ ತುಂಬ ಅಲಂಕಾರಯುಕ್ತವಾಗಿವೆ. ದೇವಾಲಯವನ್ನು ಪ್ರವೇಶಿಸಲು ಮೆಟ್ಟಿಲುಗಳಿದ್ದು ಆನೆಯ ಶಿಲ್ಪದ ತಾಳ್ವಾರಗಳಿಂದ ಅಲಂಕೃತವಾಗಿವೆ. ಸುಕನಾಸಿಯಿಂದ ಪ್ರದಕ್ಷಿಣಪಥಕ್ಕೆ ಪ್ರವೇಶವಿದೆ. ಮಂಡಪದ ಕಂಬಗಳಲ್ಲಿ ವೈವಿಧ್ಯತೆ ಇದೆ. ಅಘೋರೇಶ್ವರ ಎಂಬ ಶಿವ ಲಿಂಗವು ಗರ್ಭಗುಡಿಯಲ್ಲಿದೆ. ಪಶ್ಚಿಮದಲ್ಲಿ ಪಾರ್ವತಿ ಗುಡಿಯಿದೆ. ಬಾಗಿಲುವಾಡಗಳು ಮತ್ತು ಗವಾಕ್ಷವಾಡಗಳಲ್ಲಿ ಇಸ್ಲಾಮಿಕ್ ಪ್ರಭಾವವನ್ನು ಸೂಚಿಸುವ ಚೂಪಾದ ಕಮಾನುಗಳಿವೆ. ನಂದಿಮಂಡಪದಲ್ಲಿ ಚೆನ್ನಾಗಿ ಕಡೆಯಲಾದ ನಂದಿಯ ಶಿಲ್ಪವಿದೆ. ಹೀಗೆ ಅಘೋರೇಶ್ವರ ದೇವಾಲಯವು, ಕೆಳದಿ ನಾಯಕರ ಇಕ್ಕೇರಿ ಶೈಲಿಗೆ ಉತ್ತಮ ಉದಾಹರಣೆಯಾಗಿದ್ದು, ಅವರ ಸ್ವಲ್ಪ ಕಾಲದ ರಾಜಧಾನಿ ಇಕ್ಕೇರಿಯಲ್ಲಿರುವ ಸುಂದರ ದೇವಾಲಯವಾಗಿದೆ.

ರಾಮೇಶ್ವರ ದೇವಾಲಯ, ಕೆಳದಿ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕೆಳದಿಯು, ಕೆಳದಿ ನಾಯಕರ ರಾಜಧಾನಿಯಾಗಿತ್ತು. ಅವರು ಮೊದಲು ವಿಜಯನಗರದ ಸಾಮಂತರಾಗಿದ್ದು, ನಂತರ ಸ್ವತಂತ್ರರಾಗಿ ಕೆಳದಿಯಿಂದ ಆಳಲು ಪ್ರಾರಂಭಿಸಿದರು. ರಾಮೇಶ್ವರ ದೇವಾಲಯವು ಅವರ ರಾಜಧಾನಿ ಕೆಳದಿಯಲ್ಲಿದೆ. ಈ ದೇವಾಲಯದ ಕಾಲ ನಿರ್ಣಯಕ್ಕೆ ಅನುಕೂಲವಾಗುವ ಶಾಸನ ದೊರಕಿಲ್ಲ. ಆದರೆ ಲಿಂಗಣ್ಣ ಕವಿಯಿಂದ ರಚಿತವಾದ ಕೆಳದಿನೃಪವಿಜಯ ಎಂಬ ಗ್ರಂಥದ ಪ್ರಕಾರ ಇದರ ಗರ್ಭಗೃಹವನ್ನು ಈ ವಂಶದ ಸ್ಥಾಪಕನಾದ ಚಂದಪ್ಪನಾಯಕನು ನಿರ್ಮಿಸಿದನು (ಕ್ರಿ.ಶ. 1500 -1530). ಇವನ ಮಗ ಸದಾಶಿವ ನಾಯಕನ ಕಾಲದಲ್ಲಿ ರಂಗಮಂಡಪವನ್ನು ಸೇರಿಸಲಾಯಿತು. ಅಂದರೆ ಕ್ರಿ.ಶ. ಹದಿನಾರನೆಯ ಶತಮಾನದ ಪ್ರಥಮಾರ್ಧದಲ್ಲಿ ಈ ದೇವಾಲಯದ ನಿರ್ಮಾಣವಾಗಿರಬೇಕೆಂದು ಭಾವಿಸಬಹುದಾಗಿದೆ.

ರಾಮೇಶ್ವರ ದೇವಾಲಯದಲ್ಲಿ ಗರ್ಭಗೃಹ, ಪ್ರದಕ್ಷಿಣಪಥ, ಅಂತರಾಳ, ನವರಂಗ ಮತ್ತು ರಂಗಮಂಡಪಗಳಿವೆ. ದೇವಾಲಯ ಪೂರ್ವಾಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಅಲಂಕಾರಗಳಿಲ್ಲ. ಇದರಲ್ಲಿ ಪೀಠದ ಮೇಲೆ ಕರಿಕಲ್ಲಿನ ರಾಮೇಶ್ವರ ಶಿವಲಿಂಗವಿದೆ. ಇದರ ದ್ವಾರಬಂಧದಲ್ಲಿ ರಾಮೇಶ್ವರ ಲಿಂಗವು ಕೆತ್ತಲ್ಪಟ್ಟಿದೆ. ಅಂತರಾಳದಿಂದ ಪ್ರದಕ್ಷಿಣ ಪಥವಿದೆ. ಇಲ್ಲಿರುವ ಕಂಬಗಳಲ್ಲಿ ಕಮಲ ಪುಷ್ಪ ವಿನ್ಯಾಸ, ಸಿಂಹಮುಖ ಮುಂತಾದ ಅಲಂಕಾರಗಳ ತಗ್ಗು ಉಬ್ಬಿನ ಶಿಲ್ಪಗಳಿವೆ. ಹೊರಗೋಡೆಗಳಲ್ಲಿ ಅಡ್ಡ ಪಟ್ಟಿಕೆಗಳು ಮತ್ತು ಬಾಗಿದ ದಿಂಡುಗಳಿವೆ. ಮೇಲಿನ ದಿಂಡಿನಲ್ಲಿ ಅಲಂಕಾರಗಳಿವೆ. ಗೋಡೆಗಳಲ್ಲಿ ಅರೆಗಂಬಗಳು ಮತ್ತು ತಗ್ಗು ಉಬ್ಬಿನ ಶಿಲ್ಪಗಳಿವೆ. ಇವು ಎಲ್ಲ ಪಾರ್ಶ್ವಗಳಲ್ಲಿಯೂ ಪುನರಾವರ್ತನೆಗೊಂಡಿವೆ. ಇವುಗಳ ಮೇಲೆ ಅಗಲವಾದ ಮುಂಜೂರು ಇದೆ. ಇದರ ಮೇಲೆ ಕೈಪಿಡಿಯಿದೆ. ಮೇಲೆ ಚಾಳುಕ್ಯವೇಸರ ಶಿಖರವಿದೆ. ಸ್ತೂಪಿಯು ಸ್ವಲ್ಪ ಉದ್ದವಾಗಿದೆ.

ನವರಂಗದಲ್ಲಿ ಚಾಳುಕ್ಯ ಅಥವಾ ಹೊಯ್ಸಳ ಶೈಲಿಯ ಕಂಬಗಳನ್ನು ಹೋಲುವ ಸುಂದರ ಕಂಬಗಳಿವೆ. ಈ ಕಂಬಗಳಿಗೆ ಚೌಕವಾದ ಪೀಠಗಳಿವೆ. ಮುಖಮಂಡಪದಲ್ಲಿಯೂ ಕಂಬಗಳು ಹಾಗೂ ಕಕ್ಷಾಸನಗಳು ಇವೆ. ಇಲ್ಲಿರುವ ಕಕ್ಷಾಸನಗಳು ಅಗಲವಾಗಿದ್ದು ಅವುಗಳ ಮೇಲೆ ಕುಳಿತುಕೊಂಡು ಪೂಜೆ ಹಾಗೂ ನೃತ್ಯಗಳನ್ನು ನೋಡಲು ಅನುಕೂಲವಾಗಿವೆ. ಮುಖಮಂಡಪಕ್ಕೆ ಉತ್ತರ, ದಕ್ಷಿಣ ಮತ್ತು ಪೂರ್ವ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿದ್ದು, ಅವುಗಳ ಎರಡು ಕಡೆಗಳಲ್ಲಿ ತಾಳ್ವಾರುಗಳ ಸಹಿತ ಮೆಟ್ಟಿಲುಗಳಿವೆ. ಇಲ್ಲಿರುವ ಆಕರ್ಷಕವಾದ ಶಿಲ್ಪಗಳು ನಮ್ಮ ಗಮನ ಸೆಳೆಯುತ್ತವೆ. ಅವುಗಳಲ್ಲಿ ಗಮನಾರ್ಹವಾದ ಸುಂದರ ಶಿಲ್ಪಗಳೆಂದರೆ ಬೇಡರ ಕಣ್ಣಪ್ಪ, ಮಿಥುನ ದಂಪತಿಗಳು, ವಾದ್ಯಗಳನ್ನು ನುಡಿಸುತ್ತಿರುವ ಸಂಗೀತಗಾರರು, ಗರುಡ, ಹರಿಹರ, ವಾನರರು, ಒಂಟೆ, ಆನೆ, ಹಾವುಗಳು ಮುಂತಾದವು. ಈ ರೀತಿ ಕೆಳದಿ ನಾಯಕರ ಆಳ್ವಿಕೆಯ ಆರಂಭ ಕಾಲದಲ್ಲಿ ಕಟ್ಟಲಾದ ರಾಮೇಶ್ವರ ದೇವಾಲಯ, ಕೆಳದಿಯ ವಾಸ್ತುಶಿಲ್ಪ ಶೈಲಿಯ ವಿಕಾಸವನ್ನು ತಿಳಿಯಲು ಮುಖ್ಯ ದೇವಾಲಯವಾಗಿದೆ. ಇದೊಂದು ಪ್ರಮುಖ ದೇವಾಲಯವಾಗಿದ್ದು ಕರ್ನಾಟಕದ ಎಲ್ಲೆಡೆಯಿಂದ ಯಾತ್ರಾರ್ಥಿಗಳು ಇದನ್ನು ನೋಡಲು ಬರುತ್ತಾರೆ.

ಶಿವಪ್ಪನಾಯಕನ ಅರಮನೆ, ಶಿವಮೊಗ್ಗ

ಶಿವಪ್ಪನಾಯಕನ ಅರಮನೆಯೆಂದು ಕರೆಯಲಾಗಿರುವ ಈ ಸುಂದರ ಕಟ್ಟಡವು ತುಂಗಾ ತೀರದಲ್ಲಿ ಶಿವಮೊಗ್ಗದಲ್ಲಿದೆ. ಇದು ಕೆಳದಿ ಆಳ್ವಿಕೆಯಲ್ಲಿ ಕಟ್ಟಲಾದ ತುಂಬ ಸುಂದರವಾದ ಮರದ ಕಟ್ಟಡವೆನಿಸಿದೆ. ಇದನ್ನು ಮರ, ಮಣ್ಣು, ಗಾರೆ ಮತ್ತು ಇಟ್ಟಿಗೆಗಳಿಂದ ಕಟ್ಟಲಾಗಿದೆ. ತಳಪಾಯವನ್ನು ಮಾತ್ರ ಕಲ್ಲಿನಿಂದ ನಿರ್ಮಿಸಲಾಗಿದೆ. ಗಟ್ಟಿಯಾಗಿದ್ದರೂ ಸೂಕ್ಷ್ಮ ಕೆತ್ತನೆಗೆ ಅನುಕೂಲವಾದ ತೇಗ, ಬೀಟೆ, ಹೊನ್ನೆ ಮತ್ತು ಹಲಸಿನ ಜಾತಿಯ ಮರಗಳನ್ನು ಈ ಅರಮನೆ ಕಟ್ಟಲು ಬಳಸಲಾಗಿದೆ. ಈ ಅರಮನೆಯು ವಿಶಾಲವಾದ ಪ್ರಾಂಗಣದಲ್ಲಿದ್ದು ಎಲ್ಲೆಯಲ್ಲಿ ಕಲ್ಲಿನ ಚಪ್ಪಡಿಗಳನ್ನು ಅಳವಡಿಸಲಾಗಿದೆ. ಇದನ್ನು ಎರಡು ಭಾಗಗಳಾಗಿ ವಿಭಾಗಿಸಬಹುದು. ಮೊದಲನೆಯ ಭಾಗ ನೀಳವಾದ ಹಾಗೂ ಎತ್ತರವಾದ ಮರದ ಕಂಬಗಳುಳ್ಳ ಕೆಳಭಾಗ ಮತ್ತು ಎರಡನೆಯದು ಅದರ ಮೇಲಿರುವ ಮೊದಲ ಮಹಡಿಯ ಅಂತಸ್ತು. ಈ ಕಂಬಗಳು ಪೀಠಭಾಗದಲ್ಲಿ ಅಷ್ಟಭುಜಾಕೃತಿಯಲ್ಲಿದ್ದು ಮೇಲೆ ಹೋದಂತೆ ಸಣ್ಣಗಾಗುತ್ತ ಕೊನೆಯಲ್ಲಿ ಹದಿನಾರು ಕೋನಾಕೃತಿಯಲ್ಲಿವೆ. ಅನಂತರ ಬೋದಿಗೆಗಳನ್ನು ಅಳವಡಿಸಲಾಗಿದೆ. ಇಲ್ಲಿ ವಿವಿಧ ಕಾರ್ಯಗಳಿಗೆ ಉಪಯುಕ್ತವಾದ ಕೋಣೆಗಳಿವೆ.

ಈ ಅರಮನೆಯು 75 ಅಡಿ ಉದ್ದ, 17 ಅಡಿ ಅಗಲ ಮತ್ತು 25 ಅಡಿ ಎತ್ತರವಿದೆ. ಮೇಲಿನ ಅಂತಸ್ತಿನಲ್ಲಿ ಅಗಲವಾದ ಕಮಾನು ಹಾಗೂ ಮರದ ಕಂಬಗಳಿರುವ ಬಾಲ್ಕನಿ ಮತ್ತು ಅಲಂಕೃತ ಕೈಪಿಡಿಗಳಿವೆ. ಈ ಬಾಲ್ಕನಿಗಳಿಂದ ರಾಜ, ರಾಣಿ ಮತ್ತು ಅರಮನೆಯ ಇತರರು ಕುಳಿತುಕೊಂಡು ಕೆಳಗೆ ನಡೆಯುತ್ತಿದ್ದ ಉತ್ಸವ ಮತ್ತು ಇತರ ಚಟುವಟಿಕೆಗಳನ್ನು ನೋಡುತ್ತಿದ್ದರು. ಮೊಗಸಾಲೆಯಲ್ಲಿ ನಾಯಕರು ರಾಜಸಭೆಯನ್ನು ನಡೆಸುತ್ತಿದ್ದರು. ಮೊಗಸಾಲೆಯಲ್ಲಿ ಮರದ ಬಾಗಿಲು ಕಿಟಕಿಗಳಿದ್ದ ಅನೇಕ ಕೋಣೆಗಳೂ ಇದ್ದವು. ಕೆಳಭಾಗದಲ್ಲಿ ಆಮೆಯಾಕಾರದ ಶಿಲ್ಪ ಫಲಕವಿದ್ದು, ಅದರ ಮೇಲೆ ಕಾವಲುಗಾರರು ನಿಲ್ಲುತ್ತಿದ್ದರು.

ಅರಮನೆಯ ಸಮೀಪದಲ್ಲಿ ಉತ್ಖನನಗಳನ್ನು ನಡೆಸಲಾಯಿತು. ಇದರಿಂದ ಪೂಜಾಕೋಣೆ, ಅಡಿಗೆ ಮನೆ, ಊಟದ ಮನೆ, ಉಗ್ರಾಣ ಮುಂತಾದ ಭಾಗಗಳನ್ನು ಪತ್ತೆ ಹಚ್ಚಲಾಯಿತು. ಇದರ ಪಕ್ಕದಲ್ಲೇ ಇನ್ನೊಂದು ಕಟ್ಟಡವಿತ್ತು. ಬಹುಶಃ ಇದು ಅತಿಥಿಗೃಹವಾಗಿದ್ದಿತು. ಈ ಅರಮನೆಯನ್ನು ಇಂಡೋಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲಾಗಿದ್ದು ಬೆಂಗಳೂರಿನ ಟಿಪ್ಪೂ ಸುಲ್ತಾನನ ಅರಮನೆಯನ್ನು ಇದು ಹೋಲುತ್ತದೆ. ಇಡೀ ಅರಮನೆಯ ಸುತ್ತ ಪ್ರಧಾನ ದ್ವಾರವಿದ್ದ ಒಂದು ಕೋಟೆ ಮತ್ತು ಕಂದಕಗಳಿದ್ದವು. ಈಗ ಅವು ಕಾಣಬರುತ್ತಿಲ್ಲ. ಇದನ್ನು ಶಿವಪ್ಪನಾಯಕನ ಅರಮನೆ ಎಂದು ಕರೆಯಲಾಗುತ್ತದೆಯಾದರೂ, ಸೋಮಶೇಖರ ನಾಯಕನ (ಕ್ರಿ.ಶ. 1715-1740) ಕಾಲದಲ್ಲಿ ಇದನ್ನು ಜೀರ್ಣೋದ್ಧಾರ ಮಾಡಿ, ಹೆಚ್ಚು ಸೌಂದರ್ಯಯುತವನ್ನಾಗಿ ಮಾಡಲಾಯಿತು. ಕೆಳದಿ ನಾಯಕರ ಕಾಲದಲ್ಲಿ ಅಘೋರೇಶ್ವರ, ರಾಮೇಶ್ವರ ಮುಂತಾದ ಕಲ್ಲಿನ ದೇವಾಲಯಗಳ ಜೊತೆಗೆ ಮರದ ಕಟ್ಟಡಗಳನ್ನೂ ನಿರ್ಮಿಸುತ್ತಿದ್ದರೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ಈ ರೀತಿಯ ಮರದ ಅರಮನೆಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ, ದಕ್ಷಿಣ ಭಾರತದಲ್ಲೂ ವಿರಳವಾದುದರಿಂದ ಮತ್ತು ಈ ಅರಮನೆಯ ಅಂದಚಂದಗಳಿಂದ ಇದು ಪ್ರಮುಖ ಸ್ಥಾನವನ್ನು ಪಡೆದಿದೆ. ಸರ್ಕಾರವು ಇದನ್ನು ಸಂರಕ್ಷಿಸಲು ಎಲ್ಲ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದೆ.

## ಜುಮ್ಮ ಮಸೀದಿ, ಗುಲ್ಬರ್ಗ

ಇತರ ಮಸೀದಿಗಳಲ್ಲಿ ಸಾಮಾನ್ಯವಾಗಿ ಕಾಣಬರದ ವಾಸ್ತು ಲಕ್ಷಣಗಳನ್ನು ಹೊಂದಿರುವ ಗುಲ್ಬರ್ಗದಲ್ಲಿರುವ ಜುಮ್ಮ ಮಸೀದಿಯು ವೈಶಿಷ್ಟ್ಯಪೂರ್ಣವಾಗಿದೆ. ಆದುದರಿಂದ ಈ ಮಸೀದಿಯು ಇಸ್ಲಾಂ ಪ್ರಪಂಚದಲ್ಲಿ ಖ್ಯಾತಿ ಪಡೆದಿದೆ. ಇಲ್ಲಿರುವ ಒಂದು ಶಾಸನದ ಪ್ರಕಾರ ಈ ಮಸೀದಿಯನ್ನು ಕ್ರಿ.ಶ. 1367ರಲ್ಲಿ, ಮಹಮದ್ ಷಾ ಬಹಮನಿ ಸುಲ್ತಾನನ ರಾಜ್ಯಭಾರ ಕಾಲದಲ್ಲಿ ನಿರ್ಮಿಸಲಾಯಿತು. ಇವನು ಬಹಮನಿ ವಂಶದ ಎರಡನೆಯ ಸುಲ್ತಾನನಾಗಿದ್ದು, ಬಹಮನಿ ರಾಜ್ಯದ ಉನ್ನತಿಗೆ ವಿಶೇಷವಾಗಿ ಕಾರಣಕರ್ತನಾಗಿದ್ದನು. ಇವನು ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಮಾಡಿದನು. ಇದರಿಂದ ಇವನ ರಾಜ್ಯದಲ್ಲಿ ವಾಸ್ತುಶಿಲ್ಪವೂ ಸೇರಿದಂತೆ ಎಲ್ಲ ವಿಷಯಗಳಲ್ಲೂ ಪ್ರಗತಿಯಾಗಿ, ಶಾಂತಿ ಸ್ಥಾಪನೆಯೂ ಆಗಿತ್ತು. ಪರ್ಷಿಯದಿಂದ ಇಲ್ಲಿಗೆ ಬಂದಿದ್ದ ರಫಿ ಎಂಬ ಕಲಾಕಾರನು ಈ ಮಸೀದಿಯನ್ನು ರೂಪಿಸಿದನು. ಇವನು ಪರ್ಷಿಯ ದೇಶದ ಕಜ್ವಿನ್ ಎಂಬ ನಗರದಲ್ಲಿ ವಂಶಪಾರಂಪರ್ಯವಾಗಿ ಬಂದಿದ್ದ ವಾಸ್ತುಶಿಲ್ಪಿಯ ಕಾರ್ಯವನ್ನು ಮಾಡುತ್ತಿದ್ದನು. ಮಸೀದಿಯಲ್ಲಿರಬೇಕಾದ ತೆರೆದ ಅಂಗಳವಿಲ್ಲದೆ ಮುಚ್ಚಿರುವ ಅಂಗಳ ಹೊಂದಿರುವುದೇ ಈ ಮಸೀದಿಯ ವೈಶಿಷ್ಟ್ಯ. ಇದು ಇಸ್ಲಾಂ ಧರ್ಮಕ್ಕೆ ವಿರುದ್ಧವಾದುದೆಂದೂ, ಅದರಿಂದಾಗಿ ಸಾಂಪ್ರದಾಯಿಕ ಜನಗಳಿಗೆ ಇಷ್ಟವಾಗಲಿಲ್ಲವೆಂದೂ ಅದೇ ಕಾರಣದಿಂದ ಈ ರೀತಿಯ ಮುಚ್ಚಿಗೆಯ ಅಂಗಳ ಹೊಂದಿರುವ ಮಸೀದಿಗಳು ಮತ್ತೆ ನಿರ್ಮಾಣವಾಗಲಿಲ್ಲವೆಂದು ಭಾವಿಸಲಾಗಿದೆ. ಈ ಕಾರಣದಿಂದಾಗಿಯೇ ಇದೊಂದು ವೈಶಿಷ್ಟ್ಯಪೂರ್ಣ ಹಾಗೂ ವಿರಳ ಕಟ್ಟಡವಾಯಿತು. ಈ ಕಟ್ಟಡದ ಇನ್ನೊಂದು ವೈಶಿಷ್ಟ್ಯವೆಂದರೆ, ಪರ್ಷಿಯನ್ ಮತ್ತು ಭಾರತೀಯ ಲಕ್ಷಣಗಳು ಸುಲಭವಾಗಿ ಗುರುತಿಸಲಾಗದಂತೆ ಅಪೂರ್ವವಾಗಿ ಮಿಳಿತವಾಗುವಂತೆ ಮಾಡಿರುವ ವಾಸ್ತುಶಿಲ್ಪಿಯ ತಾಂತ್ರಿಕತೆ.

216 ಅಡಿ ಉದ್ದ ಮತ್ತು 176 ಅಡಿ ಅಗಲದ ಆಯತಾಕಾರದ ಜಗಲಿಯ ಮೇಲೆ ಈ ಸೌಧ ಕಟ್ಟಲ್ಪಟ್ಟಿದೆ. ಇದರ ಮೂರು ಕಡೆಗಳಲ್ಲಿಯೂ ಅಂಕಣಗಳಿವೆ. ಪಕ್ಕದ ಪಶ್ಚಿಮ ಭಾಗದಲ್ಲಿ ಪ್ರತ್ಯೇಕಿಸಲ್ಪಟ್ಟ ಧಾರ್ಮಿಕ ಸ್ಥಳವಿದ್ದು ಅದರ ಮೇಲೆ ಎತ್ತರವಾದ ಗುಮ್ಮಟವಿದೆ. ಎರಡು ಕಡೆಗಳಲ್ಲಿಯೂ ದಾರಿಗಳ ಸಾಲಿದ್ದು ಅರವತ್ತೆಂಟು ಮುಂಚಾಚಿದ ಭಾಗಗಳಿವೆ. ಪ್ರತಿಯೊಂದರ ಮೇಲೂ ಒಂದು ಸಣ್ಣ ಅರ್ಧಗೋಲಾಕೃತಿಯ ಚಾವಣಿಯಿದೆ. ಅಂದರೆ ಇಡೀ ಪ್ರಾಂಗಣವು ಕಂಬಗಳಿಂದ ಕೂಡಿದ್ದು ಪೂರ್ಣ ಮುಚ್ಚಿಗೆಯನ್ನು ಹೊಂದಿದ್ದುದಾಗಿದೆ. ಮೇಲಿರುವ ಪ್ರಧಾನ ಗುಮ್ಮಟವು ಚೌಕಾಕಾರ ವಿನ್ಯಾಸದ ಜಗಲಿಯ ಮೇಲೆ ನಿರ್ಮಾಣಗೊಂಡಿರುವುದರಿಂದ, ಎತ್ತರ ಜಾಸ್ತಿಯಾಗಿ ಸುತ್ತಮುತ್ತಲಿನ ದೂರದ ಪ್ರದೇಶದಿಂದ ಎದ್ದು ಕಾಣುತ್ತದೆ.

ಈ ಗುಮ್ಮಟದ ಒಳಭಾಗವು ಕಮಾನುಗಳಿಂದ ಅಲಂಕೃತವಾಗಿದ್ದು, ಅವುಗಳಲ್ಲಿ ವಿವಿಧ ವಿನ್ಯಾಸಗಳು ಕಾಣಬರುತ್ತವೆ. ಗುಮ್ಮಟ ಚಾವಣಿಯಲ್ಲಿ ನಿರಂತರ ಕಮಾನುಗಳ ವಿನ್ಯಾಸ ಬರುವಂತೆ ನಿರ್ಮಿಸಿರುವುದು ಉತ್ತಮ ಕಲಾಕಾರರ ತಾಂತ್ರಿಕ ಜ್ಞಾನ ಹಾಗೂ ದೀರ್ಘ ಅನುಭವದ ಫಲ ಎನ್ನುವುದು ಗೊತ್ತಾಗುತ್ತದೆ. ಮುಮ್ಮುಖದಲ್ಲಿ ಎತ್ತರವಾದ ಹಾಗೂ ನೀಳವಾದ ಆದರೆ ಬೃಹತ್ತಾದ ಕಮಾನುಗಳು ಸಮದೂರದಲ್ಲಿ ವಿನ್ಯಾಸಗೊಳಿಸಲ್ಪಟ್ಟಿವೆ. ಇದರಿಂದ ಅಗಲವಾದ ಪ್ರವೇಶದ್ವಾರ ಹಾಗೂ ಸಣ್ಣ ಮಿನಾರುಗಳಿಂದ ಕೂಡಿದ ಸುಂದರ ಮುಮ್ಮುಖ ವಿನ್ಯಾಸಗೊಳಿಸಲ್ಪಟ್ಟಿದೆ. ಕಮಾನುಗಳ ಮೇಲಿನ ಅಲಂಕಾರ ನಾಲ್ಕೂ ಕಡೆಗಳಲ್ಲಿದ್ದು, ಇಡೀ ಕಟ್ಟಡಕ್ಕೆ ಸೌಂದರ್ಯಪ್ರಾಯವಾಗಿದೆ. ಈ ಎಲ್ಲ ಲಕ್ಷಣಗಳಿಂದಾಗಿ ಗುಲ್ಬರ್ಗದ ಜುಮ್ಮ ಮಸೀದಿಯು ವಿಶಿಷ್ಟವೆನಿಸಿದೆ.

## ಫಿರೋಜ್ ಷಾ ಬಹಮನಿಯ ಗೋರಿ, ಗುಲ್ಬರ್ಗ

ಹಸನ್ ಗಂಗು ಬಹಮನ್ ಷಾ ಬಹಮನಿ ರಾಜ್ಯವನ್ನು ಕ್ರಿ.ಶ. 1347ರಲ್ಲಿ ಸ್ಥಾಪಿಸಿ ಗುಲ್ಬರ್ಗವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅಂದಿನಿಂದ ಬಹಮನಿ ರಾಜ್ಯ ಕ್ಷೀಣಿಸುವವರೆಗೆ ಗುಲ್ಬರ್ಗ ನಗರವು ಅಭಿವೃದ್ಧಿಯ ಪಥದಲ್ಲಿ ಸಾಗಿತ್ತು. ಬಹಮನಿ ವಂಶಜರ ಗೋರಿಗಳು ಗುಲ್ಬರ್ಗದಲ್ಲಿ ವಿಶೇಷವಾಗಿವೆ. ಅವುಗಳನ್ನು ಎರಡು ಗುಂಪುಗಳಾಗಿ ವಿಭಾಗಿಸಬಹುದು. ಮೊದಲನೆಯ ಗುಂಪಿನಲ್ಲಿ ಮೊದಲನೆಯ ಸುಲ್ತಾನನಿಂದ ಆರಂಭವಾದ ಸರಳ ರಚನೆಗಳು. ಎರಡನೆಯ ಗುಂಪಿಗೆ ಸೇರಿದವು ಹೆಚ್ಚು ಅಲಂಕಾರಯುಕ್ತವಾಗಿದ್ದು 'ಹಫ್ತ್ ಗುಂಬಜ್' ಅಥವಾ ಏಳು ಗೋರಿಗಳು ಎಂಬ ಹೆಸರಿನಿಂದ ಪ್ರಖ್ಯಾತವಾದವುಗಳು. ಇವುಗಳಲ್ಲಿ ಕ್ರಿ.ಶ. 1378ರಲ್ಲಿ ಮರಣ ಹೊಂದಿದ ಮುಜಾಹಿದ್ ಬಹಮನಿಯಿಂದ ಆರಂಭಗೊಂಡು ನಂತರದ ನಾಲ್ಕು ಸುಲ್ತಾನರ ಗೋರಿಗಳು ಸೇರಿವೆ. ಹಫ್ತ್ ಗುಂಬಜ್ ಗುಂಪಿಗೆ ಸೇರಿರುವ ಪ್ರಸ್ತುತ ಗೋರಿಗಳ ಸಮುಚ್ಚಯ ಸುಲ್ತಾನ್ ಫಿರೋಜ್ ಬಹಮನ್‌ಗೆ (ಕ್ರಿ.ಶ. 1397-1422) ಸೇರಿದವು. ಇವನು ಶಾಂತಿಪ್ರಿಯನಾದ ದೊರೆಯಾಗಿದ್ದು ಕ್ರಿ.ಶ. 1401ರಲ್ಲಿ ತೈಮೂರನ ಆಸ್ಥಾನಕ್ಕೆ ರಾಜದೂತನನ್ನು ಕಳುಹಿಸಿ, ಆದರಿಂದ ದಖಿನ್, ಗುಜರಾತ್ ಮತ್ತು ಮಾಳ್ವ ಪ್ರದೇಶಗಳ ಅಧಿಪತಿಯಾದನು. ಅನೇಕ ಪರ್ಷಿಯನ್ ಮತ್ತು ಅರಾಬಿಕ್ ವಿದ್ವಾಂಸರು ಇವನ ರಾಜಸಭೆಗೆ ಬಂದಿದ್ದರು. ಇದರಿಂದಾಗಿ ಇವನ ಕಾಲದ ವಾಸ್ತುಕೃತಿಗಳಲ್ಲಿ ಈ ಪ್ರಭಾವವನ್ನು ಕಾಣಬಹುದು. ವಿದ್ವಾಂಸನೂ ಶಾಂತಿಪ್ರಿಯನೂ ಆಗಿದ್ದ ಈ ಸುಲ್ತಾನನು ಕ್ರಿ.ಶ. 1422ರಲ್ಲಿ ಮರಣಹೊಂದಿದನು. ಅದೇ ವರ್ಷ ಅವನ ಗೋರಿಯನ್ನು ನಿರ್ಮಿಸಲಾಯಿತು.

ಈ ಗೋರಿಯಲ್ಲಿ ತುಘಲಖ್ ವಾಸ್ತುಶೈಲಿಯ ಮತ್ತು ಸ್ಥಳೀಯ ಲಕ್ಷಣಗಳು ಮಿಳಿತವಾಗಿರುವುದು ಕಾಣಬರುತ್ತದೆ. ಸಾಮಾನ್ಯವಾಗಿ ಈ ರೀತಿಯ ಕಟ್ಟಡಗಳ ಮೇಲೆ ಒಂದು ಗುಮ್ಮಟವಿರುವುದು ರೂಢಿ. ಆದರೆ ಈ ಗೋರಿಯಲ್ಲಿ ಎರಡು ಗುಮ್ಮಟಗಳಿವೆ. ಅದೇ ಇದರ ವೈಶಿಷ್ಟ್ಯ. ಇದರ ಜೊತೆಗೆ ಗೋರಿಯೂ ಎರಡು. ಮೊದಲನೆಯ ಗೋರಿ ಇವನಿಗೆ ಸಂಬಂಧಿಸಿದ್ದಾದರೆ, ಇನ್ನೊಂದು ಇವನ ಕುಟುಂಬದ ಸದಸ್ಯರಿಗೆ ಸಂಬಂಧಿಸಿದುದು. ಇದು ಇಲ್ಲಿಯೇ ಕಟ್ಟಲಾದ ಇತರ ಹಿಂದಿನ ಗೋರಿಯ ವಾಸ್ತುಶಿಲ್ಪದ ಮುನ್ನಡೆಯನ್ನು ತೋರಿಸುತ್ತದೆ. ಈ ಗೋರಿಯ ಕಟ್ಟಡದ ಉದ್ದ 150 ಅಡಿ ಮತ್ತು ಅಗಲ 70 ಅಡಿ ಮತ್ತು ಗೋಡೆಗಳ ಎತ್ತರ 42 ಅಡಿ. ಇದರ ಮೇಲೆ ಎರಡು ಗುಮ್ಮಟಗಳಿದ್ದು ಅವುಗಳ ಎತ್ತರ 30 ಅಡಿಗಳು. ಈ ಎರಡು ಗುಮ್ಮಟಗಳೂ ಒಂದೇ ತೆರನಾಗಿದ್ದು, ಈ ಕಟ್ಟಡದ ಸೌಂದರ್ಯವನ್ನು ಹೆಚ್ಚಿಸಿವೆ.

ಈ ಕಟ್ಟಡದ ಇನ್ನೊಂದು ವಿಶೇಷವೆಂದರೆ ಮಹಡಿಯ ಕಟ್ಟಡದಂತೆ ವಿನ್ಯಾಸಗೊಳಿಸಿದ ಅಲಂಕಾರ. ಕೆಳಭಾಗದ ಗೋಡೆಯಲ್ಲಿ ಕಮಾನುಗಳಿವೆ. ಅವುಗಳ ಮೇಲೂ ಇದೇ ರೀತಿ ಜಾಲಂಧ್ರವಿರುವ ಕಮಾನುಗಳನ್ನು ಅಳವಡಿಸಿರುವುದು ವಿಶೇಷ ರಚನಾತಂತ್ರ. ಇದರ ಮೇಲೆ ಅಲಂಕೃತ ಕೈಪಿಡಿಯ ಗೋಡೆಗಳಿವೆ. ಇಲ್ಲಿನ ಒಂದರ ನಂತರದ ಇನ್ನೊಂದು ಕಮಾನಿನ ಮೇಲೆ ಮುಂಚಾಚು ಇರುವುದು ಇದರ ಅಂದವನ್ನು ಹೆಚ್ಚಿಸಿವೆ. ಈ ಎಲ್ಲ ವಾಸ್ತುಲಕ್ಷಣಗಳನ್ನು ಅಳವಡಿಸಿಕೊಂಡಿರುವ ಹಾಗೂ ಎರಡು ಗುಮ್ಮಟಗಳನ್ನು ಹೊಂದಿರುವ ಫಿರೋಜ್ ಷಾ ಬಹಮನಿಯ ಈ ಗೋರಿಯ ಕಟ್ಟಡ ವಿಶಿಷ್ಟವಾಗಿರುವುದು ಮಾತ್ರವಲ್ಲದೆ ಸೌಂದರ್ಯಕ್ಕೂ ಹೆಸರುವಾಸಿಯಾಗಿದೆ.

## ಕೋಟೆ, ಬೀದರ್

ಬೀದರ್‌ನಲ್ಲಿ ಮರಳುಗಲ್ಲಿನಿಂದ ನಿರ್ಮಿಸಲಾದ ಬೃಹತ್ ಪ್ರಮಾಣದ ಹಾಗೂ ಭವ್ಯವಾದ ಕೋಟೆಯಿದೆ. ಸುದೈವದಿಂದ ಇದರ ಹೆಚ್ಚಿನ ಭಾಗಗಳು ಸುಸ್ಥಿತಿಯಲ್ಲಿವೆ. ಪ್ರಾಚೀನ ಕಾಲದಲ್ಲಿ ಕಲ್ಯಾಣ ಚಾಳುಕ್ಯರು ಅಥವಾ ಯಾದವರಿಂದ ನಿರ್ಮಿತವಾಗಿದ್ದ ಕೋಟೆಯಿದ್ದ ಸ್ಥಳದಲ್ಲೇ ಬಹಮನಿ ರಾಜವಂಶದ ಅಹ್ಮದ್ ಷಾ ಬಹಮನ್ ಸುಲ್ತಾನ್ ಈ ಕೋಟೆಯನ್ನು ನಿರ್ಮಿಸಿದನು. ಕ್ರಿ.ಶ. 1429ರಲ್ಲಿ ಆರಂಭವಾಗಿ 1432ರಲ್ಲಿ ಇದು ಪೂರ್ಣಗೊಂಡಿತು. ಕಲ್ಲು, ಇಟ್ಟಿಗೆ ಮತ್ತು ಗಾರೆಗಳ ಈ ಕೋಟೆಯ ನಿರ್ಮಾಣದಲ್ಲಿ ಅನೇಕ ದೇಶಗಳ ಇಂಜಿನಿಯರುಗಳು ಮತ್ತು ಶಿಲ್ಪಿಗಳು ಕಾರ್ಯನಿರ್ವಹಿಸಿದರು. ವಾಸ್ತವವಾಗಿ ಇದನ್ನು ವಿನ್ಯಾಸಗೊಳಿಸಿ ನಿರ್ಮಿಸಿದವರು ಪರ್ಷಿಯನ್ ಮತ್ತು ತುರ್ಕಿ ವಾಸ್ತುಶಿಲ್ಪಿಗಳು. ಮಾಳ್ವದ ಸುಲ್ತಾನನ ಮೇಲೆ ನಡೆದ ಯುದ್ಧದಲ್ಲಿ ಈ ಕೋಟೆಯ ಕೆಲವು ಭಾಗಗಳು ಹಾಳಾದವು. ಆದರೆ ಹೆಚ್ಚಿನ ಬದಲಾವಣೆಯಿಲ್ಲದೆ ಈ ಕೋಟೆಯನ್ನು ಸುಭದ್ರಗೊಳಿಸಲಾಯಿತು.

ಎತ್ತರವಾದ ಸ್ಥಳದಲ್ಲಿ, ಉತ್ತರ ಮತ್ತು ಪೂರ್ವಗಳಲ್ಲಿ ಇಳಿಜಾರಾಗಿರುವಂತೆ ಕಟ್ಟಲಾಗಿರುವ ಈ ಕೋಟೆಯು ಅಸಮರೂಪದ ವಜ್ರಾಕೃತಿಯಲ್ಲಿದೆ. ಉಬ್ಬುತಗ್ಗುಗಳಿಂದ ಕೂಡಿದ ಭೂಮಟ್ಟದ ಇತರ ಕಡೆಗಳಲ್ಲಿ, ಮೂರು ನಾಲೆಗಳಿರುವ ಹಾಗೂ ಕಲ್ಲಿನಿಂದ ಕಟ್ಟಿದ ಬೇರ್ಪಡಿಸುವ ಗೋಡೆಗಳಂತಿರುವ ಒಂದು ಕಂದಕವನ್ನು ಅಗೆಯಲಾಗಿದೆ. ಕಂದಕದ ಆಳ ಮೂವತ್ತು ಅಡಿಗಳು. ಕೆಳಗಿನ ಶಿಲೆಯ ಭಾಗದಿಂದ ಅವು ಮೂವತ್ತೆರಡರಿಂದ ನವಲತ್ತೆರಡು ಅಡಿಗಳು. ಕಂದಕದ ಅಗಲ ವಿವಿಧ ಸ್ಥಳಗಳಲ್ಲಿ ಮೂವತ್ತಾರರಿಂದ ನಲವತ್ತೆರಡು ಅಡಿಗಳು. ಇದು ಎಷ್ಟೊಂದು ದೊಡ್ಡದಾಗಿದೆ ಎಂಬುದನ್ನು ಇದರ ಎರಡೂವರೆ ಮೈಲಿಗಳ ಸುತ್ತಳತೆ ತೋರ್ಪಡಿಸುತ್ತದೆ. ಇದರಲ್ಲಿ ಮೂವತ್ತೇಳು ಬುರುಜುಗಳು ಮತ್ತು ಹೆಬ್ಬಾಗಿಲು ಹಾಗೂ ಏಳು ಇತರ ಬಾಗಿಲುಗಳೂ ಇವೆ. ಈ ಬಾಗಿಲುಗಳಿಗೆ ಮಾಂಡು, ಕಲ್ಯಾಣಿ, ದೆಹಲಿ, ಕಲಂಧ್ಗಿ, ಕರ್ನಾಟಿಕ್ ದರ್ವಾಜಗಳೆಂದು ಹೆಸರು. ಬುರುಜುಗಳು ದೊಡ್ಡ ಗಾತ್ರದಲ್ಲಿದ್ದು ವೃತ್ತಾಕಾರ ಅಥವಾ ಅಷ್ಟಕೋನಾಕಾರದಲ್ಲಿವೆ. ಕೆಲವು ಬುರುಜುಗಳು ಚೌಕಾಕಾರವಾಗಿಯೂ ಇವೆ.

ಬಂದೂಕು ಮತ್ತು ಫಿರಂಗಿಗಳನ್ನು ಉಡಾಯಿಸುವುದಕ್ಕೆ ಅನುಕೂಲವಾಗುವ ಜೇನುಗೂಡಿನಾಕಾರದ ಗೂಡುಗಳುಳ್ಳ ಕೈಪಿಡಿ ಗೋಡೆಯಿದೆ. ಮೊದಲನೆಯ ಬಾಗಿಲಿನ ಮುಂದೆ ಅಲಂಕೃತ ಸಂಗೀತ ಗ್ಯಾಲರಿಯಿದೆ. ಲಾಲ್ ಬುರುಜ್, ಕಲ್ಯಾಣಿ ಬುರುಜ್, ಪೆಟ್ಲ ಬುರುಜ್ ಮುಂತಾದ ಅನೇಕ ಬುರುಜುಗಳಿವೆ. ಶಸ್ತ್ರಗಳನ್ನು ತಯಾರಿಸುವ ಅನೇಕ ಬಂದೂಕು ತಯಾರಿಕಾ ಕಾರ್ಯಾಗಾರಗಳೂ ಕೋಟೆಯೊಳಗಿವೆ. ಇಲ್ಲಿರುವ ಶಾಸನ ಇವುಗಳನ್ನು ಆಕಾಶದಿಂದ ನೇರವಾಗಿ ಜಿಗಿದು ಬಂದಿದ್ದು ಎಂದು ವರ್ಣಿಸಿದೆ. ಇಲ್ಲಿರುವ ಅನೇಕ ಫಿರಂಗಿಗಳ ಮೇಲೆ ಶಾಸನಗಳಿವೆ. ಈ ಶಾಸನಗಳು ಅವುಗಳ ರಂಧ್ರದ ಅಗಲ, ಅವುಗಳಿಗೆ ಹಾಕಬೇಕಾದ ಮದ್ದಿನ ಪುಡಿ, ಸುಲ್ತಾನನ ಹೆಸರು, ತೇದಿ ಮುಂತಾದ ವಿವರಗಳನ್ನು ಒದಗಿಸುತ್ತವೆ. ಕೋಟೆಯೊಳಗೆ ರಂಗೀನ್ ಮಹಲ್, ರಾಜರಾಣಿಯರ ಸ್ನಾನ ಗೃಹ, ಲಾಲ್‌ಬಾಗ್, ಸೋಲಾಹ್ ಕಂಬಗಳ ಮಸೀದಿ, ತುರ್ಕಿ ಮಹಲ್, ಗಗನ್ ಮಹಲ್, ಸಂದರ್ಶನ ಹಜಾರ, ತಖ್ತ್ ಮಹಲ್, ಹಜಾರ್ ಕೋಠ್ರಿ, ನೌಬತ್ ಖಾನೆ ಮುಂತಾದ ಕಟ್ಟಡಗಳಿವೆ. ಈ ರೀತಿ ಬೀದರ್ ಕೋಟೆಯ ಹೊರಭಾಗ ಮತ್ತು ಒಳಭಾಗಗಳು ಸುಂದರವಾಗಿಯೂ, ಬೃಹದಾಕಾರವಾಗಿಯೂ ಇದ್ದು ಬಹಮನಿ ಸುಲ್ತಾನರ ಕಾಲದ ಸೈನಿಕ ವಾಸ್ತುಶಿಲ್ಪ ಮತ್ತು ಶಕ್ತಿಯನ್ನು ಪ್ರದರ್ಶಿಸುತ್ತವೆ.

ಮಹ್ಮೂದ್ ಗವಾನನ ಮದರಸ, ಬೀದರ್

ಮಂತ್ರಿ ಮಹ್ಮೂದ್ ಗವಾನನಿಂದ ಸ್ಥಾಪಿಸಲ್ಪಟ್ಟ ಮದರಸ ಅಥವಾ ಮಹಾವಿದ್ಯಾನಿಲಯದ ಕಟ್ಟಡ ಬೀದರ್‌ನಲ್ಲಿರುವ ಸೌಧಗಳಲ್ಲೇ ವಾಸ್ತುದೃಷ್ಟಿಯಿಂದ ಅತ್ಯಂತ ಪ್ರಮುಖವಾದ ಸ್ಥಾನವನ್ನು ಗಳಿಸಿದೆ. ಇದನ್ನು ಕ್ರಿ.ಶ. 1472ರಲ್ಲಿ ನಿರ್ಮಿಸಲಾಯಿತು. ಮಹ್ಮೂದ್ ಗವಾನ್ ಪರ್ಷಿಯ ದೇಶದಿಂದ ಕರ್ನಾಟಕಕ್ಕೆ ಬಂದು ಬಹಮನಿ ಸುಲ್ತಾನರಲ್ಲಿ ಸೇವೆಗೆ ಸೇರಿದ. ತನ್ನ ಶೌರ್ಯದಿಂದ ಹಾಗೂ ಯುದ್ಧಗಳಲ್ಲಿ ತೋರಿದ ಆಸಕ್ತಿಯಿಂದ ಮೇಲೇರಿ ಕೊನೆಗೆ ಪ್ರಧಾನ ಮಂತ್ರಿಯ ಹುದ್ದೆಯನ್ನು ಅಲಂಕರಿಸಿದನು. ಹೀಗಾಗಿ ಇವನು ಬಹಮನಿ ರಾಜ್ಯದ ಉಚ್ಛ್ರಾಯ ಸ್ಥಿತಿಗೆ ಮುಖ್ಯ ಕಾರಣನಾದನು. ಆದರೆ ಇವನು ದುರದೃಷ್ಟವಶದಿಂದ ಸ್ಥಳೀಯ ರಾಜಕಾರಣಕ್ಕೆ ತುತ್ತಾಗಿ, ರಾಜದ್ರೋಹದ ಆಪಾದನೆಯ ಮೇಲೆ ಕ್ರಿ.ಶ. 1481ರಲ್ಲಿ ಕೊಲ್ಲಲ್ಪಟ್ಟನು. ಈ ರೀತಿ ಒಂದು ಒಳ್ಳೆಯ ಚೇತನದ ಅಂತ್ಯ ಉಂಟಾಯಿತು. ಆದರೆ ಇವನು ಬೀದರ್‌ನಲ್ಲಿ ನಿರ್ಮಿಸಿದ ಮದರಸ ಅಥವಾ ವಿದ್ಯಾಲಯದಿಂದಾಗಿ ಇತಿಹಾಸದಲ್ಲಿ ಅಮರನಾಗಿದ್ದಾನೆ. ವಿದ್ಯಾಲಯದ ಈ ಕಟ್ಟಡ ಸ್ವಲ್ಪಮಟ್ಟಿಗೆ ಹಾಳಾಗಿದ್ದರೂ, ಉಳಿದಿರುವ ಭಾಗಗಳಿಂದಲೇ ಈ ಸೌಧದ ಗರಿಮೆ ಮತ್ತು ಹಿರಿಮೆಗಳನ್ನು ತಿಳಿಯಬಹುದಾಗಿದೆ.

ಪ್ರತಿ ಹೆಜ್ಜೆಯಲ್ಲಿಯೂ ಕಾಣಬರುವ ಪರ್ಷಿಯನ್ ಪ್ರಭಾವದಿಂದಾಗಿ ಈ ಮದರಸದ ವಾಸ್ತುರಚನೆ ವೈಶಿಷ್ಟ್ಯಪೂರ್ಣವೆನಿಸಿದೆ. ಬಹುಶಃ ಮಹ್ಮೂದ್ ಗವಾನನ ಅಪೇಕ್ಷೆಯ ಮೇರೆಗೆ ಪರ್ಷಿಯದಿಂದ ವಾಸ್ತುಶಿಲ್ಪಿಗಳನ್ನು ಬೀದರ್‌ಗೆ ಬರಮಾಡಿಕೊಂಡು, ಗವಾನನ ನೇರಮಾರ್ಗದರ್ಶನದಲ್ಲಿ ಈ ವಿದ್ಯಾಕೇಂದ್ರವನ್ನು ನಿರ್ಮಿಸಲಾಯಿತು. ವಿಶೇಷವಾಗಿ ಆಲಂಕಾರಿಕ ವಸ್ತುಗಳೂ ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಪರ್ಷಿಯದಿಂದ ತರಿಸಲಾಯಿತೆಂದು ತೋರುತ್ತದೆ. ನಿಜವಾಗಿಯೂ ಹೇಳುವುದಾದರೆ, ಭಾರತದ ಬೀದರ್‌ನಲ್ಲಿ ನಿರ್ಮಾಣಗೊಂಡ ಪರ್ಷಿಯನ್ ಕಟ್ಟಡ ಇದೆಂದು ಹೇಳುವಷ್ಟರ ಮಟ್ಟಿಗೆ, ಆ ದೇಶದ ಪ್ರಭಾವ ಕಂಡುಬರುತ್ತದೆ.

205 ಅಡಿ ಉದ್ದ ಮತ್ತು 180 ಅಡಿ ಅಗಲ ಈ ಕಟ್ಟಡದ ಉದ್ದಳತೆ. ಇದರ ಮಧ್ಯದಲ್ಲಿ ವಿಶಾಲವಾದ ಅಂಗಳವಿದೆ. ಇದರಲ್ಲಿ ಪಾಠದ ತರಗತಿಗಳು, ಉಪನ್ಯಾಸದ ಸಭಾಂಗಣಗಳು, ಪುಸ್ತಕ ಭಂಡಾರ, ಮಸೀದಿ ಮುಂತಾದವುಗಳಿಗೆ ಹೋಗಲು ಪ್ರವೇಶದ್ವಾರಗಳಿವೆ. ಇದು ಮೂರು ಅಂತಸ್ತಿನ ಕಟ್ಟಡ. ಇದರಲ್ಲಿ ವಿದ್ಯಾರ್ಥಿ ನಿಲಯಗಳು ಮತ್ತು ಉಪಾಧ್ಯಾಯರ ವಸತಿ ಗೃಹಗಳೂ ಇದ್ದವು. ಈ ಕಟ್ಟಡದ ಪ್ರವೇಶ ಭಾಗದಲ್ಲಿ ಮೂರು ಅಂತಸ್ತಿನ ಎರಡು ಮಿನಾರುಗಳಿದ್ದವು, ಮುಮ್ಮುಖದ ಗೋಡೆಗಳಲ್ಲಿ ಕಮಾನು ಕಿಟಕಿಗಳು, ಅವುಗಳ ಮೇಲೆ ಸೌಧದ ಸುತ್ತಲೂ ಕೈಪಿಡಿ ಗೋಡೆಗಳಿದ್ದವು. ಹಸಿರು, ಹಳದಿ, ಬಿಳಿ, ಕೆಂಪು ಬಣ್ಣದ ಹಾಗೂ ಪುಷ್ಪ ವಿನ್ಯಾಸದ ಅಲಂಕಾರವುಳ್ಳ, ಗಾಜಿನ ಹೊಳಪುಳ್ಳ ಚಿದರಬಿಲ್ಲೆಗಳನ್ನು ಬಳಸಿದ್ದುದರಿಂದ ಇದರ ಸೌಂದರ್ಯ ವರ್ಧಿಸಿದ್ದಿತು. ಸುಂದರ ಬರಹದ ಶಾಸನಗಳೂ ಇಲ್ಲಿ ಕಲಾತ್ಮಕವಾಗಿ ಮತ್ತು ಆಲಂಕಾರಿಕವಾಗಿ ಪರಿಣಮಿಸಿವೆ. ಇದು ವಿದ್ಯಾಸಂಸ್ಥೆಯಾಗಿದ್ದು, ಇಲ್ಲಿ ಪುಸ್ತಕಗಳ ಬಳಕೆ ವಿಶೇಷವಾಗಿದ್ದುದರಿಂದ, ನೆಲಕ್ಕೆ ಮತ್ತು ಗೋಡೆಗಳಿಗೆ ತೇವ ಬರದೇ ಇರುವಂತೆ, ಸೀಸದ ತಗಡುಗಳನ್ನು ಗೋಡೆಯನ್ನು ಕಟ್ಟುವಾಗ ಸೇರಿಸಲಾಗಿದ್ದು, ಅಷ್ಟೊಂದು ವಿಶೇಷ ಗಮನ ವಹಿಸಲಾಗಿದ್ದುದು ಇದರ ವಿಶೇಷ. ಹೀಗೆ ಈ ದೊಡ್ಡ ಕಟ್ಟಡವನ್ನು ವೈಭವಯುತವಾಗಿ ಮಾಡುವುದರ ಜೊತೆಗೆ ಉಪಯೋಗಕರವಾಗಿಯೂ ಮಾಡಲಾಗಿತ್ತು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಈ ರೀತಿಯ ಪ್ರಾಚೀನ ಕಟ್ಟಡಗಳು ನಮ್ಮ ವಾಸ್ತುಶಿಲ್ಪ ಇತಿಹಾಸದಲ್ಲಿ ವಿರಳ. ಆದುದರಿಂದ ಈ ಕಟ್ಟಡ ನಮ್ಮ ಇತಿಹಾಸದಲ್ಲಿ ವೈಶಿಷ್ಟ್ಯಪೂರ್ಣವಾಗಿದೆ.

ಜುಮ್ಮ ಮಸೀದಿ, ಬಿಜಾಪುರ

ಬಿಜಾಪುರದಲ್ಲಿರುವ ಜುಮ್ಮ ಮಸೀದಿಯು ಆದಿಲ್ ಷಾಹಿ ವಾಸ್ತುಶಿಲ್ಪದ ಆರಂಭದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ವಾಸ್ತವವಾಗಿ ಇದರಲ್ಲಿ ಬಹಮನಿ ವಾಸ್ತುಶಿಲ್ಪದ ಕೆಲವು ಲಕ್ಷಣಗಳು ಕಾಣಬರುತ್ತವೆ. ಆದುದರಿಂದ ಇದು ಆದಿಲ್‌ಷಾಹಿ ವಾಸ್ತುಶಿಲ್ಪದ ಪ್ರಾರಂಭಿಕ ಲಕ್ಷಣಕ್ಕೆ ಉತ್ತಮ ಉದಾಹರಣೆಯಾಗಿ ಕಾಣಬರುತ್ತದೆ. ಇವುಗಳೇ ವಿಕಾಸಗೊಂಡು ಗೋಳಗುಮ್ಮಟ ಮತ್ತು ಇಬ್ರಾಹಿಂ ರೋಜಾದಂತಹ ಉತ್ತಮ ವಾಸ್ತುಕೃತಿಗಳಿಗೆ ದಾರಿಮಾಡಿಕೊಟ್ಟವು. ಈ ಮಸೀದಿಯನ್ನು ಮೊದಲನೆಯ ಆಲಿ ಆದಿಲ್ ಷಾ ಸುಮಾರು ಕ್ರಿ.ಶ. 1570ರಲ್ಲಿ ನಿರ್ಮಿಸಿದನು. ಇದು ಬಿಜಾಪುರದಲ್ಲೇ ಅತ್ಯಂತ ದೊಡ್ಡದೂ, ಸುಂದರವೂ ಆದ ಮತ್ತು ಸರಣಿಯ ಕಮಾನುಗಳಿರುವ ಮಸೀದಿ. ವಾಸ್ತವವಾಗಿ ಈ ಸರಣಿ ಕಮಾನುಗಳೇ ಈ ಮಸೀದಿಯ ಮುಖ್ಯ ಲಕ್ಷಣ. ಪೂರ್ವ ಪ್ರವೇಶದ್ವಾರದಲ್ಲಿರಬೇಕಾಗಿದ್ದ ಎರಡು ಮಿನಾರುಗಳು ನಿರ್ಮಿಸಲ್ಪಟ್ಟಿಲ್ಲದೇ ಇರುವುದನ್ನು ಗಮನಿಸಿದರೆ, ಈ ಮಸೀದಿಯು ಪೂರ್ಣವಾಗಿ ನಿರ್ಮಾಣವಾಗಲೇ ಇಲ್ಲವೆಂದೆನಿಸುತ್ತದೆ. ಈ ದೃಷ್ಟಿಯಿಂದ ಅಪೂರ್ಣವೆನಿಸಿದರೂ ಇದೊಂದು ಸುಂದರ ಕಟ್ಟಡವೆನ್ನುವುದರಲ್ಲಿ ಸಂದೇಹವಿಲ್ಲ.

ಇದು 450 ಅಡಿ ಉದ್ದ ಮತ್ತು 225 ಅಡಿ ಅಗಲವಿರುವ ವಿಶಾಲವಾದ ಆಯತಾಕಾರದ ಕಟ್ಟಡ. ಇದರ ಗೋಡೆಗಳು ವಿಶಾಲವಾಗಿದ್ದು ಸರಳವಾಗಿವೆ. ಹೊರಗೋಡೆಗಳಲ್ಲಿ ಅಲಂಕಾರದ ವಿನ್ಯಾಸಗಳಿವೆ. ಒಂದರ ಮೇಲೊಂದರಂತೆ ನಿರ್ಮಿತವಾಗಿರುವ ಸರಣಿ ಕಮಾನುಗಳೇ ಈ ಮಸೀದಿಯ ಪ್ರಮುಖ ಲಕ್ಷಣ. ಕೆಳಗಿನ ಕಮಾನುಗಳನ್ನು ವಾಸ್ತುಶಿಲ್ಪಿ ಅಲಂಕಾರಗಳಿಗಾಗಿ ಬಳಸಿಕೊಂಡಿದ್ದಾನೆ. ಈ ಮಸೀದಿಯಲ್ಲಿ 155 ಅಡಿ ಉದ್ದದ ಚೌಕ ಅಂಗಳವಿದೆ. ಇದರಲ್ಲಿ ಕಮಾನುಗಳ ಏಳು ಸಾಲುಗಳಿವೆ ಮತ್ತು ಅವುಗಳ ಚಾಚು ಪೀಠಗಳ ಮೇಲೆ ಅಗಲವಾದ ಮತ್ತು ಆಳವಾದ ಕಾರ್ನೀಸುಗಳಿವೆ.

ಈ ಕಟ್ಟಡದ ಒಳಭಾಗವೂ ಮನೋಹರವಾಗಿಯೂ ಪರಿಣಾಮಕಾರಿಯಾಗಿಯೂ ಇದೆ. ಇದರಲ್ಲಿ ಆಯತಾಕಾರದ 208 ಅಡಿ ಉದ್ದ ಮತ್ತು 107 ಅಡಿ ಅಗಲದ ಪ್ರಾಂಗಣವಿದೆ. ಕಮಾನುಗಳ ಸಹಾಯದಿಂದ ಇದನ್ನು ಐದು ಭಾಗಗಳಾಗಿ ವಿಭಾಗಿಸಲಾಗಿದೆ. ಅತ್ಯಂತ ಒಳಭಾಗವು 76 ಅಡಿ ಉದ್ದದ ಚೌಕಾಕೃತಿಯಲ್ಲಿದೆ. ಇದರಲ್ಲಿ ಒಂದು ಭಾಗಕ್ಕೆ ಮೂರರಂತೆ ಹನ್ನೆರಡು ಕಮಾನುಗಳಿವೆ. ಈ ಕಮಾನುಗಳು ಮೇಲ್ಭಾಗದಲ್ಲಿ ಒಂದನ್ನೊಂದು ಸಂಧಿಸಿ, ಅಷ್ಟಕೋನಾಕಾರದ ಕಾರ್ನೀಸುಗಳನ್ನು ನಿರ್ಮಿಸಿವೆ. ಇದರ ಮೇಲೆ ಗುಮ್ಮಟವು ನಿರ್ಮಿಸಲ್ಪಟ್ಟಿದೆ. ಮೇಲಿರುವ ಗುಮ್ಮಟವು ಸುಂದರವಾಗಿದ್ದು ಅದರ ಸುತ್ತಲೂ ಸಣ್ಣ ಸಣ್ಣ ಕಮಾನುಗಳು ಮತ್ತು ಅಲಂಕೃತ ಚಾಚುಪೀಠದ ಗೋಡೆಗಳಿವೆ. ಇದರಿಂದಾಗಿ ಗುಮ್ಮಟಕ್ಕೆ ಒಂದು ಅಲಂಕಾರಿಕ ಪೀಠ ದೊರಕಿದಂತೆ ಕಾಣುತ್ತದೆ. ಮಿಹ್ರಬ್‌ನಲ್ಲಿ ಗಾಢ ವರ್ಣದ ಅಲಂಕಾರಿಕ ವಿನ್ಯಾಸಗಳಿವೆ.

ಒಂದನೆಯ ಆಲಿ ಆದಿಲ್ ಷಾ ವಿಜಯನಗರದ ದೊರೆ ರಾಮರಾಯನ ಮೇಲೆ ದಂಡೆತ್ತಿ ಹೋಗಿ ಅವನ ಮೇಲೆ ವಿಜಯವನ್ನು ಸಂಪಾದಿಸಿದ ನಂತರ, ಅಲ್ಲಿಂದ ಕೊಳ್ಳೆಹೊಡೆದು ತಂದ ಸಂಪತ್ತನ್ನು ನೋಡಿ ಸಂತೋಷಗೊಂಡನು. ಅನಂತರ ಈ ಮಸೀದಿಯನ್ನು ನಿರ್ಮಿಸಲು ಯೋಚಿಸಿದನು. ಕೂಡಲೆ ಪರ್ಷಿಯ ಮತ್ತು ಇತರ ಕಡೆಗಳಿಂದ ಕುಶಲ ಕೆಲಸಗಾರರನ್ನು ಕರೆಸಿ ಈ ಮಸೀದಿಯನ್ನು ನಿರ್ಮಿಸಿದನು. ಆದುದರಿಂದಲೇ ಇದೊಂದು ಉತ್ತಮ ಕಟ್ಟಡವಾಗಿ ಕಂಗೊಳಿಸುತ್ತಿದೆ.

ಗಗನ್ ಮಹಲ್, ಬಿಜಾಪುರ

ಗಗನವನ್ನೇ ಮುಟ್ಟುತ್ತಿದೆಯೋ ಎನ್ನುವಂತೆ ಎತ್ತರವಾಗಿರುವುದರಿಂದ ಇದನ್ನು ಗಗನ್ ಮಹಲ್ ಎಂಬ ಹೆಸರಿನಿಂದ ಕರೆಯಲಾಯಿತು. ಕ್ರಿ.ಶ. 1550ರಿಂದ 1580ರವರೆಗೆ ಆಳಿದ ಮೊದಲನೆಯ ಆಲಿ ಆದಿಲ್ ಷಾ ಇದನ್ನು ನಿರ್ಮಿಸಿದನು. ಇವನು ಅನೇಕ ವಿಜಯಗಳನ್ನು ಪಡೆದನು. ಅದರಿಂದ ಸಾಕಷ್ಟು ಪ್ರಮಾಣದಲ್ಲಿ ಐಶ್ವರ್ಯವನ್ನು ಸಂಪಾದಿಸಿದನು. ಇದನ್ನು ಉಪಯೋಗಿಸಿ ತನ್ನ ರಾಜಧಾನಿ ಬಿಜಾಪುರವನ್ನು ಭವ್ಯವಾದ ಕಟ್ಟಡಗಳಿಂದ ಪ್ರಸಿದ್ಧಿಯಾಗುವಂತೆ ಯೋಜನೆ ಹಾಕಿದನು. ಈ ರೀತಿ ಯೋಜಿಸಿದ ಕಟ್ಟಡಗಳಲ್ಲಿ ಗಗನ್ ಮಹಲ್ ಕೂಡ ಒಂದು.

ಈ ಸೌಧವನ್ನು ಕ್ರಿ.ಶ. 1561ರಲ್ಲಿ ಸುಲ್ತಾನ್ ಆಲಿ ಆದಿಲ್ ಷಾ ಅಪ್ಪಣೆಯ ಮೇರೆಗೆ ಅವನ ಅರಮನೆ ಹಾಗೂ ದರ್ಬಾರಿಗಾಗಿ ನಿರ್ಮಿಸಲಾಯಿತು. ಈ ಎರಡು ಉದ್ದೇಶಗಳ ಸಾಕಾರ ಮಿಳಿತವೇ ಈ ಕಟ್ಟಡದ ಮಹತ್ವಕ್ಕೆ ಮುಖ್ಯ ಕಾರಣ. ಸುಲ್ತಾನನ ಖಾಸಗಿ ವಾಸಸ್ಥಾನವು (ಅರಮನೆ) ಮೊದಲನೆಯ ಹಂತದಲ್ಲಿಯೂ ಸುಲ್ತಾನನ ದರ್ಬಾರ್ ಭವನ ಇದರ ಕೆಳಗಡೆಯೂ ಇದ್ದವು. ಅರಮನೆಯ ಮರದ ಕೆಳಭಾಗದ ಭಾರವನ್ನು ಬೃಹತ್ತಾದ ಎರಡು ಮರದ ಕಂಬಗಳು ಹೊತ್ತುಕೊಂಡಿದ್ದವು. ಇದರಲ್ಲಿ ಮುಂಚಾಚಿದ ಮರದ ಎರಡು ಬಾಲ್ಕನಿಗಳಿದ್ದು ಅಲ್ಲಿ ನಡೆಯುತ್ತಿದ್ದ ದರ್ಬಾರ್, ಕ್ರೀಡೆಗಳು, ರಾಜನು ಸಿಂಹಾಸನದಲ್ಲಿ ಆಸನಸ್ಥನಾಗಿದ್ದುದು ಅಥವಾ ಇತರ ದೃಶ್ಯಗಳನ್ನು ಸುಲ್ತಾನನ ಕುಟುಂಬ ವರ್ಗದವರು, ಇಲ್ಲಿಂದ ನೋಡಲು ಅನುಕೂಲವಾಗುವಂತೆ ನಿರ್ಮಿಸಲಾಗಿದ್ದವು. ಹಿಂಭಾಗದ ಗೋಡೆಯ ಸಮೀಪದಲ್ಲಿ ಮೇಲಕ್ಕೆ ಹೋಗಲು ಅಥವಾ ಕೆಳಕ್ಕೆ ಇಳಿಯಲು ಮರದ ಮೆಟ್ಟಿಲುಗಳನ್ನು ಅವಡಿಸಲಾಗಿತ್ತು. ಸುಲ್ತಾನನ ಕುಟುಂಬದ ಜನಗಳು ಈ ಹಂತಗಳ ಮೂಲಕ, ಹೊರಗಿನ ಜನಗಳಿಗೆ ಕಾಣಿಸಿಕೊಳ್ಳದಂತೆ, ಅರಮನೆಯ ವಾಸದ ಕೋಣೆಗಳು, ಸ್ನಾನಗೃಹ, ಅಡಿಗೆ ಮನೆಗಳಿಗೆ ಹೋಗಬಹುದಾಗಿತ್ತು. ಇದರಿಂದ ಸುಲ್ತಾನನ ಕುಟುಂಬವರ್ಗಕ್ಕೆ ಸುರಕ್ಷತೆ, ರಕ್ಷಣೆ ಮತ್ತು ಖಾಸಗಿತನ ದೊರೆಯುತ್ತಿತ್ತು.

ಈ ಕಟ್ಟಡದ ಸೌಂದರ್ಯ ಮತ್ತು ಭವ್ಯತೆ ಇರುವುದು ಅರವತ್ತು ಅಡಿಗಳಿಗೂ ಮೀರಿದ ಹರವಿನ ಪ್ರಧಾನ ಕಮಾನಿನಲ್ಲಿ. ಇದರ ಎರಡು ಕಡೆಗಳಲ್ಲಿಯೂ ಕಡಿಮೆ ಹರವಿನ ಎರಡು ಕಮಾನುಗಳಿದ್ದು, ಒಟ್ಟು ತುಂಬ ಬೃಹತ್ತಾದ ಮೂರು ಕಮಾನುಗಳ ವಿರಳ ದೃಶ್ಯವನ್ನು ಒದಗಿಸುತ್ತದೆ. ಇದು ದರ್ಬಾರಿನ ಹಜಾರಕ್ಕೆ ಎದುರಾಗಿದ್ದು ಸುಲ್ತಾನ ಮತ್ತು ಅವನ ಮಂತ್ರಿಗಳು ಎದುರಿನಲ್ಲಿ ನಡೆಯುತ್ತಿದ್ದ ಕ್ರೀಡೆಗಳು, ಕುಸ್ತಿ ಹಾಗೂ ಸಂಗೀತ ಮುಂತಾದವನ್ನು ಪೂರ್ಣವಾಗಿ ವೀಕ್ಷಿಸಲು ಇಷ್ಟು ವಿಶಾಲವಾದ ಕಮಾನಿನ ಅವಶ್ಯಕತೆಯಿದ್ದಿತು. ಹೀಗೆ ಇದು ಉಪಯೋಗಕ್ಕೆ ಬಂದುದಲ್ಲದೆ ಭವ್ಯತೆಗೂ ಕಾರಣವಾಯಿತು. ಗಗನ್ ಮಹಲ್‌ನಲ್ಲಿ ವಿಶೇಷ ಮರದ ಕುಶಲತೆಯೂ ಕಂಡು ಬರುತ್ತದೆ. ಪ್ರಧಾನ ಹಜಾರದ ಇಡೀ ಚಾವಣಿ, ಅದಕ್ಕೆ ಆಸರೆಯಾಗಿದ್ದ ಜಂತಿಗಳು, ಗವಾಕ್ಷ ಬಂಧಗಳು, ಮುಂಚಾಚಿದ ಬಾಲ್ಕನಿಗಳು, ಮುಂಜೂರುಗಳು ಮತ್ತು ಕಂಬಗಳು ಮರದಿಂದ ಮಾಡಿದವುಗಳಾಗಿದ್ದವು. ಇವುಗಳಿಗೆ ಬಣ್ಣದ ಲೇಪವೂ, ವಿಶೇಷವಾಗಿ ಚಿನ್ನದ ಮುಲಾಮಿನ ಲೇಪವೂ ಇದ್ದುದು ಹೆಚ್ಚಳ. ಈ ಅರಮನೆಗೆ ತನ್ನದೇ ಆದ ವಿಶೇಷ ಸಂದರ್ಭಗಳಿದ್ದವು. ಕೊನೆಯ ಆದಿಲ್ ಷಾಹಿ ಸುಲ್ತಾನ ಸಿಕಂದರನನ್ನು ಔರಂಗಜೇಬನು ಸೋಲಿಸಿದ ನಂತರ, ಈ ಅರಮನೆಯ ಸಿಂಹಾಸನದಲ್ಲಿ ಆಸೀನನಾಗಿದ್ದನು. ಅವನ ಮುಂದೆ ಸಿಕಂದರನನ್ನು ಬೆಳ್ಳಿಯ ಸರಪಳಿಗಳಿಂದ ಬಂಧಿಸಿ ತರಲಾಗಿತ್ತು. ದುರದೃಷ್ಟವಶಾತ್ ಗಗನ್ ಮಹಲಿನ ಮೂರು ಬೃಹತ್ ಕಮಾನುಗಳನ್ನು ಹೊರತುಪಡಿಸಿ, ಅನೇಕ ಭಾಗಗಳು ಹಾಳಾಗಿವೆ.

## ಸಾತ್ ಮಂಜಿಲ್, ಬಿಜಾಪುರ

ಇದರ ಹೆಸರೇ ಸೂಚಿಸುವಂತೆ ಇದು ಏಳು ಅಂತಸ್ತಿನ ಅರಮನೆ. ಆದಿಲ್ ಷಾಹಿ ವಂಶದ ಅತ್ಯಂತ ಸಮರ್ಥ ಸುಲ್ತಾನನಾದ ಇಬ್ರಾಹಿಂ ಆದಿಲ್ ಷಾ ಇದನ್ನು ಕ್ರಿ.ಶ. 1583ರಲ್ಲಿ ನಿರ್ಮಿಸಿದನು. ವಾಸ್ತವವಾಗಿ ಇವನು ಬಿಜಾಪುರದಲ್ಲಿರುವ ಅತ್ಯಂತ ದೊಡ್ಡದಾದ ಹಾಗೂ ಉತ್ತಮ ತಾಂತ್ರಿಕತೆಯಿಂದ ಕೂಡಿ ಪ್ರಸಿದ್ಧವಾಗಿರುವ ಗೋಳಗುಮ್ಮಟದ ನಿರ್ಮಾತನಾಗಿ ವಿಶೇಷವಾಗಿ ಪ್ರಖ್ಯಾತನಾಗಿದ್ದಾನೆ.

ಇದು ಗಗನ್‌ಮಹಲ್‌ಗೆ ನೈರುತ್ಯದಲ್ಲಿದ್ದು, ಇದರ ಸುತ್ತಲೂ ವಿಶಾಲವಾದ ಉಗ್ರಾಣವೆಂದು ಕರೆಯಲಾದ ಪ್ರಾಂಗಣದಲ್ಲಿದೆ. ಇದಕ್ಕೆ ಸಾತ್ (ಏಳು) ಮಂಜಿಲ್ ಎಂದು ಹೆಸರಿದ್ದರೂ ಈಗ ಇರುವುದು 97 ಅಡಿಗಳ ಐದು ಅಂತಸ್ತುಗಳು ಮಾತ್ರ. ಐದನೆಯ ಮಹಡಿಯಿಂದ ಆರನೆಯ ಮಹಡಿಗೆ (ಈಗಿಲ್ಲ) ಪ್ರವೇಶ ಕಲ್ಪಿಸುವ ಸಣ್ಣ ಮಹಡಿ ಮೆಟ್ಟಿಲುಗಳಿವೆ. ಇದೇ ರೀತಿ ಆರನೆಯ ಮಹಡಿಯಿಂದ ಏಳನೆಯ ಮಹಡಿಗೆ ಸಂಪರ್ಕ ಕಲ್ಪಿಸುವ ಮೆಟ್ಟಿಲುಗಳಿದ್ದಿರಬೇಕು. ಈಗ ಅವು ಇಲ್ಲ. ಈ ಹಿಂದೆ ಕಟ್ಟಲಾದ ಅರಮನೆ ಮತ್ತು ದರ್ಬಾರು ಭವನಗಳನ್ನೊಳಗೊಂಡ ಗಗನ್ ಮಹಲಿನಿಂದ ಇಬ್ರಾಹಿಮನಿಗೆ ತೃಪ್ತಿಯಾಗಲಿಲ್ಲ. ಆದುದರಿಂದ ತನ್ನ ಘನತೆಗೆ ತಕ್ಕಂತೆ ಪ್ರತ್ಯೇಕ ಅರಮನೆಯನ್ನು ವಿನ್ಯಾಸಗೊಳಿಸಿದನು. ಬಿಜಾಪುರದಲ್ಲಿ ಏಳು ಅಂತಸ್ತಿನ ಕಟ್ಟಡವು ಆದುವರೆಗೆ ಇಲ್ಲದಿದ್ದುದನ್ನು ಗಮನಿಸಿದ ಇಬ್ರಾಹಿಂ, ಏಳು ಅಂತಸ್ತಿನ ಅರಮನೆಯನ್ನು ಕಟ್ಟಲು ನಿರ್ಧರಿಸಿದನು.

ಈ ಹಿಂದೆ ಸಾತ್ ಮಂಜಿಲ್ ಈಗಿರುವುದಕ್ಕಿಂತ ಹೆಚ್ಚಿಗೆ ದೊಡ್ಡದಾಗಿತ್ತು. ಈಗ ಕಾಣುತ್ತಿರುವುದು ಅರಮನೆಯ ಭಾಗ ಮಾತ್ರ; ಮಿಕ್ಕ ಭಾಗಗಳೆಲ್ಲವೂ ಈಗ ನಾಶವಾಗಿವೆ. ಈಗ ಇದರ ಹತ್ತಿರದಲ್ಲಿರುವ ಚೀನಿಮಹಲ್ ಹಿಂದೆ ಈ ಅರಮನೆಯ ಭಾಗವೇ ಆಗಿತ್ತು. ಮಹಡಿ ಮೆಟ್ಟಿಲುಗಳ ಮೂಲಕ ಕೊಠಡಿಗಳ ಮೇಲಿನ ಪಶ್ಚಿಮ ಭಾಗದಿಂದ ಚೀನಿಮಹಲ್‌ಗೆ ಅರಮನೆಯಿಂದ ಹೋಗಬಹುದಾಗಿತ್ತು. ಇದರಲ್ಲಿ ಹೆಚ್ಚಿಗೆ ಕಾಣಬರುವ ನೀರಿನ ತೊಟ್ಟಿಗಳು ಸ್ನಾನಗೃಹಗಳನ್ನು ಗಮನಿಸಿದರೆ, ಇದನ್ನು ಜಲಕ್ರೀಡೆಗಳಿಗೆ ಹಾಗೂ ರಾಣಿವಾಸದವರ ಖಾಸಗಿ ಉಪಯೋಗಕ್ಕಾಗಿ ಕಟ್ಟಲಾಗಿತ್ತು ಎಂದು ತಿಳಿಯಬಹುದು. ಹಂತದಿಂದ ಹಂತಕ್ಕೆ ನೀರು ಹರಿದು ಹೋಗಲು ಕೊಳವೆಗಳನ್ನು ಇಟ್ಟಿಗೆಯ ಗೋಡೆಯಲ್ಲಿ ಸೇರಿಸಿದ್ದರು. ಈ ರೀತಿ ನೀರಿನ ಪೈಪುಗಳು ಹಾಗೂ ನೀರಿನ ತೊಟ್ಟಿಗಳನ್ನು ಧಾರಾಳವಾಗಿ ಅಳವಡಿಸಿದ್ದುದು ಈ ಕಟ್ಟಡದ ವೈಶಿಷ್ಟ್ಯ. ಸ್ನಾನ ಗೃಹದ ಗೋಡೆಗಳ ಮೇಲೆ ಮನುಷ್ಯರ ಮತ್ತು ಜ್ಯಾಮಿತಿಯ ವಿವಿಧ ವಿನ್ಯಾಸಗಳ ವರ್ಣಚಿತ್ರಗಳಿದ್ದವು. ಕೆಲವು ಕಡೆಗಳಲ್ಲಿ ಗೋಡೆಗಳಿಗೆ ಚಿನ್ನದ ಮುಲಾಮನ್ನು ಹಚ್ಚಲಾಗಿತ್ತು. ಈ ಕಟ್ಟಡದ ಇನ್ನೊಂದು ವೈಶಿಷ್ಟ್ಯವೆಂದರೆ, ಕಂಬಗಳು, ಗವಾಕ್ಷಿಯ ಬಂಧಗಳು, ಜಾಲಂಧ್ರಗಳು, ಬೋದಿಗೆಗಳು ಮುಂತಾದವುಗಳನ್ನು ಮರದಿಂದ ಮಾಡಲಾಗಿತ್ತು. ಜಲಮಂದಿರ ಎಂದು ಈಗ ಕರೆಯಲಾಗುವ ಇನ್ನೊಂದು ಕಟ್ಟಡವು ಇದರ ಸಮೀಪದಲ್ಲೇ ಇತ್ತು. ಹಿಂದೆ ಅದೂ ಕೂಡ ಈ ಭವ್ಯ ಅರಮನೆಯ ಭಾಗವೇ ಆಗಿತ್ತು. ಇದರಲ್ಲಿ ವಿವಿಧ ಬಣ್ಣಗಳ ನೆಲಹಾಸು ಫಲಕಗಳಿದ್ದವು. ಹೀಗೆ ಸಾತ್ ಮಂಜಿಲ್ ಆದಿಲ್ ಷಾಹಿ ರಾಜರ ವೈಭವಯುತ ಜೀವನಕ್ಕೆ ಪ್ರಸಿದ್ಧವಾಗಿದ್ದ ಕಟ್ಟಡವಾಗಿತ್ತು. ಏಳು ಅಂತಸ್ತುಗಳ ಕಟ್ಟಡದ ಕಲ್ಪನೆ, ಅದರ ಅಲಂಕಾರ ವಿನ್ಯಾಸ, ಮರದಿಂದ ಮಾಡಿದ ಕುಶಲಕಲಾ ವಿನ್ಯಾಸ, ಅರಮನೆಯ ವೈಭವಕ್ಕೆ ತಕ್ಕ ಗಾಂಭೀರ್ಯ, ಉತ್ತಮ ನೀರು ಸರಬರಾಜಿನ ವ್ಯವಸ್ಥೆ ಮುಂತಾದವುಗಳಿಂದ ಸಾತ್ ಮಂಜಿಲ್ ಪ್ರಸಿದ್ಧಿ ಪಡೆದಿದೆ. ಈ ರೀತಿಯ ಕಟ್ಟಡಗಳು ವಿರಳ.

ಇಮ್ಮಡಿ ಕಾಸಿಂ ಬರೀದನ ಗೋರಿ, ಬೀದರ್

ಇಮ್ಮಡಿ ಕಾಸಿಂ ಬರೀದ್ ಬೀದರ್‌ನಿಂದ ರಾಜ್ಯವಾಳಿದ ಬರೀದ್ ಷಾಹಿ ವಂಶದ ರಾಜರಲ್ಲೊಬ್ಬ. ಈ ಸುಲ್ತಾನನು ಕ್ರಿ.ಶ. 1587ರಿಂದ 1591ರವರೆಗೆ ರಾಜ್ಯವಾಳಿದನು. ಇವನು ಕೇವಲ ಸ್ವಲ್ಪ ಸಮಯ ರಾಜ್ಯವಾಳಿದರೂ, ಅವನ ಗೋರಿಯು ಬೀದರ್‌ನಲ್ಲಿ ಉತ್ತಮ ವಿನ್ಯಾಸದ ಕಟ್ಟಡ. ಅವನ ಹಿಂದಿನ ಸುಲ್ತಾನ ಇಬ್ರಾಹಿಂ ಬರೀದನ ಗೋರಿಯ ಮುಂಭಾಗದಲ್ಲೇ ಈ ಗೋರಿಯು ನಿರ್ಮಾಣವಾಗಿದೆ. ಹಿಂದೆ ಈ ಗೋರಿಯ ಸುತ್ತಲೂ ಗೋಡೆಯಿದ್ದು, ವೈವಿಧ್ಯಮಯ ಹೂವಿನ ಗಿಡಗಳು, ಬಳ್ಳಿಗಳು, ತಂಪು ನೆರಳನ್ನು ನೀಡುವ ವೃಕ್ಷಗಳಿಂದ ಕೂಡಿದ ಉದ್ಯಾನವಿದ್ದಿತು.

ಗೋರಿಯನ್ನು ಚೌಕಾಕಾರದ ವಿಶಾಲವಾದ ಜಗತಿಯ ಮೇಲೆ ಕಟ್ಟಲಾಗಿದೆ. ಇದರ ಪ್ರತಿ ಪಾರ್ಶ್ವದ ಉದ್ದ 92 ಅಡಿಗಳು, ಜಗತಿಯೇ ಆರು ಅಡಿ ಎತ್ತರವಿದ್ದು, ಕಟ್ಟಡಕ್ಕೆ ಒಳ್ಳೆಯ ಎತ್ತರವನ್ನು ಒದಗಿಸುತ್ತದೆ. ಗೋರಿಯ ಹತ್ತಿರ ಹೋಗಲು ಮೆಟ್ಟಿಲುಗಳಿವೆ. ಅವುಗಳಲ್ಲಿ ಎಲೆಯಾಕಾರದ ಅಲಂಕೃತ ದಿಂಡುಗಳಿವೆ. ಇದು ಸುಮಾರಾದ ಅಳತೆಯ ಕಟ್ಟಡವಾದರೂ, ಅದರ ಹಿತವಾದ ಗೋಡೆಯ ಪ್ರಮಾಣದ ದೃಷ್ಟಿಯಿಂದ ಹಾಗೂ ಗುಮ್ಮಟದ ಸುತ್ತಳತೆಯಿಂದ ನೋಡುಗರನ್ನು ಆಕರ್ಷಿಸುತ್ತದೆ. ಪ್ರತಿಪಾರ್ಶ್ವದ ಗೋಡೆಯ ಉದ್ದ ಮೂವತ್ತು ಅಡಿಗಳು, ಎತ್ತರ ಇಪ್ಪತ್ತೈದು ಅಡಿಗಳು. ಒಂದರ ಮೇಲೆ ಇನ್ನೊಂದರಂತೆ ವಿನ್ಯಾಸಗೊಂಡಿರುವ ಕಮಾನುಗಳಿಂದ, ಮಹಡಿಯ ಕಟ್ಟಡವಿರುವಂತೆ ಭಾಸವಾಗುತ್ತದೆ. ಮಧ್ಯದ ಕಮಾನಿನ ಮೇಲ್ಭಾಗದಲ್ಲಿ ಅಲಂಕೃತ ವಿನ್ಯಾಸವಿದೆ. ಗೋಡೆಯ ತುದಿಯಲ್ಲಿ ತ್ರಿವಳಿ ವಿನ್ಯಾಸದಿಂದ ಅಲಂಕೃತಗೊಂಡ ವಿನ್ಯಾಸ, ಸಣ್ಣ ಪ್ರಮಾಣದ ಕಂಬಗಳು, ಅವುಗಳ ಮೇಲೆ ಅಲಂಕಾರ ನಾಲ್ಕೂ ಕಡೆಯಲ್ಲಿವೆ. ಗುಮ್ಮಟದ ಸುತ್ತಳತೆ 82 ಅಡಿಗಳು. ಗುಮ್ಮಟದ ಪೀಠಭಾಗದಲ್ಲಿ, ಜ್ಯಾಮಿತಿಯ ಚಿಹ್ನೆಗಳು ಮತ್ತು ಪುಷ್ಪಾಲಂಕಾರಗಳನ್ನು ಹೊಂದಿದ ದಿಂಡುಗಳು ಕಾಣಬರುತ್ತವೆ. ಅಷ್ಟೇನೂ ಬೃಹದಾಕಾರದ ಗುಮ್ಮಟವಾಗಿಲ್ಲದಿದ್ದರೂ ಅದರ ವಿನ್ಯಾಸ ಹಾಗೂ ಅಲಂಕಾರಗಳಿಂದ ಇದು ಗಮನಾರ್ಹವಾಗಿದೆ.

ಗೋರಿಯು ದಕ್ಷಿಣಾಭಿಮುಖವಾಗಿದ್ದು, ಗೋಡೆಯ ಮಧ್ಯಭಾಗದಲ್ಲಿ ಪ್ರವೇಶದ್ವಾರವಿದೆ. ಬಾಗಿಲುವಾಡವು ಕರಿಯ ಕಲ್ಲಿನಿಂದ ರಚಿತವಾಗಿದ್ದು ಕಮಾನಿನ ಭಾಗವು ಹೂವಿನ ವಿನ್ಯಾಸದಿಂದ ಅಲಂಕೃತವಾಗಿದೆ. ಗೋರಿಯ ಒಳಭಾಗವು ಚೌಕಾಕಾರದಲ್ಲಿದ್ದು ಪ್ರತಿ ಪಾರ್ಶ್ವದ ಉದ್ದ ಇಪ್ಪತ್ತು ಅಡಿಗಳು. ಒಳಭಾಗಕ್ಕೆ ನಾಲ್ಕು ಮೂಲೆಗಳಲ್ಲಿ, ಕಮಾನುಗಳು ಮತ್ತು ಗುಚ್ಛಗಳು ಅಲಂಕಾರ ರೂಪದಲ್ಲಿವೆ. ಹೀಗೆ ಇವು ಗೋಡೆಗಳ ಸಾದಾತನದ ಏಕತಾನತೆಯನ್ನು ನಿವಾರಿಸುತ್ತವೆ. ಅಲ್ಲಲ್ಲಿ ಅಲಂಕೃತ ಗೂಡುಗಳಿದ್ದು ಸರಪಳಿ ಹಾಗೂ ಇಳಿಬಿದ್ದಿರುವ ಮೊಗ್ಗಿನ ವಿನ್ಯಾಸಗಳನ್ನು ಕಾಣಬಹುದು. ಕಾಲಕ್ರಮದಲ್ಲಿ ಸುಲ್ತಾನನ ಗೋರಿಯ ಜೊತೆಗೆ ಅವನ ಕುಟುಂಬದವರ ಗೋರಿಗಳನ್ನು ಜಗತಿಯ ಮೇಲೆ ಸೇರಿಸಲಾಯಿತು. ಇವುಗಳಲ್ಲಿ ಕೆಲವು ಕಾಸಿಂ ಬರೀದನ ಕುಟುಂಬದ ಮಹಿಳೆಯರಿಗೆ ಸೇರಿದ್ದುದಾಗಿದೆ ಎಂದು ಭಾವಿಸಲಾಗಿದೆ. ಇದು ಸುಸ್ಥಿತಿಯಲ್ಲಿದ್ದಾಗ, ಗೋರಿಗಳಿಂದ ಎರಡು ಕಮಾನುಗಳಿಗೆ ಹೋಗಲು ಅಳವಡಿಸಿದ್ದ ಪಥವು 320 ಗಜ ಉದ್ದ ಮತ್ತು 120 ಗಜ ಅಗಲವಾಗಿದ್ದು, ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬೀದರ್‌ನಲ್ಲಿ ಅತ್ಯಂತ ಸುಂದರ ಹಾಗೂ ಭವ್ಯ ಕಟ್ಟಡವಾಗಿತ್ತು.

ಇಬ್ರಾಹಿಂ ರೋಜಾ, ಬಿಜಾಪುರ

ಇಬ್ರಾಹಿಂ ರೋಜಾ, ಆದಿಲ್ ಷಾಹಿ ಶೈಲಿಯಲ್ಲಿ ನಿರ್ಮಿತವಾದ ಇನ್ನೊಂದು ಪ್ರಮುಖವೂ ಸುಂದರವೂ ಆದ ಕಟ್ಟಡ. ಈ ವಂಶದಲ್ಲಿ ಆಳಿದ ಸುಲ್ತಾನರಲ್ಲಿ ಒಬ್ಬನಾದ ಮೊದಲನೆಯ ಇಬ್ರಾಹಿಂ ಆದಿಲ್ ಷಾ (ಕ್ರಿ.ಶ. 1580-1637) ತನ್ನ ಚಿರನಿದ್ರೆಯ ಸ್ಥಳವನ್ನು ತಾನೇ ವಿನ್ಯಾಸಗೊಳಿಸಿ ಅದರ ನಿರ್ಮಾಣಕ್ಕೆ ಆಜ್ಞೆ ಮಾಡಿದನು. ಇಬ್ರಾಹಿಂ ರೋಜಾದಲ್ಲಿ ಎರಡು ಮುಖ್ಯ ಕಟ್ಟಡಗಳಿವೆ. ಅವೇ ಒಂದು ಗೋರಿ ಮತ್ತು ಮತ್ತೊಂದು ಮಸೀದಿ. ಈ ಎಲ್ಲವೂ ವಿಶಾಲವಾದ ಚೌಕವಾದ ಅಂಗಳದಲ್ಲಿ ನಿರ್ಮಾಣಗೊಂಡಿವೆ, ಹಾಗೂ ಅದರ ಎದುರಿಗೆ ಸುಂದರ ಉದ್ಯಾನವನ್ನು ಅಳವಡಿಸಲಾಗಿದೆ. ಈ ಎರಡೂ ಕಟ್ಟಡಗಳು 360 ಅಡಿ ಉದ್ದ ಮತ್ತು 160 ಅಡಿ ಅಗಲವಿರುವ ಜಗತಿಯ ಮೇಲೆ ಪ್ರಾಂಗಣದ ಗೋಡೆಯೊಂದಿಗೆ ನಿರ್ಮಾಣಗೊಂಡಿವೆ. ಪೂರ್ವದಲ್ಲಿ ಗೋರಿಯೂ, ಪಶ್ಚಿಮದಲ್ಲಿ ಮಸೀದಿಯೂ ಕಟ್ಟಲ್ಪಟ್ಟಿವೆ. ಈ ಎರಡರ ಮಧ್ಯದಲ್ಲಿ ತೆರೆದ ಅಂಗಳವಿದ್ದು, ಅದರಲ್ಲಿ ಆಲಂಕಾರಿಕ ಕೊಳ ಮತ್ತು ಕಾರಂಜಿಗಳಿವೆ. ಈ ಎರಡೂ ಭಾಗಗಳ ಪ್ರಮಾಣ ಮತ್ತು ಉದ್ದೇಶ ಭಿನ್ನವಾಗಿದ್ದರೂ, ವಾಸ್ತುಶಿಲ್ಪಿಯು ಇವೆರಡನ್ನೂ ಒಟ್ಟುಗೂಡಿಸಿ ಗಾತ್ರ ಮತ್ತು ಶೈಲಿಯಲ್ಲಿ ಒಂದು ರೀತಿಯ ಸಾಮ್ಯತೆಯನ್ನು ತರುವಲ್ಲಿ ಸಫಲನಾಗಿದ್ದಾನೆ. ಆದರೂ ಕೂಡ ಗೋರಿಯು ಮಸೀದಿಗಿಂತ ಹೆಚ್ಚು ಸುಂದರವಾಗಿರುವಂತೆ ಭಾಸವಾಗುತ್ತದೆ. ಗೋರಿಯಲ್ಲಿ ಒಂದು ಕಮಾನಿನ ವರಾಂಡವಿದ್ದು ಅದರಲ್ಲಿ ಒಂದು ಮುಖ್ಯ ಕೋಣೆಯಿದೆ. ಇವೆರಡಕ್ಕೂ ಹೊಂದಿಕೊಂಡಂತೆ ಒಂದು ಗುಮ್ಮಟವಿದೆ. ಈ ಕಟ್ಟಡದ ನಾಲ್ಕುಮೂಲೆಗಳಲ್ಲಿ ಎತ್ತರವಾದ ಮಿನಾರುಗಳಿವೆ. ಆದರೆ ಈ ಕಟ್ಟಡದ ಅತ್ಯಂತ ಸುಂದರ ಮತ್ತು ಶ್ರೇಷ್ಠ ಭಾಗವೆಂದರೆ ಮೇಲಿನ ಹಂತದಲ್ಲಿರುವ ಅರ್ಧಗೋಳಾಕಾರದ ಗುಮ್ಮಟ.

ಕಟ್ಟಡದ ಒಳಗೆ ಮುಖ್ಯ ಕೋಣೆಯ ಸುತ್ತ ಕಮಾನುಗಳ ಸರಣಿಯಿದೆ. ಇವುಗಳು ಸೂಕ್ಷ್ಮ ವಿನ್ಯಾಸದ ಕೆತ್ತನೆಗಳಿಂದ ಕೂಡಿವೆ. ಮುಖ್ಯಕೋಣೆಯು ಚೌಕಾಕಾರವಾಗಿದ್ದು ಪ್ರತಿಯೊಂದು ಮುಖವೂ 18 ಅಡಿ ಉದ್ದ ಇದೆ. ಇದು ಮನೋಹರವಾಗಿ ಕಾಣುವುದಕ್ಕೆ ಮುಖ್ಯ ಕಾರಣ, ಸಮಪ್ರಮಾಣದ ಎತ್ತರದಲ್ಲಿರುವ ಹಾಗೂ ಅಲಂಕೃತ ಚಾವಣಿ. ಈ ರೀತಿ ಗೋರಿಯಲ್ಲಿ ಸರಿಯಾದ ಪ್ರಮಾಣದಲ್ಲಿ ವಾಸ್ತು ರಚನೆ ಹಾಗೂ ಅಲಂಕಾರಗಳು ಸಮ್ಮಿಳಿತಗೊಂಡಿವೆ.

ಇಲ್ಲಿನ ಮಸೀದಿ ಗಾತ್ರ, ವಿನ್ಯಾಸ ಹಾಗೂ ಸುಂದರ ಮುಮ್ಮುಖದಿಂದ ಒಳ್ಳೆಯ ಸೌಧವೆನಿಸಿದೆ. ಇದು ಗಾತ್ರದಲ್ಲಿ ಸ್ವಲ್ಪ ಸಣ್ಣದೆನಿಸಿದರೂ, ನಾಲ್ಕು ಮೂಲೆಗಳಲ್ಲಿರುವ ಮಿನಾರುಗಳು ಹಾಗೂ ಮಧ್ಯದಲ್ಲಿರುವ ಗುಮ್ಮಟದ ವಿನ್ಯಾಸದಿಂದ ಉತ್ತಮ ಕಟ್ಟಡವೆನಿಸಿದೆ. ವಿವಿಧ ಭಾಗಗಳ ಹೊಂದಾಣಿಕೆಯೇ ಈ ಮಸೀದಿಯ ಮುಖ್ಯ ಲಕ್ಷಣ ಮತ್ತು ಹೆಚ್ಚಳ. ಮಧ್ಯದಲ್ಲಿ ಪ್ರವೇಶದ್ವಾರವೂ ಇಕ್ಕೆಲಗಳಲ್ಲಿ ಎರಡು ಮಿನಾರುಗಳೂ ಇವೆ. ಈ ರೀತಿ ಎಲ್ಲ ಭಾಗಗಳೂ ಒಟ್ಟಿನಲ್ಲಿ ಸಂದರವಾಗಿ ಮಿಳಿತಗೊಂಡಿವೆ. ಇಬ್ರಾಹಿಂ ರೋಜಾವನ್ನು ಅಮೃತಶಿಲೆಯಲ್ಲಿ ನಿರ್ಮಿಸಿದ್ದರೆ ಅದು ತಾಜಮಹಲ್‌ಗೆ ಬಲವಾದ ಸ್ಪರ್ಧೆಯನ್ನು ಒಡ್ಡುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ದೃಷ್ಟಿಯಿಂದ ಆದಿಲ್ ಷಾಹಿಗಳು ಸುಂದರವಾದ ಹಾಗೂ ಭವ್ಯವಾದ ಈ ಸೌಧವನ್ನು ನಿರ್ಮಿಸುವುದರ ಮೂಲಕ ತಮ್ಮನ್ನು ಅಮರರಾಗಿರಿಸಿಕೊಂಡಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

## ಗೋಳ ಗುಮ್ಮಟ, ಬಿಜಾಪುರ

ಗೋಳಗುಮ್ಮಟ ಅಂದರೆ ವರ್ತುಲಾಕಾರದ ಗುಮ್ಮಟ ಎಂದರ್ಥ. ಇದು ಮುಹಮ್ಮದ್ ಆದಿಲ್ ಷಾನ (ಕ್ರಿ.ಶ. 1627-57) ಗೋರಿ. ಅವನ ಮರಣಕ್ಕಿಂತ ಮುಂಚೆ ಅವನಿಂದಲೇ ಇದು ವಿನ್ಯಾಸಗೊಂಡಿತ್ತು. ಇದರ ಬೃಹತ್ತು ಮತ್ತು ಮಹತ್ತುಗಳಿಂದ ಭಾರತದ ವಾಸ್ತುಶಿಲ್ಪಿಗಳು ಸಾಧಿಸಿದ ಮಹಾಸಾಧನೆ ಇದು ಎಂದು ಭಾವಿಸಲಾಗಿದೆ. ಇದು ಚೌಕಾಕಾರದಲ್ಲಿದ್ದು, ಪ್ರತಿಯೊಂದು ಪಾರ್ಶ್ವವೂ 205 ಅಡಿ ಇದ್ದು, ಕಟ್ಟಡದ ಎತ್ತರ 200 ಅಡಿಗಳು. ಇಲ್ಲಿರುವ ನಾಲ್ಕು ದಪ್ಪ ಗೋಡೆಗಳ ಮೇಲೆ 144 ಅಡಿ ವ್ಯಾಸವುಳ್ಳ ದೊಡ್ಡ ಗುಮ್ಮಟವಿದೆ. ಒಳಗಿನಿಂದ ಹಜಾರದ ಅಗಲ 135 ಅಡಿಗಳು ಮತ್ತು ಎತ್ತರ 178 ಅಡಿಗಳು. ಒಟ್ಟಿನಲ್ಲಿ ಇದರ ವಿಸ್ತಾರ ಹದಿನೆಂಟು ಸಾವಿರ ಚದರಡಿಗೂ ಮೀರಿದೆ. ಅತ್ಯಂತ ಬೃಹತ್ ಕಟ್ಟಡ ಎಂದು ಭಾವಿಸಲಾಗಿರುವ ಗ್ರೀಸ್ ದೇಶದ ಪಾರ್ಥೆನಾನ್ ಅನ್ನು ಇದು ಮಹತ್ತು ಹಾಗೂ ಬೃಹತ್ತುಗಳಲ್ಲಿ ಮೀರಿಸಿದೆ ಎಂದು ಭಾವಿಸಲಾಗಿದೆ. ಹೀಗೆ ವಾಸ್ತುಶಿಲ್ಪ ಪ್ರಪಂಚದಲ್ಲಿ ಗೋಳಗುಮ್ಮಟ ವಿವಿಧ ಭಾಗಗಳ ಬೃಹತ್ತಿನಿಂದಾಗಿಯೇ ಶ್ರೇಷ್ಠವಾಗಿ ಮೆರೆಯುತ್ತಿದೆ.

ಆದರೆ ಇದಿಷ್ಟೇ ಮಾತ್ರವಲ್ಲ; ಇದರ ವಿವಿಧ ಭಾಗಗಳನ್ನು ನಿಪುಣತೆಯಿಂದ ವಿನ್ಯಾಸಗೊಳಿಸಿರುವುದು, ಕಮಾನುಗಳು, ಕಾರ್ನೀಸುಗಳು, ಅಲಂಕೃತ ಕೈಪಿಡಿಯ ಗೋಡೆಗಳು ಮತ್ತು ಮುಖ್ಯ ಗುಮ್ಮಟವನ್ನು ಮಧುರವಾಗಿ ಸಾಮರಸ್ಯಗೊಳಿಸಿರುವುದು, ಇದರ ವೈಶಿಷ್ಟ್ಯಪೂರ್ಣ ಇಂಜಿನಿಯರಿಂಗ್ ತಾಂತ್ರಿಕತೆಗೆ ಕನ್ನಡಿ ಹಿಡಿದಂತಿದೆ. ತುಂಬ ಜಾಣ್ಮೆಯಿಂದ ಚೌಕಾಕಾರದ ವಿನ್ಯಾಸದ ಹಜಾರವನ್ನು ಎಂಟು ಕೋನಗಳಾಗಿ ಪರಿವರ್ತಿಸಿ, ಅದರ ಮೇಲೆ ಗುಮ್ಮಟದ ಇಡೀ ಭಾರವೇ ನಿಲ್ಲುವಂತೆ ಮಾಡಿರುವುದು ಗಮನಾರ್ಹವಾದ ಸಂಗತಿ. ಈ ಗುಮ್ಮಟವು ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡದು; ಪ್ರಪಂಚದಲ್ಲಿ ಎರಡನೆಯದು. ಗುಮ್ಮಟವು ಗಾರೆಯಿಂದ ನಿರ್ಮಿತವಾದ ಕಮಾನು ಚಾವಣಿಯಾಗಿದ್ದು ಇದರ ದಪ್ಪ ಹತ್ತು ಅಡಿಗಳಾಗಿದ್ದು, ಇದರಲ್ಲಿ ಆರು ತೆರಪುಗಳಿವೆ. ಗುಮ್ಮಟದ ಒಳಭಾಗವು ಒಳಗಿನ ವೃತ್ತದಿಂದ ಹನ್ನೆರಡು ಅಡಿ ದೂರದಲ್ಲಿರುವುದರಿಂದ ಗುಮ್ಮಟದ ಇಡೀ ಭಾರವು ನಾಲ್ಕು ಗೋಡೆಗಳ ಮೂಲಕ ಕೆಳಗಿನವರೆಗೆ ಹೋಗುವಂತೆ ನಿರ್ಮಿಸಲಾಗಿದೆ. ಒಂದು ಚೌಕ ಹಜಾರವನ್ನು ಮೇಲೆ ಹೋಗುತ್ತ ಅಷ್ಟಕೋನಾಕೃತಿಯನ್ನಾಗಿ ಪರಿವರ್ತಿಸಿ, ಕೊನೆಯ ಹಂತದಲ್ಲಿ ಅದನ್ನು ವೃತ್ತಾಕಾರಕ್ಕೆ ತಿರುಗಿಸುವುದು ನಿಜವಾಗಿಯೂ ಒಂದು ಇಂಜಿನಿಯರಿಂಗ್ ಕೌಶಲ. ಸೌಧದ ಮೇಲಕ್ಕೆ ಹತ್ತಲು ನಾಲ್ಕು ಕಡೆಗಳಲ್ಲಿ ಆರು ಪಾರ್ಶ್ವದ ಮೆಟ್ಟಿಲುಗಳಿವೆ. ಇವುಗಳ ತುದಿಯಲ್ಲಿ ಸಣ್ಣ ಗುಮ್ಮಟಗಳಿವೆ. ಇವುಗಳಿಂದ ಇಡೀ ಸೌಧದ ಸೌಂದರ್ಯ ಹೆಚ್ಚಿದೆ.

ಈ ಸೌಧಕ್ಕೆ ಇನ್ನೊಂದು ಹೆಚ್ಚಳವಿದೆ. ಇದು ಪಿಸುಮಾತಿನ ಮೊಗಸಾಲೆ ಎಂಬ ಖ್ಯಾತಿಗೂ ಭಾಜನವಾಗಿದೆ. ಇದರಲ್ಲಿ ತೀರ ಮೆಲು ದನಿಯೂ ಕೂಡ ನೂರ್ಮಡಿಯಾಗಿ ಹೊರಹೊಮ್ಮುತ್ತದೆ. ಆದುದರಿಂದ ಇದು ಪ್ರಪಂಚದಲ್ಲೇ ಪಿಸುಮಾತಿನ ಗ್ಯಾಲರಿ ಎಂದು ಪ್ರಸಿದ್ಧಿ ಪಡೆದಿದೆ. ಈ ಕಟ್ಟಡದ ಮಧ್ಯದಲ್ಲಿ, ನೆಲಕ್ಕಿಂತ ಕೆಳಗೆ, ಇದನ್ನು ನಿರ್ಮಿಸಿದ ಮುಹಮ್ಮದ್ ಆದಿಲ್ ಷಾ ಮತ್ತು ಅವನ ಕುಟುಂಬದವರ ಗೋರಿಗಳಿವೆ. ಆದರೆ ನೆಲದ ಮೇಲೆ ಕಾಣುವುದು ಅನುಕರಣೆಯ ಗೋರಿಗಳು ಮಾತ್ರ. ಈ ರೀತಿ ಮುಹಮ್ಮದ್ ಆದಿಲ್ ಷಾ, ಆಧುನಿಕ ಇಂಜಿನಿಯರ್‌ಗಳ ಹೊಗಳಿಕೆಗೂ ಪಾತ್ರವಾದ ಮಧ್ಯಕಾಲೀನ ಭಾರತದಲ್ಲಿ ಇಂಜಿನಿಯರಿಂಗ್ ಜಾಣ್ಮೆಯನ್ನು ಪ್ರದರ್ಶಿಸುವ ಗೋಳಗುಮ್ಮಟವನ್ನು ಕೊಡುಗೆಯಾಗಿ ನೀಡಿದ್ದಾನೆ.

ಚತುರ್ಮುಖ ಬಸದಿ, ಗೇರುಸೊಪ್ಪೆ

ಹೊನ್ನಾವರ ತಾಲೂಕಿನಲ್ಲಿ ಶರಾವತಿ ನದಿಯ ದಂಡೆಯ ಮೇಲಿರುವ ಪ್ರಸಿದ್ಧವಾದ ಗೇರುಸೊಪ್ಪೆ ಜಲಪಾತಕ್ಕೆ ಮೂವತ್ತು ಕಿಲೋಮೀಟರ್ ದೂರದಲ್ಲಿ ಗೇರುಸೊಪ್ಪೆ ಊರಿದೆ. ಇದು ಸಾಳುವ ರಾಜವಂಶದವರ ರಾಜಧಾನಿಯಾಗಿದ್ದರೂ, ಅದು ಪ್ರಸಿದ್ಧಿಗೆ ಬಂದಿದ್ದು ಮೆಣಸಿನ ರಾಣಿ ಎಂದು ಪ್ರಖ್ಯಾತಳಾಗಿದ್ದ ರಾಣಿ ಚೆನ್ನಭೈರಾದೇವಿ (ಕ್ರಿ.ಶ. 1548-99) ಆಳ್ವಿಕೆಯ ಕಾಲದಲ್ಲಿ. ಇಕ್ಕೇರಿ ನಾಯಕ ಹಿರಿಯ ವೆಂಕಟಪ್ಪ ನಾಯಕನು ಈ ರಾಣಿಯನ್ನು ಸೋಲಿಸಿದನು. ಇದಾದ ನಂತರ ಗೇರುಸೊಪ್ಪೆಯನ್ನು ತ್ಯಜಿಸಲಾಯಿತು. ಅದರಿಂದ ಅದು ಹಾಳಾಯಿತು.

ಇಲ್ಲಿರುವ ಚತುರ್ಮುಖ ಬಸದಿಯು ಜೈನ ದೇವಾಲಯವಾಗಿದ್ದು, ನಾಲ್ಕೂ ಕಡೆಗಳಿಂದ ಪ್ರವೇಶ ಹೊಂದಿರುವ ತಲವಿನ್ಯಾಸದಿಂದ, ಇದು ವಿಶಿಷ್ಟವಾಗಿದೆ. ಈ ರೀತಿಯ ವಾಸ್ತುವನ್ನು ಶಿಲ್ಪಶಾಸ್ತ್ರಗಳು ಸರ್ವತೋಭದ್ರ ಎಂದು ಹೆಸರಿಸುತ್ತವೆ. ಈ ರೀತಿಯ ದೇವಾಲಯಗಳು ತೀರ ವಿರಳ. ಚತುರ್ಮುಖ ಬಸದಿಯಲ್ಲಿ ಒಂದು ಗರ್ಭಗೃಹ, ಅಂತರಾಳಗಳು, ನವರಂಗಗಳು ಮತ್ತು ಮೆಟ್ಟಿಲುಗಳಿರುವ ನಾಲ್ಕು ದ್ವಾರಗಳು ಇವೆ. ಇಡೀ ದೇವಾಲಯವು ನಕ್ಷತ್ರಾಕಾರದ ಜಗತಿಯ ಮೇಲಿದ್ದು, ಹೊರಗಿನ ಪ್ರದಕ್ಷಿಣಪಥಕ್ಕೆ ಅವಕಾಶ ಮಾಡಿಕೊಟ್ಟಿದೆ. ಹೊರಗೋಡೆಗಳ ಮೇಲೆ ಅಲಂಕೃತ ಗೂಡುಗಳಿದ್ದು, ಅವುಗಳಲ್ಲಿ ದೇವ ದೇವಿಯರ ಶಿಲ್ಪಗಳಿವೆ. ಅಲ್ಲಿ ಕೆಲವು ಜಾಲಂಧ್ರಗಳೂ ಇವೆ. ನಾಲ್ಕು ದ್ವಾರಬಂಧಗಳು ಒಂದೇ ರೀತಿಯವಾಗಿದ್ದು, ಅವುಗಳ ಲಲಾಟದಲ್ಲಿ ತೀರ್ಥಂಕರರ ಶಿಲ್ಪಗಳಿವೆ. ಅವುಗಳು ಎರಡೂ ಕಡೆಗಳಲ್ಲಿ ಅಲಂಕೃತವಾಗಿದ್ದು, ದ್ವಿಭಂಗದಲ್ಲಿ ನಿಂತಿರುವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ದ್ರಾವಿಡ ಮತ್ತು ಕದಂಬ ನಾಗರ ಶಿಖರಗಳುಳ್ಳ ಗೂಡುಗಳಲ್ಲಿ ಶಿಲ್ಪಗಳಿವೆ. ಈಗ ಈ ದೇವಾಲಯಕ್ಕೆ ಚಾವಣಿ ಇಲ್ಲ.

ಮಧ್ಯದಲ್ಲಿ ನಾಲ್ಕು ಕಂಬಗಳಿರುವ ನವರಂಗಗಳಿವೆ. ಈ ರೀತಿಯ ವಿಜಯನಗರ ಶೈಲಿಯ ಹದಿನಾರು ಕಂಬಗಳು ಹತ್ತು ಅಡಿಗಳಷ್ಟು ಎತ್ತರವಾಗಿವೆ. ನವರಂಗವನ್ನು ಅಂತರಾಳದಿಂದ ಬೇರ್ಪಡಿಸುವ ಗೋಡೆಯು ದಪ್ಪವಾಗಿದೆ. ಅವುಗಳಲ್ಲಿಯೂ ದೇವದೇವಿಯರ ಶಿಲ್ಪಗಳಿರುವ ಕೋಷ್ಠಗಳಿವೆ. ಮೂರು ದ್ವಾರಬಂಧಗಳ ಲಲಾಟದಲ್ಲಿ ತೀರ್ಥಂಕರ ಶಿಲ್ಪಗಳಿವೆ. ಆದರೆ ದಕ್ಷಿಣದ ದ್ವಾರಬಂಧದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇಲ್ಲಿರುವ ಅಂತರಾಳಗಳಲ್ಲಿ ಎರಡು ಕಂಬಗಳಿವೆ. ಒಟ್ಟು ಈ ರೀತಿ ಎಂಟು ಕಂಬಗಳಿವೆ. ಮಧ್ಯದಲ್ಲಿರುವ ಗರ್ಭಗೃಹದಲ್ಲಿ ಪ್ರತಿಯೊಂದೂ ಒಂದು ದಿಕ್ಕನ್ನು ನೋಡುವಂತಿರುವ ನಾಲ್ಕು ತೀರ್ಥಂಕರರ ವಿಗ್ರಹಗಳಿವೆ. ಈ ನಾಲ್ಕು ತೀರ್ಥಂಕರರ ವಿಗ್ರಹಗಳು ಕರಿಕಲ್ಲಿನಿಂದ ಮಾಡಿದವುಗಳಾಗಿದ್ದು, ವಿಶೇಷ ಹೊಳಪನ್ನು ಹೊಂದಿವೆ.

ಈ ಜೈನ ದೇವಾಲಯದ ನಿರ್ಮಾತರು ಯಾರು ಎಂಬುದನ್ನು ತಿಳಿಯಲು ಸಹಕಾರಿಯಾದ ದಾಖಲೆಗಳಿಲ್ಲ. ಆದರೆ ಇದನ್ನು ರಾಣಿ ಚೆನ್ನಭೈರಾದೇವಿಯು ನಿರ್ಮಿಸಿದಳೆಂದು ಪ್ರತೀತಿ. ಸಮಕಾಲೀನ ಪ್ರವಾಸಿಗ ದೆಲ್ಲವೆಲ್ಲೆಯೂ ಕೂಡ ಈ ವಿಷಯವನ್ನು ತಿಳಿಸಿಲ್ಲ. ಶೈಲಿಯ ಆಧಾರದ ಮೇಲೆ ಇದು ಹದಿನಾರನೆಯ ಶತಮಾನದ ದೇವಾಲಯವೆಂದು ಭಾವಿಸಲಾಗಿದೆ.

ಚಾಮುಂಡೇಶ್ವರಿ ದೇವಾಲಯ, ಚಾಮುಂಡಿ ಬೆಟ್ಟ, ಮೈಸೂರು

ಚಾಮುಂಡಿ ಬೆಟ್ಟ ಮೈಸೂರಿನಲ್ಲಿ ತುಂಬ ಜನಜನಿತವಾದ ಸ್ಥಳ. ಚಾಮುಂಡೇಶ್ವರಿ ಅಥವಾ ಮಹಿಷಾಸುರಮರ್ದಿನಿಯ ದೇವಾಲಯದಿಂದಾಗಿ ಇದು ಈಗ ಪ್ರಖ್ಯಾತ ಪ್ರವಾಸಿಗರ ತಾಣವಾಗಿದೆ. ಮೈಸೂರಿಗೆ ಆಗ್ನೇಯದಲ್ಲಿರುವ ಆಹ್ಲಾದಕರ ಬೆಟ್ಟವು 3489 ಅಡಿಗಳ ಎತ್ತರದ ಬಂಡೆಗಳ ಶಿಖರದಂತಿದೆ. ಬಹುಶಃ ಈ ರೀತಿಯ ದೈವಿಕ  ಪ್ರಾಕೃತಿಕ ಕೊಡುಗೆಯನ್ನು ಪಡೆದಿರುವ ಇನ್ನೊಂದು ನಗರವು ಇರಲಾರದು.

ಚಾಮುಂಡೇಶ್ವರಿ ದೇವಾಲಯದ ಪ್ರಾಚೀನತೆಯು ಐತಿಹ್ಯಗಳಲ್ಲಿ ಮಸುಕಾಗಿದೆ. ಈ ದೇವಾಲಯದ ಮೂಲ ಭಾಗಗಳಾದ ಗರ್ಭಗೃಹ, ಅಂತರಾಳ, ದ್ವಾರಮಂಡಪ ಮುಂತಾದ ಭಾಗಗಳು ದೊಡ್ಡದೇವರಾಜ ಒಡೆಯರ (1659-73) ಕಾಲಕ್ಕೆ ಮುಂಚೆಯೇ ಇದ್ದವು. ಮುಂದಿನ ಹಂತದಲ್ಲಿ ವಿಶಾಲವಾದ ಮಂಡಪ ಮತ್ತು ತೆರೆದ ಮುಖಮಂಡಪಗಳನ್ನು ಸೇರಿಸಲಾಯಿತು. ಮಂಡಪಕ್ಕೆ ಪೂರ್ವ ಮತ್ತು ದಕ್ಷಿಣಗಳಲ್ಲಿ ಎರಡು ದ್ವಾರಗಳಿವೆ. ಮಂಡಪದ ದ್ವಾರದಲ್ಲಿ ಎರಡು ಶೈವ ದ್ವಾರಪಾಲ ಶಿಲ್ಪಗಳಿವೆ. ಮುಖಮಂಡಪದ ಪ್ರವೇಶದಲ್ಲಿ ದೇವಿಯ ಪಾದದ್ವಯಗಳ ಶಿಲ್ಪವಿದೆ. ದೊಡ್ಡ ದೇವರಾಜ ಒಡೆಯರು ಬೆಟ್ಟಕ್ಕೆ ಹೋಗಲು ಒಂದು ಸಾವಿರ ಮೆಟ್ಟಿಲುಗಳನ್ನು ನಿರ್ಮಿಸಿದರು ಮತ್ತು ಹದಿನಾರು ಅಡಿ ಎತ್ತರದ ಬೃಹತ್ತಾದ ನಂದಿಯ ಶಿಲ್ಪವನ್ನು ಪ್ರತಿಷ್ಠಿಸಿದರು. ಚಾಮುಂಡಿ ಬೆಟ್ಟದಲ್ಲಿ ಇದೊಂದು ಪ್ರಮುಖ ಆಕರ್ಷಣೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅಂತಿಮ ಘಟ್ಟದ ಬೆಳವಣಿಗೆಗಳನ್ನು 1827ರಲ್ಲಿ ಮಾಡಲಾಯಿತು. ದೇವಾಲಯದ ಮುಂಭಾಗದ ಕಲ್ಲಿನ ಎತ್ತರವಾದ ಮಹಾದ್ವಾರ ಮತ್ತು ಅದರ ಮೇಲಿನ ಗಾರೆಯ ಎತ್ತರದ ಹಾಗೂ ಭವ್ಯವಾದ ಗೋಪುರವನ್ನು ನಿರ್ಮಿಸಿ, ದೇವಾಲಯದ ಅಂದವನ್ನು ಹೆಚ್ಚಿಸಿದರು. ಗೋಪುರದ ಮಹಾದ್ವಾರದ ದ್ವಾರಬಂಧದಲ್ಲಿ, ಕಲ್ಲಿನಲ್ಲಿ ಕೆತ್ತಲಾದ ವಾಹನ ಸಮೇತ ಗಂಗಾ ಯಮುನೆಯರ ಶಿಲ್ಪಗಳಿವೆ. ಮಹಾದ್ವಾರದ ಹೆಬ್ಬಾಗಿಲನ್ನು ಬೆಳ್ಳಿಯ ಫಲಕದಿಂದ ಅಲಂಕರಿಸಲಾಗಿದೆ. ಇದರಲ್ಲಿ ಏಳು ಸಾಲುಗ ದೇವಿಯ ವಿವಿಧ ರೂಪಗಳ ಬೆಳ್ಳಿಯ ತಗ್ಗು ಉಬ್ಬಿನ ಶಿಲ್ಪಗಳಿವೆ. ಇವು ಸೂಕ್ಷ್ಮ ಕೆತ್ತನೆಯ ಮೈಸೂರಿನ ಕುಸುರಿ ಕಲೆಯನ್ನು ಪ್ರತಿಬಿಂಬಿಸುತ್ತವೆ. ಇದು ಮಹಾರಾಜ ಶ್ರೀ ಜಯಚಾಮರಾಜ ಒಡೆಯರು 1952ರಲ್ಲಿ ನೀಡಿದ ಕೊಡುಗೆ.

ಗರ್ಭಗೃಹದಲ್ಲಿ ಚಾಮುಂಡೇಶ್ವರಿ ದೇವಿಯ ಮೂರೂವರೆ ಅಡಿ ಎತ್ತರದ ವಿಗ್ರಹವಿದೆ. ದೇವಿಯು ಸಿಂಹದ ಮೇಲೆ ಕುಳಿತಿರುವಂತೆ ಕೆತ್ತಲಾಗಿದೆ. ದೇವಿಗೆ ಎಂಟು ಕೈಗಳಿದ್ದು ಮಹಿಷಾಸುರನನ್ನು ಸಂಹಾರ ಮಾಡುತ್ತಿರುವಂತೆ ತೋರಿಸಲಾಗಿದೆ. ತುಡಿಯುತ್ತಿರುವ ಸ್ಪಂದನ ಮತ್ತು ಕ್ರಿಯಾತ್ಮಕ ಭಂಗಿಯಲ್ಲಿರುವ ಶಿಲ್ಪಕ್ಕೆ ಇದು ಉತ್ತಮ ಉದಾಹರಣೆ. ಮಹಿಷಾಸುರ ಮರ್ದಿನಿಯಿಂದಾಗಿ ಈ ಊರಿಗೆ ಮೈಸೂರು ಎಂಬ ಹೆಸರು ರೂಢಿಯಾಗಿದೆ. ಬೆಟ್ಟದ ಮೇಲೆ ಮಹಾಬಲ, ನಾರಾಯಣ ಇತ್ಯಾದಿ ಇತರ ದೇವಾಲಯಗಳೂ ಇವೆ. ದೇವಿಕೆರೆ ಎಂಬ ಪುಷ್ಕರಿಣಿ ಹಾಗೂ ಮಹಾರಾಜರು ಕಟ್ಟಿಸಿದ ಅರಮನೆ ಇಲ್ಲಿವೆ. ಇಲ್ಲಿ ಪ್ರತಿವರ್ಷವೂ ಚಾಮುಂಡೇಶ್ವರಿ ರಥೋತ್ಸವವು ನಡೆಯುತ್ತದೆ. ಇದನ್ನು ನೋಡಲು ಬಹು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಈ ರೀತಿ ಚಾಮುಂಡೇಶ್ವರಿ ದೇವಾಲಯವು ಕರ್ನಾಟಕದಲ್ಲಿ ಅತ್ಯಂತ ಜನಜನಿತವಾದ ದೇವಾಲಯವಾಗಿದ್ದು ಸಾವಿರಾರು ಭಕ್ತರನ್ನು ಆಕರ್ಷಿಸುತ್ತದೆ.

ಟಿಪ್ಪುಸುಲ್ತಾನನ ಅರಮನೆ, ಬೆಂಗಳೂರು

ಚಿಕ್ಕದೇವರಾಜ ಒಡೆಯರು, ಹೈದರ್ ಮತ್ತು ಟಿಪ್ಪು ಸುಲ್ತಾನರ ಕೊಡುಗೆಗಳಿಂದ ಕೂಡಿದ ಬೆಂಗಳೂರು ಕೋಟೆಯು ಪ್ರಾಚೀನವಾದುದು. ಇದರ ಕೆಲವು ಭಾಗಗಳನ್ನು ಟಿಪ್ಪು ಸುಲ್ತಾನನು 1792ರಲ್ಲಿ ಕೆಡವಿಸಿದನು. ಆದರೆ ದಿವಾನ್ ಪೂರ್ಣಯ್ಯನು 1800ರಲ್ಲಿ ಈ ಕೋಟೆಯ ಭಾಗಗಳನ್ನು ಪುನರ್ನಿರ್ಮಿಸಿದನು. ಟಿಪ್ಪು ಸುಲ್ತಾನನ ಅರಮನೆಯು ಪ್ರಾಚೀನ ಕೋಟೆಯೊಳಗೆ ವೆಂಕಟರಮಣ ದೇವಾಲಯದ ಪಕ್ಕದಲ್ಲಿ ಮತ್ತು ಬೆಂಗಳೂರಿನ ಮೆಡಿಕಲ್ ಕಾಲೇಜಿನ ಸಮೀಪದಲ್ಲಿದೆ.

1781ರಲ್ಲಿ ಈ ಅರಮನೆಯನ್ನು ಹೈದರನು ಕಟ್ಟಿಸಿದನು ಮತ್ತು ಆನಂತರ ಟಿಪ್ಪು ಇದನ್ನು ಬಳಸಲು ಆರಂಭಿಸಿದನು. ಈ ಅರಮನೆಯ ಮುಂಭಾಗಗಳು ಹಾಳಾಗಿದ್ದರೂ, ಈಗಲೂ ಅರಮನೆಯ ಅಂತಸ್ತಿಗೆ ತಕ್ಕಂತೆ ಭವ್ಯವಾಗಿ ಕಾಣಿಸುತ್ತದೆ. ಹೊರಭಾಗದ ಗೋಡೆಗಳು ಮಣ್ಣು ಹಾಗೂ ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದ್ದರೆ, ಒಳಭಾಗವು ಪೂರ್ಣವಾಗಿ ಮರದಿಂದ ನಿರ್ಮಿತವಾಗಿದೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದ್ದು, ಇದರಲ್ಲಿ ಮರದ ನಾಜೂಕಾದ ಕೆತ್ತನೆಗಳಿವೆ. ಈಗ ಉಳಿದಿರುವುದು ಮುಂಭಾಗದ ಮೊಗಸಾಲೆ ಮತ್ತು ಎರಡನೆಯ ಅಂತಸ್ತಿನ ಬಾಲ್ಕನಿ ಮಾತ್ರ. ಶೃಂಗಗಳ ವಿನ್ಯಾಸದ ವಿಶಾಲವಾದ ಕಮಾನುಗಳುಳ್ಳ ಈ ಕಟ್ಟಡ ಭವ್ಯತೆಯನ್ನು ಹೊರ ಸೂಸುತ್ತದೆ. ಎತ್ತರದ ಹಾಗೂ ಇಳಿಜಾರಿನ ವಿನ್ಯಾಸಗಳುಳ್ಳ ಮರದ ಕಂಬಗಳು ಈ ಕಟ್ಟಡದ ಭವ್ಯತೆಯನ್ನು ಹೆಚ್ಚಿಸಿವೆ. ಗೋಡೆಗಳ ಮೇಲೆ ಹಾಗೂ ಚಾವಣಿಯಲ್ಲಿ ಸಮಕಾಲೀನ ವರ್ಣಚಿತ್ರಗಳಿದ್ದು, ಅವುಗಳಲ್ಲಿ ಪುಷ್ಪ ವಿನ್ಯಾಸ ಮತ್ತು ಜ್ಯಾಮಿತಿಯ ವಿನ್ಯಾಸಗಳು ವಿಶೇಷವಾಗಿವೆ. ಇವುಗಳು ತುಂಬ ಆಕರ್ಷಕವಾಗಿವೆ. ಈ ವರ್ಣಚಿತ್ರಗಳು ಸಮಕಾಲೀನ ಚಿತ್ರಕಲೆಗೆ ಉತ್ತಮ ಉದಾಹರಣೆಗಳಾಗಿವೆ.

ಈ ಅರಮನೆಯ ಮೇಲಿನ ಹಂತದಲ್ಲಿ ಎರಡು ಹಜಾರಗಳು, ಕೆಲವು ಕೊಠಡಿಗಳು ಮತ್ತು ಎರಡು ಬಾಲ್ಕನಿಗಳಿದ್ದವು. ಇವು ಕಚೇರಿಯ ಮುಂಭಾಗದಲ್ಲಿದ್ದು ರಾಜಕುಮಾರರು ಇವನ್ನು ಉಪಯೋಗಿಸುತ್ತಿದ್ದರು. ಕೆಲವು ಸಮಯ ಇದನ್ನು ಸಂದರ್ಶನ ಹಜಾರವಾಗಿಯೂ ಬಳಸಲಾಗುತ್ತಿತ್ತು. ಬಾಲ್ಕನಿಯ ಕೊನೆಯಲ್ಲಿದ್ದ ಕೊಠಡಿಗಳನ್ನು ಸುಲ್ತಾನನ ಕುಟುಂಬದವರು ಖಾಸಗಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದರು. ಹೊರಗಡೆಯಿಂದ ಈ ಕೊಠಡಿಗಳು ಸಣ್ಣದಾಗಿ ಕಂಡು ಬಂದರೂ, ಅವು ತಂಪಾಗಿದ್ದು ವಾಸಕ್ಕೆ ಯೋಗ್ಯವಾಗಿದ್ದವು. ವರಾಂಡದಲ್ಲಿ ಒಂದು ಶಾಸನವಿದೆ. ಈ ಶಾಸನದಲ್ಲಿ ಈ ಅರಮನೆಯನ್ನು ಸಂತಸದ ನೆಲೆ ಮತ್ತು ಸ್ವರ್ಗದ ಈರ್ಷ್ಯೆ ಎಂದು ವರ್ಣಿಸಿದೆ. ಇದರ ನಿರ್ಮಾಣ 1781ರಲ್ಲಿ ಆರಂಭವಾಗಿ 1791ರಲ್ಲಿ ಪೂರ್ಣಗೊಂಡಿತು.

ಟಿಪ್ಪು ಸುಲ್ತಾನನ ಮರಣಾನಂತರ ಮುಮ್ಮಡಿ ಕೃಷ್ಣರಾಜ ಒಡೆಯರು 1808ರಲ್ಲಿ ಬೆಂಗಳೂರಿನ ನಾಗರಿಕರಿಗೆ ಸಂದರ್ಶನವನ್ನು ಇಲ್ಲಿ ನೀಡಿದರು. ಆನಂತರ ಸ್ವಲ್ಪ ಕಾಲ ಬ್ರಿಟಿಷ್ ಸೈನ್ಯವು ಇದನ್ನು ಉಪಯೋಗಿಸುತ್ತಿತ್ತು. ರಾಜ್ಯದ ಸೆಕ್ರೆಟೇರಿಯಟ್ ಆಗಿಯೂ ಇಲ್ಲಿ ಕೆಲಸ ನಡೆಯುತ್ತಿತ್ತು. ಕೊನೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಈ ಅರಮನೆಯನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡು ಸಂರಕ್ಷಿತ ಕಟ್ಟಡವನ್ನಾಗಿ ಮಾಡಿತು. ಈ ರೀತಿ ಬೆಂಗಳೂರು ನಗರದಲ್ಲಿ ಇದೊಂದು ಸುಂದರ ಮರದ ಅರಮನೆ. ಹದಿನೆಂಟನೆಯ ಶತಮಾನದಲ್ಲಿ ಮರದಿಂದ ನಿರ್ಮಾಣವಾಗುತ್ತಿದ್ದ ಅರಮನೆಯ ವಿನ್ಯಾಸ ಹಾಗೂ ಅದರ ವಿವಿಧ ಭಾಗಗಳನ್ನು ಸಂಯೋಜಿಸುತ್ತಿದ್ದ ರೀತಿಗೆ ಇದೊಂದು ಉತ್ತಮ ಉದಾಹರಣೆಯಾಗಿದೆ.

ದರಿಯಾದೌಲತ್, ಶ್ರೀರಂಗಪಟ್ಟಣ

ಟಿಪ್ಪು ಸುಲ್ತಾನನು ನಿಸರ್ಗ ಪ್ರೇಮಿಯಾಗಿದ್ದು ಹಣ್ಣುಬಿಡುವ, ನೆರಳು ನೀಡುವ ಹಾಗೂ ಅಲಂಕಾರಿಕ ಮರಗಳನ್ನು ನೆಡಿಸಿ, ತನ್ನ ರಾಜಧಾನಿ ಶ್ರೀರಂಗಪಟ್ಟಣದ ಕೋಟೆಯ ಹೊರಗೆ ದಕ್ಷಿಣ ತೀರದಲ್ಲಿ ಒಂದು ಸುಂದರ ಉದ್ಯಾನವನ್ನು ಅಳವಡಿಸಿದನು. ಈ ಸುಂದರ ಉದ್ಯಾನದ ಮಧ್ಯದಲ್ಲಿ 1786ರಲ್ಲಿ ಟಿಪ್ಪು ಸುಲ್ತಾನನು ಬೇಸಿಗೆಯ ಅರಮನೆಯನ್ನು ನಿರ್ಮಿಸಿ, ಅದಕ್ಕೆ ದರಿಯಾದೌಲತ್ ಎಂಬ ಹೆಸರು ಕೊಟ್ಟನು. 'ಸಮುದ್ರದ ಶ್ರೀಮಂತಿಕೆ' ಎಂದು ಈ ಪದಗುಚ್ಛದ ಅರ್ಥ. ಬಹುಶಃ ತಾನು ಸಮುದ್ರದವರೆಗೆ ದಂಡೆತ್ತಿ ಹೋಗಿ ಅದರ ವಿಜಯದ ಜ್ಞಾಪಕಾರ್ಥವಾಗಿ ಈ ಅರಮನೆಯನ್ನು ಕಟ್ಟಿಸಿರಬೇಕು. ಈ ಅರಮನೆಯನ್ನು ಐದು ಅಡಿ ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಇದರ ಸುತ್ತಲೂ ವರಾಂಡವಿದ್ದು, ಕಿರಿದಾಗುತ್ತ ಹೋಗುವ ಮರದ ಕಂಬಗಳಿಂದ ಅಳವಡಿಸಿದ ಕಮಲದ ವಿನ್ಯಾಸ ಹಾಗೂ ತ್ರಿವಳಿ ವಿನ್ಯಾಸದ ಅಲಂಕಾರಗಳಿಂದ ನಿರ್ಮಿಸಲಾಗಿದೆ. ಚಿನ್ನದ ಮುಲಾಮು ಮತ್ತು ಇತರ ಬಣ್ಣಗಳನ್ನು ಲೇಪಿಸಿದ ಈ ಕಟ್ಟಡ ಭವ್ಯವಾಗಿ ಕಾಣುತ್ತದೆ. ಮರದ ಮೆಟ್ಟಿಲುಗಳೂ ಕೂಡ ಕೆತ್ತನೆಯಿಂದ ಕೂಡಿದೆ ಹಾಗೂ ಬಣ್ಣವನ್ನು ಹಚ್ಚಲಾಗಿದೆ. ಟಿಪ್ಪು ಸುಲ್ತಾನನು ಈ ಅರಮನೆಯಲ್ಲಿ ರಾಯಭಾರಿಗಳನ್ನು ಹಾಗೂ ಗೌರವಾನ್ವಿತ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸುತ್ತಿದ್ದನು. ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಕೆಲವು ಕೊಠಡಿಗಳಿದ್ದು ಅವುಗಳನ್ನು ಖಾಸಗಿ ವಾಸಕ್ಕಾಗಿ ಬಳಸುತ್ತಿದ್ದರು. ತುಮಕೂರಿನ ಸಿರಾದಲ್ಲಿದ್ದ ಮೊಗಲ್ ಅರಮನೆಯ ಮಾದರಿಯಲ್ಲಿ, ಟಿಪ್ಪು ಸುಲ್ತಾನನು ಈ ಅರಮನೆಯನ್ನು ವಿನ್ಯಾಸಗೊಳಿಸಿದ್ದನೆಂದು ನಂಬಲಾಗಿದೆ.

ಈ ಅರಮನೆಯ ಗೋಡೆಗಳು, ಕಂಬಗಳು ಮತ್ತು ಕಮಾನುಗಳ ಮೇಲಿನ ವರ್ಣಚಿತ್ರಗಳು ಇದರ ಅತ್ಯುತ್ತಮ ಅಂಶ. ಯುದ್ಧಗಳಲ್ಲಿ ಬ್ರಿಟಿಷರ ವಿರುದ್ಧ ಮೇಲ್ಮೆಯನ್ನು ಟಿಪ್ಪು ಸಾಧಿಸಿದ ಸಂಗತಿಯ ಚಿತ್ರಗಳು ಇವುಗಳಲ್ಲಿ ಇದ್ದವು. ಟಿಪ್ಪು ಸುಲ್ತಾನ್ ಅವುಗಳನ್ನು ನೋಡುತ್ತ ಸಂತೋಷ ಪಡುತ್ತಿದ್ದನು. ಒಂದು ಚಿತ್ರದಲ್ಲಿ ಕರ್ನಲ್ ಬೈಲಿಯು ಬ್ರಿಟಿಷರು ಸೋಲುವುದು ಖಚಿತವೆಂದು ತಿಳಿದು ಗಲ್ಲದ ಮೇಲೆ ಬೆರಳನ್ನು ಇಟ್ಟುಕೊಂಡು ಖಿನ್ನವದನನಾಗಿದ್ದಾನೆ. ಇನ್ನೊಂದು ಚಿತ್ರದಲ್ಲಿ ಪಳಿಯೂರು ವಿಜಯವನ್ನು ತೋರಿಸಲಾಗಿದೆ. ಮತ್ತೊಂದು ಚಿತ್ರದ ಬೈಲಿಯ ಬಂಧನ ಹಾಗೂ ಮನ್ರೋ ಪಲಾಯನ ಮಾಡುತ್ತಿರುವ ದೃಶ್ಯ ಟಿಪ್ಪುವಿಗೆ ಸಾಕಷ್ಟು ಸಮಾಧಾನ ಕೊಡುತ್ತಿತ್ತು. ಇನ್ನೊಂದು ಚಿತ್ರದಲ್ಲಿ ನೈಜಾಮನು ಬ್ರಿಟಿಷರ ಸಹಾಯಕ್ಕೆ ಹಸುವಿನಂತೆ ಬಂದು ಹಂದಿಯಂತೆ ಬ್ರಿಟಿಷರನ್ನು ಸೇರಿಕೊಂಡದ್ದನ್ನು ಚಿತ್ರಿಸಲಾಗಿದೆ. ಇನ್ನೊಂದು ಚಿತ್ರದಲ್ಲಿ ರಾಜದ್ರೋಹಿ ಮೀರ್‌ಸಾದಿಕ್‌ನ ಮುಖಕ್ಕೆ ಕಪ್ಪು ಬಳಿಯಲಾಗಿದೆ. ಟಿಪ್ಪುವಿನ ದರ್ಬಾರ್ ಚಿತ್ರದಲ್ಲಿ ಸಮಕಾಲೀನ ದೊರೆಗಳಾದ ಮಾಗಡಿ ಕೆಂಪೇಗೌಡ, ಮದಕರಿನಾಯಕ, ಪೇಷ್ವೆ ಇಮ್ಮಡಿ ಬಾಲಾಜಿರಾವ್ ಮುಂತಾದವರು ಚಿತ್ರಿತರಾಗಿದ್ದಾರೆ. ಈ ಚಿತ್ರಗಳು ಸಮಕಾಲೀನ ರಾಜಕೀಯ ಹಾಗೂ ಯುದ್ಧಗಳು ಮತ್ತು ಟಿಪ್ಪುವಿನ ಏಳು ಮಕ್ಕಳು ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಚಿತ್ರಗಳನ್ನು ಮೈಸೂರಿನ ಚಿತ್ರಕಾರರು ರಚಿಸಿದ್ದರೂ ವಿದೇಶೀಯ ಪ್ರಭಾವಗಳೂ ಕಾಣಬರುತ್ತವೆ. ಹೀಗೆ ಈ ವರ್ಣಚಿತ್ರಗಳು ಐತಿಹಾಸಿಕ ಮತ್ತು ಆಲಂಕಾರಿಕ ಮಹತ್ವ ಹೊಂದಿವೆ.

ಟಿಪ್ಪು ಸುಲ್ತಾನನ ಮರಣಾನಂತರ, ಬ್ರಿಟಿಷರು ಈ ಅರಮನೆಯನ್ನು ಆಕ್ರಮಿಸಿಕೊಂಡರು. ಕರ್ನಲ್ ವೆಲ್ಲೆಸ್ಲಿ ಅದನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡನು. ಇದರಲ್ಲಿದ್ದ ವರ್ಣಚಿತ್ರಗಳನ್ನು ರಕ್ಷಿಸಲು ಕ್ರಮ ಕೈಗೊಂಡನು. ಕ್ರಿ.ಶ. 1959ರಲ್ಲಿ ಸರ್ಕಾರವು ಇದನ್ನು ಸಂರಕ್ಷಿತ ಕಟ್ಟಡವೆಂದು ಘೋಷಿಸಿತು. ಈ ಅರಮನೆ ಹಾಗೂ ಈ ವರ್ಣಚಿತ್ರಗಳನ್ನು ಈಗ ಸಂರಕ್ಷಿಸಲಾಗುತ್ತಿದೆ.

ವರಾಹಸ್ವಾಮಿ ದೇವಾಲಯ, ಮೈಸೂರು

ಮೈಸೂರು ಅರಮನೆಯ ಸುತ್ತಲೂ ವಿಶಾಲವಾದ ಅಂಗಳವಿದ್ದು ಕೋಟೆಯಿಂದ ಆವೃತವಾಗಿದೆ. ಈ ಕೋಟೆಯೊಳಗೆ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಬಹುಶಃ ಇವು ವಿಶೇಷವಾಗಿ ರಾಜಮನೆತನದವರ ಉಪಯೋಗಕ್ಕಾಗಿ ಇರಬಹುದು. ಇವುಗಳಲ್ಲಿ ವರಾಹಸ್ವಾಮಿ ಆಲಯವೂ ಒಂದು. ವಾಸ್ತವವಾಗಿ ಹೊಯ್ಸಳರಿಂದ ಇದೇ ಸ್ಥಳದಲ್ಲಿ ನಿರ್ಮಿತವಾದ ಹೊಯ್ಸಳ ದೇವಾಲಯದಂತೆ ಇದು ಕಾಣಬರುತ್ತದೆ. ಆದರೆ ತಿಳಿದು ಬರುವ ವಿಷಯವೇನೆಂದರೆ, ದಿವಾನ್ ಪೂರ್ಣಯ್ಯನವರು ಶಿವಮೊಗ್ಗದಲ್ಲಿದ್ದ ಜೀರ್ಣಾವಸ್ಥೆಯಲ್ಲಿದ್ದ ಒಂದು ಹೊಯ್ಸಳ ದೇವಾಲಯದಿಂದ ಶಿಲ್ಪ ಫಲಕಗಳು, ಕಂಬಗಳು, ಬಾಗಿಲುವಾಡಗಳು ಮುಂತಾದವನ್ನು ಇಲ್ಲಿಗೆ ತರಿಸಿ, ಈ ದೇವಾಲಯವನ್ನು ನಿರ್ಮಿಸಿದರಂತೆ. ಅಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನ್ ಪೂರ್ಣಯ್ಯನವರು ಪುನರ್ನಿರ್ಮಾಣ ಮಾಡಿದ ದೇವಾಲಯವಿದು ಎಂದು ಭಾವಿಸಬಹುದು. ದೂರದ ಬೇರೆ ಸ್ಥಳದಲ್ಲಿ ದೇವಾಲಯವನ್ನು ಪುನರ್ನಿರ್ಮಾಣ ಮಾಡುವ ತಾಂತ್ರಿಕತೆ ಇನ್ನೂ ವಿಕಾಸಗೊಂಡಿರದೇ ಇದ್ದ ಕಾಲದಲ್ಲಿ ಈ ದೇವಾಲಯ ಪುನರ್ನಿರ್ಮಾಣಗೊಂಡಿರುವುದು ಮೆಚ್ಚಿಗೆಗೆ ಪಾತ್ರವಾದ ಕಾರ್ಯ.

ಈ ದೇವಾಲಯಕ್ಕೆ ಮಹಾದ್ವಾರ ಮತ್ತು ಗಾರೆಯ ಗೋಪುರಗಳಿವೆ. ಈ ದೇವಾಲಯದ ಅಧಿಷ್ಠಾನದಲ್ಲಿ ವಿವಿಧ ರೀತಿಯ ದಿಂಡುಗಳಿವೆ. ಕೆಳಭಾಗದಲ್ಲಿ ಮೂರು ಪಟ್ಟಿಕೆಗಳಿದ್ದು ಅದರ ಮೇಲೆ ಅರೆಗಂಬಗಳು ಮತ್ತು ಗೂಡುಗಳಿವೆ. ಗೋಡೆಯ ಮಧ್ಯದಲ್ಲಿ ಸುತ್ತಲೂ ಮುಂಜೂರಿನಂತಹ ದಿಂಡು ಇದೆ. ಇದರ ಮೇಲೆ ಗೋಡೆಯು ಮುಂದುವರಿಯುತ್ತದೆ. ಚಾವಣಿಯ ಹಂತದಲ್ಲಿ ಅಲಂಕೃತ ಮುಂಜೂರು ಇದೆ. ಅದರ ಮೇಲೆ ಮತ್ತೆ ದಿಂಡುಗಳಿವೆ. ಅದರ ಮೇಲೆ ಹೊಯ್ಸಳ ಶೈಲಿಯ ಶಿಖರವಿದೆ.

ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಆನಂತರದ ಕಾಲದ ಮಂಡಪವಿದೆ. ಗರ್ಭಗೃಹದ ಬಾಗಿಲುವಾಡವು ನಾಜೂಕಾದ ಕೆತ್ತನೆಗಳಿಂದ ಕೂಡಿದೆ. ನವರಂಗದಲ್ಲಿ ಹೊಯ್ಸಳ ಶೈಲಿಯ ಕಂಬಗಳಿವೆ. ಗರ್ಭಗೃಹದಲ್ಲಿ ಶ್ವೇತವರಾಹಸ್ವಾಮಿಯ ಸುಂದರ ವಿಗ್ರಹವಿದೆ. ಈ ಹಿಂದೆ ಈ ವಿಗ್ರಹವು ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಶ್ರೀಮುಷ್ಣ ಎಂಬಲ್ಲಿ ಇದ್ದಿತು. ಇದನ್ನು ಮೈಸೂರಿನ ಮಹಾರಾಜರಾಗಿದ್ದ ಚಿಕ್ಕದೇವರಾಜ ಒಡೆಯರು ತಂದು (ಕ್ರಿ.ಶ. 1673-1704) ಶ್ರೀರಂಗಪಟ್ಟಣದ ದೇವಾಲಯದಲ್ಲಿ ಪ್ರತಿಷ್ಠೆ ಮಾಡಿದ್ದರು. ಟಿಪ್ಪು ಸುಲ್ತಾನನ ಕಾಲದಲ್ಲಿ ಈ ದೇವಾಲಯವು ನಾಶಗೊಂಡಾಗ ಈ ವಿಗ್ರಹವನ್ನು 1809ರಲ್ಲಿ ಮೈಸೂರಿನ ವರಾಹಸ್ವಾಮಿ ದೇವಾಲಯಕ್ಕೆ ತಂದು, ಇಲ್ಲಿ ಪ್ರತಿಷ್ಠಾಪಿಸಲಾಯಿತು. ದೇವಾಲಯದಲ್ಲಿರುವ ಸುಂದರ ಉತ್ಸವಮೂರ್ತಿಯೂ ಚಿಕ್ಕದೇವರಾಜ ಒಡೆಯರ ಕೊಡುಗೆ. ಮುಮ್ಮಡಿ ಕೃಷ್ಣರಾಜ ಒಡೆಯರು ದಾನವಾಗಿ ಕೊಟ್ಟ ಮನವಾಳಮುನಿ ಮತ್ತು ವೇದಾಂತ ದೇಶಿಕರ ವಿಗ್ರಹಗಳೂ ಇಲ್ಲಿವೆ. ಪ್ರಾಕಾರದ ಒಳಗೋಡೆಯಲ್ಲಿ 1865ರಲ್ಲಿ ರಚಿಸಲಾದ ಶ್ರೀ ರಾಮಪಟ್ಟಾಭಿಷೇಕದ ವರ್ಣಚಿತ್ರವಿದೆ. ನವರಂಗದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ವರ್ಣಚಿತ್ರಗಳಿವೆ. ಆಗಿನ ಕಾಲದ ವರ್ಣಚಿತ್ರ ಕಲೆಗೆ ಈ ಚಿತ್ರಗಳು ಉತ್ತಮವಾದ ಉದಾಹರಣೆಗಳಾದುದರಿಂದ, ಅವುಗಳಿಗೆ ವಿಶೇಷ ಮಹತ್ವವಿದೆ. ಈ ರೀತಿ ಮೈಸೂರಿನ ಅರಮನೆಯ ಆವರಣದಲ್ಲಿರುವ ದೇವಾಲಯಗಳಲ್ಲಿ ಇದು ಆಸಕ್ತಿಕರವಾದುದು. ಇಂದಿಗೂ ಭಕ್ತರು ಈ ದೇವಾಲಯಕ್ಕೆ ಬಂದು ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸುತ್ತಾರೆ.

## ರಾಜರ ಸಮಾಧಿಗಳು, ಮಡಿಕೇರಿ

ಕರ್ನಾಟಕದ ಸುಂದರ ಗಿರಿಧಾಮಗಳಲ್ಲೊಂದಾದ ಮಡಿಕೇರಿಯಲ್ಲಿ ಕೊಡಗಿನ ದೊರೆಗಳಾಗಿದ್ದ ಲಿಂಗರಾಜ ಮತ್ತು ವೀರರಾಜೇಂದ್ರ ಅವರ ಸಮಾಧಿ ಕಟ್ಟಡಗಳು ಮನೋಹರವಾಗಿವೆ. ಈ ಇಬ್ಬರು ರಾಜರ ಸಮಾಧಿಗಳೂ ಒಂದೇ ತೆರನಾಗಿ ಅಕ್ಕಪಕ್ಕದಲ್ಲಿ ಒಂದು ವಿಶಾಲವಾದ ಪ್ರಾಂಗಣದಲ್ಲಿವೆ. ಲಿಂಗರಾಜನ ಸಮಾಧಿಯನ್ನು 1808ರಲ್ಲಿಯೂ, ವೀರರಾಜೇಂದ್ರನ ಸಮಾಧಿಯನ್ನು ಕ್ರಿ.ಶ. 1821ರಲ್ಲಿಯೂ ನಿರ್ಮಾಣ ಮಾಡಲಾಯಿತು. ಈ ಎರಡು ಸಮಾಧಿಗಳ ಎಡಭಾಗದಲ್ಲಿ ಇನ್ನೊಂದು ಸಣ್ಣ ಪ್ರಮಾಣದ ಸಮಾಧಿಯಿದೆ. ಇದು ಇವರೀರ್ವರ ಗುರುವಾಗಿದ್ದ ರುದ್ರಪ್ಪನವರ ಸಮಾಧಿಯಾಗಿದ್ದು, ಕ್ರಿ.ಶ. 1834ರಲ್ಲಿ ನಿರ್ಮಾಣಗೊಂಡಿತು.

ಈ ಎರಡೂ ಸಮಾಧಿಗಳು ಇಂಡೋ ಇಸ್ಲಾಮಿಕ್ ವಾಸ್ತು ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಸಮಾಧಿಗಳು ಚೌಕಾಕಾರದ ಕಟ್ಟಡಗಳು. ಎಂಟು ಮೆಟ್ಟಿಲುಗಳ ಮೂಲಕ ಮೇಲೇರಿದರೆ ಕಟ್ಟಡದ ಸುತ್ತಲೂ ಇರುವ ಜಗತಿಯನ್ನು ಪ್ರವೇಶಿಸಬಹುದು. ಕಟ್ಟಡದ ಪಾರ್ಶ್ವದ ಅಳತೆ 50 ಅಡಿಗಳು. ಒಳಗಡೆ ಸುತ್ತಲೂ ಮೊಗಸಾಲೆಯಿದ್ದು, ಮಧ್ಯದಲ್ಲಿ ಸಮಾಧಿ ಸ್ಥಳವಿದೆ. ಇದರ ಮೇಲೆ ಸ್ವಲ್ಪ ಎತ್ತರವಾದ ಶಿಲಾಫಲಕಗಳನ್ನು ಜೋಡಿಸಲಾಗಿದೆ. ಮುಖ್ಯದ್ವಾರದ ಅಕ್ಕಪಕ್ಕದಲ್ಲಿ ಗೋಡೆಯ ಮೇಲೆ ನಾಲ್ಕು ಬಾಹುಗಳ ಶಿವನ ಉಬ್ಬು ಕೆತ್ತನೆ ಇದೆ. ಸಮಾಧಿಯ ಮಧ್ಯದ ಕೋಣೆಯಲ್ಲಿ ಗೋರಿಯಿದೆ. ಇದಕ್ಕೆ ಮೂರು ಪ್ರವೇಶದ್ವಾರಗಳು ಪೂರ್ವ, ಉತ್ತರ ಮತ್ತು ದಕ್ಷಿಣಗಳಲ್ಲಿವೆ. ಇದರಲ್ಲಿ ಪ್ರಧಾನ ಪ್ರವೇಶವು ಉತ್ತರದಲ್ಲಿದೆ. ಗೋಡೆಗಳು ಅಲಂಕಾರ ರಹಿತವಾಗಿದ್ದು, ಮೇಲ್ಭಾಗದಲ್ಲಿ ಮುಂಜೂರು ಇದೆ. ಇದರ ಮೇಲೆ ಅಲಂಕಾರದ ಕೈಪಿಡಿ ಗೋಡೆಯಿದೆ. ಇದರ ನಾಲ್ಕು ಮೂಲೆಗಳಲ್ಲಿ ಎರಡು ಹಂತದ ಚೌಕ ಪೀಠವುಳ್ಳ ಮಿನಾರುಗಳಿವೆ. ಮಿನಾರುಗಳ ಮೇಲ್ಭಾಗವು ವೃತ್ತಾಕಾರದಲ್ಲಿದ್ದು, ಅದರ ತುದಿಯಲ್ಲಿ ಚಿನ್ನದ ಮುಲಾಮಿನ ಕಲಶಗಳಿವೆ. ಕೆಳಭಾಗದಲ್ಲಿ ನಂದಿ ವಿಗ್ರಹವಿದೆ. ಕಟ್ಟಡದ ಮಧ್ಯಭಾಗದ ಮೇಲೆ ವಿಶಾಲವಾದ ಗುಮ್ಮಟವಿದ್ದು, ಅದು ಕಮಲಪುಷ್ಪದ ವಿನ್ಯಾಸದ ಪೀಠದ ಮೇಲಿದೆ. ಚೆನ್ನಾಗಿ ವಿನ್ಯಾಸಗೊಳಿಸಿದ ಕಮಲ ಪುಷ್ಪ ಅದರ ಮೇಲಿರುವ ಗುಮ್ಮಟ ಒಂದಕ್ಕೊಂದು ವೈದೃಶ್ಯ ಹೊಂದಿದ್ದರೂ, ಅವುಗಳ ಮಿಳಿತ ಒಂದು ರೀತಿಯ ಮನೋಹರತೆಯನ್ನು ತಂದುಕೊಡುತ್ತದೆ. ನಾಲ್ಕು ದಿಕ್ಕುಗಳಲ್ಲಿರುವ ಸಣ್ಣ ಪ್ರಮಾಣದ ನಿಳವಾದ ಮಿನಾರುಗಳು ಇದರ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಇಲ್ಲಿನ ಬಾಗಿಲುವಾಡಗಳು ಪುಷ್ಪಾಲಂಕಾರದಿಂದ ಕೂಡಿದ್ದು ಲಲಾಟದಲ್ಲಿ ಸಿಂಹದ ಶಿಲ್ಪವಿದೆ.

ಈ ಸೌಧದ ಕಿಟಕಿಯ ಸರಳುಗಳಲ್ಲಿ ಸುಂದರವಾದ ಕೆತ್ತನೆಗಳಿವೆ. ಒಂದು ಕಿಟಕಿಯವಾಡದಲ್ಲಿ ಬಾಗಿಕೊಂಡು ನಿಂತು ವೃತ್ತಾಕಾರದ ವಿನ್ಯಾಸದಲ್ಲಿರುವ ಪರಸ್ಪರ ಕಾಲುಗಳನ್ನು ಹಿಡಿದುಕೊಂಡಿರುವ ಇಬ್ಬರು ಮಾನವರ ಶಿಲ್ಪವಿದೆ. ಅದರ ಸಮೀಪದಲ್ಲೇ ಒಂದು ಶಿಲಾಶಾಸನ ಫಲಕವಿದೆ. ಇದರಲ್ಲಿ ಬೋಪು ದಂಡನಾಯಕನೆಂಬ ವೀರನು ಟಿಪ್ಪೂ ಸುಲ್ತಾನನ ವಿರುದ್ಧ ಶೌರ್ಯದಿಂದ ಕಾದಾಡಿ ವೀರಸ್ವರ್ಗವನ್ನು ಸೇರಿದ ವಿಷಯ ಹೇಳಲಾಗಿದೆ. ಇಡೀ ಕಟ್ಟಡವನ್ನು ಎತ್ತರವಾದ ಭೂಮಿಯ ಮೇಲೆ ನಿರ್ಮಿಸಿರುವುದರಿಂದ ದೂರದಿಂದಲೂ ಭವ್ಯತೆಯನ್ನು ತೋರುತ್ತದೆ. ಈ ರೀತಿ ಈ ಎರಡು ಸಮಾಧಿಗಳು ಕೊಡಗಿನ ಇಬ್ಬರು ದೊರೆಗಳ ಶ್ರೇಷ್ಠತೆಯನ್ನು ಪ್ರಕೃತಿಯ ಸಿರಿಯ ಮಡಿಲಿನ ಮಡಿಕೇರಿಯಲ್ಲಿ ಸಾರುತ್ತಿವೆ.

## ಸಂತ ಫಿಲೋಮಿನ ಚರ್ಚು, ಮೈಸೂರು

ಮೈಸೂರು ನಗರವು ಪ್ರಾಚೀನ ಕಾಲದಿಂದ ಹಿಂದೂ ಧರ್ಮದ ಪ್ರಮುಖ ಕೇಂದ್ರವಾಗಿದ್ದರೂ, ಇತರ ಧರ್ಮಗಳ ಜೊತೆ ಸಹಬಾಳ್ವೆ ಮಾಡುವುದಕ್ಕೆ ಪ್ರಸಿದ್ಧವಾದ ನಗರವಾಗಿದೆ. ಯಾವ ಬಾಧೆಯೂ ಇಲ್ಲದೆ ಅವರ ಅನುಯಾಯಿಗಳ ಸೇವೆ ಮಾಡುತ್ತಿರುವ ಚರ್ಚುಗಳು ಹಾಗೂ ಮಸೀದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಇರುವುದೇ ಇದಕ್ಕೆ ಮುಖ್ಯ ಸಾಕ್ಷಿ. ವಾಸ್ತವವಾಗಿ ಬೆಂಗಳೂರಿನಿಂದ ಮೈಸೂರಿಗೆ ಬರುವ ರಸ್ತೆಯ ಪ್ರವೇಶದಲ್ಲೇ, ಅಶೋಕ ರಸ್ತೆಯಲ್ಲಿರುವ ಸಂತ ಫಿಲೋಮಿನ ಚರ್ಚು, ಮೈಸೂರಿನ ಜನಗಳ ಮತೀಯ ಸಾಮರಸ್ಯಕ್ಕೆ ಪ್ರಮಾಣವೆನಿಸಿದೆ.

1840ರಲ್ಲಿ ಕಟ್ಟಲಾದ ಸಂತ ಜೋಸೆಫರ ಚರ್ಚು ಈ ಹಿಂದೆ ಇದ್ದಿತು. ಅದನ್ನು ಪುನರ್ನಿರ್ಮಿಸಿ ಸಂತ ಜೋಸೆಫ್ ಮತ್ತು ಸಂತ ಫಿಲೋಮಿನ ಚರ್ಚು ಎಂಬ ಹೊಸ ಹೆಸರನ್ನು ನೀಡಲಾಯಿತು. ಅಂದು ಮೈಸೂರಿನ ದಿವಾನರಾಗಿದ್ದ ತಂಬೂಚೆಟ್ಟಿಯವರು ಫ್ರಾನ್ಸಿನಿಂದ ಪವಿತ್ರ ಅವಶೇಷಗಳಾದ ಮೂಳೆ ಮತ್ತು ಬಟ್ಟೆಯನ್ನು ತಂದಿದ್ದರು. ಇವುಗಳನ್ನು ಒಂದು ಚರ್ಚಿನಲ್ಲಿ ಪ್ರತಿಷ್ಠಾಪಿಸಬೇಕೆಂದು ಅಪೇಕ್ಷೆ ಪಟ್ಟರು. ಆದ್ದರಿಂದ ಈ ಚರ್ಚಿನ ವಿನ್ಯಾಸವನ್ನು ಫ್ರಾನ್ಸಿನ ಖ್ಯಾತ ವಾಸ್ತು ತಜ್ಞರಿಂದ ಮಾಡಿಸಿದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು 1933ರಲ್ಲಿ ಈ ಚರ್ಚಿನ ನಿರ್ಮಾಣಕ್ಕೆ ಅಸ್ತಿಭಾರ ಹಾಕಿದರು. ಈ ಚರ್ಚನ್ನು ನ್ಯೂಯಾರ್ಕಿನ ಪ್ರಖ್ಯಾತ ಸುಂದರ ಸಂತ ಪ್ಯಾಟ್ರಿಕ್ ಕೆಥೆಡ್ರಲ್ ಮತ್ತು ಜರ್ಮನಿಯ ಕಲೋಲಿನ ಗೋಥಿಕ್ ಚರ್ಚುಗಳ ಮಾದರಿಯಲ್ಲಿ ನಿರ್ಮಿಸಲಾಗಿದೆ. ಗ್ರೀಕ್ ಲಕ್ಷಣಗಳನ್ನು ಹೊಂದಿರುವ ಈ ಚರ್ಚಿನ ವಿನ್ಯಾಸ ವಿಶಿಷ್ಟಪೂರ್ಣವಾಗಿದೆ.

ಈ ಕಟ್ಟಡದ ಅತ್ಯಂತ ಆಕರ್ಷಕ ಹಾಗೂ ಪ್ರಮುಖ ಭಾಗವೆಂದರೆ, ಮುಮ್ಮುಖದಲ್ಲೇ ಇರುವ ಎತ್ತರವಾದ ಎರಡು ಮೊನಚಾದ ಮಿನಾರುಗಳು. ವಾಸ್ತವವಾಗಿ ಈ ಎರಡು ಮಿನಾರುಗಳೇ ಈ ಚರ್ಚಿನ ಭವ್ಯತೆಗೆ ಹಾಗೂ ಸೌಂದರ್ಯಕ್ಕೆ ಮುಖ್ಯ ಕಾರಣ. ಈ ಮಿನಾರುಗಳ ಎತ್ತರ 165 ಅಡಿ. ಇದೇ ಕಟ್ಟಡದ ವಿವಿಧ ಸ್ಥಳಗಲ್ಲಿರುವ ಎತ್ತರವಾದ ಸಣ್ಣ ಪ್ರಮಾಣದ ಮಿನಾರುಗಳು, ಈ ಕಟ್ಟಡದ ಎತ್ತರ ಹೆಚ್ಚಿಗೆ ಕಾಣುವಂತೆ ಮಾಡುವಲ್ಲಿ ಸಹಕಾರಿಯಾಗಿವೆ. ವ್ಯವಸ್ಥಿತ ಸ್ಥಳಗಳಲ್ಲಿ ಅಳವಡಿಸಿರುವ ಎತ್ತರದ ಗವಾಕ್ಷಗಳಿಂದ ಇದರ ಸೌಂದರ್ಯ ಹೆಚ್ಚಿದೆ. ಅಲ್ಲಲ್ಲಿ ಕಾಣಬರುವ ಗೋಥಿಕ್ ತ್ರಿವಳಿ ಚಿಹ್ನೆಗಳು ಮತ್ತೊಂದು ಆಕರ್ಷಣೆ. ಈ ಚರ್ಚಿನಲ್ಲಿ ಒಂದು ನೆಲಮಾಳಿಗೆಯಿದ್ದು ಅದರಲ್ಲಿರುವ ರೋಮನ್ ಸಮಾಧಿ ಸುರಂಗದಂತಹ ಕೋಣೆಯಲ್ಲಿ ಸಂತ ಫಿಲೋಮಿನ ವಿಗ್ರಹವಿದೆ. ಷೀಲ್ಡಿನ ಮಧ್ಯದಲ್ಲಿ ಪವಿತ್ರ ಮೂಳೆ ಹಾಗೂ ಬಟ್ಟೆಯಿದೆ. ಆದುದರಿಂದ ರೋಮನ್ ಕ್ಯಾಥೋಲಿಕರಿಗೆ ಇದು ಪವಿತ್ರವೆನಿಸಿದೆ. ಒಳಭಾಗದಲ್ಲಿ ಕಂಬಗಳಿರುವ ಮೊಗಸಾಲೆಯಿದ್ದು ಫ್ರಾನ್ಸಿನಲ್ಲಿ ತಯಾರಾದ ಬಣ್ಣದ ಗಾಜುಗಳ ಅಲಂಕಾರವಿದೆ. ಏಸುಕ್ರಿಸ್ತನನ್ನು ಶಿಲುಬೆಗೇರಿಸಿದ ಹಾಗೂ ಯೋಹಾನನು ಏಸುಕ್ರಿಸ್ತನಿಗೆ ದೀಕ್ಷಾಸ್ನಾನ ನೀಡಿದ ಚಿತ್ರಗಳು ಗಮನಾರ್ಹವಾದವು. ಪ್ರತಿವರ್ಷವೂ ಈ ಚರ್ಚಿನಲ್ಲಿ ಸಂತ ಫಿಲೋಮಿನ ಹಬ್ಬವು ಆಚರಿಸಲ್ಪಡುತ್ತದೆ. ಬಹು ಸಂಖ್ಯೆಯಲ್ಲಿ ರೋಮನ್ ಕ್ಯಾಥೋಲಿಕ್ ಬಾಂಧವರು ಈ ಚರ್ಚಿಗೆ ಹೋಗುತ್ತಾರೆ. ಮೈಸೂರಿಗೆ ಸಂದರ್ಶನಾರ್ಥವಾಗಿ ಬರುವ ಯಾತ್ರಿಕರು ಈ ಚರ್ಚನ್ನು ಸಂದರ್ಶಿಸಿ, ಸಾಮಾನ್ಯವಾಗಿ ಕಾಣಬರದ ಈ ರೀತಿಯ ವಿಶಿಷ್ಟ ವಾಸ್ತುಶೈಲಿಯ ಎತ್ತರದ ಸೌಧದ ಬೃಹತ್ತು ಮತ್ತು ಮಹತ್ತುಗಳನ್ನು ಪ್ರಶಂಸಿಸುತ್ತಾರೆ.

## ಜಗನ್ಮೋಹನ ಅರಮನೆ, ಮೈಸೂರು

ಇದರ ಹೆಸರೇ ಸೂಚಿಸುವಂತೆ ಜಗನ್ಮೋಹನ ಅರಮನೆ ಮೈಸೂರಿನಲ್ಲಿ ಸುಂದರವಾದ ಹಾಗೂ ಭವ್ಯವಾದ ಕಟ್ಟಡ. ವಾಸ್ತವವಾಗಿ ಇದು ಮೈಸೂರು ಅರಮನೆಗೆ ಪಶ್ಚಿಮದಲ್ಲಿ ತುಂಬ ಸಮೀಪದಲ್ಲಿದೆ. ಇದನ್ನು 1860ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲಾಯಿತು. ಮೈಸೂರಿನ ಅರಮನೆಯು ಅಗ್ನಿಯ ಅನಾಹುತದಲ್ಲಿ ನಾಶವಾದಾಗ ಈ ಕಟ್ಟಡವನ್ನು ಅರಮನೆಯಾಗಿ ಬಳಸಲಾಗಿತ್ತು ಮತ್ತು ಅನೇಕ ಮುಖ್ಯ ಸಮಾರಂಭಗಳು ಇಲ್ಲಿ ನಡೆದಿದ್ದವು. ಅಂದಿನ ಯುವರಾಜರ ವಿವಾಹವನ್ನು ಇಲ್ಲೇ ನೆರವೇರಿಸಲಾಗಿತ್ತು. 1910ರಲ್ಲಿ ಹೊಸ ಸಭಾಂಗಣ ನಿರ್ಮಾಣವಾಗುವವರೆಗೆ ಈ ಅರಮನೆಯಲ್ಲೇ ರಾಜರ ದರ್ಬಾರ್ ನಡೆಯುತ್ತಿತ್ತು. 1902ರಲ್ಲಿ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವವೂ ಇಲ್ಲೇ ಆಚರಿಸಲ್ಪಟ್ಟಿದ್ದು, ಆಗ ಗವರ್ನರ್ ಜನರಲ್ ಹಾಗೂ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಈ ಅರಮನೆಗೆ ಭೇಟಿಕೊಟ್ಟಿದ್ದನು.

1900ರಲ್ಲಿ ಆಗ ಇದ್ದ ಅರಮನೆಗೆ ವಿಶಾಲವಾದ ಹಾಗೂ ಅಲಂಕಾರಗಳಿಂದ ಕೂಡಿದ ಸಭಾಂಗಣವನನ್ನು ಸೇರಿಸಲಾಯಿತು. ವಿವಾಹ, ಪಟ್ಟಾಭಿಷೇಕ, ವರ್ಧಂತಿ ಮುಂತಾದ ಮಹೋತ್ಸವಗಳನ್ನು ಆಹ್ವಾನಿತರು ನೋಡಲು ಅನುಕೂಲವಾಗುವಂತೆ ಈ ಸಭಾಂಗಣವನ್ನು ವಿನ್ಯಾಸಗೊಳಿಸಲಾಯಿತು. ಉದ್ದವಾಗಿರುವ ಈ ಸಭಾಂಗಣದಲ್ಲಿ ಎರಡೂ ಕಡೆಗಳಲ್ಲಿ ಬಾಲ್ಕನಿಗಳಿವೆ. ಇಲ್ಲಿ ಕುಳಿತು ಅರಮನೆಯ ಮಹಿಳೆಯರು ಸಮಾರಂಭಗಳನ್ನು ವೀಕ್ಷಿಸಬಹುದಾಗಿತ್ತು. ಇಲ್ಲಿ ಪ್ರಜಾಪ್ರತಿನಿಧಿ ಸಭೆಗಳೂ ನಡೆಯುತ್ತಿದ್ದವು. ಕೆಲವು ಸಮಯ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವೂ ಇಲ್ಲಿ ನಡೆದವು.

ಈಗ ಇದನ್ನು ಕಲಾ ಸಂಗ್ರಹಾಲಯವಾಗಿ ಮಾಡಲಾಗಿದೆ. ಈ ಸಭಾಂಗಣದ ಹಿಂದಿನ ಭಾಗ ಮೂರು ಅಂತಸ್ತಿನ ಕಟ್ಟಡ. ಮೈಸೂರು ಅರಸು ಮನೆತನದವರಿಗೆ ಸಂಬಂಧಿಸಿದ ವರ್ಣಚಿತ್ರಗಳು, ಶಿಲ್ಪಗಳು, ಸಂಗೀತ ವಾದ್ಯಗಳು ಮತ್ತು ಇತರ ಕಲಾತ್ಮಕ ವಸ್ತುಗಳು ಪ್ರದರ್ಶಿಸಲ್ಪಟ್ಟಿವೆ. ರಾಜ ರವಿವರ್ಮ, ರಾಮವರ್ಮ, ಕೆಲವು ಯುರೋಪಿಯನ್ ಕಲಾವಿದರು ಮತ್ತು ರೋರಿಚ್ ಅವರ ಕೆಲವು ಉತ್ತಮ ವರ್ಣಚಿತ್ರಗಳು ಇಲ್ಲಿವೆ. ಮೈಸೂರು ದೊರೆಗಳ ವಂಶವೃಕ್ಷವನ್ನು ತೋರಿಸುವ ಮತ್ತು ಇದಕ್ಕೆ ಸಂಬಂಧಿಸಿದ ಚಿತ್ರಗಳು ಗಮನಾರ್ಹವಾದವು. ಕಟ್ಟಡದ ಮುಮ್ಮುಖವು ಭವ್ಯವಾಗಿದ್ದು, ಗಾರೆಯ ಅಲಂಕಾರಗಳು ಮತ್ತು ವಿಶಾಲವಾದ ಬಾಗಿಲುಗಳಿವೆ. ನಾಲ್ಕು ಮೂಲೆಗಳಲ್ಲಿರುವ ಮಿನಾರುಗಳು ಮತ್ತು ಗುಮ್ಮಟಗಳು ತುಂಬ ಅಂದವಾಗಿವೆ. ಮಧ್ಯದ ಭಾಗದಲ್ಲಿ ವಿಮಾನದಂತಿರುವ ವಿನ್ಯಾಸ, ಮಿನಾರುಗಳು ಮತ್ತು ಕಲಶಗಳಿವೆ. ಇವುಗಳ ಪಕ್ಕಗಳಲ್ಲಿರುವ ಸೂಕ್ಷ್ಮ ರೀತಿಯ ಶಿಖರಗಳಲ್ಲಿ ಚೈತ್ಯ ಗೂಡುಗಳಿವೆ. ಇದು ಮಧ್ಯದ ಗುಮ್ಮಟದಲ್ಲಿಯೂ ಕಂಡು ಬರುತ್ತದೆ. ಈ ಅರಮನೆ ವಿಶಾಲವಾದ ಪ್ರಾಂಗಣದಲ್ಲಿದ್ದು, ಅದರಲ್ಲಿ ತಂಪಾದ ನೆರಳನ್ನು ನೀಡುವ ಹತ್ತಾರು ದೊಡ್ಡ ಮರಗಳಿವೆ. ನೂರಾರು ಯಾತ್ರಿಕರು ಈ ಅರಮನೆಯನ್ನು ಸಂದರ್ಶಿಸಿ ಅರಮನೆಯ ವಾತಾವರಣದಲ್ಲೇ ವರ್ಣಚಿತ್ರ ಮತ್ತು ಇತರ ವಸ್ತುಗಳ ಮೂಲಕ, ಮೈಸೂರು ರಾಜಮನೆತನದ ಭವ್ಯ ಜೀವನವನ್ನು ಹಾಗೂ ಇತಿಹಾಸದ ವಿವಿಧ ಮಜಲುಗಳನ್ನು ತಿಳಿಯುತ್ತಾರೆ. ಈಗ ಇದೊಂದು ಪ್ರತಿಷ್ಠಿತ ಸಭಾಂಗಣವಾಗಿದ್ದು ಸಂಗೀತ, ನೃತ್ಯ, ನಾಟಕ, ಧಾರ್ಮಿಕ ಪ್ರವಚನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಮಾರಂಭಗಳು ನಡೆಯುತ್ತಿವೆ. ಇದರಿಂದ ಈ ಅರಮನೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೆನಿಸಿದೆ.

ಅರಮನೆ, ಬೆಂಗಳೂರು

ಬೆಂಗಳೂರು ಅರಮನೆಯು ಬೆಂಗಳೂರು ನಗರದಲ್ಲಿರುವ ಅತ್ಯಂತ ಭವ್ಯವಾದ ಪಾರಂಪರಿಕ ಕಟ್ಟಡಗಳಲ್ಲಿ ಮುಖ್ಯವಾದುದು. ಬೆಂಗಳೂರು ನಗರದಲ್ಲಿ ನೂರಾರು ಪಾರಂಪರಿಕ ಕಟ್ಟಡಗಳಿದ್ದರೂ, ಅರಮನೆಯು ಅಲಂಕಾರ ಮತ್ತು ಭವ್ಯತೆಗಳಿಂದಾಗಿ, ಇವೆಲ್ಲವುಗಳಿಗಿಂತ ಭಿನ್ನವಾಗಿದೆ. ಮೂಲತಃ ಇದು ಇಂಗ್ಲಿಷಿನವರಾದ ಎನ್. ಗಾರಟ್ ಎಂಬುವವರಿಗೆ ಸೇರಿದ್ದ ಖಾಸಗಿ ಕಟ್ಟಡವಾಗಿತ್ತು. ಆನಂತರ ಇದನ್ನು ಖರೀದಿಸಿ ಮಹಾರಾಜರಿಗಾಗಿ 1880ರಲ್ಲಿ ಹತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅರಮನೆಯನ್ನು ನಿರ್ಮಿಸಲಾಯಿತು. ಈ ಅರಮನೆಯು 45 ಸಾವಿರ ಚದರ ಅಡಿಗಳಷ್ಟು ವಿಶಾಲವಾಗಿದೆ.

ಲಂಡನ್‌ನಲ್ಲಿರುವ ವಿಂಡ್ಸರ್‌ಕ್ಯಾಸಲ್ ಮಾದರಿಯ ಮೇಲೆ ನಿರ್ಮಿತವಾಗಿರುವುದು ಈ ಅರಮನೆಯ ವೈಶಿಷ್ಟ್ಯ. ಇದು ಎರಡು ಅಂತಸ್ತಿನ ಕಲ್ಲಿನ ಕಟ್ಟಡ. ಇಂಗ್ಲೆಂಡಿನ ಟ್ಯೂಡರ್ ವಾಸ್ತುಶೈಲಿಯ ಮುಖ್ಯ ಲಕ್ಷಣಗಳಾದ ವೃತ್ತಾಕಾರದ ಬುರುಜುಗಳು, ಶಿಖರಾಕೃತಿಯ ಕೈಪಿಡಿಗಳು ಇದರಲ್ಲಿ ಇವೆ. ಇದರಲ್ಲಿ ಎಷ್ಟೊಂದು ಹೋಲಿಕೆ ಕಂಡು ಬರುತ್ತದೆಯೆಂದರೆ, ಇದೊಂದು ಟ್ಯೂಡರ್ ಶೈಲಿಯಲ್ಲಿ ನಿರ್ಮಿಸಲಾದ, ಅಲ್ಲಿಂದ ಬೆಂಗಳೂರಿಗೆ ಸಾಗಿಸಲಾದ ಕಟ್ಟಡವಿರಬೇಕೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಇದರಲ್ಲಿ ಚೂಪಾದ ರೋಮನ್ ಕಮಾನುಗಳು ಮತ್ತು ಬುರುಜುಗಳಂತಿರುವ ಎತ್ತರದ ವಿನ್ಯಾಸಗಳು ಕಾಣಬರುತ್ತವೆ. ಇದರ ವಿನ್ಯಾಸದಲ್ಲಿ ಹಿಂದೆ ಮುಂದೆ ಸರಿದ ಭಾಗಗಳು ವಿಶೇಷವಾಗಿದ್ದು, ಕಟ್ಟಡದ ಹೊರಮೈಗೆ ಒಂದು ರೀತಿಯ ಸೌಂದರ್ಯವನ್ನು ತಂದುಕೊಡುತ್ತವೆ. ಈ ಕಟ್ಟಡದ ಇನ್ನೊಂದು ಆಕರ್ಷಕ ವಿನ್ಯಾಸವೆಂದರೆ ಇದರಲ್ಲಿ ಅಳವಡಿಸಲಾಗಿರುವ ಮುಂಚಾಚುಗಳು. ಇದರಿಂದ ಅಂದವಾದ ಜ್ಯಾಮಿತಿಯ ಚಿಹ್ನೆಗಳ ವಿನ್ಯಾಸ ಉಂಟಾಗಿದೆ. ಎತ್ತರವಾದ ಬುರುಜುಗಳು, ವಿಶಾಲವಾದ ಗೋಡೆಗಳು, ಚೌಕಾಕಾರದ ಮತ್ತು ಕಮಾನಿನ ಗವಾಕ್ಷಗಳು, ವೃತ್ತಾಕಾರದ ಕಟ್ಟಡದ ಭಾಗಗಳು, ವಿವಿಧ ಎತ್ತರದ ಚಾವಣಿಗಳು, ಇವೆಲ್ಲವುಗಳಿಂದ ಆಕರ್ಷಕ ವಿದೇಶೀಯ ವಾಸ್ತುಕೃತಿಯಾಗಿ ತೋರುತ್ತದೆ.

ಮಹಾರಾಣಿಯವರ ವಾಸಕ್ಕಾಗಿ 1890ರಲ್ಲಿ ಹೊಸಭಾಗಗಳನ್ನು ಸೇರಿಸಲಾಯಿತು. ಆದರೆ ಅವುಗಳನ್ನು ಹಿಂದು ವಾಸ್ತುಶೈಲಿಯಲ್ಲಿ ನಿರ್ಮಿಸಲಾಯಿತು. ಅವುಗಳನ್ನು ಪ್ರಧಾನ ಕಟ್ಟಡಕ್ಕೆ ಒಂದು ಮುಚ್ಚಿದ ಕಾಲುದಾರಿಯಿಂದ ಸೇರಿಸಲಾಯಿತು. ಅರಮನೆಯ ಒಳಭಾಗದಲ್ಲಿ ವಿವಿಧ ರೀತಿಯ ಅಲಂಕಾರಗಳಿವೆ. ದಿಂಡುಗಳನ್ನು ಹೊಂದಿದ ಹಾಗೂ ಕೊಳಲಿನ ವಿನ್ಯಾಸದ ಕಂಬಗಳು, ವಿಶಾಲವಾದ ಕಮಾನುಗಳು, ಲತೆ ಮತ್ತು ಪುಷ್ಪಾಲಂಕಾರದ ಗೋಡೆಗಳು, ನಾಜೂಕಿನ ಕೆತ್ತನೆಯ ಬೋದಿಗೆಗಳು, ವಿವಿಧ ವಿನ್ಯಾಸದ ಕಾರ್ನಿಸುಗಳು ಹೀಗೆ ಅರಮನೆಯ ವೈಭವಕ್ಕೆ ತಕ್ಕ ಭಾಗಗಳು ಇಲ್ಲಿವೆ. ಗೊಂಚಲು ದೀಪಗಳು ಒಳಭಾಗದ ಸೌಂದರ್ಯವನ್ನು ಹೆಚ್ಚಿಸಿವೆ.

ಎನ್. ವೆಂಕಸಾಮಿರಾಜು ಅವರ ಮಾರ್ಗದರ್ಶನದಲ್ಲಿ ಅಳವಡಿಸಲಾದ ಇದರ ಮುಂಭಾಗದಲ್ಲಿರುವ ಉದ್ಯಾನವು ಈ ಕಟ್ಟಡದ ಇನ್ನೊಂದು ಆಕರ್ಷಣೆ. ಇವರ ಆಳೆತ್ತರದ ವಿಗ್ರಹವನ್ನು ಅರಮನೆಯ ಒಂದು ಗೂಡಿನಲ್ಲಿ ಇಡಲಾಗಿದೆ. ದೇಶವಿದೇಶಗಳಲ್ಲಿ ಕೀರ್ತಿ ಗಳಿಸಿರುವ ಮೈಸೂರು ಮಹಾರಾಜರ ವೈಭವ ಮತ್ತು ಶ್ರೀಮಂತಿಕೆಗೆ ಸಾಕ್ಷಿಯಾಗಿರುವ ಈ ಕಟ್ಟಡ ನಮ್ಮ ದೇಶದಲ್ಲೇ ಅತ್ಯಂತ ಸಂದರ ಅರಮನೆಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ.

## ಪ್ರಾಚ್ಯ ಸಂಶೋಧನಾಲಯ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಪ್ರಾಚ್ಯ ಸಂಶೋಧನಾಲಯ ಒಂದು ಸುಂದರ ಪಾರಂಪರಿಕ ಕಟ್ಟಡ. ಇದು ಇತರ ಪಾರಂಪರಿಕ ಕಟ್ಟಡಗಳಾದ ಅಠಾರ ಕಛೇರಿ (ಜಿಲ್ಲಾಧಿಕಾರಿಗಳ ಕಛೇರಿ), ಕ್ರಾಫರ್ಡ್ ಭವನ, ಮಹಾರಾಜ ಮತ್ತು ಯುವರಾಜ ಕಾಲೇಜುಗಳ ಪಕ್ಕದಲ್ಲಿದೆ. ವಾಸ್ತವವಾಗಿ ವಿಕ್ಟೋರಿಯ ರಾಣಿಯ ಚಿನ್ನದ ಹಬ್ಬದ ನೆನಪಿಗಾಗಿ 1891ರಲ್ಲಿ ಕಟ್ಟಲಾದ ಕಟ್ಟಡ ಇದು. ಅದಕ್ಕಾಗಿ ಇದನ್ನು ವಿಕ್ಟೋರಿಯ ಜ್ಯೂಬಿಲಿ ಇನ್‌ಸ್ಟಿಟ್ಯೂಟ್ ಎಂದು ಕರೆಯಲಾಯಿತು. ಅಭಿಜಾತ ಯೂರೋಪಿಯನ್ ಶೈಲಿ ಹಾಗೂ ಗೋತಿಕ್, ಕೊರಿಂತಿಯನ್, ರೋಮನೆಸ್ಕ್ ಶೈಲಿಯ ಸಮ್ಮಿಳನದ ವಿರಳ ಕಟ್ಟಡ ಇದು. ಉತ್ತರಾಭಿಮುಖವಾಗಿ ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿರುವುದರಿಂದ, ಇದಕ್ಕೆ ಎತ್ತರವಾದ ವಿನ್ಯಾಸ ಸಿಗುತ್ತದೆ. ಪೂರ್ವ, ಪಶ್ಚಿಮಗಳಲ್ಲಿರುವ ಕಲ್ಲಿನ ಮೆಟ್ಟಿಲುಗಳು ಮಧ್ಯದ ವಿಶಾಲವಾದ ಸಭಾಂಗಣಕ್ಕೆ ಕರೆದೊಯ್ಯುತ್ತವೆ. ಈ ಕಟ್ಟಡದ ಅತ್ಯಂತ ಆಕರ್ಷಕ ಭಾಗವೆಂದರೆ ನಾಲ್ಕು ಮುಖದಲ್ಲಿಯೂ ಇಳಿಜಾರಾಗಿರುವ ಗುಮ್ಮಟ. ಇದರ ತುದಿಯಲ್ಲಿ ಮಟ್ಟಸವಾದ ಚೌಕನೆಯ ಚಾವಣಿಯಿದೆ. ಕೆಳಗಡೆ ಎರಡು ಕಡೆಗಳಲ್ಲಿಯೂ ಅವಳಿ ಕೊರಿಂತಿಯನ್ ಕಂಬಗಳನ್ನುಳ್ಳ, ಉತ್ತರದಿಂದ ದಕ್ಷಿಣದ ಕಡೆಗೆ ಇಳಿಜಾರಿರುವ ಮೊಗಸಾಲೆಗಳಿವೆ. ಇವುಗಳ ಇಕ್ಕೆಲಗಳಲ್ಲಿ ಆಯತಾಕಾರದ ಹಜಾರಗಳಿವೆ. ಇದಕ್ಕೆ ನಾಲ್ಕು ಕೊರಿಂತಿಯನ್ ಕಂಬಗಳು ಹಾಗೂ ತ್ರಿವಳಿ ಅಲಂಕಾರವಿದೆ. ಇದಕ್ಕೆ ಹೊಂದಿಕೊಂಡಂತೆ ಹಜಾರದ ಚಾವಣಿಯು ಪೂರ್ವದಿಂದ ಪಶ್ಚಿಮದೆಡೆಗೆ ಇಳಿಜಾರಾಗಿದೆ. ಕೆಳಗಡೆ ಅರ್ಧವೃತ್ತಾಕಾರದ ಬಾಲ್ಕನಿಯಿದ್ದು ಕಟ್ಟಡದ ಸೌಂದರ್ಯವನ್ನು ಹೆಚ್ಚಿಸಲು ಸಹಾಯಕವಾಗಿದೆ. ಈ ರೀತಿ ಒಂದು ಸಣ್ಣ ಕಟ್ಟಡದಲ್ಲಿ ಮೂರು ಹಂತದ ಚಾವಣಿಗಳನ್ನು ಕಾಣುತ್ತೇವೆ.

ಈ ಕಟ್ಟಡದ ಇನ್ನೊಂದು ಆಕರ್ಷಣೆಯೆಂದರೆ ಗೋಡೆಯ ಮೇಲಿರುವ ಹೊಯ್ಸಳ ಶಿಲ್ಪಗಳು. ಹಾಳಾಗಿದ್ದ ಹೊಯ್ಸಳ ದೇವಾಲಯದ ಶಿಲ್ಪಗಳನ್ನು ತಂದು ಈ ಕಟ್ಟಡದ ಗೋಡೆಗಳ, ಗೂಡುಗಳಲ್ಲಿ ಸೇರಿಸಲಾಯಿತು. ಈ ಸುಂದರ ಹೊಯ್ಸಳ ಶಿಲ್ಪಗಳು ಈ ಕಟ್ಟಡಕ್ಕೆ ಪ್ರಾಚೀನತೆಯ ಶೋಭೆಯನ್ನು ತಂದುಕೊಟ್ಟಿವೆ. ಇದೇ ರೀತಿ ಈ ಕಟ್ಟಡದ ಮುಂಭಾಗದಲ್ಲಿರುವ ಉದ್ಯಾನದಲ್ಲಿ ಕೆಲವು ಹೊಯ್ಸಳ ಶಿಲ್ಪಗಳು ಮತ್ತು ಶಾಸನಗಳನ್ನು ಅಳವಡಿಸಲಾಗಿದೆ. ಇವುಗಳೂ ಕೂಡ ಈ ಕಟ್ಟಡಕ್ಕೆ ಒಂದು ಪ್ರಾಚೀನ ಪರಿಸರವನ್ನು ಒದಗಿಸಿವೆ.

ಈಗ ಈ ಕಟ್ಟಡದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಪ್ರಾಚ್ಯ ಸಂಶೋಧನಾಲಯ ಕಾರ್ಯನಿರ್ವಹಿಸುತ್ತಿದೆ. ಇದು ಪ್ರಾಚೀನ ಹಸ್ತಪ್ರತಿಗಳ ಭಂಡಾರವಾಗಿದೆ. ಇದು ಪ್ರಾಚೀನ ಹಸ್ತಪ್ರತಿಗಳ ಪ್ರಕಟಣೆಯನ್ನೂ ಮಾಡುವ ಸಂಶೋಧನಾ ಸಂಸ್ಥೆಯೂ ಆಗಿದೆ. ಪ್ರಸಿದ್ಧ ವಿದ್ವಾಂಸ ಆರ್. ಶಾಮಶಾಸ್ತ್ರಿಗಳು ಇಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಹಸ್ತಪ್ರತಿಯನ್ನು ಪತ್ತೆ ಹಚ್ಚಿದುದರಿಂದ, ಇದು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದೆ. ಆದುದರಿಂದ ಈ ಜಾಗವನ್ನು ಕೌಟಿಲ್ಯ ಸ್ಥಳ ಎಂದು ಕರೆಯಲಾಗುತ್ತಿದೆ. ಹೀಗೆ ಇದು ವಾಸ್ತುಶಿಲ್ಪಕ್ಕೆ ಮಾತ್ರವಲ್ಲದೆ ಹಸ್ತಪ್ರತಿಗಳಿಗೂ ಪ್ರಖ್ಯಾತವಾಗಿದೆ. ಭಾರತೀಯ ಶಾಸ್ತ್ರದಲ್ಲಿ ಆಸಕ್ತಿ ಹೊಂದಿರುವ ನೂರಾರು ಭಾರತೀಯ ಮತ್ತು ವಿದೇಶೀಯ ಸಂಶೋಧನಾ ವಿದ್ವಾಂಸರು ಈ ಸಂಸ್ಥೆಗೆ ಭೇಟಿ ನೀಡುತ್ತಾರೆ ಮತ್ತು ಇಲ್ಲಿರುವ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ ಮತ್ತು ಸಂಶೋಧನೆ ನಡೆಸುತ್ತಾರೆ.

ಅರಮನೆ, ಮೈಸೂರು

ಮೈಸೂರಿನ ಅರಮನೆಯು ಕರ್ನಾಟಕದಲ್ಲಿ ಮಾತ್ರವಲ್ಲದೆ ನಮ್ಮ ಇಡೀ ದೇಶದಲ್ಲಿ ಅತ್ಯಂತ ಸುಂದರವಾದ ಹಾಗೂ ಭವ್ಯವಾದ ಪಾರಂಪರಿಕ ಕಟ್ಟಡಗಳಲ್ಲೊಂದು. ಹಿಂದೆ ಮೈಸೂರಿನಲ್ಲಿ ಮರದಿಂದ ಕಟ್ಟಿದ ಅರಮನೆಯಿದ್ದಿತು. ಆದರೆ ಅದು ಒಂದು ಅಗ್ನಿ ಆಕಸ್ಮಿಕದಲ್ಲಿ ಸುಟ್ಟುಹೋಯಿತು. ಆಗ ಒಂದು ಕಲ್ಲಿನ ಅರಮನೆಯನ್ನು ಕಟ್ಟಲು ಹೆನ್ರಿ ಇರ್ವಿನ್ ಎಂಬ ವಾಸ್ತುಶಿಲ್ಪಿ ಹಾಗೂ ಬಿ.ಪಿ. ರಾಘವಲು ನಾಯಿಡು ಎಂಬ ಇಂಜಿನಿಯರ ಮಾರ್ಗದರ್ಶನದಲ್ಲಿ ತೀರ್ಮಾನಿಸಲಾಯಿತು. 1897ರಲ್ಲಿ ನಿರ್ಮಾಣ ಕಾರ್ಯ ಆರಂಭಗೊಂಡು 1912ರಲ್ಲಿ ಅದು ಪೂರ್ಣಗೊಂಡಿತು. ಅದಕ್ಕೆ ತಗಲಿದ ಖರ್ಚು 41 ಲಕ್ಷಗಳಿಗೂ ಮೀರಿತ್ತು.

ಅರಮನೆಯು ವಿಶಾಲವಾದ ಪ್ರಾಂಗಣದ ಮಧ್ಯದಲ್ಲಿದೆ. ಇದರ ಸುತ್ತಲೂ ಕಲ್ಲಿನ ಕೋಟೆಯಿದ್ದು, ಅದಕ್ಕೆ ನಾಲ್ಕು ಪ್ರವೇಶದ್ವಾರಗಳಿವೆ. ಅರಮನೆಯು ಪೂರ್ವಾಭಿಮುಖವಾಗಿದೆ. ಪ್ರಧಾನ ಭವ್ಯ ಬೃಹತ್ ಕಟ್ಟಡ 245 ಅಡಿ ಉದ್ದ, 156 ಅಡಿ ಅಗಲ ಮತ್ತು 145 ಅಡಿ ಎತ್ತರವಾಗಿದೆ. ಇದು ಬೂದು ಬಣ್ಣದ ಕಗ್ಗಲ್ಲಿನಿಂದ ನಿರ್ಮಿತವಾಗಿದೆ. ಇದು ಮೂರು ಅಂತಸ್ತಿನ ಕಟ್ಟಡವಾಗಿದ್ದು, ಇದರಲ್ಲಿ ಚಿನ್ನದ ಮುಲಾಮು ಲೇಪಿಸಿದ ಗುಮ್ಮಟ ಮತ್ತು ಐದು ತಲದ ಶಿಖರವಿದೆ. ಪೂರ್ವದ ಮುಖವು ತುಂಬ ಭವ್ಯವಾಗಿದ್ದು, ಎತ್ತರದ ಎಂಟು ಕಂಬಗಳಿಂದ ಕೂಡಿದ ವಿಶಾಲವಾದ ಕಮಾನುಗಳಿಂದ ಅಲಂಕರಿಸಲ್ಪಟ್ಟಿದೆ. ಅರಮನೆಯು ಚೌಕಾಕಾರದಲ್ಲಿದ್ದು ಮಧ್ಯದಲ್ಲಿ ತೆರೆದ ಅಂಗಳವಿದೆ. ನೆಲದ ಹಂತದಲ್ಲಿ ಆನೆಯ ಹೆಬ್ಬಾಗಿಲಿನ ದಕ್ಷಿಣದಲ್ಲಿ ಅಂದವಾದ ಕಲ್ಯಾಣ ಮಂಡಪವಿದೆ. ಇದರಲ್ಲಿ ಅಲಂಕಾರಗಳನ್ನುಳ್ಳ ಚಿನ್ನದ ಮುಲಾಮು ಲೇಪಿಸಿದ ಎತ್ತರವಾದ ಕಂಬಗಳೂ ಅವುಗಳ ಮೇಲೆ ವರ್ಣರಂಜಿತ ಗಾಜಿನ ಗುಮ್ಮಟವೂ ಇದೆ. ಪ್ರಖ್ಯಾತವಾದ ದರ್ಬಾರ್ ಸಭಾಂಗಣ 155 ಅಡಿ ಉದ್ದ ಹಾಗೂ 42 ಅಡಿ ಅಗಲವಿದೆ.

ಮಹಾರಾಜರ ದರ್ಬಾರ್ ಇಲ್ಲಿ ನಡೆಯುತ್ತಿದ್ದಿತು. ಈ ಸಭಾಂಗಣದಲ್ಲಿರುವ ಘನವಾದ ಕಂಬಗಳು ತಮ್ಮ ಆಕೃತಿ, ಅಲಂಕಾರ ಹಾಗೂ ಅಳತೆಗಳಿಂದ ನಮ್ಮನ್ನು ಬೆರಗುಗೊಳಿಸುತ್ತವೆ. ದರ್ಬಾರ್ ಸಭಾಂಗಣದಲ್ಲಿ ರಾಜ ರವಿವರ್ಮನಿಂದ ರಚಿತವಾದ ದೇವ ದೇವಿಯರ ವರ್ಣಚಿತ್ರಗಳಿವೆ. ಖಾಸಗಿ ಸಭಾಂಗಣವಾದ ಅಂಬಾವಿಲಾಸದಲ್ಲಿ ತೇಗದ ಮರದ ಉತ್ತಮ ನಾಜೂಕು ವಿನ್ಯಾಸಗಳಿವೆ. ಬೆಳ್ಳಿಯ ಬಾಗಿಲು, ದಂತದ ಬಾಗಿಲು, ಇನ್‌ಲೆ ಕುಸುರಿ ಕಲೆ, ಮಹಾರಾಜರ ಕುಟುಂಬವರ್ಗದವರ ಛಾಯಾಚಿತ್ರಗಳು, ಕರಂಡಗಳು, ಪೀಠೋಪಕರಣಗಳು, ಆಯುಧ ಶಾಲೆ ಮುಂತಾದವು ಸಂದರ್ಶಕರನ್ನು ಹಿಂದಿನ ಮಹಾರಾಜರ ಲೋಕಕ್ಕೆ ಕೊಂಡೊಯ್ಯುತ್ತವೆ. ಮಹಾರಾಜರು ವಿಜಯದಶಮಿ ದಿನ ಮೆರವಣಿಗೆಯಲ್ಲಿ ಹೋಗುತ್ತಿದ್ದ ಚಿನ್ನದ ಅಂಬಾರಿ, ಮೈಸೂರಿನ ಮಹಾರಾಜರಿಗೆ ವಂಶಪಾರಂಪರ್ಯವಾಗಿ ಬಂದಿರುವ ಕಲಾತ್ಮಕವಾದ ಚಿನ್ನದ ಸಿಂಹಾಸನ ನಮ್ಮ ಗಮನ ಸೆಳೆಯುತ್ತದೆ. ದೀಪಾಲಂಕಾರದಿಂದ ಕೂಡಿದ ಮೈಸೂರು ಅರಮನೆ ವಿಶೇಷ ಆಕರ್ಷಣೆ. ಹೀಗೆ ಮೈಸೂರು ಅರಮನೆಯು ರಾಜತ್ವವೇ ಮೂರ್ತಿವೆತ್ತಂತೆ ಇದ್ದು ಪ್ರಾಚೀನ ಕಾಲದ ವೈಭವವನ್ನು ನೆನಪಿಸುತ್ತದೆ. ಇದನ್ನು ಪ್ರತಿದಿನವೂ ನೂರಾರು ಜನ ಸಂದರ್ಶಿಸುತ್ತಾರೆ. ಮೈಸೂರಿನ ಅರಮನೆಯನ್ನು ನೋಡದಿದ್ದರೆ ಕರ್ನಾಟಕದ ಸಂದರ್ಶನವು ಪೂರ್ಣಗೊಳ್ಳುವುದಿಲ್ಲ. ಭಾನುವಾರ ಮತ್ತು ಇತರ ರಾಷ್ಟ್ರೀಯ ಹಬ್ಬದ ದಿನಗಳಲ್ಲಿ ಅರಮನೆಯು ದೀಪಾಲಂಕಾರದಿಂದ ಕಂಗೊಳಿಸುತ್ತದೆ.

## ನಾನಕ್ ಝರಾ ಗುರುದ್ವಾರ, ಬೀದರ್

ಬೀದರ್ ನಗರದಲ್ಲಿರುವ ಅತ್ಯಂತ ಸುಂದರ ಮತ್ತು ಪಾರಂಪಾರಿಕ ಕಟ್ಟಡಗಳಲ್ಲಿ ಒಂದಾದುದು ನಾನಕ್ ಝರಾ ಗುರುದ್ವಾರ. ಪರಂಪರೆಯ ಪ್ರಕಾರ ಸಿಖ್ ಧರ್ಮಸ್ಥಾಪಕ ಪೂಜ್ಯ ಗುರುನಾನಕ್ (ಕ್ರಿ.ಶ. 1469-1539) ತಮ್ಮ ತಿರುಗಾಟದ ಸಮಯದಲ್ಲಿ ಇಂದಿನ ಬೀದರ್ ಸಮೀಪಕ್ಕೆ ಬಂದು, ಇಲ್ಲಿನ ಬಂಡೆಯೊಂದರ ಸಮೀಪ ಬಿಡಾರ ಹೂಡಿದರು. ಇವರ ದರ್ಶನಕ್ಕಾಗಿ ವಿವಿಧ ಧರ್ಮಗಳ ಜನಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಸೇರುತ್ತಿದ್ದರು. ಒಂದು ಸುಡು ಬಿಸಿಲಿನ ದಿನ ನೂರಾರು ಜನ ಸೇರಿದ್ದರು. ಎಲ್ಲರಿಗೂ ಬಾಯಾರಿಕೆಯಾಯಿತು. ಆದರೆ ಹತ್ತಿರದಲ್ಲೆಲ್ಲೂ ಕುಡಿಯಲು ನೀರಿರಲಿಲ್ಲ. ಜನಗಳ ಕಷ್ಟ ಪರಿಸ್ಥಿತಿಯನ್ನು ಗಮನಿಸಿದ ಗುರು ನಾನಕರು, ನೀರಿಗಾಗಿ ದೇವರನ್ನು ಪ್ರಾರ್ಥಿಸಿ, ಒಂದು ಬಂಡೆಯನ್ನು ಮುಟ್ಟಿದರು. ಕೂಡಲೆ ಕುಡಿಯುವ ನೀರು ಧಾರಾಕಾರವಾಗಿ ಬಂಡೆಯಿಂದ ಸುರಿಯಲು ಆರಂಭವಾಯಿತು. ಈ ಪವಾಡದಿಂದ ಈ ಸ್ಥಳವು ಪವಿತ್ರಭೂಮಿಯಾಯಿತು. ಇದನ್ನು ಗಮನಿಸಿದ ಇಬ್ಬರು ಭಕ್ತರು ಇಲ್ಲಿ ಗುರುದ್ವಾರವನ್ನು ನಿರ್ಮಿಸಿದರು. ಹೀಗಾಗಿ ಈ ಗುರುದ್ವಾರವು ಕಾಲಕ್ರಮದಲ್ಲಿ ಅಭಿವೃದ್ಧಿಹೊಂದಿತು. ಅದನ್ನು ದೊಡ್ಡದಾಗಿಯೂ ವೈಭವಯುತವಾಗಿಯೂ ಮಾಡಲಾಯಿತು. ಇಲ್ಲಿ ನೀರಿನ ಪವಾಡ ನಡೆದುದರಿಂದ ಇದನ್ನು ನಾನಕ್ ಝರಾ ಗುರುದ್ವಾರ ಎಂದು ಕರೆಯಲಾಯಿತು.

ಗುರುದ್ವಾರದ ಈಗಿನ ಕಟ್ಟಡ ಭವ್ಯವಾಗಿದ್ದು ಕಲೋನಿಯನ್ ಮತ್ತು ಸಾರ್ಸೆನಿಕ್ (ಮುಸ್ಲಿಂ) ಶೈಲಿಗೆ ಸೇರಿದೆ. ಇದು ಬೀದರ್ ನಗರಕ್ಕೆ ಮೂರು ಕಿಲೋಮೀಟರ್ ದೂರದಲ್ಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಮತ್ತು ಯಾತ್ರಿಕರನ್ನು ಆಕರ್ಷಿಸುತ್ತಿದೆ. ನಿಜವಾಗಿಯೂ ಇದೊಂದು ಧಾರ್ಮಿಕ ಸಮುಚ್ಚಯ. ಇದರಲ್ಲಿ ಒಂದು ಕೊಳ ಮತ್ತು ಅಮಿತಕುಂಡಗಳಿವೆ. ಕೊಳದ ಪಕ್ಕದಲ್ಲಿ ಮುಚ್ಚಿಗೆಯಿರುವ ಒಂದು ಮಂಟಪವಿದೆ. ಇದರ ಹಿಂಭಾಗದಲ್ಲಿ ಮೂರು ಅಂತಸ್ತುಗಳ ಕಟ್ಟಡವಿದೆ. ಇದರ ಮುಂಜೂರು ಹಾಗೂ ಕೈಪಿಡಿಗಳು ಅಲಂಕೃತವಾಗಿದ್ದು, ಮೇಲೆ ಸುಂದರವಾದ ಗುಮ್ಮಟವಿದೆ. ಇದರ ಸುತ್ತಲೂ ಕಮಾನುಗಳಿವೆ. ಕೈಪಿಡಿಯ ಗೋಡೆಗಳ ಮೇಲೆ ಸಣ್ಣ ಪ್ರಮಾಣದ ಗುಮ್ಮಟಗಳಿವೆ. ಎಡಭಾಗದಲ್ಲಿ ಆಂಗ್ಲ ಶೈಲಿಗೆ ಸೇರಿದ ಎರಡು ಗುಮ್ಮಟಗಳನ್ನು ಕಾಣುತ್ತೇವೆ. ಈ ರೀತಿ ವಿವಿಧ ಶೈಲಿಯ ಗುಮ್ಮಟಗಳು ಈ ಕಟ್ಟಡದ ಬೇರೆ ಬೇರೆ ಕಡೆಗಳಲ್ಲಿರುವುದು ಈ ಕಟ್ಟಡದ ಸೌಂದರ್ಯವನ್ನು ಹೆಚ್ಚಿಸಲು ಸಹಾಯಕವಾಗಿವೆ. ಅತಿಥಿ ಭಕ್ತರ ಉಪಯೋಗಕ್ಕಾಗಿ ಇತ್ತೀಚೆಗೆ ಕೆಲವು ಕೋಣೆಗಳನ್ನು ನಿರ್ಮಿಸಿದ್ದಾರೆ. ಗುರುಕಲಂಗರ್‌ನಲ್ಲಿ ಭಕ್ತಾದಿಗಳಿಗೆ ಉಚಿತವಾಗಿ ಪ್ರಸಾದವನ್ನು ನೀಡಲು ಏರ್ಪಾಟು ಮಾಡಿದ್ದಾರೆ. ಈ ರೀತಿ ಹೊಸ ಹೊಸ ಭಾಗಗಳನ್ನು ಇತ್ತೀಚಿನ ವರ್ಷಗಳಲ್ಲಿ ಕಟ್ಟುತ್ತಿದ್ದರೂ ಸೌಧದ ವಾಸ್ತುಶಿಲ್ಪಕ್ಕೆ ಧಕ್ಕೆ ಬರದಂತೆ ಎಚ್ಚರ ವಹಿಸುತ್ತಿರುವುದು ಮೆಚ್ಚಿಗೆಯ ಸಂಗತಿ.

ಯುರೋಪಿಯನ್ ಮತ್ತು ಸಾರ್ಸೆನಿಕ್ ವಾಸ್ತುಶಿಲ್ಪ ಲಕ್ಷಣಗಳನ್ನು ಹೊಂದಾಣಿಕೆ ಮಾಡಿ ಈ ಕಟ್ಟಡವನ್ನು ನಿರ್ಮಿಸಿರುವುದರಿಂದ, ಇಡೀ ಸಮುಚ್ಚಯವು ಮನೋಹರವಾಗಿ ಕಾಣುತ್ತದೆ. ಹೀಗೆ ವಾಸ್ತುಶಿಲ್ಪದ ಸೌಂದರ್ಯ ಹಾಗೂ ಧಾರ್ಮಿಕ ಭಾವನೆಗಳು ಇಲ್ಲಿ ಹಿತಮಿತವಾದ ಪ್ರಮಾಣದಲ್ಲಿ ಮಿಳಿತವಾಗಿದ್ದು ಬೀದರ್ ನಗರದಲ್ಲಿ ಯಾತ್ರಾರ್ಥಿಗಳು ವಿಶೇಷವಾಗಿ ಸಂದರ್ಶಿಸುವ ಕಟ್ಟಡಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವಿದೆ.

ಲಲಿತ ಮಹಲ್, ಮೈಸೂರು

ಲಲಿತಮಹಲ್ ಅರಮನೆಯು ಮೈಸೂರಿನಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲೇ ಅತ್ಯಂತ ಸುಂದರವಾದ ಪಾರಂಪಾರಿಕ ಕಟ್ಟಡಗಳಲ್ಲೊಂದು. ಬಹುಶಃ ಮೈಸೂರಿನ ಮತ್ತು ಬೆಂಗಳೂರಿನ ಅರಮನೆಗಳನ್ನು ಬಿಟ್ಟರೆ ಕರ್ನಾಟಕದಲ್ಲಿ ಇದೇ ಅತ್ಯುತ್ತಮ ಕಟ್ಟಡವೆಂದು ಭಾವಿಸಬಹುದಾಗಿದೆ. ಬ್ರಿಟಿಷರ ಆಡಳಿತದ ಅಧೀನದಲ್ಲಿದ್ದ ಮೈಸೂರಿಗೆ ಅನೇಕ ಕಾರಣಗಳಿಗಾಗಿ ವಿದೇಶೀಯ ಗಣ್ಯರು ಭೇಟಿ ಕೊಡುತ್ತಿದ್ದರು. ಅಂತಹ ಗಣ್ಯರು ಮೈಸೂರಿನ ಅರಮನೆಯಲ್ಲಿಯೇ ತಂಗುತ್ತಿದ್ದರು. ಅನೇಕ ಕಾರಣಗಳಿಂದಾಗಿ, ಅರಮನೆಯು ವಿದೇಶೀಯರ ವಾಸ್ತವ್ಯಕ್ಕೆ ಸೂಕ್ತವಾಗಿರಲಿಲ್ಲ. ಆದುದರಿಂದ ಅಂದು ದೊರೆಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ವಿದೇಶೀಯರಿಗಾಗಿಯೇ ಪ್ರತ್ಯೇಕವಾದ ಒಂದು ಅರಮನೆಯನ್ನು ಅವರ ಅನುಕೂಲಗಳಿಗೆ ತಕ್ಕಂತೆ ಕಟ್ಟಲು ನಿರ್ಧರಿಸಿದರು. ಸ್ವಾಭಾವಿಕವಾಗಿ ಭಾರತೀಯ ಅರಮನೆಯ ವಾಸ್ತುವಿಗೆ ಬದಲಾಗಿ ಅಭಿಜಾತ ಯುರೋಪಿಯನ್ ಲಕ್ಷಣಗಳನ್ನುಳ್ಳ ಕಟ್ಟಡದ ವಿನ್ಯಾಸವನ್ನು ನಿರ್ಧರಿಸಿದರು.

ಮಹಾರಾಜರು ಕೂಡಲೆ ಇ.ಡಬ್ಲ್ಯು.ಫ್ರಿಚ್ಲೆ ಎಂಬ ಖ್ಯಾತ ವಾಸ್ತುಶಿಲ್ಪಿಯನ್ನು ಈ ಕಾರ್ಯಕ್ಕೆ ನಿಯಮಿಸಿದರು. ಮೈಸೂರು ನಗರಕ್ಕೆ ದೂರದಲ್ಲಿದ್ದು ಶಬ್ದ ಮತ್ತು ಮಾಲಿನ್ಯಗಳಿಂದ ದೂರವಿರುವ ಚಾಮುಂಡಿಬೆಟ್ಟದ ಅಡಿಯ ಜಾಗವನ್ನು ಆರಿಸಿದರು. ಈ ಭವ್ಯ ಕಟ್ಟಡವನ್ನು ನಾಲ್ವಡಿ ಕೃಷ್ಣರಾಜ ಒಡೆಯರ ನೇರ ನೇತೃತ್ವದಲ್ಲಿ 1931ರಲ್ಲಿ ಸುಮಾರು ಹದಿಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಲಾಯಿತು.

ಇದು ಎರಡು ಅಂತಸ್ತಿನ ಭವ್ಯ ಕಟ್ಟಡ. ನೆಲ ಅಂತಸ್ತಿನಲ್ಲಿರುವ ಮುಂಚಾಚಿರುವ ದ್ವಾರಮಂಡಪ, ಚಾವಣಿಯ ಹಂತದಲ್ಲಿ ತ್ರಿವಳಿ ವಿನ್ಯಾಸವುಳ್ಳ ಮೊದಲ ಹಂತದ ದ್ವಾರಮಂಡಪ ನೋಡಲು ಸುಂದರವಾಗಿವೆ. ಎರಡು ಹಂತಗಳಲ್ಲಿಯೂ ಮುಖ್ಯದ್ವಾರದ ಎರಡೂ ಕಡೆಗಳಲ್ಲಿ ಅಯೋನಿಕ್ ಶೈಲಿಯ ಎಂಟು ಅವಳಿ ಕಂಬಗಳು ಇದ್ದು ಕಟ್ಟಡದ ಸೌಂದರ್ಯವನ್ನು ಹೆಚ್ಚಿಸಿವೆ. ನಾಲ್ಕು ಮೂಲೆಗಳಲ್ಲಿ ದ್ವಿತಲದ ಗುಮ್ಮಟಗಳು, ಮಧ್ಯದಲ್ಲಿ ಒಂದು ಗುಮ್ಮಟವೂ ಇವೆ. ಅತ್ಯಂತ ಸುಂದರವಾದ ಮೂರುತಲದ ಗುಮ್ಮಟವು, ಮಧ್ಯದ ಪ್ರವೇಶದ ಹಜಾರದ ಮೇಲಿದೆ. ವಾಸ್ತವವಾಗಿ ಇದು ತುಂಬ ಎತ್ತರದಲ್ಲಿದ್ದು, ಸುತ್ತಮುತ್ತಲಿನಿಂದ ಎದ್ದು ಕಾಣುತ್ತದೆ.

ಇದನ್ನು ವಿನ್ಯಾಸಗೊಳಿಸಿದವನು ವಿದೇಶೀಯನಾದರೂ ಮರಗೆಲಸ, ಕಲ್ಲಿನ ಕೆಲಸ, ಗಾರೆ ಕೆಲಸಗಳಲ್ಲಿ ಪರಿಣಿತರಾದ ಸ್ಥಳೀಯ ಕುಶಲಕರ್ಮಿಗಳನ್ನು ನಿಯಮಿಸಲಾಗಿತ್ತು. ಇದು ಅವರು ವಿನ್ಯಾಸಗೊಳಿಸಿರುವ ಗೋಡೆಯ ಮೇಲಿನ ಅಲಂಕಾರ, ಚಾವಣಿಯ ಭುವನೇಶ್ವರಿ, ಗೋಡೆ, ಗವಾಕ್ಷಗಳು ಹಾಗೂ ದ್ವಾರಬಂಧಗಳಿಂದ ತಿಳಿದುಬರುತ್ತದೆ. ಹೊರದೇಶಗಳಿಂದ ಆಮದು ಮಾಡಿಕೊಂಡ ಹಾಸು ಬಿಲ್ಲೆಗಳು ಮತ್ತು ಅಲಂಕಾರ ವಸ್ತುಗಳು ರಾಜವೈಭವನದ ಮೆರುಗನ್ನು ನೀಡುತ್ತವೆ. ಇಟಾಲಿಯನ್ ಅಮೃತಶಿಲೆಯಿಂದ ಕಟ್ಟಲಾದ ತಾಳ್ವಾರುಗಳುಳ್ಳ ಮೆಟ್ಟಿಲುಗಳು ಎಡ ಬಲಗಳಿಗೆ ತಿರುಗಿ, ಮೊದಲನೆಯ ಹಂತಕ್ಕೆ ಹೋಗಲು ದಾರಿ ಕಲ್ಪಿಸಿಕೊಡುತ್ತವೆ. ಈ ರೀತಿ ಕೆಳಗಿನಿಂದ ಮೇಲಿನವರೆಗೆ ಈ ಕಟ್ಟಡವು ರಾಜವೈಭವವದ ಪ್ರತೀಕವಾಗಿದೆ. ಇಲ್ಲಿ ತಂಗುವ ವಿದೇಶೀಯ ಅತಿಥಿಗಳು ಸ್ವಪ್ನಪ್ರಾಯವಾದ ಈ ಅರಮನೆಯನ್ನು ನೋಡಿ ಬೆರಗಾಗಿದ್ದಾರೆ. ಇಂದು ಇದು ಭಾರತ ಸರ್ಕಾರದ ಘನತೆಯ ಪಂಚತಾರಾ ಹೋಟೆಲ್ ಆಗಿದ್ದು ಹೆಚ್ಚಿನ ಸಂಖ್ಯೆಯ ವಿದೇಶೀಯ ಹಾಗೂ ದೇಶೀಯ ಯಾತ್ರಿಕರನ್ನು ಆಕರ್ಷಿಸುತ್ತಿದೆ. ಸರಕಾರದ ಗಣ್ಯರೂ ಮತ್ತು ಅಧಿಕಾರಿಗಳೂ ಕೂಡ ಇಲ್ಲಿ ತಂಗಿದ್ದು, ರಾಜ ವೈಭವವನ್ನು ಅನುಭವಿಸುತ್ತಾರೆ.

## ವಿಧಾನಸೌಧ, ಬೆಂಗಳೂರು

ಕರ್ನಾಟಕ ರಾಜ್ಯದ ಶಾಸನ ಸಭೆಗಳು ಹಾಗೂ ಆಡಳಿತ ಕಛೇರಿಗಳಿರುವ ವಿಧಾನಸೌಧ, ಬೆಂಗಳೂರಿನಲ್ಲಿ ಮಾತ್ರವಲ್ಲದೆ, ಇಡೀ ಕರ್ನಾಟಕದಲ್ಲೇ ಅತ್ಯಂತ ಬೃಹತ್ತಾದ ಮತ್ತು ಭವ್ಯವಾದ ಕಟ್ಟಡ. ಈ ಹಿಂದೆ ರಷ್ಯದಿಂದ ಬಂದಿದ್ದ ನಿಯೋಗವು ಬೆಂಗಳೂರನ್ನು ಸಂದರ್ಶಿಸಿ, ಇಲ್ಲಿರುವ ಕಟ್ಟಡಗಳೆಲ್ಲವೂ ಯುರೋಪಿಯನ್ ಶೈಲಿಗೆ ಸೇರಿದವುಗಳೆಂದು ತಿಳಿದ ನಂತರ, ಅಂದಿನ ಮುಖ್ಯಮಂತ್ರಿಗಳಾದ್ದ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಕುರಿತು ನಿಮ್ಮದೇ ಎಂದು ಹೇಳಿಕೊಳ್ಳುವ ಯಾವ ವಾಸ್ತುಕೃತಿಯೂ ನಿಮ್ಮಲ್ಲಿಲ್ಲವೇ ಎಂದು ಪ್ರಶ್ನೆಯನ್ನು ಕೇಳಿತು. ಇದಕ್ಕೆ ಉತ್ತರವೋ ಎಂಬಂತೆ ಕೆಂಗಲ್ ಹನುಮಂತಯ್ಯನವರು, ಹಿಂದೂ ವಾಸ್ತುಶಿಲ್ಪದ ಪ್ರತೀಕವಾದ ಹಾಗೂ ದ್ರಾವಿಡ, ಹೊಯ್ಸಳ, ಚಾಳುಕ್ಯ ಮತ್ತು ವಿಜಯನಗರ ಶೈಲಿಗಳು ಸಂಯೋಜನೆಗೊಂಡ ವಿಶಿಷ್ಟ ಶೈಲಿಯ ವಿಧಾನ ಸೌಧವನ್ನು ನಿರ್ಮಿಸಲು ಯೋಜನೆ ಹಾಕಿದರು. ಅದರ ಆರಂಭ 1952ರಲ್ಲಿ ಆಗಿ, ಅದು 1956ರಲ್ಲಿ ಮುಗಿಯಿತು. ಇದಕ್ಕೆ ವೆಚ್ಚಮಾಡಿದ ಹಣ 1.75 ಕೋಟಿ ರೂಪಾಯಿಗಳು. ಸರ್ಕಾರದ ಮುಖ್ಯ ವಾಸ್ತುಶಿಲ್ಪಿ ಬಿ.ಆರ್. ಮಾಣಿಕ್ಕಂ ಅವರ ಮಾರ್ಗದರ್ಶನದಲ್ಲಿ, ನೂರಾರು ಪರಿಣತರು ಕಾರ್ಯ ನಿರ್ವಹಿಸಿದರು. ಈ ಘನವಾದ ಯೋಜನೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಶ್ರಮಿಕರು ಮತ್ತು ಒಂದು ಸಾವಿರದ ಐದು ನೂರು ಕುಶಲ ಶಿಲ್ಪಿಗಳು ಭಾಗವಹಿಸಿದ್ದರು.

ಈ ಸೌಧ 720 ಅಡಿ ಉದ್ದ ಮತ್ತು 360 ಅಡಿ ಅಗಲವಾಗಿದೆ. ಇದರ ಮಧ್ಯದಲ್ಲಿ 260 ಅಡಿ ಉದ್ದ ಮತ್ತು 250 ಅಡಿ ಅಗಲದ ಪ್ರಾಂಗಣವಿದೆ. ಇದು ನೆಲಮಾಳಿಗೆಯಿರುವ ಮೂರು ಅಂತಸ್ತಿನ ಭವ್ಯ ಕಟ್ಟಡ. ಈ ಕಟ್ಟಡವನ್ನು ಪ್ರವೇಶಿಸಲು ನಾಲ್ಕು ಕಡೆಗಳಿಂದಲೂ ಮಹಾದ್ವಾರಗಳಿದ್ದರೂ, ಪೂರ್ವ ದಿಕ್ಕಿನ ಮಹಾದ್ವಾರವು ಭವ್ಯವಾಗಿದ್ದು ನಲವತ್ತು ಅಡಿ ಎತ್ತರದ ಕಂಬಗಳು ಹಾಗೂ ಹೆಚ್ಚಿನ ಸಂಖ್ಯೆಯ ಮೆಟ್ಟಿಲುಗಳಿವೆ. ಪಶ್ಚಿಮದಲ್ಲಿ ರಾಜಾಸ್ಥಾನದ ಅರಮನೆಯ ಮುನ್ನೋಟವಿದೆ. ನಾಲ್ಕು ಮೂಲೆಗಳಲ್ಲಿ ಶಿಖರಗಳೂ, ಅವುಗಳ ಮೇಲೆ ಸಣ್ಣ ಗುಮ್ಮಟಗಳೂ, ಅದರ ಮೇಲೆ ಚಿನ್ನದ ಮುಲಾಮಿನ ಲೋಹದ ಕಲಶಗಳೂ ಇವೆ. ಪ್ರಧಾನ ಗುಮ್ಮಟವು ತುಂಬ ಅಂದವಾಗಿದ್ದು ಅದರ ಮೇಲೆ ರಾಷ್ಟ್ರೀಯ ಸಂಕೇತವಾದ ನಾಲ್ಕು ಸಿಂಹಗಳು ಕಲಶರೂಪದಲ್ಲಿವೆ. ಬೂದು ಬಣ್ಣದ ಕಲ್ಲನ್ನು ಹೊರಭಾಗಗಳಿಗೆ ಬಳಸಿದ್ದರೂ, ಹಸಿರು, ನೀಲಿ, ಎಳೆಗೆಂಪು ಮತ್ತು ಕರಿಯ ಬಣ್ಣದ ಕಲ್ಲುಗಳನ್ನು ಅಲಂಕಾರದ ವಿನ್ಯಾಸಗಳಿಗಾಗಿ ಉಪಯೋಗಿಸಲಾಗಿದೆ. ಒಳಭಾಗದಲ್ಲಿ ಬಾಂಕ್ವೆಟ್ ಸಭಾಂಗಣ, ಅಸೆಂಬ್ಲಿ ಸಭಾಂಗಣ, ಕೌನ್ಸಿಲ್ ಸಭಾಂಗಣ, ಮಂತ್ರಿ ಮಂಡಲದ ಸಭಾ ಭವನ, ಮಂತ್ರಿಗಳು ಮತ್ತು ಉನ್ನತ ಅಧಿಕಾರಿಗಳ ಕೊಠಡಿಗಳಿವೆ.

ಈ ಸೌಧದ ಇನ್ನೊಂದು ಆಕರ್ಷಣೆ ಎಂದರೆ ಮರದ ಕುಶಲ ಕೆಲಸ. ಮುಖ್ಯಮಂತ್ರಿಗಳ ಕೊಠಡಿ, ಕ್ಯಾಬಿನೆಟ್ ಸಭಾಂಗಣ ಮತ್ತು ಶಾಸನ ಸಭೆಯ ಕೆತ್ತನೆಯ ಬಾಗಿಲುಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಇವು ಇಂದಿಗೂ ಜೀವಂತವಾಗಿರುವ ಕರ್ನಾಟಕ ಕಾಷ್ಠಶಿಲ್ಪ ಪರಂಪರೆಯ ಪ್ರತೀಕಗಳಾಗಿವೆ. ಈ ರೀತಿ ವಿಧಾನ ಸೌಧವು ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕ ಶೈಲಿಯ ವಾಸ್ತುಶಿಲ್ಪ ಪರಂಪರೆಗೆ ಉತ್ತಮ ಉದಾಹರಣೆ. ಪ್ರಾಚೀನ ಕರ್ನಾಟಕದ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ವಾಸ್ತುಶಿಲ್ಪ ಪರಂಪರೆಯ ಮುಂದುವರಿಕೆಗೆ ವಿಧಾನಸೌಧ ಉತ್ತಮ ಸಾಕ್ಷಿಯಾಗಿದೆ. ಇದೇ ಈ ಸೌಧದ ವೈಶಿಷ್ಟ್ಯ. ಬೆಂಗಳೂರಿಗೆ ಬರುವ ಯಾವ ಯಾತ್ರಿಕನೂ ಕರ್ನಾಟಕದ ಹೆಮ್ಮೆಯ ಈ ಪಾರಂಪರಿಕ ಕಟ್ಟಡವನ್ನು, ಅದರಲ್ಲೂ ಅದನ್ನು ದೀಪಗಳಿಂದ ಅಲಂಕರಿಸಿದಾಗ ನೋಡಲು ಮರೆಯುವಂತಿಲ್ಲ.

8 ಬೃಹತ್ ಶಿಲಾಸಮಾಧಿಗಳು, ಹಿರೆಬೆನಕಲ್

10 ಬೌದ್ಧ ಸ್ತೂಪ, ಕಂಗನಹಳ್ಳಿ

12 ಕದಂಬ ದೇವಾಲಯ, ಗುಡ್ನಾಪುರ

14 ಇಟ್ಟಿಗೆಯ ಜೈನ ಬಸದಿ, ತಲಕಾಡು

16 ಒಂದನೆಯ ಗುಹಾಲಯ, ಬಾದಾಮಿ

18 ಮೂರನೆಯ ಗುಹಾಲಯ, ಬಾದಾಮಿ

20 ರಾವಫಡಿ, ಐಹೊಳೆ

22 ಗೌಡರಗುಡಿ, ಐಹೊಳೆ

24 ಮೇಗುತಿ ದೇವಾಲಯ, ಐಹೊಳೆ

26 ಲಾಡ್‌ಖಾನ್ ದೇವಾಲಯ, ಐಹೊಳೆ

28 ದುರ್ಗ ದೇವಾಲಯ, ಐಹೊಳೆ

30 ಮಾಲೆಗಿತ್ತಿ ಶಿವಾಲಯ, ಬಾದಾಮಿ

32 ದೇವಾಲಯಗಳ ಸಮುಚ್ಚಯ, ಪಟ್ಟದಕಲ್ಲು

34 ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

36 ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

38 ಪಾಪನಾಥ ದೇವಾಲಯ, ಪಟ್ಟದಕಲ್ಲು

40 ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

42 ಗಳಗನಾಥ ದೇವಾಲಯ, ಪಟ್ಟದಕಲ್ಲು

44 ಜೈನ ದೇವಾಲಯ, ಪಟ್ಟದಕಲ್ಲು

46 ಮಧುಕೇಶ್ವರ ದೇವಾಲಯ, ಬನವಾಸಿ

48 ಪಾರ್ವತಿ ಮತ್ತು ಕಾರ್ತಿಕೇಯ ದೇವಾಲಯಗಳು, ಸಂಡೂರು

50 ಶ್ರೀರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ

52 ಅನಂತೇಶ್ವರ ದೇವಾಲಯ, ಉಡುಪಿ

54 ಗವಿ ಗಂಗಾಧರೇಶ್ವರ ದೇವಾಲಯ, ಬೆಂಗಳೂರು

56 ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು

58 ಭೋಗನಂದೀಶ್ವರ ದೇವಾಲಯ, ನಂದಿ

60 ಪಂಚಕೂಟ ಬಸದಿ, ಕಂಬದಹಳ್ಳಿ

62 ಚಾಮುಂಡರಾಯ ಬಸದಿ, ಶ್ರವಣಬೆಗೊಳ

64 ಅಗಸ್ತ್ಯೇಶ್ವರ ದೇವಾಲಯ, ಟಿ.ನರಸಿಪುರ

66 ಗೊಮ್ಮಟೇಶ್ವರ, ಶ್ರವಣಬೆಗೊಳ

68 ರಾಮಲಿಂಗೇಶ್ವರ ದೇವಾಲಯ ಸಮುಚ್ಚಯ, ಆವನಿ

70 ಬ್ರಹ್ಮ ಜಿನಾಲಯ, ಲಕ್ಕುಂಡಿ

72 ಕೋಲಾರಮ್ಮ ದೇವಾಲಯ, ಕೋಲಾರ

74 ಲಕ್ಷ್ಮೀನರಸಿಂಹ ದೇವಾಲಯ, ಅಗರ

76 ಪುಷ್ಕರಿಣಿ, ಮೇಲುಕೋಟೆ

78 ಈಶ್ವರ ದೇವಾಲಯ, ಜಲಸಂಗ್ವಿ

80 ಕೈಟಭೇಶ್ವರ ದೇವಾಲಯ, ಕುಬಟೂರು

82 ಮಹಾದೇವ ದೇವಾಲಯ, ಇಟ್ಟಗಿ

84 ದೊಡ್ಡಬಸಪ್ಪ ದೇವಾಲಯ, ಡಂಬ

86 ನನ್ನೇಶ್ವರ ದೇವಾಲಯ, ಲಕ್ಕುಂಡಿ

88 ಕೋಟೆ, ಬಸವಕಲ್ಯಾಣ

90 ಲಕ್ಷ್ಮೀದೇವಿ ದೇವಾಲಯ, ದೊಡ್ಡಗದ್ದವಳ್ಳಿ

92 ಚೆನ್ನಕೇಶವ ದೇವಾಲಯ, ಬೇಲೂರು

94 ಕೀರ್ತಿನಾರಾಯಣ ದೇವಾಲಯ, ತಲಕಾಡು

96 ಜೈನ ದೇವಾಲಯ ಸಮೂಹ, ಹಳೇಬೀಡು

98 ಭೂವರಾಹ ದೇವಾಲಯ, ಹಲಸಿ

100 ಪಂಚಲಿಂಗೇಶ್ವರ ದೇವಾಲಯ, ಹೂಲಿ

102 ಕಮಲ ಬಸದಿ, ಬೆಳಗಾಂ

104 ವೀರನಾರಾಯಣ ದೇವಾಲಯ, ಬೆಳವಾಡಿ

106 ಕೇದಾರೇಶ್ವರ ದೇವಾಲಯ, ಹಳೇಬೀಡು

108 ಹೊಯ್ಸಳೇಶ್ವರ ದೇವಾಲಯ, ಹಳೇಬೀಡು
110 ಈಶ್ವರ ದೇವಾಲಯ, ಅರಸಿಕೆರೆ
112 ಮಲ್ಲಿಕಾರ್ಜುನ ದೇವಾಲಯ, ಬಸರಾಳು
114 ಕೇಶವ ದೇವಾಲಯ, ಸೋಮನಾಥಪುರ
116 ಲಕ್ಷ್ಮೀನರಸಿಂಹ ದೇವಾಲಯ, ಜಾವಗಲ್
118 ಲಕ್ಷ್ಮೀನಾರಾಯಣ ದೇವಾಲಯ, ಹೊಸಹೊಳಲು
120 ಲಕ್ಷ್ಮೀನರಸಿಂಹ ದೇವಾಲಯ, ಹೊಳೆನರಸಿಪುರ
122 ಸೋಮೇಶ್ವರ ದೇವಾಲಯ, ಕೋಲಾರ
124 ಭೀಮೇಶ್ವರ ದೇವಾಲಯ, ಕೈವಾರ
126 ವಿದ್ಯಾಶಂಕರ ದೇವಾಲಯ, ಶೃಂಗೇರಿ
128 ವೈದ್ಯೇಶ್ವರ ದೇವಾಲಯ, ತಲಕಾಡು
130 ಹೇಮಕೂಟ ಬೆಟ್ಟದ ದೇವಾಲಯಗಳು, ಹಂಪಿ
132 ಗೌರೀಶ್ವರ ದೇವಾಲಯ, ಯಳಂದೂರು
134 ಮೆಟ್ಟಿಲುಗಳ ಕೊಳ, ಹಂಪಿ
136 ವಿರೂಪಾಕ್ಷ (ಪಂಪಾಪತಿ) ದೇವಾಲಯ, ಹಂಪಿ
138 ಕೃಷ್ಣ ದೇವಾಲಯ, ಹಂಪಿ
140 ವಿಠಲ ದೇವಾಲಯ, ಹಂಪಿ
142 ಹಜಾರರಾಮ ದೇವಾಲಯ, ಹಂಪಿ
144 ಅನಂತಶಯನ ದೇವಾಲಯ, ಅನಂತಶಯನಗುಡಿ
146 ಅಚ್ಯುತರಾಯ ದೇವಾಲಯ, ಹಂಪಿ
148 ಗಜಶಾಲೆ, ಹಂಪಿ
150 ಕಮಲ ಮಹಲ್, ಹಂಪಿ
152 ರಾಣಿಯರ ಸ್ನಾನಗೃಹ, ಹಂಪಿ
154 ಅಘೋರೇಶ್ವರ ದೇವಾಲಯ, ಇಕ್ಕೇರಿ
156 ರಾಮೇಶ್ವರ ದೇವಾಲಯ, ಕೆಳದಿ
158 ಶಿವಪ್ಪನಾಯಕನ ಅರಮನೆ, ಶಿವಮೊಗ್ಗ
160 ಜುಮ್ಮ ಮಸೀದಿ, ಗುಲ್ಬರ್ಗ
162 ಫಿರೋಜ್ ಷಾ ಬಹಮನಿಯ ಗೋರಿ, ಗುಲ್ಬರ್ಗ
164 ಕೋಟೆ, ಬೀದರ್
166 ಮಹ್ಮೂದ್ ಗವಾನನ ಮದರಸ, ಬೀದರ್
168 ಜುಮ್ಮ ಮಸೀದಿ, ಬಿಜಾಪುರ
170 ಗಗನ್ ಮಹಲ್, ಬಿಜಾಪುರ
172 ಸಾತ್ ಮಂಜಿಲ್, ಬಿಜಾಪುರ
174 ಇಮ್ಮಡಿ ಕಾಸಿಂ ಬರೀದನ ಗೋರಿ, ಬೀದರ್
176 ಇಬ್ರಾಹಿಂ ರೋಜಾ, ಬಿಜಾಪುರ
178 ಗೋಳ ಗುಮ್ಮಟ, ಬಿಜಾಪುರ
180 ಚತುರ್ಮುಖ ಬಸದಿ, ಗೇರುಸೊಪ್ಪೆ
182 ಚಾಮುಂಡೇಶ್ವರಿ ದೇವಾಲಯ, ಚಾಮುಂಡಿ ಬೆಟ್ಟ, ಮೈಸೂರು
184 ಟಿಪ್ಪುಸುಲ್ತಾನನ ಅರಮನೆ, ಬೆಂಗಳೂರು
186 ದರಿಯಾದೌಲತ್, ಶ್ರೀರಂಗಪಟ್ಟಣ
188 ವರಾಹಸ್ವಾಮಿ ದೇವಾಲಯ, ಮೈಸೂರು
190 ರಾಜರ ಸಮಾಧಿಗಳು, ಮಡಿಕೇರಿ
192 ಸಂತ ಫಿಲೋಮಿನ ಚರ್ಚು, ಮೈಸೂರು
194 ಜಗನ್ಮೋಹನ ಅರಮನೆ, ಮೈಸೂರು
196 ಅರಮನೆ, ಬೆಂಗಳೂರು
198 ಪ್ರಾಚ್ಯ ಸಂಶೋಧನಾಲಯ, ಮೈಸೂರು
200 ಅರಮನೆ, ಮೈಸೂರು
202 ನಾನಕ್ ಝರಾ ಗುರುದ್ವಾರ, ಬೀದರ್
204 ಲಲಿತ ಮಹಲ್, ಮೈಸೂರು
206 ವಿಧಾನಸೌಧ, ಬೆಂಗಳೂರು

## ಚಿತ್ರದುರ್ಗ ಕೋಟೆ

ಚಿತ್ರದುರ್ಗ ನಗರವು ಅಲ್ಲಿರುವ ಬೆಟ್ಟದ ಮೇಲೆ ನಿರ್ಮಿಸಲಾಗಿರುವ ಬೃಹತ್ತಾದ ಹಾಗೂ ಮಹತ್ತಾದ ಮತ್ತು ಸುಂದರವಾದ ಕೋಟೆಗೆ ಕರ್ನಾಟಕದಲ್ಲೇ ಹೆಸರುವಾಸಿಯಾಗಿದೆ. ಈ ಬೃಹತ್ತಾದ ಕೋಟೆಯು ದೂರದಿಮದಲೇ ಸಂದರ್ಶಕರನ್ನು ಕೈ ಬೀಸಿ ಕರೆಯುತ್ತದೆ : ಹೀಗಾಗಿ ಇದೊಂದು ಉತ್ತಮವಾದ ಪ್ರವಾಸಿತಾಣವಾಗಿದೆ. ಚಿತ್ರದುರ್ಗ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದಿದ್ದರೂ, ಇಲ್ಲಿರುವ ಕೋಟೆಯು ಮಧ್ಯಕಾಲೀನ ಸಮಯಕ್ಕೆ ಸೇರುತ್ತದೆ. ದಪ್ಪ ಕಲ್ಲುಗಳಿಂದ ಎತ್ತರದವರೆಗೆ ಕಟ್ಟಲಾದ ಈ ನಿರ್ಮಿತಿಯು ಶ್ರೇಷ್ಠವಾಗಿದ್ದು, ಇದನ್ನು ಭೇದಿಸುವುದ ಕಷ್ಟಸಾಧ್ಯವಾದ ಕೆಲಸವೇ ಆಗಿತ್ತು. ಸಾಮಾನ್ಯವಾಗಿ ಈ ಕಲ್ಲಿನ ಗೋಡೆಗಳ ಎತ್ತರ 15 ರಿಂದ 40 ಅಡಿಗಳವರೆಗೆ ಇದೆ. ಈ ಬೃಹತ್ ಕೋಟೆಯ ನಿರ್ಮಾಣಕ್ಕೆ ಕಾರಣರಾದವರು ಚಿತ್ರದುರ್ಗದ ಪಾಳೆಯಗಾರರು, ಹೈದರ್ ಮತ್ತು ಟಿಪ್ಪು ಸುಲ್ತಾನ್. ಈ ಸಮಯದಲ್ಲಿ ಬುರುಜುಗಳು, ಕಂಡಿಗಳುಳ್ಳ ಗೋಡೆಯ ಕೈಪಿಡಿಗಳು ಮತ್ತು ನೀರಿನ ಕಂದಕಗಳೂ ಸೇರಿಸಲ್ಪಟ್ಟವು. ಈ ಕಂದಕಗಳನ್ನು ದಾಟಲು ಅಸಾಧ್ಯವಾಗುವಂತೆ ಮಾಡಲು ಇದರಲ್ಲಿ ಮೊಸಳೆಗಳನ್ನು ಬಿಟ್ಟಿದ್ದರು.

ಈ ಕೋಟೆಗೆ ಐದು ಹೆಬ್ಬಾಗಿಲುಗಳಿವೆ. ಇವುಗಳಿಗೆ ಸೇರಿದ ಗೋಡೆಗಳು ಅಲಂಕೃತವಾಗಿದ್ದು ಶಿಲ್ಪಗಳಿವೆ. ಕೋಟೆಯು ಉಪಯೋಗದಲ್ಲಿದ್ದ ಸಮಯದಲ್ಲಿ, ಇದರಲ್ಲಿ 19 ಹೆಬ್ಬಾಗಿಲುಗಳು, 39 ದಿಡ್ಡಿ ಬಾಗಿಲುಗಳು ಮತ್ತು 35 ಗುಪ್ತ ಮಾರ್ಗಗಳೂ ಇದ್ದವು. ಈಗ ಅವುಗಳಲ್ಲಿ ಬಹಳಷ್ಟು ಹಾಳಾಗಿವೆ. ಬೆಟ್ಟದ ಮೇಲೆ ಹೈದರನು ಕಟ್ಟಿದ ಅರಮನೆಯ ನೆಲಗಟ್ಟಿದೆ. ಕಲ್ಲಿನಿಂದ ನಿರ್ಮಿತವಾದ ಸ್ಥಳೀಯವಾಗಿ ಎಣ್ಣೆ ಕೊಳ, ತುಪ್ಪದ ಕೊಳ, ಐದು ಅಡಿ ವ್ಯಾಸದ ಬೀಸುವ ಕಲ್ಲುಗಳೂ ಇಲ್ಲಿನ ಆಕರ್ಷಣೆಗಳು. ಸಿಡಿಮದ್ದಿನ ಕಾರ್ಖಾನೆ, ಜಟ್ಟಿಮನೆಗಳು ಇತರ ಕಟ್ಟಡಗಳು. ಸಿದ್ದೇಶ್ವರ, ಹಿಡಿಂಬೇಶ್ವರ, ಏಕನಾಥೇಶ್ವರ ಮುಮತಾದ ದೇವಾಲಯಗಳೂ ಬೆಟ್ಟದ ಮೇಲಿವೆ. ಎತ್ತರದ ಉಯ್ಯಾಲೆ ಮಂಟಪವೂ ಇದೆ. ಇಲ್ಲಿನ ಮರದ ಹೆಬ್ಬಾಗಿಲುಗಳಿಗೆ ಲೋಹದ ತಗಡುಗಳನ್ನು ಹೊದ್ದಿಸಿ ಅವುಗಳಿಗೆ ಚೂಪಾದ ಮೊಳೆಗಳನ್ನು ಹೊಡೆಯಲಾಗಿತ್ತು. ಈ ರೀತಿಯ ಚಿತ್ರದುರ್ಗ ಕೋಟೆಯು ಕೇವಲ ಕೋಟೆಯಾಗಿರದೆ ಎಲ್ಲ ಸೌಕರ್ಯಗಳನ್ನೂ ಒಳಗೊಂಡ ಕೋಟೆಯ ನಗರವಾಗಿತ್ತು. ಅದೇ ಇದರ ವೈಶಿಷ್ಟ್ಯ.

ಈ ಕೊಟೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಮಯದಲ್ಲಿ ಇದೊಂದು ಭೇದಿಸಲಾಗದ ಕೋಟೆ ಎನ್ನುವ ಖ್ಯಾತಿಯನ್ನು ಪಡೆದು ದಂತಕತೆಯಾಗಿತ್ತು. ಈ ಕೋಟೆಗೆ ಸಂಬಂಧಿಸಿದ ವೀರರ ಶೌರ್ಯ ಪರಾಕ್ರಮವನ್ನು ವರ್ಣಿಸುವ ಜಾನಪದ ಲಾವಣಿಗಳು ಮತ್ತು ಕಥೆಗಳನ್ನು ಹೇಳುತ್ತಿದ್ದರು ಮತ್ತು ಜನಗಳು ಆಸಕ್ತಿಯಿಂದ ಕೇಳುತ್ತಿದ್ದರು. ಈ ಪ್ರವೃತ್ತಿಯನ್ನು ಇಂದಿಗೂ ಗಮನಿಸಬಹುದು. ಹೈದರನ ಸೈನಿಕರನ್ನು ಸದೆಬಡಿದ ಒನಕೆ ಓಬವ್ವನ ಲಾವಣಿಯು ಜನಜನಿತವಾಗಿದ್ದು, ಇಂದಿಗೂ ಶಾಲಾಮಕ್ಕಳು ಗುನುಗುತ್ತಿರುತ್ತಾರೆ. ಇಲ್ಲಿರುವ ಬೃಹತ್ತಾದ ಶಿಲೆಗಳಿಂದ ಈ ನೆಲ ಇಂದಿಗೂ ಚಿತ್ರೀಕರಣ ಮಾಡುವವರನ್ನು ಆಕರ್ಷಿಸುತ್ತಿದೆ. ಒಟ್ಟಿನಲ್ಲಿ ಚಿತ್ರದುರ್ಗದ ಕೋಟೆಯು ಕೆಚ್ಚೆದೆಯ ಕನ್ನಡಿಗರ ಪರಾಕ್ರಮ ಪೌರುಷಗಳಿಗೆ ಸಂಕೇತವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.